CC-O. In Public Domain. Digitized by eGangotri

ಸಂಸ್ಕೃತ – ಕನ್ನಡ – ಸ್ವಯಂ – ಶಿಕ್ಷಕ

- सोदाहरण -

संस्कृत - व्याकरण - सङ्ग्रहः

– ಸೋದಾಹರಣ –

ಸಂಸ್ಕೃತ – ವ್ಯಾಕರಣ – ಸಂಗ್ರಹಃ

ಲೇಖಕ

ವಿದ್ವಾನ್ ಬೈಲೂರು ನಾರಾಯಣ ತಂತ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತ - ಕನ್ನಡ - ಸ್ವಯಂ - ಶಿಕ್ಷಕ

- सोदाहरण -
संस्कृत - व्याकरण - सङ्ग्रहः

-ಸೋದಾಹರಣ-
ಸಂಸ್ಕೃತ - ವ್ಯಾಕರಣ - ಸಂಗ್ರಹಃ

- ಪ್ರಸಿದ್ಧ ಶಬ್ದಗಳ ಸಪ್ತ ವಿಭಕ್ತಿ ರೂಪ ಸಂಗ್ರಹ
- ಪ್ರಸಿದ್ಧ ಧಾತುಗಳ ಕ್ರಿಯಾ ಮತ್ತು ಕೃದಂತ ರೂಪ ಸಂಗ್ರಹ
- ಎಲ್ಲಾ ವ್ಯಾಕರಣಾಂಶಗಳಿಗೂ ವಿಪುಲ ಉದಾಹರಣೆಗಳು ಮತ್ತು ಉದಾಹರಣ ವಾಕ್ಯಗಳು ಕನ್ನಡ ಭಾಷಾಂತರ ಸಹಿತ.
- ಪ್ರಬಂಧ ಮತ್ತು ಪತ್ರ ಲೇಖನಗಳು.

ಲೇಖಕ :

ವಿದ್ವಾನ್ ಬೈಲೂರು ನಾರಾಯಣ ತಂತ್ರಿ, ಎಂ.ಎ. ಬಿ.ಎಡ್

(ನಿವೃತ್ತ ಸಂಸ್ಕೃತ ಭಾಷಾ ಸಹಾಯಕ : ಕೆನರಾ ಹೈಸ್ಕೂಲ್, ಉರ್ವ, ಮಂಗಳೂರು) ದೂರವಾಣಿ - 8431144475

ಪ್ರಕಾಶಕರು : ಮುರಾರಿ ಬಿ.

ವಿಳಾಸ: ನಂ 76 ಬಡಗಬೆಟ್ಟು, ನಂದಗೋಕುಲ ಮೊದಲ ಅಡ್ಡ ರಸ್ತೆ,

ತಂತ್ರಿ ನಗರ, ಬೈಲೂರು, ಉಡುಪಿ, 576101 | ದೂರವಾಣಿ - 8553375123

ಸಂಸ್ಕೃತವನ್ನು ಪ್ರಾರಂಭಿಕ ಸ್ವಾಧ್ಯಯನ ಮಾಡುವವರಿಗೆ, ಪ್ರೌಢಶಾಲಾ ಮತ್ತು ಕಾಲೇಜ್ ಸಂಸ್ಕೃತ ವಿದ್ಯಾರ್ಥಿಗಳಿಗೆ ಅತ್ಯುತ್ತಮ ವ್ಯಾಕರಣ ಕೈಪಿಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

"Sodaharana Samskritha Vyakarana Sangrahaha", a Sanskrit grammer Book.
Compilled by Bailore Narayana Tantry and Published by Murari B. "Tantry Prakashanam"
76 Badagabettu, Nandagokula, 1st Cross
Tantry Nagara, Bailore, Udupi - 576101
Ph: 8553375123

© "TANTRY PRAKASHANAM"

First Edition : 1990

XIII Edition : 2022

Copies : 2000

PRICE : 200/-

Printed at
Pixel Designers
+91 9886301858

विषयसूची

प्रथमः भागः

1.	वर्णमाला	1
2.	पदानि-सुबन्तपदानि	4
	अजन्त पुल्लिङ्ग शब्दाः	5
	अजन्त स्त्रीलिङ्ग शब्दाः	13
	अजन्त-नपुंसक-लिङ्ग-शब्दाः	20
	हलन्त-व्यञ्जनान्त शब्दाः	22
	सर्वनाम-शब्दाः	37
	संख्या-शब्दाः	43
3.	सन्धिप्रकरणम्	48
4.	समास-प्रकरणम्	54
5.	कारकम्	63
6.	उपपदविभक्तयः	65
	व्याकरण विशेषः	
7.	प्रयोग प्रकरणम्	74
8.	अव्ययानि	81
9.	नित्यसम्बनन्धिशब्दाः	84
10.	उपसर्गाः	85
11.	तद्धितान्त प्रकरणम्	87
12.	स्त्रीलिङ्ग प्रकरणम्	94

द्वितीय भागः

13.	क्रीयापदानि	96
	धातुरूप सङ्ग्रहः	
	परस्मैपदि विभागः	97
14.	आत्मनेपदि विभागः	129
15.	प्रत्ययान्त धातवः	144
	सनाद्यन्त धातुवृत्तिः	
16.	कृदन्तप्रकरणम्	147
17.	कृदन्तरूपसङ्ग्रहः	

तृतीय भागः

18.	प्रबन्धाः	172
	पत्रलेखनानि	178
	धातुसूची	182

Sri Vidyabharathi Book Centre, Sringeri

CC-O. In Public Domain. Digitized by eGangotri

ಶುಭಾಶಂಸನಂ

ಸಂಸ್ಕೃತ ಭಾಷೆಯ ಸುಲಭ ಅಭ್ಯಾಸಕ್ಕಾಗಿ ವಿದ್ವಾನ್ ಬೈಲೂರು ನಾರಾಯಣ ತಂತ್ರಿಗಳು ಬರೆದ ಸಂಸ್ಕೃತ ವ್ಯಾಕರಣ ಸಂಗ್ರಹ ಪುಸ್ತಕದ ಹನ್ನೊಂದನೆಯ ಮುದ್ರಣವನ್ನು ನಾವು ಪರಿಶೀಲಿಸಿದೆವು. ಲೋಕವ್ಯವಹಾರಕ್ಕೆ ಅವಶ್ಯಕವಾದ ಶಬ್ದ ಧಾತು ಪ್ರತ್ಯಯಗಳನ್ನು ಸಂಗ್ರಹಿಸಿ ಬರೆದಿರುವ ಈ ಪುಸ್ತಕವು ಸರಳವೂ, ಅತ್ಯಂತ ಉಪಯುಕ್ತವೂ ಆಗಿದೆ. ಬೈಲೂರು ನಾರಾಯಣ ತಂತ್ರಿಗಳ ಈ ಸಂಸ್ಕೃತ ಭಾಷೆಯ ಸೇವೆಯನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಸಂಸ್ಕೃತದ ಅಭ್ಯಾಸವನ್ನು ಮಾಡಬಯಸುವವರು ಇದರ ಲಾಭವನ್ನು ಪಡೆಯಲೆಂದು ಆಶಿಸಿ, ಈ ಗ್ರಂಥಕರ್ತರಿಂದ ಇನ್ನೂ ಹೆಚ್ಚಿನ ಜ್ಞಾನ ಸೇವೆ ಪಡೆಯಬೇಕೆಂದು ಆಶಿಸುತ್ತೇವೆ.

ಇತಿ ಸಪ್ರೇಮ ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ
ಶ್ರೀ ಪೇಜಾವರ ಮಠ, ಉಡುಪಿ

ಡಾ|| ಡಿ. ವೀರೇಂದ್ರ ಹೆಗ್ಗಡೆಯವರು
ಧರ್ಮಸ್ಥಳ - 574216, ಕರ್ನಾಟಕ

ಶುಭಾಶಂಸನಂ

ಸಂಸ್ಕೃತ ಭಾಷೆಯ ಸುಲಭ ಅಭ್ಯಾಸಕ್ಕಾಗಿ ವಿದ್ವಾನ್ ಬೈಲೂರು ನಾರಾಯಣ ತಂತ್ರಿಗಳು ಬರೆದ ಸಂಸ್ಕೃತ ವ್ಯಾಕರಣ ಸಂಗ್ರಹ ಪುಸ್ತಕದ ಹನ್ನೊಂದನೆಯ ಮುದ್ರಣವನ್ನು ನಾವು ಪರಿಶೀಲಿಸಿದೆವು. ಲೋಕ ವ್ಯವಹಾರಕ್ಕೆ ಅವಶ್ಯಕವಾದ ಶಬ್ದ ಧಾತು ಪ್ರತ್ಯಯಗಳನ್ನು ಸಂಗ್ರಹಿಸಿ ಬರೆದಿರುವ ಈ ಪುಸ್ತಕವು ಸರಳವೂ, ಅತ್ಯಂತ ಉಪಯುಕ್ತವೂ ಆಗಿದೆ. ಬೈಲೂರು ನಾರಾಯಣ ತಂತ್ರಿಗಳ ಈ ಸಂಸ್ಕೃತ ಭಾಷೆಯ ಸೇವೆಯನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಸಂಸ್ಕೃತದ ಅಭ್ಯಾಸವನ್ನು ಮಾಡಬಯಸುವವರು ಇದರ ಲಾಭವನ್ನು ಪಡೆಯಲೆಂದು ಆಶಿಸಿ, ಈ ಗ್ರಂಥಕರ್ತರಿಂದ ಇನ್ನೂ ಹೆಚ್ಚಿನ ಜ್ಞಾನ ಸೇವೆ ಪಡೆಯಬೇಕೆಂದು ಆಶಿಸುತ್ತೇವೆ.

ಇತಿ

ಡಾ|| ಡಿ. ವೀರೇಂದ್ರ ಹೆಗ್ಗಡೆಯವರು

Sri Vidyabharathi Book Centre, Sringeri

CC-0. In Public Domain. Digitized by eGangotri

पूर्वभाष्यम्

संस्कृतव्याकरणमुपजीव्य भारतीयप्राकृतभाषाव्याकरणानि रचितानि। यण्गुणादयः संज्ञाः प्रयुक्ताः संस्कृते सार्थाः। निरर्थकाः संस्कृतेतरभाषासु। अद्भुतं संस्कृत व्याकरणं महर्षिपाणिनिना प्रणीतम्। तस्माद् अध्येयम् इदं प्रयत्नशतेनापि। किन्तु बालानां तत्रापि लौकिक प्रौढशालासु संस्कृतं परिचिन्वतां दुरवगाहं पाणिनीयं व्याकरणमिति सुबोधं किञ्चित् शब्दशास्त्रस्य कर्तुं बहवः महताप्रयत्नेन प्रवृत्ताः। तन्त्रिनारायणोपि तत्र प्रविष्टः। अस्य उद्देशस्तूदात्तः। अतः अत्र ग्रन्थे गुणानेव गृह्णन्तु प्रथमे विद्वांसः। मुद्रणदोषात्, सम्भवन्तः दोषाः सह्याः सहृदयैः नाक्षेप्याः। सर्वथास्य यत्नः फलेन युज्यताम्। इतोप्युत्तमतरं ग्रन्थं विदधात्वयमित्याशास्यते।

के हरिदासोपाध्यायः
निवृत्तप्रांशुपालः, एस् एम् एस् पि संस्कृतमहापाठशाला, उडुपि।

ಲೇಖಕಾಭಾಷ್ಯಂ



ಸಂಸ್ಕೃತಾಧ್ಯಯನ ಶೀಲರೆಲ್ಲರಿಗೂ ಸಂಸ್ಕೃತಾಧ್ಯಯನವು ಸುಗಮವಾಗುವಂತೆ ಸಂಸ್ಕೃತದ ಎಲ್ಲಾ ಪ್ರಕಾರದ ವ್ಯಾಕರಣಾಂಶಗಳನ್ನು ಒಂದೇ ಗ್ರಂಥದಲ್ಲಿ ಸಂಗ್ರಹಿಸಿ ಪ್ರಕಟಿಸುವ ಮುಖ್ಯ ಉದ್ದೇಶದಿಂದ ರಚಿತವಾದ ಸೋದಾಹರಣ ಸಂಸ್ಕೃತ ವ್ಯಾಕರಣ ಸಂಗ್ರಹ ಎಂಬ ಕೃತಿಯನ್ನೇ ಆಮೂಲಾಗ್ರವಾಗಿ ಪರಿಷ್ಕರಿಸಿ 12ನೇ ಮುದ್ರಣವನ್ನು ಮಾಡಿ ಸಂಸ್ಕೃತಾಭಿಮಾನಿಗಳಿಗೆ ಅರ್ಪಿಸುತ್ತಿದ್ದೇನೆ. ಮೂರು ಲಿಂಗಗಳಲ್ಲಿ ಸುಪ್ರಸಿದ್ಧವಾದ ಶಬ್ದಗಳ ವಿಭಕ್ತಿರೂಪಗಳನ್ನು, ಸುಪ್ರಸಿದ್ಧ ಧಾತುಗಳ ಕ್ರಿಯಾರೂಪಗಳನ್ನು, ಸುಪ್ರಸಿದ್ಧ ಧಾತುಗಳ ಕೃದಂತ ರೂಪಗಳನ್ನು ತದ್ಧಿತಾಂತರೂಪಗಳನ್ನು ಸಂಧಿ, ಸಮಾಸ, ಕಾರಕ, ಪ್ರಯೋಗ, ಅವ್ಯಯ – ಇತ್ಯಾದಿ ಎಲ್ಲಾ ವ್ಯಾಕರಣಾಂಶಗಳನ್ನು ಕನ್ನಡದಲ್ಲಿ ಸರಳವಾಗಿ ತಿಳಿಸುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿದೆ.

ಎಲ್ಲಾ ಶಬ್ದಗಳ ಎಲ್ಲಾ ವಿಭಕ್ತಿ ವಚನಗಳ ರೂಪಗಳನ್ನು ಮತ್ತು ಇತರ ವ್ಯಾಕರಣಾಂಶಗಳನ್ನು ಬಳಸಿ ಉದಾಹರಣ ವಾಕ್ಯಗಳನ್ನೂ ಅದರ ಕನ್ನಡಾನುವಾದವನ್ನೂ ಕೊಟ್ಟಿರುವುದರಿಂದ ಇದೊಂದು ಸಂಸ್ಕೃತ ಕನ್ನಡ ಸ್ವಯಂ ಶಿಕ್ಷಕದಂತಿದೆ. ಈ ತನಕ ಸಂಸ್ಕೃತವನ್ನು ಏನೂ ಅರಿಯದವರಿಗೂ ಪ್ರಾರಂಭಿಕ ಸಂಸ್ಕೃತ ಭಾಷಾಭ್ಯಾಸವನ್ನು ಮಾಡಲು ಸಾಧ್ಯವಾಗುವಂತೆ ಸಾಕಷ್ಟು ಉದಾಹರಣೆಗಳನ್ನೂ ಉದಾಹರಣ ವಾಕ್ಯಗಳನ್ನೂ ಕೊಡಲಾಗಿದೆ.

ಈ ಗ್ರಂಥದಲ್ಲಿರುವ ವ್ಯಾಕರಣಾಂಶಗಳ ಪರಿಚಯ ಇಲ್ಲದವರಿಗೆ ಸರಳ ಸಂಸ್ಕೃತದ ಅರ್ಥವೂ ದುಸ್ಸಾಧ್ಯ. ಆದುದರಿಂದ ಇಲ್ಲಿಯ ವ್ಯಾಕರಣಾಂಶಗಳ ಸಹಾಯದಿಂದ ಮುಖ್ಯವಾಗಿ ಶಾಲಾಕಾಲೇಜ್ ವಿದ್ಯಾರ್ಥಿಗಳು ಸಂಸ್ಕೃತಾನುವಾದ, ವಾಕ್ಯರಚನೆ, ಅರ್ಥಾಭಿವ್ಯಕ್ತಿ ಸಂಸ್ಕೃತ ಸಂಭಾಷಣೆ ಇವುಗಳಲ್ಲಿ ಸಮರ್ಥರಾದರೆ ನನ್ನ ಶ್ರಮ ಸಾರ್ಥಕ.

ಪೂರ್ವಾಭಾಷ್ಯವನ್ನು ಕಳುಹಿಸಿ ಹರಸಿರುವ ಉಡುಪಿಯ ಸಂಸ್ಕೃತ ಮಹಾಪಾಠಶಾಲೆಯ ನಿವೃತ್ತ ಪ್ರಾಂಶುಪಾಲರೂ, ನನ್ನ ಗುರುಗಳೂ ಆದ ಶ್ರೀ ಕೆ. ಹರಿದಾಸ ಉಪಾಧ್ಯಾಯರವರಿಗೆ ನಾನು ಕೃತಜ್ಞನಾಗಿದ್ದೇನೆ.

ಶುಭಾಶಂಸನೆಯನ್ನು ಕಳುಹಿಸಿ ಹರಸಿರುವ ಉಡುಪಿಯ ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದರಿಗೆ ಮತ್ತು ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆಯವರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕವನ್ನು ಮುದ್ರಿಸಿಕೊಟ್ಟ ಪಿಕ್ಸೆಲ್ ಡಿಸೈನರ್ಸ್‌ನವರಿಗೂ ಕೃತಜ್ಞನಾಗಿದ್ದೇನೆ.

ಬೈಲೂರು ನಾರಾಯಣ ತಂತ್ರಿ

ಶುಭಕೃತ್ ಸಂವತ್ಸರ, ತುಲಾಮಾಸ – 2022

Sri Vidyabharathi Book Centre, Sringeri

CC-O. In Public Domain. Digitized by eGangotri

वर्णमाला

I स्वराः 13 ಸ್ವರಾಕ್ಷರಗಳು –13

ಅ ಆ ಇ ಈ ಉ ಊ ಋ ೠ ಌ ಏ ಐ ಓ ಔ

अ आ इ ई उ ऊ ऋ ॠ ऌ ए ऐ ओ औ

1) ह्रस्वस्वराः ಹ್ರಸ್ವಸ್ವರಗಳು: अ इ उ ऋ

2) दीर्घस्वराः ದೀರ್ಘಸ್ವರಗಳು: आ ई ऊ ॠ ए ऐ ओ औ

3) संयुक्त/सन्धिस्वराः ಸಂಯುಕ್ತ/ ಸಂಧಿಸ್ವರಗಳು: ए ऐ ओ औ

ए = अ/आ + इ/ई, ऐ = अ/आ + ए/ऐ, ओ = अ/आ/ + उ/ऊ, औ = अ/आ + ओ/औ

अं अः = " ं " = अनुस्वार ಅನುಸ್ವಾರ " ः " विसर्गः ವಿಸರ್ಗ

स्वरेषु त्रिविधा :- "ह्रस्व, दीर्घ, प्लुत" इति। उदा – अ (1), आ (2), ದೂರದಲ್ಲಿರುವವನನ್ನು ಕರೆಯುವಾಗ ಬಳಸುವ ಸಂಬೋಧನ ಶಬ್ದದ ಕೊನೆಯ ಸ್ವರವು "ಪ್ಲುತ". ಉದಾ –एहि कृष्ण (3) ಇಲ್ಲಿ कृष्ण ಶಬ್ದದ ಕೊನೆಯ अ (3) ಪ್ಲುತ.

II **व्यञ्जनानि** ವ್ಯಂಜನಾಕ್ಷರಗಳು:

1) **वर्गीयव्यञ्जनानि** – ವರ್ಗೀಯ ವ್ಯಂಜನಗಳು

ಕವರ್ಗ: ಕ ಖ ಗ ಘ ಙ

कवर्ग : **क ख ग घ ङ** = ಇವು ಕಂಠ ಎಂದರೆ ಇವುಗಳ ಉಚ್ಛಾರಣ ಸ್ಥಾನ ಕಂಠ (ಕುತ್ತಿಗೆ)

ಚವರ್ಗ: ಚ ಛ ಜ ಝ ಞ

चवर्ग : **च छ ज झ ञ** = ಇವು ತಾಲವ್ಯ ಎಂದರೆ ಇವುಗಳನ್ನು ಉಚ್ಚರಿಸುವಾಗ ನಾಲಿಗೆ ಮತ್ತು ತಾಲುವಿಗೆ (ಕಿರುನಾಲಗೆಯ ಪ್ರದೇಶ) ತಗಲಬೇಕು.

ಟವರ್ಗ: ಟ ಠ ಡ ಢ ಣ

टवर्ग : **ट ठ ड ढ ण** = ಇವು ಮೂರ್ಧನ್ಯ ಎಂದರೆ ಇವುಗಳನ್ನು ಉಚ್ಚರಿಸುವಾಗ ಬಾಯಿಯ ಮುಂಭಾಗದ ಮೇಲೆ ಒತ್ತಡ ಬೀಳುತ್ತದೆ.

ತವರ್ಗ: ತ ಥ ದ ಧ ನ

तवर्ग : **त थ द ध न** = ಇವು ದಂತ್ಯ ಎಂದರೆ ಇವುಗಳನ್ನು ಉಚ್ಚರಿಸುವಾಗ ನಾಲಿಗೆ ಹಲ್ಲುಗಳಿಗೆ ತಗಲಬೇಕು.

ಪವರ್ಗ: ಪ ಫ ಬ ಭ ಮ

पवर्ग : **प फ ब भ म** = ಇವು ಓಷ್ಠ ಎಂದರೆ ಇವುಗಳನ್ನು ಉಚ್ಚರಿಸುವಾಗ ತುಟಿಗಳು ಒಂದಕ್ಕೊಂದು ತಗಲಬೇಕು.

2) **अवर्गीय व्यञ्जनानि** – ಅವರ್ಗೀಯ ವ್ಯಂಜನಗಳು

य र ल व – ಯ ರ ಲ ವ ಅಂತಸ್ಥವರ್ಣಗಳು

श ष स ह – ಶ ಷ ಸ ಹ ಊಷ್ಮವರ್ಣಗಳು. ಹಬೆಯಿಂದ ಕೂಡಿದ ಗಾಳಿಯಿಂದ ಉಚ್ಚರಿಸಲ್ಪಡುವ ವರ್ಣಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಪಪ್ರಾಣವ್ಯಂಜಗಳು – अल्पप्राणव्यञ्जनानि – ಪ್ರತಿವರ್ಗದ ಮೊದಲನೆಯ, ಮೂರನೆಯ ಮತ್ತು ಐದನೆಯ ವ್ಯಂಜನಗಳು ಮತ್ತು ಯರ ಲವಯರಲವ ಗಳು.

ಮಹಾಪ್ರಾಣ ವ್ಯಂಜನಗಳು– महाप्राणव्यञ्जनानि – ಪ್ರತಿವರ್ಗದ ಎರಡು ಮತ್ತು ನಾಲ್ಕನೆಯ ವ್ಯಂಜನಗಳು ಮತ್ತು शषसह ಶಷಸಹ ಗಳು

ಅನುನಾಸಿಕ ವ್ಯಂಜನಗಳು –अनुनासिकव्यञ्जनानि – ಪ್ರತಿವರ್ಗದ ಕೊನೆಯ ವ್ಯಂಜನಗಳು, ಮೂಗಿನ ಸಹಾಯದಿಂದ ಉಚ್ಚರಿಸುವಂತವುಗಳು– ङ, ञ, ण, न, म ಙ, ಞ, ಣ, ನ, ಮ

ಕರ್ಕಶ ವ್ಯಂಜನಗಳು – कर्कशव्यञ्जनानि – ಪ್ರತಿವರ್ಗದ ಮೊದಲಿನ ಎರಡು ವ್ಯಂಜನಗಳು ಮತ್ತು शषस (खर्) ಶ,ಷ, ಸ, (ಖರ್)

ಮೃದುವ್ಯಂಜನಗಳು – मृदुव्यञ्जनानि – ಪ್ರತಿವರ್ಗದ ಕೊನೆಯ ಮೂರು ವ್ಯಂಜನಗಳು ಮತ್ತು यरलवह ಯರಲವಹ (ಹಶ್) ವರ್ಣಗಳು. (हश्)

माहेश्वरसूत्राणि ಮಾಹೇಶ್ವರ ಸೂತ್ರಗಳು

ವ್ಯಾಕರಣ ಶಾಸ್ತ್ರಜ್ಞನಾದ ಪಾಣಿನಿಯ ಈ ಹದಿನಾಲ್ಕು ಸೂತ್ರಗಳಲ್ಲಿ ಸಂಸ್ಕೃತ ವರ್ಣಮಾಲೆಯು ಅಡಕವಾಗಿದೆ. ಇವು ಮಹೇಶ್ವರನ ಢಕ್ಕಾನಾದ ರೂಪದಿಂದ ಪಾಣಿನಿಗೆ ಪ್ರಕಟವಾದವು.

1 स्वराक्षराणि – अ इ उ ण्। ऋ लृ क्। ए ओ ङ्। ऐ औ च्।

ಅ ದಿಂದ ಪ್ರಾರಂಭಿಸಿ च् ವರೆಗಿನ ಸ್ವರಾಕ್ಷರಗಳನ್ನು अच् ಅಕ್ಷರಗಳು ಎನ್ನುತ್ತಾರೆ. अच् ಅಕ್ಷರಗಳು ಎಂದರೆ ಸ್ವರಾಕ್ಷರಗಳು.
ಉದಾ: अ इ उ, ऋ लृ, ए, ओ, ऐ औ – ಹ್ರಸ್ವ ದೀರ್ಘ ಸೇರಿ.

1 व्यञ्जनाक्षरणि – ह य व र ट्। लण्। ञ म ङ ण न म्। झ भ ञ्। घ ढ ध ष्। ज ब ग ड द श्। ख फ छ ठ थ च ट त व्। क प य्। श ष स र्। ह ल्।

ಹ ದಿಂದ ಪ್ರಾರಂಭಿಸಿ ल् ವರೆಗಿನ ವ್ಯಂಜನಾಕ್ಷರಗಳನ್ನು हल् ಅಕ್ಷರಗಳೆಂದು ಕರೆಯುತ್ತಾರೆ. हल् ಎಂದರೆ ವ್ಯಂಜನಾಕ್ಷರ ವೆಂದರ್ಥ. अच्, हल् ಇವುಗಳಿಗೆ ಪ್ರತ್ಯಾಹಾರ ಎಂದು ಹೆಸರು. अ ಕಾರವು ಕೇವಲ ಉಚ್ಚಾರಣೆಗಾಗಿ ಇದೆ. ಉದಾ क ಎಂಬಲ್ಲಿ क् ವ್ಯಂಜನ अ ಇದು ಕೇವಲ ಉಚ್ಚಾರಣೆಗಾಗಿ. ಪ್ರತಿ ಸೂತ್ರದ ಕೊನೆಯ ಅಕ್ಷರಗಳೂ ಕೇವಲ ಉಚ್ಚಾರಣೆಗಾಗಿ.
ಉದಾ– अ इ उ ण् ಎಂಬಲ್ಲಿ ಕೊನೆಯ ण् ಇದು ಲೆಕ್ಕಕ್ಕಿಲ್ಲ. इक् = इ उ ऋ लृ। यण् = य् व् र् ल्।

पूर्णाक्षराणि

ವ್ಯಂಜನಾಕ್ಷರಗಳಿಗೆ ಸ್ವರಾಕ್ಷರಗಳು ಸೇರಿದಾಗ ಪೂರ್ಣಾಕ್ಷರಗಳಾಗುತ್ತವೆ.
ಉದಾ – क् + अ = क – ಕ क् + आ = का – ಕಾ क् + इ = कि – ಕಿ क् + ई = की – ಕೀ क् + उ = कु, क् + ऊ = कू – ಕೂ क् + ऋ = कृ – ಕೃ क् + ॠ = कॄ – ಕೄ क् + ए = के – ಕೆ क् + ऐ = कै – ಕೈ क् + ओ = को – ಕೊ क् + औ = कौ – ಕೌ क् + अं = कं – ಕಂ क् + अः = कः – ಕಃ

ಹಾಗೆಯೇ ಎಲ್ಲಾ ವ್ಯಂಜನಾಕ್ಷರಗಳಿಗೂ ಎಲ್ಲಾ ಸ್ವರಾಕ್ಷರಗಳನ್ನೂ ಸೇರಿಸಿ ಪೂರ್ಣಾಕ್ಷರಗಳನ್ನು ಬರೆಯುವ ಅಭ್ಯಾಸ ಮಾಡಬೇಕು.
ಉದಾ: ग गा गि गी गु गू गृ गॄ गे गै गो गौ गं गः। श शा शि शी शु शू शृ शॄ शे शै शो शौ शं शः। द् + ऋ – दृ – ದೃ ಇತ್ಯಾದಿ.

Sri Vidyabharathi Book Centre, Sringeri

CC-0. In Public Domain. Digitized by eGangotri

संयुक्ताक्षराणि – ಸಂಯುಕ್ತಾಕ್ಷರಗಳು

क् + य = क्य ಕ್ಯ – ऐक्यम् ಐಕ್ಯಂ
क् + व = क्व ಕ್ವ – पक्वम्
क् + र = क्र ಕ್ರ, ಚಕ್ರಂ
क् + ल = क्ल ಕ್ಲ – शुक्लः
ग् + य = ग्य ಗ್ಯ – योग्यः ಯೋಗ್ಯಃ
ग् + र = ग्र ಗ್ರ – ग्रामः ಗ್ರಾಮಃ
ग् + न = ग्न ಗ್ನ – नग्नः ನಗ್ನಃ
च् + च = च्च ಚ್ಚ – उच्चारः ಉಚ್ಚಾರಃ
च् + य = च्य ಚ್ಯ – अवाच्य ಅವಾಚ್ಯ
त् + म = त्म ತ್ಮ – आत्मा ಆತ್ಮಾ
त् + क = त्क ತ್ಕ – चमत्कारः ಚಮತ್ಕಾರಃ
त् + र = त्र ತ್ರ – छात्रः ಛಾತ್ರಃ
त् + य = त्य ತ್ಯ – त्यागः ತ್ಯಾಗಃ
ज् + व = ज्व ಜ್ವ – ज्वरः ಜ್ವರಃ
ज् + र = ज्र ಜ್ರ – वज्रः ವಜ್ರಃ
ज् + य = ज्य ಜ್ಯ – त्रिज्यम् ತ್ರಿಜ್ಯಂ
द् + ग = द्ग ದ್ಗ – उद्गारः ಉದ್ಗಾರಃ
द् + भ = द्भ/द्‌भ ದ್ಭ – उद्भवः ಉದ್ಭವಃ
द् + व = द्व ದ್ವ – द्वारका ದ್ವಾರಕಾ
द् + र = द्र ದ್ರ – द्रावणम् ದ್ರಾವಣಂ
द् + घ = द्घ/द्‌घ ದ್ಘ – उद्घाटनम् ಉದ್ಘಾಟನಂ
न् + त = न्त ನ್ತ – अन्तरम् ಅನ್ತರಂ
न् + य = न्य ನ್ಯ – अन्यायः ಅನ್ಯಾಯಃ
न् + व = न्व ನ್ವ – अन्वयः ಅನ್ವಯಃ
ड् + ड = ड्ड ಡ್ಡ – उड्डयनम् ಉಡ್ಡಯನಂ
ड् + र = ड्र ಡ್ರ – षड्रसम् ಷಡ್ರಸಂ
ह् + व = ह्व ಹ್ವ – आह्वानम् ಆಹ್ವಾನಂ
ह् + न = ह्न ಹ್ನ – मध्याह्न ಮಧ್ಯಾಹ್ನ
ह् + ल = ह्ल ಹ್ಲ – आह्लाद ಆಹ್ಲಾದ
ल् + य = ल्य ಲ್ಯ – अहल्या ಅಹಲ್ಯಾ
ल् + ल = ल्ल ಲ್ಲ – तल्लीन ತಲ್ಲೀನ
स् + य = स्य ಸ್ಯ – सस्यम् ಸಸ್ಯಂ
स् + न = स्न ಸ್ನ – स्नानम् ಸ್ನಾನಂ
स् + व = स्व ಸ್ವ – आस्वादः ಆಸ್ವಾದಃ

श् + र = श्र ಶ್ರ – श्रद्धा ಶ್ರದ್ಧಾ
श् + व = श्व ಶ್ವ – श्वासः ಶ್ವಾಸಃ
श् + य = श्य ಶ್ಯ – श्यामलः ಶ್ಯಾಮಲಃ
द् + र = द्र ದ್ರ – मुद्रा ಮುದ್ರಾ
द् + र् + य =दारिद्र्यम् ದಾರಿದ್ರ್ಯಂ
द् + व = द्व ದ್ವ – विद्वान् ವಿದ್ವಾನ್
ध् + य = ध्य ಧ್ಯ – मध्यः ಮಧ್ಯಃ
न् + त = न्त ನ್ತ – सन्तः ಸನ್ತಃ
न् + न = न्न ನ್ನ – अन्नम् ಅನ್ನಮ್
प् + र = प्र ಪ್ರ – प्रतिमा ಪ್ರತಿಮಾ
ब् + द = ब्द ಬ್ದ – अब्द ವರ್ಷ
ब् + र = ब्र ಬ್ರ – ब्रह्मा ಬ್ರಹ್ಮಾ
ह् + म = ह्म ಹ್ಮ – ब्राह्मणः ಹ್ಮ
म् + ब = म्ब – अम्बा ಅಂಬಾ
म् + भ = म्भ – स्तम्भः ಸ್ತಂಭಃ
म् + र = म्र ಮ್ರ – ताम्रम् ತಾಮ್ರಮ್
र् + म = र्म ರ್ಮ – कर्म ಕರ್ಮ
र् + व = र्व ರ್ವ – पर्वतः ಪರ್ವತಃ
ष् + ण = ष्ण ಷ್ಣ – कृष्णः ಕೃಷ್ಣಃ
ष् + क = ष्क ಷ್ಕ – शुष्कः ಶುಷ್ಕಃ
ष् + प = ष्प ಷ್ಪ – पुष्पम् ಪುಷ್ಪಂ
ष् + ट = ष्ट ಷ್ಟ – अष्ट ಅಷ್ಟ
ष् + ट् + व = ष्ट्व ಷ್ಟ್ವ – दृष्ट्वा
ष् + ट् + र = ष्ट्र ಷ್ಟ್ರ – राष्ट्रम् ರಾಷ್ಟ್ರಂ
र् + ष् + य = र्ष्य ರ್ಷ್ಯ – ईर्ष्या ಈರ್ಷ್ಯಾ
र् + श = र्श – आदर्शः ಆದರ್ಶ
ख् + य = ख्य ಖ್ಯ – प्रख्यातः ಪ್ರಖ್ಯಾತಃ
ठ् + य = ठ्य ಠ್ಯ – पठ्यम् ಪಠ್ಯಂ
ड् + य = ड्य ಡ್ಯ – कुड्यम् ಕುಡ್ಯಂ
क्ष् + य = क्ष्य ಕ್ಷ್ಯ – लक्ष्यम् ಲಕ್ಷ್ಯಂ
म् + य = म्य ಮ್ಯ – सम्यक् ಸಮ್ಯಕ್
म् + र = म्र ಮ್ರ – आम्रः ಆಮ್ರಃ
म् + य = म्य ಮ್ಯ – रम्यम् ರಮ್ಯ
भ् + र = भ्र ಭ್ರ भ्रमरः ಭ್ರಮರಃ

भ् + य = भ्य ಭ್ಯ – अभ्यासः ಅಭ್ಯಾಸಃ
ङ् + क = ङ्क – अङ्कनी/अङ्‌कनी ಅಂಕನೀ
ञ् + ज = ञ्ज – अञ्जनम् ಅಂಜನಂ
ञ् + च = ञ्च – पञ्च ಪಂಚ
क् + ष = क्ष ಕ್ಷ – दक्षः ದಕ್ಷಃ
क्ष् + य = क्ष्य ಕ್ಷ್ಯ – लक्ष्यम् ಲಕ್ಷ್ಯಂ
ग् + ध = ग्ध ಗ್ಧ – मुग्धः ಮುಗ್ಧ
घ् + न = घ्न ಘ್ನ – विघ्नः ವಿಘ್ನಃ
घ् + र = घ्र ಘ್ರ – शीघ्रम् ಶೀಘ್ರಂ
च् + छ = च्छ ಚ್ಛ – आच्छादनम्
प् + त = प्त ಪ್ತ – आप्तः आप्तः
प् + न = प्न ಪ್ನ – स्वप्नः ಸ್ವಪ್ನಃ
थ् + य = थ्य ಥ್ಯ – सामर्थ्यम्
ड् + ग = ड्ग ಡ್ಗ – खड्गः ಖಡ್ಗ
न् + ति = न्ति ನ್ತಿ – अन्तिमः
न् + न = न्न ನ್ನ – खिन्नः ಖಿನ್ನಃ
र् + य = र्य ರ್ಯ – सूर्यः ಸೂರ್ಯಃ
क् + क = क्क ಕ್ಕ – अक्का ಅಕ್ಕಾ
क् + त = क्त ಕ್ತ – भक्तः ಭಕ್ತಃ
क् + म = क्म ಕ್ಮ – रुक्मिणी
च् + छ = च्छ ಚ್ಛ – गुच्छः ಗುಚ್ಛಃ
च् + य = च्य ಚ್ಯ – वाच्यम् ವಾಚ್ಯಂ
ज् + ञ = ज्ञ ಜ್ಞ – आज्ञा ಆಜ್ಞಾ
ज् + य = ज्य ಜ್ಯ – राज्यम् ರಾಜ್ಯಂ
ट् + य = ट्य/ट्‌य ಟ್ಯ – नाट्यम्
त् + त = त्त ತ್ತ – चित्तम् ಚಿತ್ತಮ್
त् + न = त्न ತ್ನ – रत्नम् ರತ್ನಂ
द् + भ = द्भ ದ್ಭ – उद्भवः/उद्‌भवः
द् + म = द्म ದ್ಮ – पद्मं/पद्‌मम्
द् + ध = द्ध ದ್ಧ – प्रसिद्धः
ङ् + ग् = ङ्ग – अङ्गः
ह् + य = ह्य ಹ್ಯಃ – ह्यः
द् + य = द्य ದ್ಯ – अद्य ಅದ್ಯ

Sri Vidyabharathi Book Centre, Sringeri

ವಿದ್ವಾನ್ – विद्वान्
ಸಂಸ್ಕೃತಂ – संस्कृतम्
ಮನ್ದಬುದ್ಧಿ – मन्दवुद्धिः
ಕೃಷ್ಣಃ – कृष्णः

ಆರ್ದ್ರವಸ್ತ್ರಂ – आर्द्रवस्त्रम्
ಭರ್ತ್ಸನಂ – भर्त्सनम्
ಜಾಹ್ನವೀ – जाह्नवी
ವೃಶ್ಚಿಕ – वृश्चिकः

ಭಿತ್ತಿಪತ್ರಂ – भित्तिपत्रम्
ಸರ್ವಜ್ಞ – सर्वज्ञः
ಚಂದ್ರಕಾಂತಾ – चन्द्रकान्ता
ಶಂಕಾ – शङ्का

CC-O. In Public Domain. Digitized by eGangotri

पदानि – ಪದಗಳು सुबन्त पदानि

ಪದ ಎಂದರೆ ''सुप् – तिङन्तं पदम्''। ಸುಪ್ ಮತ್ತು ತಿಙ್ ಎಂಬ ಪ್ರತ್ಯಯಗಳು ಅಂತ್ಯದಲ್ಲಿರುವ ಶಬ್ದಗಳಿಗೆ ಪದ ಎನ್ನುತ್ತಾರೆ. ಸುಪ್ ಪ್ರತ್ಯಯಗಳು ಎಂದರೆ ನಾಮ ಪದದ ಮುಂದೆ ಬರುವ ಏಳು ವಿಭಕ್ತಿ ಮತ್ತು ಎಲ್ಲಾ ವಚನಗಳಲ್ಲಿ ಬರುವ ಪ್ರತ್ಯಯಗಳು. ತಿಙ್ ಪ್ರತ್ಯಯಗಳು ಎಂದರೆ ಕ್ರಿಯಾಪದದ ಧಾತುವಿಗೆ ಎಲ್ಲಾ ಕಾಲ–ಪುರುಷ ಮತ್ತು ವಚನಗಳಲ್ಲಿ ಬರುವ ಪ್ರತ್ಯಯಗಳು.

ಪದಗಳು ಎರಡು ವಿಧ

1 सुबन्त ಪದಗಳು – ಏಳು ವಿಭಕ್ತಿಗಳಲ್ಲಿ ಹೇಳಬಹುದಾದ ಪದಗಳು

2 तिङन्त ಪದಗಳು – ಕ್ರಿಯಾಪದಗಳು

सुबन्तपदानि / ಸುಬಂತಗಳು

ಸಂಸ್ಕೃತದಲ್ಲಿ ಮೂಲ ಶಬ್ದಗಳಿಗೆ ''ಪ್ರಾತಿಪದಿಕ'' ಗಳೆನ್ನುತ್ತಾರೆ. ''अर्थवदधातुरप्रत्ययः प्रातिपदिकम्'' ಅಂದರೆ ಧಾತು (ಕ್ರಿಯಾಪದದ ಮೂಲರೂಪ), ಪ್ರತ್ಯಯ ಮತ್ತು ಪ್ರತ್ಯಯಾಂತಗಳನ್ನು ಬಿಟ್ಟು ಉಳಿದ ಅರ್ಥವತ್ತಾದ ಶಬ್ದವನ್ನು ''ಪಾತ್ರಿಪದಿಕ''ವೆನ್ನುತ್ತಾರೆ. ಇದರಲ್ಲಿ ಆರು ವಿಧ.

1. ನಾಮ ಪದಗಳು, 2. ಸರ್ವನಾಮಗಳು, 3. ವಿಶೇಷಣಗಳು, 4. ಕೃದಂತಗಳು, 5. ತದ್ಧಿತಾಂತಗಳು 6. ಸಮಾಸಗಳು.

ಈ ಆರು ವಿಧದ ಪ್ರಾತಿಪದಿಕಗಳಿಗೆ सुप् ಎಂಬ ಏಳು ವಿಭಕ್ತಿ ಪ್ರತ್ಯಯಗಳನ್ನು ಜೋಡಿಸಿ ಬೇಕಾದ ರೂಪಗಳನ್ನು ಪಡೆದು ವಾಕ್ಯಗಳಲ್ಲಿ ಪ್ರಯೋಗಿಸಬಹುದು. ಸಂಸ್ಕೃತದಲ್ಲಿ ವಚನಗಳು ಮೂರು– ಏಕವಚನ, ದ್ವಿವಚನ, ಬಹುವಚನ, ಲಿಂಗಗಳು ಮೂರು – ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ವಿಭಕ್ತಿಗಳು ಏಳು.

ಮೂರು ವಚನಗಳಲ್ಲಿ ವಿಭಕ್ತಿ ಪ್ರತ್ಯಯಗಳು ಮತ್ತು ಕನ್ನಡದಲ್ಲಿ ಅರ್ಥ ತಿಳಿಸುವ ಪ್ರತ್ಯಯಗಳು

ವಿಭಕ್ತಿಗಳು	ಏಕವಚನ	ದ್ವಿವಚನ	ಬಹುವಚನ
प्रथमा	सु (स् = :) ಉ	औ	जस् (अस् = अः)
संबोधनप्रथमा	सु – ಎಲೈ	औ	जस् (अस् = अः)
द्वितीया	अम् = ಅನ್ನು	औट् (औ)	शस् (अस् = अः)
तृतीया	टा (आ) ಇಂದ	भ्याम्	भिस्
चतुर्थी	ङे (ए) = ಇಗೆ, ಗೆ, ಕ್ಕೆ	भ्याम्	भ्यस्
पञ्चमी	अस् – ದೆಸೆಯಿಂದ	भ्याम्	भ्यस्
षष्ठी	ङस् (अस्) ಅ	ओस्	आम्
सप्तमी	ङि (इ) ಅಲ್ಲಿ	ओस्	सुप् (सु)

ಪ್ರಾತಿಪದಿಕಗಳಿಗೆ ಈ ವಿಭಕ್ತಿ ಪ್ರತ್ಯಯಗಳು ಸೇರುವಾಗ ಅನೇಕ ವ್ಯಾಕರಣ ನಿಯಮಗಳಿಗನುಸಾರವಾಗಿ ಅನೇಕ ವಿಧದ ಬದಲಾವಣೆಗಳಾಗುತ್ತವೆ. ಆದರೆ ಮುಂದೆ ಕೊಡುವ ಶಬ್ದರೂಪಗಳನ್ನು ಕಂಠಪಾಠಮಾಡಿ ಅಥವಾ ಗಮನಿಸಿ ವಾಕ್ಯಗಳಲ್ಲಿ ಪ್ರಯೋಗಿಸಬೇಕು.

Sri Vidyabharathi Book Centre, Sringeri

नामपदानि

CC-O. In Public Domain. Digitized by eGangotri

ಸ್ವರಾಂತ ಪುಲ್ಲಿಂಗ ಶಬ್ದಗಳು – अजन्त पुल्लिङ्ग शब्दाः

अकारान्तः पुँल्लिङ्गो रामशब्दः

ವಿಭಕ್ತಿ	ಏಕವಚನಂ	ದ್ವಿವಚನಂ	ಬಹುವಚನಂ
प्रथमा	रामः ರಾಮನು **Rama- Subject** ರಾಮಃ	रामौ ಇಬ್ಬರು ರಾಮರು ರಾಮೌ	रामाः ರಾಮರು ರಾಮಾಃ
सं प्रथमा	हे राम ಎಲೈ ರಾಮನೆ **O Rama** ಹೇ ರಾಮ	हे रामौ ಎಲೈ ಇಬ್ಬರು ರಾಮರೆ ಹೇ ರಾಮೌ	हे रामाः ಎಲೈ ರಾಮರೆ, ಹೇ ರಾಮಾಃ
द्वितीया	रामम् ರಾಮನನ್ನು **Rama-Object** ರಾಮಂ	रामौ ಇಬ್ಬರು ರಾಮರನ್ನು ರಾಮೌ	रामान् ರಾಮರನ್ನು ರಾಮಾನ್
तृतीया	रामेण ರಾಮನಿಂದ **by/with Rama** ರಾಮೇಣ	रामाभ्याम् ಇಬ್ಬರು ರಾಮರಿಂದ ರಾಮಾಭ್ಯಾಂ	रामैः ರಾಮರಿಂದ ರಾಮೈಃ
चतुर्थी	रामाय ರಾಮನಿಗೆ, ಗೋಸ್ಕರ **For/to** ರಾಮಾಯ	रामाभ्याम् ಇಬ್ಬರು ರಾಮರಿಗೆ ರಾಮಾಭ್ಯಾಂ	रामेभ्यः ರಾಮರಿಗಾಗಿ ರಾಮೇಭ್ಯಃ
पञ्चमी	रामात् ರಾಮನದೆಸೆಯಿಂದ **from Rama** ರಾಮಾತ್	रामाभ्याम् ಇಬ್ಬರು ರಾಮರ ದೆಸೆಯಿಂದ ರಾಮಾಭ್ಯಾಂ	रामेभ्यः ರಾಮರ ದೆಸೆಯಿಂದ ರಾಮೇಭ್ಯಃ
षष्ठी	रामस्य ರಾಮನ **Rama's** ರಾಮಸ್ಯ	रामयोः ಇಬ್ಬರು ರಾಮರ ರಾಮಯೋಃ	रामाणाम् ರಾಮರ ರಾಮಾಣಾಂ
सप्तमी	रामे ರಾಮನಲ್ಲಿ **In/On/Rama** ರಾಮೇ	रामयोः ಇಬ್ಬರು ರಾಮರಲ್ಲಿ ರಾಮಯೋಃ	रामेषु ರಾಮರಲ್ಲಿ ರಾಮೇಷು

ಹೀಗೆಯೆ: हर, नर, अर्क, सूर्य, समुद्र, इन्द्र, शूर, शङ्कर, धर्म, वृक्ष, गृध्रः, व्याघ्र, शिष्य, शिक्षक, इन्द्र

ವ್ಯಾಕರಣ ವಿಶೇಷ :

1) ಒಂದೇ ಪದದಲ್ಲಿರುವ ऋ, र् ಮತ್ತು ष ಗಳ ಮುಂದೆ ಇರುವ न ಕಾರವು ण ಕಾರವಾಗುತ್ತದೆ. क ವರ್ಗ ಮತ್ತು प ವರ್ಗದ ವ್ಯಂಜನಗಳು, ಅನುನಾಸಿಕಗಳು ह्, य्, व, र् ಗಳು ನಡುವೆ ಇದ್ದರೂ ण ಕಾರವಾಗುತ್ತದೆ. ಉದಾಃ रामेण, रामणाम्, पूष्णा, गृहाणि ಇತ್ಯಾದಿ

2) ಆದರೆ न् ಅಕ್ಷರವು ಕೊನೆಯ ವರ್ಣವಾಗಿದ್ದರೆ ಆಗುವುದಿಲ್ಲ. ಉದಾ – रामान्। ಹಾಗೆಯೇ ಎರಡು ಪದಗಳು ಸೇರಿ ಆದ ಸಮಸ್ತಪದದ ಮೊದಲ ಪದದಲ್ಲಿ ऋ, र, ष ಕಾರಗಳಿದ್ದರೂ ಎರಡನೇ ಪದದಲ್ಲಿರುವ न् ಕಾರಕ್ಕೆ णत्व ವು ಬರುವುದಿಲ್ಲ. ಉದಾಃ नृयानम्, गिरिगहनम्, रघुनन्दनः, सर्वनाम, पितृभगिनी ಇತ್ಯಾದಿ.

3) अ आ ಬಿಟ್ಟು ಉಳಿದ ಸ್ವರಗಳ ಮುಂದೆ ಇರುವ, क् ಮತ್ತು र् ಕಾರಗಳ ಮುಂದೆ ಇರುವ स् ಕಾರಕ್ಕೆ ಅದೇಶರೂಪವಾದ ಮತ್ತು ಪ್ರತ್ಯಯ ಅವಯವವಾದ स् ಕಾರಕ್ಕೆ ष् ಕಾರಾದೇಶವಾಗುವುದು. ಉದಾಃ रामे + सु = रामेषु, हरिषु, गुरुषु, दिक् + षु = दिक्षु, चतुर्षु ಇತ್ಯಾದಿ.

4) अ आ ಬಿಟ್ಟುಳಿದ ಸ್ವರಗಳು ಮತ್ತು स् ಕಾರಾದಿ ಪ್ರತ್ಯಯ ಇವೆರೆಡರ ನಡುವೆ ಅನುಸ್ವಾರ, ವಿಸರ್ಗ, श्, ष्, स् ಗಳು ಬಂದರೂ ष् ಕಾರಾದೇಶ ಬರುವುದು. ಉದಾ: हर्वींषि, धनूंषि, आयुषः।

Sri Vidyabharathi Book Centre, Sringeri

CC-0. In Public Domain. Digitized by eGangotri

अकारान्तः पुँल्लिङ्गे बालकशब्दः

प्र वि –	बालकः ಬಾಲಕನು	बालकौ	बालकाः
सं प्र –	हे बालक ಎಲೈ ಬಾಲಕನೆ	है बालकौ	है बालकाः
द्वि वि –	बालकम् ಬಾಲಕನನ್ನು	बालकौ	बालकान्
तृ वि –	बालकेन ಬಾಲಕನಿಂದ	बालकाभ्याम्	बालकैः
च वि –	बालकाय ಬಾಲಕನಿಗೋಸ್ಕರ	बालकाभ्यम्	बालकेभ्यः
प वि –	बालकात् ಬಾಲಕನದೆಸೆಯಿಂದ	बालकाभ्यम्	बालकेभ्यः
ष वि –	बालकस्य ಬಾಲಕನ	बालकयोः	बालकानाम्
स वि –	बालके ಬಾಲಕನಲ್ಲಿ	बालकयोः	कालकेषु

अकारान्तः नपुंसकलिङ्गः ज्ञानशब्दः

प्र –	ज्ञानम् ಜ್ಞಾನವು	ज्ञाने	ज्ञानानि
स –	हे ज्ञान ಎಲೈ ಜ್ಞಾನವೇ	हे ज्ञाने	हे ज्ञानाति
द्वि –	ज्ञानम् ಜ್ಞಾನವನ್ನು	ज्ञाने	ज्ञानानि

ನಪುಂಸಕಲಿಂಗದ ಎಲ್ಲಾ ಶಬ್ದಗಳ ಪ್ರಥಮ ಮತ್ತು ದ್ವಿತೀಯ ವಿಭಕ್ತಿಗಳ ರೂಪಗಳು ಒಂದೇ ಆಗಿದ್ದು, ಉಳಿದ ವಿಭಕ್ತಿಗಳ ರೂಪುಗಳು ಪುಲ್ಲಿಂಗದಂತೆ.

ಹೀಗೆಯೇ – फल, पुस्तक, जल, आकाश, कमल, मस्तक, शीर्ष, वाहन, उदर, नयन, नेत्र, ललाट ಇತ್ಯಾದಿ.

ಹೀಗೆಯೇ – गज, गणप, गोविन्द, गोप, शिव, कुश, पाठ, अल्प, दीप, शब्द, हय, अश्व, पादप, देव, वानर, सचिव ಇತ್ಯಾದಿ.

उदाहरण वाक्यानि

इदं फलम् ಇದು ಹಣ್ಣು. इमे फले ಇವೆರಡು ಹಣ್ಣುಗಳು. इमानि फलानि ಇವು ಹಣ್ಣುಗಳು. तत् फलं सः खादति ಆ ಹಣ್ಣನ್ನು ಅವನು ತಿನ್ನುತ್ತಾನೆ. ते फले तौ खादतः = ಆ ಎರಡು ಹಣ್ಣುಗಳನ್ನು ಅವರಿಬ್ಬರು ತಿನ್ನುತ್ತಾರೆ. तानि फलानि ते खादन्ति – ಆ ಹಣ್ಣುಗಳನ್ನು ಅವರು ತಿನ್ನುತ್ತಾರೆ.

बालकः पठति – ಬಾಲಕನು ಓದುತ್ತಾನೆ. बालकौ पठतः = ಇಬ್ಬರು ಬಾಲಕರು ಓದುತ್ತಾರೆ. बालकाः पठन्ति = ಬಾಲಕರು ಓದುತ್ತಾರೆ. हे बालक, त्वं पठ = ಎಲೈ ಬಾಲಕನೆ, ನೀನು ಓದು. हे बालकौ, युवां पठतम्। = ಎಲೈ ಬಾಲಕರೆ, ನೀವಿಬ್ಬರು ಓದಿರಿ. हे बालकाः, यूयं पठत = ಎಲೈ ಬಾಲಕರೆ, ನೀವು ಓದಿರಿ. अहं बालकं ताडयामि = ನಾನು ಬಾಲಕನನ್ನು ಹೊಡೆಯುತ್ತೇನೆ. हस्तेन कार्यं करोति – ಕೈಯಿಂದ ಕಾರ್ಯವನ್ನು ಮಾಡುತ್ತಾನೆ. हस्ताभ्यां शिशुं गृह्णाति ಎರಡು ಕೈಗಳಿಂದ ಮಗುವನ್ನು ಹಿಡಿದುಕೊಳ್ಳುತ್ತಾನೆ. गुरुः छात्रैः पाठयति – ಗುರುವು ವಿದ್ಯಾರ್ಥಿಗಳಿಂದ ಓದಿಸುತ್ತಾನೆ. बालकाय पुस्तकं आनयति ಬಾಲಕನಿಗೆ ಪುಸ್ತಕವನ್ನು ತರುತ್ತಾನೆ. बालकाभ्यां मोदकान् आनयति – ಇಬ್ಬರು ಮಕ್ಕಳಿಗಾಗಿ ಮೊದಕಗಳನ್ನು ತರುತ್ತಾನೆ. बालकेभ्यः इदं पुस्तकं रोचते – ಮಕ್ಕಳಿಗೆ ಈ ಪುಸ್ತಕವು ಹಿಡಿಸುತ್ತದೆ / ಇಷ್ಟವಾಗುತ್ತದೆ. चोरात् भयम् – ಕಳ್ಳರಿಂದಾಗಿ ಹೆದರಿಕೆ. रावणः रामलक्ष्मणाभ्यां उतीव भीतवान् = ರಾವಣನು ರಾಮಲಕ್ಷ್ಮಣರಿಂದ ತುಂಬಾ ಭಯಗೊಂಡನು. आकाशात् पतितं तोयं यथा गच्छति सागरम्। सर्वदेव नमस्कारः केशवं प्रति गच्छति – ಆಕಾಶದಿಂದ ಬಿದ್ದ ನೀರು ಹೇಗೆ ಸಮುದ್ರಕ್ಕೆ ಹೋಗುತ್ತದೋ, ಹಾಗೆ ಎಲ್ಲಾ ದೇವರಿಗೂ ಮಾಡಿದ ನಮಸ್ಕಾರವು ಕೇಶವನಿಗೆ ಸಲ್ಲುತ್ತದೆ. (के ಶರೀರದಲ್ಲಿ शव– ಮಲಗಿರುವ ಪರಮಾತ್ಮ) नगरजनाः चोरेभ्यः भीताः भवन्ति। ನಗರದ ಜನರು ಕಳ್ಳರಿಂದಾಗಿ ಹೆದರಿದವರಾಗಿದ್ದಾರೆ. रामस्य त्रयः पुत्राः आसन् ರಾಮನಿಗೆ ಮೂವರು ಮಕ್ಕಳು ಇದ್ದರು. सीतायाः पुत्रयोः नाम लवःकुशःच ಸೀತೆಯ ಇಬ್ಬರು ಮಕ್ಕಳ ಹೆಸರು ಲವ ಮತ್ತು ಕುಶ.

Sri Vidyabharathi Book Centre, Sringeri

CC-O. In Public Domain. Digitized by eGangotri

एषा बालकानां शाला। = ಇದು ಬಾಲಕರ ಶಾಲೆ. बालके पुस्तकम् अस्ति। ಬಾಲಕನಲ್ಲಿ ಪುಸ್ತಕವು ಇದೆ. बालकयोः कः चतुरतरः? ಇಬ್ಬರು ಬಾಲಕರಲ್ಲಿ ಯಾವನು ಹೆಚ್ಚು ಚತುರನು? वालकेषु सुरेशःचतुरतमः = ಬಾಲಕರಲ್ಲಿ ಸುರೇಶನು ಹೆಚ್ಚು ಚತುರನು. मयूराः नृत्यन्ति। ನವಿಲುಗಳು ಕುಣಿಯುತ್ತವೆ. वैद्येन मनुष्याणां रोगाः नश्यन्ति। ವೈದ್ಯನಿಂದ ಮನುಷ್ಯರ ರೋಗಗಳು ನಶಿಸುತ್ತವೆ. कृषीवलाः वृषभौ धेनुं सारमेयं कुक्कुटं च पालयन्ति। ರೈತರು ಎರಡು ಎತ್ತುಗಳನ್ನು ದನವನ್ನು ನಾಯಿಯನ್ನು ಮತ್ತು ಕೋಳಿಯನ್ನು ಪಾಲಿಸುತ್ತಾರೆ. सूदः इन्धनैः ओदनं पचति - = ಅಡುಗೆಯವನು ಕಟ್ಟಿಗೆಗಳಿಂದ ಅನ್ನವನ್ನು ಬೇಯಿಸುತ್ತಾನೆ.

दरिद्राः धनाभावात् नश्यन्ति = ಬಡವರು ಹಣದ ಅಭಾವದಿಂದಾಗಿ ನಾಶಹೊಂದುತ್ತಾರೆ. वृक्षः फलैः लोकाय उपकरोति = ಮರವು ಹಣ್ಣುಗಳಿಂದ ಲೋಕಕಕ್ಕೆ ಉಪಕಾರ ಮಾಡುತ್ತದೆ. मेघाः आकाशे सञ्चरन्ति = ಮೋಡಗಳು ಆಕಾಶದಲ್ಲಿ ಸಂಚರಿಸುತ್ತವೆ. जनाः धनाय यतन्ते ಜನರು ಹಣಕ್ಕಾಗಿ ಯತ್ನಿಸುತ್ತಾರೆ. कोकिलाः वसन्तकाले मधुरं कूजन्ति = ಕೋಗಿಲೆಗಳು ವಸಂತಕಾಲದಲ್ಲಿ ಮಧುರವಾಗಿ ಕೂಗುತ್ತವೆ. कृषीवलाः वर्षकाले वृषभाभ्यां भूमिं हलेन कर्षन्ति = ರೈತರು ಮಳೆಗಾಲದಲ್ಲಿ ಎರಡು ಎತ್ತುಗಳಿಂದ ಭೂಮಿಯನ್ನು ನೇಗಿಲಿನಿಂದ ಉಳುತ್ತಾರೆ. विडालात् भीतः मूषकः बिलं प्रविशति = ಬೆಕ್ಕಿಗೆ ಹೆದರಿದ ಇಲಿಯು ಬಿಲವನ್ನು ಪ್ರವೇಶಿಸುತ್ತದೆ. अलसैः सुखं न लभ्यते = ಸೋಮಾರಿಗಳಿಂದ ಸುಖವು ಪಡೆಯಲಿಕ್ಕಿಲ್ಲ, अवमानात् मरणम् एव वरम् = ಅವಮಾನಕ್ಕಿಂತ ಮರಣವೇ ಲೇಸು. वृक्षेभ्यः फलानि पत्राणि च पतन्ति = ಮರಗಳಿಂದ ಹಣ್ಣುಗಳು ಮತ್ತು ಎಲೆಗಳು ಬೀಳುತ್ತವೆ. हिमालयात् गङ्गा प्रवहति = ಹಿಮಾಲಯದಿಂದ ಗಂಗೆಯು ಹರಿಯುತ್ತದೆ. बालकाः मित्रैः सह कूपस्य समीपे क्रीडन्ति = ಬಾಲಕರು ಮಿತ್ರರೊಂದಿಗೆ ಬಾವಿಯ ಸಮೀಪದಲ್ಲಿ ಆಡುತ್ತಾರೆ. एषः एकं चोरं पश्यति। = ಇವನು ಒಬ್ಬ ಕಳ್ಳನನ್ನು ನೋಡುತ್ತಾನೆ. सः उपायेन चोरं वञ्चयति = ಅವನು ಉಪಾಯದಿಂದ ಕಳ್ಳನನ್ನು ವಂಚಿಸುತ್ತಾನೆ. बालाः कन्दुकैः क्रीडन्ति = ಬಾಲಕರು ಚೆಂಡುಗಳಿಂದ ಆಡುತ್ತಾರೆ. बालकः वक्रदण्डेन कन्दुकं ताडयति = ಬಾಲಕನು ಬ್ಯಾಟಿನಿಂದ ಚೆಂಡನ್ನು ಹೊಡೆಯುತ್ತಾನೆ. त्वं कर्णाभ्यां किं करोषि? ನೀನು ಕಿವಿಗಳಿಂದ ಏನು ಮಾಡುವಿ? अहं कर्णाभ्यां शृणोमि = ನಾನು ಎರಡು ಕಿವಿಗಳಿಂದ ಕೇಳುತ್ತೇನೆ. अहं पादाभ्यां चलामि = ನಾನು ಎರಡು ಕಾಲುಗಳಿಂದ ಚಲಿಸುವೆನು. रविवासरे विरामः, स्थिरवासरे अर्धविरामः - ಆದಿತ್ಯವಾರದಲ್ಲಿ ರಜೆ ಇದೆ. ಶನಿವಾರದಲ್ಲಿ ಅರ್ಧ ರಜೆ ಇದೆ. देवः सर्वेषु पदार्थेषु, सर्वेषु भूतेषु च सर्वदा अस्ति। ದೇವನು ಎಲ್ಲಾ ಪದಾರ್ಥಗಳಲ್ಲಿ ಮತ್ತು ಎಲ್ಲಾ ಪ್ರಾಣಿಗಳಲ್ಲಿ ಯಾವಾಗಲೂ ಇರುತ್ತಾನೆ. अर्थनाशं, मनस्तापं, गृहे दुश्चरितानि, वञ्चनं अपमानं च मतिमान् न प्रकाशयेत् = ಹಣದ ನಷ್ಟ, ಪರಸ್ಪರರಲ್ಲಿ ಮನಸ್ತಾಪ, ಮನೆಯಲ್ಲಿಯ ಅವ್ಯವಹಾರಗಳು, ತಮಗಾದ ಮೋಸ ಮತ್ತು ಅಪಮಾನ ಇವನ್ನು ಬುದ್ಧಿ ಇದ್ದವನು ಪ್ರಕಟಗೊಳಿಸಬಾರದು. पीपीलिक - अर्जितं धान्यं, मक्षिकासञ्चितं मधु, लुब्धेन सञ्चितं द्रव्यं समूलं विनश्यति। = ಇರುವೆಯಿಂದ ಸಂಪಾದಿಸಲ್ಪಟ್ಟ ಧಾನ್ಯ, ಜೇನು ನೊಣಗಳಿಂದ ಸಂಗ್ರಹಿಸಲ್ಪಟ್ಟ ಜೇನು, ಜಿಪುಣನಿಂದ ಸಂಗ್ರಹಿಸಿದ ಹಣ, ಇವೆಲ್ಲವೂ ಬುಡಸಹಿತ ಪೂರ್ಣವಾಗಿ ನಾಶಹೊಂದುತ್ತವೆ. परोपकाराय वहन्ति नद्यः। परोपकाराय दुहन्ति गावः। परोपकारार्थं इदं शरीरम्।। ಪರೋಪಕಾರಕ್ಕಾಗಿ ಮರಗಳು ಫಲಬಿಡುತ್ತವೆ. ಪರೋಪಕಾರಕ್ಕಾಗಿ ನದಿಗಳು ಹರಿಯುತ್ತವೆ. ಪರೋಪಕಾರಕ್ಕಾಗಿ ದನಗಳು ಹಾಲುಕೊಡುತ್ತವೆ. ಪರೋಪಕಾರಕ್ಕಾಗಿ ಈ ಶರೀರವು ಇರಬೇಕು. वसुदेवसुतं देवं कंसचाणूरमर्दनम्। देवकी परमानन्दं **कृष्णं वन्दे जगद्गुरुम्।** ವಸುದೇವನ ಮಗನಾದ, ದೇವನಾದ, ಕಂಸಚಾಣೂರರನ್ನು ಕೊಂದಿರುವ, ದೇವಕಿಗೆ ತುಂಬಾ ಆನಂದವನ್ನು ಕೊಡುವ ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.(वन्दे)

Sri Vidyabharathi Book Centre, Sringeri

इकारान्तः पुल्लिङ्गः कवि शब्दः

... In Public Domain. Digitized by eGangotri

हरि शब्दः

प्र वि –	कविः ಕವಿಯು	कवी	कवयः	हरिः ಹರಿಯು	हरी	हरयः
सं प्र –	हे कवे ಎಲೈ ಕವಿಯೇ	हेकवी	हे कवयः	है हरे ಎಲೈ ಹರಿಯೆ	है हरी	है हरयः
द्वि वि –	कविम् ಕವಿಯನ್ನು	कवी	कवीन्	हरिम् ಹರಿಯನ್ನು	हरी	हरीन्
तृ वि –	कविना ಕವಿಯಿಂದ	कविभ्यां	कविभिः	हरिणा ಹರಿಯಿಂದ	हरिभ्यां	हरिभिः
च वि –	कवये ಕವಿಗೆ	कविभ्यां	कविभ्यः	हरये ಹರಿಗಾಗಿ	हरिभ्यां	हरिभ्यः
प वि –	कवेः ಕವಿಯದೆಸೆಯಿಂದ	कविभ्यां	कविभ्यः	हरेः ಹರಿಯದೆಸೆಯಿಂದ	हरिभ्यां	हरिभ्यः
ष वि –	कवेः ಕವಿಯ	कव्योः	कवीनाम्	हरेः ಹರಿಯ	हर्योः	हरीणाम्
स वि –	कवौ ಕವಿಯಲ್ಲಿ	कव्योः	कविषु	हरौ ಹರಿಯಲ್ಲಿ	हर्योः	हरिषु

ಹೀಗೆಯೇ – मुनि, पाणि, श्रीपति, कपि, मणि
मारुतिः, कलि, यति, अग्नि, अलि
(ದುಂಬಿ) भूपति, अतिथि, बलि, विधि, मणि, निधि, ಇತ್ಯಾದಿ

ಹೀಗೆಯೇ – अरि, अद्रि, रवि, सूरि
(ಪಂಡಿತ) शौरि, मुरारि, गिरि, पतत्रि
(ಹಕ್ಕಿ)

उदाहरणवाक्यानि

एषः कविः = ಇವನು ಕವಿಯು. एतौ कवी। – ಇವರಿಬ್ಬರು ಕವಿಗಳು. एते कवयः = ಇವರು ಕವಿಗಳು.हे कवे, तव नाम किम् ? ಎಲೈ ಕವಿಯೆ, ನಿನ್ನ ಹೆಸರೇನು हे कवी, युवयोः नाम किम्? ಎಲೈ ಇಬ್ಬರು ಕವಿಗಳೆ, ನಿಮ್ಮಿಬ್ಬರ ಹೆಸರೇನು. हे कवयः, युष्माकं देशः कः? ಎಲೈ ಕವಿಗಳೆ, ನಿಮ್ಮ ದೇಶ ಯಾವುದು? राजा कविं सत्करोति ರಾಜನು ಕವಿಯನ್ನು ಸತ್ಕರಿಸುತ್ತಾನೆ.

राजा द्वौ कवी सत्करोति = ರಾಜನು ಇಬ್ಬರು ಕವಿಗಳನ್ನು ಸತ್ಕರಿಸುತ್ತಾನೆ. चक्रवर्ती कवीन् प्रशंसति। ಚಕ್ರವರ್ತಿಯು ಕವಿಗಳನ್ನು ಹೊಗಳುತ್ತಾನೆ. कविना काव्यं रचितम्। ಕವಿಯಿಂದ ಕಾವ್ಯವು ರಚಿಸಲ್ಪಟ್ಟಿದೆ. द्वाभ्यां कविभ्यां हिमालयः सम्यक् वर्णितः – ಇಬ್ಬರು ಕವಿಗಳಿಂದ ಹಿಮಾಲಯವು ಚೆನ್ನಾಗಿ ವರ್ಣಿಸಲ್ಪಟ್ಟಿದೆ. कविभिः अस्माकं संस्कृतिः रक्षिता। ಕವಿಗಳಿಂದ ನಮ್ಮ ಸಂಸ್ಕೃತಿಯು ರಕ್ಷಿಸಲ್ಪಟ್ಟಿದೆ. कवये स्वस्ति ಕವಿಗೆ ಶುಭವಾಗಲಿ. कविभ्यां स्वागतम्। ಕವಿಗಳಿಗೆ ಸ್ವಾಗತವು. कविभ्यः सम्मानं करोति ಕವಿಗಳಿಗೆ ಸನ್ಮಾನವನ್ನು ಮಾಡುತ್ತಾನೆ. कवेः काव्यं प्रभवति। ಕವಿಯಿಂದ (ಪಂ.ವಿ) ಕಾವ್ಯವು ಹುಟ್ಟುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

राष्ट्रकविभ्यां व्यासवाल्मीकिभ्यां देशस्य कीर्तिः प्रवर्धिता – ರಾಷ್ಟ್ರಕವಿಗಳಾದ ವ್ಯಾಸವಾಲ್ಮೀಕಿಯರ ದಸೆಯಿಂದಾಗಿ ದೇಶದ ಕೀರ್ತಿಯು ಹೆಚ್ಚಿದೆ. कविभ्यः सत्काव्यानि प्रभवन्ति। ಕವಿಗಳಿಂದ ಸತ್ಕಾವ್ಯಗಳು ಹುಟ್ಟುತ್ತವೆ. अहं कवेः ग्रन्थम् एव पठामि। ನಾನು ಕವಿಯ ಗ್ರಂಥವನ್ನೇ ಓದುತ್ತೇನೆ. भास कालिदासयोः नाटकानि बहु प्रसिद्धानि। ಭಾಸ ಕಾಳಿದಾಸರ ನಾಟಕಗಳು ಬಹು ಪ್ರಸಿದ್ಧವಾಗಿವೆ. देहलीनगरे कवीनां सम्मेलनं व्यवस्थापितम्। ದೆಹಲಿ ನಗರದಲ್ಲಿ ಕವಿಗಳ ಸಮ್ಮೇಳನವು ವ್ಯವಸ್ಥಾಪಿಸಲ್ಪಟ್ಟಿದೆ. कवौ सद्गुणाः निवसन्ति। ಕವಿಯಲ್ಲಿ ಸದ್ಗುಣಗಳು ನೆಲೆಸಿವೆ. भासबाणयोः कव्योः कःचतुरतरः ಭಾಸಬಾಣ ಕವಿಗಳಲ್ಲಿ ಯಾರು ಹೆಚ್ಚು ಚತುರರು? कविषु कालिदासः प्रसिद्धः। ಕವಿಯಲ್ಲಿ ಕಾಳಿದಾಸನು ಪ್ರಸಿದ್ಧನು.

ಮಿಶ್ರವಾಕ್ಯಗಳು – रविणा अन्धकारः नश्यति। ಸೂರ್ಯನಿಂದ ಕತ್ತಲೆಯು ನಾಶವಾಗುತ್ತದೆ. कवेः कृतिः काव्यं भवति। – ಕವಿಯ ಕೃತಿಯು ಕಾವ್ಯವಾಗುತ್ತದೆ. गिरौ मयूराः नृत्यन्ति। – ಪರ್ವತದಲ್ಲಿ ನವಿಲುಗಳು ನರ್ತಿಸುತ್ತವೆ. सर्वे कवीन् अभिनन्दन्ति ಎಲ್ಲರೂ ಕವಿಗಳನ್ನು ಅಭಿನಂದಿಸುತ್ತಾರೆ. हे कवयः, सत्काव्यानि रचयत। ಎಲೈ ಕವಿಗಳೆ, ಸತ್‌ಕಾವ್ಯಗಳನ್ನು ರಚಿಸಿರಿ. मुनये नमः–ಮುನಿಗೆ ನಮಸ್ಕಾರ. अहं हरिं नमामि –ನಾನು ಹರಿಯನ್ನು ನಮಿಸುವೆನು. ऋषिभ्यः स्वस्ति – ಮುನಿಗಳಿಗೆ ಒಳ್ಳೆಯದಾಗಲಿ. वैरिभिः देशः रक्षितः। ವೈರಿಗಳಿಂದ ದೇಶವು ರಕ್ಷಿಸಲ್ಪಟ್ಟಿತು. अतिथयः गृहम् आगच्छन्ति। ಅತಿಥಿಗಳು ಮನೆಗೆ ಬರುತ್ತಾರೆ. कपयः वृक्षात् वृक्षं उत्प्लवन्ति। – ಕೋತಿಗಳು ಮರದಿಂದ ಮರಕ್ಕೆ ಹಾರುತ್ತವೆ. हनुमान् नाम कपिः कपिषु श्रेष्ठतमः ಹನುಮಾನ್ ಎಂಬ ಕೋತಿಯು ಕೋತಿಗಳಲ್ಲಿ ಹೆಚ್ಚು ಶ್ರೇಷ್ಠವಾದದ್ದು. ऋषिः हरये पूजां समर्पयति। ಋಷಿಯು ಹರಿಗೆ ಪೂಜೆಯನ್ನು ಸಮರ್ಪಿಸುತ್ತಾನೆ. कवयः भूपतीन् प्रशंसन्ति। = ಕವಿಗಳು ರಾಜರನ್ನು ಹೊಗಳುತ್ತಾರೆ – ज्ञातयः कुटुम्बे कलहं कुर्वन्ति। ಬಂಧುಗಳು ಕುಟುಂಬದಲ್ಲಿ ಕಲಹವನ್ನು ಮಾಡುತ್ತಾರೆ.

हरिः लोकं रक्षति – ಹರಿಯು ಲೋಕವನ್ನು ರಕ್ಷಿಸುತ್ತಾನೆ. हरिं विना अन्यः रक्षकः नास्ति – ಹರಿಯು ಇಲ್ಲದೆ ಬೇರೆ ರಕ್ಷಕನು ಇಲ್ಲ. हरये सर्वार्पणं करोमि – ಹರಿಗೆ ಎಲ್ಲವನ್ನೂ ಅರ್ಪಣೆಯನ್ನು ಮಾಡುತ್ತಾನೆ. अहं हरेः चरणयोः नमामि – ನಾನು ಹರಿಯ ಚರಣಗಳಿಗೆ ನಮಿಸುವೆನು. अतिथीनां सत्कारं कुरु ಅತಿಥಿಗಳ ಸತ್ಕಾರವನ್ನು ಮಾಡು. ऋषयः यतयः च आश्रमे वसन्ति। नमः वाल्मीकये व्यासाय च – ವಾಲ್ಮೀಕಿ ಮತ್ತು ವ್ಯಾಸನಿಗೆ ನಮಸ್ಕಾರ. प्रातः काले रवेः प्रकाशः कोमलः भवति – ಬೆಳಿಗ್ಗೆ ಸೂರ್ಯನ ಪ್ರಕಾಶವು ಕೋಮಲವಾಗಿರುತ್ತದೆ. रवेः किरणैः अस्माकं शरीरे डि जीवसत्वस्य प्रवर्धनं भवति – ಸೂರ್ಯನ ಕಿರಣಗಳಿಂದ ನಮ್ಮ ಶರೀರದಲ್ಲಿ 'ಡಿ' ಜೀವಸತ್ವದ ಪ್ರಮಾಣ ಹೆಚ್ಚುತ್ತದೆ. धीशक्तेः विकासनार्थं जनाः रवेःउपासनां कुर्वन्ति – ಬುದ್ಧಿಶಕ್ತಿಯ ವಿಕಾಸಕ್ಕಾಗಿ ಜನರು ಸೂರ್ಯನ ಉಪಾಸನೆಯನ್ನು ಮಾಡುತ್ತಾರೆ. गोपालकाः गवादीन् चारणार्थं बहिः गच्छन्ति – ಗೋಲ್ಲರು ದನ ಮೊದಲಾದವುಗಳನ್ನು ಮೇಯಿಸುವುದಕ್ಕಾಗಿ ಹೊರಗೆ ಹೋಗುತ್ತಾರೆ. हिमाद्रेःउपरि हिमावरणं अस्ति – ಹಿಮಾಲಯ ಪರ್ವತದ ಮೇಲೆ ಹಿಮದ ಆವರಣವಿರುತ್ತದೆ. भूपतीनां मध्ये युधिष्ठिरः श्रेष्ठः – ರಾಜರ ಮಧ್ಯೆ ಯುಧಿಷ್ಠಿರನು ಶ್ರೇಷ್ಠನು. रवेः प्रकाशं आतपः इति कथयन्ति – ಸೂರ್ಯನ ಪ್ರಕಾಶವನ್ನು ಬಿಸಿಲು (ಆತಪ) ಎಂದು ಹೇಳುತ್ತಾರೆ. यदा उदधेः जलं रवेः रश्मिभिः शुष्यति, तदा लवणं उद्भवति। ಯಾವಾಗ ಸಮುದ್ರದ ನೀರು ಸೂರ್ಯನ ಕಿರಣಗಳಿಂದ ಒಣಗುತ್ತದೋ ಆಗ ಉಪ್ಪು ಹುಟ್ಟುತ್ತದೆ. दुंदुभेः शब्दः गम्भीरः भवति – ನಗಾರಿಯ ಶಬ್ದವು ಗಂಭೀರವಾಗಿದೆ. सः मणीनां मालां पुत्रस्य कण्ठे स्थापयति। ಅವನು ಮಣಿಗಳ ಮಾಲೆಯನ್ನು ಮಗನ ಕುತ್ತಿಗೆಯಲ್ಲಿ ಹಾಕುತ್ತಾನೆ. मणिषु कं मणिं भवान् इच्छति? ಮಣಿಗಳಲ್ಲಿ ಯಾವ ಮಣಿಯನ್ನು ತಾವು ಇಚ್ಛಿಸುತ್ತೀರಿ?

Sri Vidyabharathi Book Centre, Sringeri

CC-O. In Public Domain. Digitized by eGangotri

इकारान्तः पुल्लिङ्गः पति शब्दः

प्र वि –	पतिः ಗಂಡನು	पती	पतयः
सं प्र –	हे पते ಎಲೈ ಪತಿಯೆ	है पती	हे पतयः
द्वि वि –	पतिं ಪತಿಯನ್ನು	पती	पतीन्
तृ वि –	पत्या (भूपतिना) ಪತಿಯಿಂದ	पतिभ्यां	पतिभिः
च वि –	पत्ये (भूपतये) ಪತಿಗಾಗಿ	पतिभ्यां	पतिभ्यः
प वि –	पत्युः (भूपतेः) ಪತಿಯದೆಸೆಯಿಂದ	पतिभ्यां	पतिभ्यः
ष वि –	पत्युः (भूपतेः) ಪತಿಯ	पत्योः	पतीनाम्
स वि –	पत्यौ (भूपतौ) ಪತಿಯಲ್ಲಿ	पत्योः	पतिषु

ವಿ.ಸೂ. पति ಶಬ್ದವು ಸಮಾಸದ ಕೊನೆಯಲ್ಲಿ ಬಂದಾಗ कवि ಶಬ್ದದಂತೆ ರೂಪಹೊಂದುತ್ತದೆ. ಉದಾ – नृपति, भूपति, नरपति, श्रीमति, अश्वपति, गणपति

इकारान्तः पुल्लिङ्ग सखि शब्दः

सखा ಗೆಳೆಯನು	सरवायौ	सरवायः
हे सखे ಎಲೈ ಗೆಳೆಯನೆ	हे सखायौ	हे सखायः
सखायं ಗೆಳೆಯನನ್ನು	सखायौ	सखीन्
सख्या ಗೆಳೆಯನಿಂದ	सखिभ्यां	सखिभिः
सख्ये ಗೆಳೆಯನಿಗಾಗಿ	सखिभ्यां	सखिभ्यः
सख्युः ಗೆಳೆಯನದೆಸೆಯಿಂದ	सखिभ्यां	सखिभ्यः
सख्युः ಗೆಳೆಯನ	सख्योः	सखीनां
सख्यौ ಗೆಳೆಯನಲ್ಲಿ	सख्योः	सखिषु

ವಿ. ಸೂ. सखि ಶಬ್ದವು ಸಮಾಸದ ಕೊನೆಯಲ್ಲಿ ಬಂದಾಗ अ ಕಾರಾಂತವಾಗಿ बालक ಶಬ್ದದಂತೆ ರೂಪ ಹೊಂದುತ್ತದೆ. ಉದಾ – प्रियसखः, रामसखः

इकारान्तः कति शब्दः ಎಷ್ಟು? (ನಿತ್ಯ ಬಹುವಚನ)

प्र वि – कति, द्वि वि– कति, तृ वि–कतिभिः, च वि–कतिभ्यः, प वि – कितिप्यः ष वि–कतीनाम्, स वि कतिषु । – ಇದು ಮೂರು ಲಿಂಗಗಳಲ್ಲಿ ಒಂದೇ ರೂಪ.

उदाहरणवाक्यानि

सः पतिः – ಅವನು ಪತಿಯು तौ सखायौ ಅವರಿಬ್ಬರು ಗೆಳೆಯರು. ते सखायः – ಅವರು ಗೆಳೆಯರು. ते भूपालाः राजगृहे वसन्ति – ಆ ರಾಜರು ಅರಮನೆಯಲ್ಲಿ ವಾಸಿಸುತ್ತಾರೆ. तं भूपतिं कविः प्रशंसति । ಆ ರಾಜನನ್ನು ಕವಿಯು ಹೊಗಳುತ್ತಾನೆ. हे सखे, मम वचनं श्रुणु – ಎಲೈ ಗೆಳೆಯನೆ, ನನ್ನ ಮಾತನ್ನು ಕೇಳು. तौ सखायौ अपि अहं आह्वयामि – ಆ ಎರಡು ಗೆಳೆಯರನ್ನೂ ಕೂಡ ನಾನು ಆಹ್ವಾನಿಸುತ್ತೇನೆ. मम जन्मदिनोत्सवे, तान् सर्वान् सखीन् अपि अह्वयामि । – ನನ್ನ ಜನ್ಮೋತ್ಸವ ದಿನದಲ್ಲಿ ಆ ಎಲ್ಲಾ ಸ್ನೇಹಿತರನ್ನೂ ಆಹ್ವಾನಿಸುತ್ತೇನೆ. श्रीरामः प्रियसखस्य सुग्रीवस्य साहाय्येन सीतां पुनः प्राप्तवान् – ಶ್ರೀರಾಮನು ಪ್ರಿಯಗೆಳೆಯನಾದ ಸುಗ್ರೀವನ ಸಹಾಯದಿಂದ ಸೀತೆಯನ್ನು ಪುನಃ ಪಡೆದನು. मम सख्युः नाम सुरेशः – ನನ್ನ ಗೆಳೆಯನ ಹೆಸರು ಸುರೇಶನು. पतिव्रता सदा पत्युः सेवां करोति । – ಪತಿವ್ರತೆಯು ಯಾವಾಗಲೂ ಪತಿಯ ಸೇವೆಯನ್ನು ಮಾಡುತ್ತಾಳೆ. द्रौपदी सर्वान् पतीन् अपि प्रीणयति स्म । – ದ್ರೌಪದಿಯು ಎಲ್ಲಾ ಪತಿಯರನ್ನೂ ಕೂಡ ಸಂತೋಷಗೊಳಿಸುತ್ತಿದ್ದಳು. वानराः सर्वे श्रीरामस्य सखायः आसन् । ಕಪಿಗಳೆಲ್ಲಾ ಶ್ರೀರಾಮನ ಗೆಳೆಯರಾಗಿದ್ದರು. सुग्रीवः श्रीरामस्य प्रियसखः आसीत् । ಸುಗ್ರೀವನು ಶ್ರೀರಾಮನ ಪ್ರೀತಿಯ ಗೆಳೆಯನಾಗಿದ್ದ. भारतदेशे कति जनाः सन्ति – ಭಾರತ ದೇಶದಲ್ಲಿ ಎಷ್ಟು ಜನರು ಇದ್ದಾರೆ. छात्रः कति अङ्कान् प्राप्नोति ವಿದ್ಯಾರ್ಥಿಯು ಎಷ್ಟು ಅಂಕಗಳನ್ನು ಪಡೆಯುತ್ತಾನೆ. कतिभ्यः कविभ्यः कालिदास पुरस्काराः लब्धाः ಎಷ್ಟು ಕವಿಗಳಿಗೆ ಕಾಳಿದಾಸ ಪುರಸ್ಕಾರಗಳು ಸಿಕ್ಕಿವೆ?

Sri Vidyabharathi Book Centre, Sringeri

CC-O. In Public Domain. Digitized by eGangotri

उकारान्तः पुल्लिङ्गः भानुशब्दः — गुरु शब्दः

प्र वि –	भानुः	भानू	भानवः	गुरुः	गुरू	गुरवः
	ಸೂರ್ಯನು			ಗುರುವು		
सं प्र –	हेभानो	हे भानू	हे भानवः	हे गुरो	हे गुरू	हे गुरवः
	ಎಲೈಸೂರ್ಯನೆ,			ಎಲೈ ಗುರುವೆ		
द्वि वि –	भानुं	भानू	भानून्	गुरुम्	गुरू	गुरून्
	ಸೂರ್ಯನನ್ನು			ಗುರುವನ್ನು		
तृ वि –	भानुना	भानुभ्यां	भानुभिः	गुरुणा	गुरुभ्यां	गुरुभिः
	ಸೂರ್ಯನಿಂದ			ಗುರುವಿನಿಂದ		
च वि –	भानवे	भानुभ्यां	भानुभ्यः	गुरवे	गुरुभ्यां	गुरुभ्यः
	ಸೂರ್ಯನಿಗೆ			ಗುರುವಿಗೆ		
प वि –	भानोः	भानुभ्यां	भानुभ्यः	गुरोः	गुरुभ्यां	गुरुभ्यः
	ಸೂರ್ಯನಿಂದಾಗಿ			ಗುರುವಿನ ದೆಸೆಯಿಂದ		
ष वि –	भानोः	भान्वोः	भानूनाम्	गुरोः	गुर्वोः	गुरूणाम्
	ಸೂರ್ಯನ			ಗುರುವಿನ		
स वि –	भानौ	भान्वोः	भानुषु	गुरौ	गुर्वोः	गुरुषु
	ಸೂರ್ಯನಲ್ಲಿ			ಗುರುವಿನಲ್ಲಿ		

ಹೀಗೆಯೇ – विष्णु, इन्दु (ಚಂದ್ರ) साधु, बाहु, सूनु (ಮಗ) वन्धु, बिन्दु, सेतु, जन्तु, इषु, रिपु, शम्भु, पांसु (ಧೂಳು) वायु, क्रतु, (ಯಜ್ಞ) अणु, जन्तु, विधु (ಚಂದ್ರ) साधु, वेणु, पटु, तन्तु (ನೂಲು) परशु (ಕೊಡಲಿ) सिन्धु, हेतु (ಕಾರಣ) राहु, केतु, पङ्गु (ಕುಂಟ)

ಹೀಗೆಯೇ शत्रु, तरु, कारु (ಬಡಗಿ) मरु, भीरु (ಅಂಜುಬುರುಕ) मेरु, ऊरु (ತೊಡೆ)

ಉದಾಹರಣ ವಾಕ್ಯಗಳು

गुरुः पृच्छति। – ಗುರುವು ಕೇಳುತ್ತಾನೆ. गुरू पृच्छतः ಇಬ್ಬರು ಗುರುಗಳು ಪ್ರಶ್ನಿಸುತ್ತಾರೆ. गुरवः पृच्छन्ति। – ಗುರುಗಳು ಪ್ರಶ್ನಿಸುತ್ತಾರೆ. हे भानो, त्वां नमामि। – ಸೂರ್ಯನೆ, ನಿನ್ನನ್ನು ನಮಿಸುತ್ತೇನೆ. भो गुरवः, धन्यवादाः – ಎಲೈ ಗುರುಗಳೆ, ಧನ್ಯವಾದಗಳು. माता शिशुं लालयति। ತಾಯಿಯು ಮಗುವನ್ನು ಲಾಲಿಸುತ್ತಾಳೆ. जननी द्वौ शिशू पालयति। – ತಾಯಿಯು ಎರಡು ಮಕ್ಕಳನ್ನು ಪಾಲಿಸುತ್ತಾಳೆ. पिता स्वसूनून् सम्यक् पोषयति। – ತಂದೆಯು ತನ್ನ ಮಕ್ಕಳನ್ನು ಚೆನ್ನಾಗಿ ಪೋಷಿಸುತ್ತಾನೆ. इन्दुना आकाशं शोभते। – ಚಂದ್ರನಿಂದ ಆಕಾಶವು ಶೋಭಿಸುವುದು. जानूभ्यां उपविशति। – ಎರಡು ಮೊಣಕಾಲುಗಳಿಂದ ಕುಳಿತಿದ್ದಾನೆ. राजा साधुभिः धर्मप्रसारं कारयति। – ರಾಜನು ಸಾಧುಸಂತರಿಂದ ಧರ್ಮಪ್ರಸಾರವನ್ನು ಮಾಡಿಸುತ್ತಾನೆ. तस्मै गुरवे नमः – ಆ ಗುರುವಿಗೆ ನಮಸ್ಕಾರವು, गुरुभ्यः गुरुदक्षिणां समर्पयामि। – ಗುರುಗಳಿಗೆ ಗುರುದಕ್ಷಿಣೆಯನ್ನು ಸಮರ್ಪಿಸುತ್ತೇನೆ, गुरोः ज्ञानप्रसारः भवति – ಗುರುವಿನಿಂದ (ಪಂ.ವಿ.) ಜ್ಞಾನಪ್ರಸಾರವಾಗುತ್ತದೆ. रामस्य गुरोः नाम विश्वामित्रः। – ರಾಮನ ಗುರುವಿನ ಹೆಸರು ವಿಶ್ವಾಮಿತ್ರ, रामस्य सून्वोः नाम लवः कुशःच। – ರಾಮನ ಇಬ್ಬರು ಮಕ್ಕಳ ಹೆಸರು ಲವ ಮತ್ತು ಕುಶ, शिष्याः गुरूणां उपदेशं पालयन्ति। – ಶಿಷ್ಯರು ಗುರುಗಳ ಉಪದೇಶವನ್ನು ಪಾಲಿಸುತ್ತಾರೆ. मम गुरौ अतीव भक्तिः अस्ति। – ನನಗೆ ಗುರುವಿನ ಮೇಲೆ (ಗುರುವಿನಲ್ಲಿ) ತುಂಬಾ ಭಕ್ತಿ ಇದೆ. गजः इक्षुभ्यः स्पृहयति – ಆನೆಯ ಕಬ್ಬುಗಳಿಗೆ ಆಸೆ ಪಡುತ್ತದೆ. पाण्डोः पञ्चपुत्राः आसन्। –ಪಾಂಡುವಿಗೆ ಐದು ಮಕ್ಕಳು ಇದ್ದರು, विद्या गुरूणां गुरुः ವಿದ್ಯೆಯು ಗುರುಗಳಿಗೆ ಗುರು. विष्णवे नमः – ವಿಷ್ಣುವಿಗೆ ನಮಸ್ಕಾರ, विष्णुना भक्तानां उद्धारः भवति – ವಿಷ್ಣುವಿನಿಂದ ಭಕ್ತರ ಉದ್ಧಾರವಾಗುತ್ತದೆ, पुरा इषुभिः युद्धं कुर्वन्ति रस। –ಹಿಂದೆ ಬಾಣಗಳಿಂದ ಯುದ್ಧವನ್ನು ಮಾಡುತ್ತಿದ್ದರು, श्रीरामः रघोः वंशे जातः ಶ್ರೀರಾಮನು ರಘುವಿನ ವಂಶದಲ್ಲಿ ಹುಟ್ಟಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ऋकारान्तः पुल्लिङ्ग पितृ शब्दः

प्र वि –	पिता	पितरौ	पितरः	ತಂದೆಯು
सं प्र –	हे पितः	हे पितरौ	हे पितरः	ಎಲೈ ತಂದೆಯೇ
द्वि वि –	पितर	पितरौ	पितॄन्	ತಂದೆಯನ್ನು
तृ वि –	पित्रा	पितृभ्यां	पितृभिः	ತಂದೆಯಿಂದ
च वि –	पित्रे	पितृभ्यां	पितृभ्यः	ತಂದೆಗಾಗಿ
प वि –	पितुः	पितृभ्यां	पितृभ्यः	ತಂದೆಯ ದೆಸೆಯಿಂದ
ष वि –	पितुः	पित्रोः	पितॄणां	ತಂದೆಯ
स वि –	पितरि	पित्रोः	पितृषु	ತಂದೆಯಲ್ಲಿ

ಹೀಗೆಯೇ – भ्रातृ, जामातृ (ಅಳಿಯ); ಸ್ತ್ರೀಲಿಂಗದ मातृ ಮತ್ತು दुहितृ (ಮಗಳು) ಶಬ್ದಗಳು पितृ ಶಬ್ದದಂತೆಯೇ. ಆದರೆ ದ್ವಿತೀಯ ವಿಭಕ್ತಿ ಬಹುವಚನದಲ್ಲಿ ಮಾತ್ರ मतॄः, दुहितॄः ಎಂದಾಗುವುದು.

दातृ शब्द – ದಾನಿ

दाता	दातारौ	दातारः
हे दातः	है दातारौ	हे दातारः
दातारम्	दातारौ	दातॄन्

ಉಳಿದವು पितृ ಶಬ್ದದಂತೆ

ಧಾತುಗಳಿಗೆ ಕರ್ತೃ ಅರ್ಥದಲ್ಲಿ तृच् (तृ) ಪ್ರತ್ಯಯ ಬಂದು ಆದ ನಾಮ ಪದಗಳನ್ನು दातृ ಶಬ್ದದಂತೆ ನಡೆಸಬೇಕು. ವಿಶೇಷವೇನೆಂದರೆ ಪ್ರಥಮ ಮತ್ತು ದ್ವಿತೀಯ ವಿಭಕ್ತಿಗಳಿಗೆ ದೀರ್ಘವು ಅಧಿಕವಾಗಿರುವುದು. ಉಳಿದವು पितृ ಶಬ್ದಂತೆಯೇ,

उदा – नेतृ, कर्तृ, हर्तृ, श्रोतृ, निर्मातृ, गन्तृ, जेतृ – धातृ, (ಬ್ರಹ್ಮ), भर्तृ (ಗಂಡ) नप्तृ (ಮೊಮ್ಮಗ)

स्वसृ –ಸಹೋದರಿ– ಈ ಸ್ತ್ರೀಲಿಂಗ ಶಬ್ದವೂ दातृ ಶಬ್ದದಂತೆಯೇ, ಆದರೆ ದ್ವಿತೀಯಾ ವಿಭಕ್ತಿ ಬಹುವಚನದಲ್ಲಿ ಮಾತ್ರ स्वसॄः ಎಂದಾಗುವುದು.

ಉದಾಹರಣ ವಾಕ್ಯಗಳು

मम पिता आगच्छति । – ನನ್ನ ತಂದೆಯು ಬರುತ್ತಾನೆ. मम पितरौ गच्छतः । ನನ್ನ ತಾಯಿ ತಂದೆಯವರು ಹೋಗುತ್ತಾರೆ. सर्वे पितरः स्व पुत्रान् प्रीणयन्ति । ಎಲ್ಲಾ ತಂದೆಯರೂ ತಮ್ಮ ಮಕ್ಕಳನ್ನು ಸಂತೋಷಗೊಳಿಸುತ್ತಾರೆ. हे जगत्पितः, मां रक्ष – ಎಲೈ ಜಗತ್ತಿನ ತಂದೆಯೇ, ನನ್ನನ್ನು ರಕ್ಷಿಸು. हे दातारः, दरिद्रेभ्यः दानं कुर्वन्तु । – ಎಲೈ ದಾನಿಗಳೇ, ದರಿದ್ರರಿಗೆ ದಾನವನ್ನು ಮಾಡಿರಿ. यः पितरं सद्गुणैः प्रीणयति स सत्पुत्रः – ಯಾವನು ತಂದೆಯನ್ನು ಸದ್ಗುಣಗಳಿಂದ ಪ್ರೀತಿಸುತ್ತಾನೋ ಅವನು ಸತ್‌ಪುತ್ರನು. वृद्धाप्ये पुत्राः पितॄन् रक्षन्ति । – ಮುದಿತನದಲ್ಲಿ ಮಕ್ಕಳು ತಂದೆಯರನ್ನು ರಕ್ಷಿಸುತ್ತಾರೆ. पित्रा पुत्राः रक्षिताः । – ತಂದೆಯಿಂದ ಮಕ್ಕಳು, ರಕ್ಷಿಸಲ್ಪಟ್ಟರು. कुपुत्रः मातापितृभ्यां कार्यं कारयति । ಕೆಟ್ಟ ಮಗನು ತಾಯಿ ತಂದೆಯರಿಂದ ಕೆಲಸವನ್ನು ಮಾಡಿಸುತ್ತಾನೆ. नेतृभिः देशस्य स्वातन्त्र्यं रक्षितम् । – ಮುಂದಾಳುಗಳಿಂದ ದೇಶದ ಸ್ವಾತಂತ್ರ್ಯವು ರಕ್ಷಿಸಲ್ಪಟ್ಟಿದೆ. पित्रे स्वस्ति । – ತಂದೆಗೆ ಶುಭವಾಗಲಿ, मातापितृभ्यां स्वस्ति ತಾಯಿತಂದೆಯರಿಗೆ ಶುಭವಾಗಲಿ, स्वार्थपराः जनाःनेतृभ्यः द्रुह्यन्ति स्म । – ಸ್ವಾರ್ಥಪರರಾದ ಜನರು ಮುಂದಾಳುಗಳಿಗೆ ದ್ರೋಹ ಬಗೆಯುತ್ತಿದ್ದರು. दातृभ्यः दरिद्राः जीवन्ति – ದನಿಗಳಿಂದಾಗಿ (प वि) ಬಡವರು ಬದುಕುತ್ತಾರೆ. पत्नी भर्तुः हृदयं सम्यक् जानाति । ಪತ್ನಿಯು ಗಂಡನ ಹೃದಯವನ್ನು ಚೆನ್ನಾಗಿ ತಿಳಿದಿದ್ದಾಳೆ. अद्य समारम्भे सर्वेषां भ्रातॄणां समागमः भवति । – ಇಂದು ಸಮಾರಂಭದಲ್ಲಿ ಎಲ್ಲಾ ಸಹೋದರರ ಸಮಾಗಮವಾಗುವುದು. पितरि रामस्य अतीव भक्तिः आसीत् । ತಂದೆಯಲ್ಲಿ ರಾಮನಿಗೆ ತುಂಬಾ ಭಕ್ತಿಯು ಇತ್ತು, दातृषु शिबिः प्रसिद्धः । ದಾನಿಗಳಲ್ಲಿ ಶಿಬಿಯು ಪ್ರಸಿದ್ಧನು. श्वशुरः जामातरं सत्करोति । –ಮಾವನು ಅಳಿಯನನ್ನು ಸತ್ಕರಿಸುತ್ತಾನೆ. भ्रातरः भ्रातॄन् अनुसरेयुः – ಸಹೋದರರು ಸಹೋದರರನ್ನು ಅನುಸರಿಸಬೇಕು. रामः पितुःवाक्यपरिपालनाय वनं गतः । ರಾಮನು ತಂದೆಯ ವಾಕ್ಯಪರಿಪಾಲನೆಗಾಗಿ ಕಾಡಿಗೆ ಹೋದನು. अप्रियस्य पथ्यस्य च वक्ता श्रोता च दुर्लभः । – ಅಪ್ರಿಯವಾದ ಆದರೆ ಹಿತಕರವಾದ ಮಾತನ್ನು ಹೇಳುವವ ಮತ್ತು ಕೇಳುವವ ವಿರಳ. भारतीय नारीणां भर्तरि अतीव भक्तिः भवति । गजदन्तानां अपहर्तुः नाम वीरप्पन् इति । ಆನೆಯ ದಂತಗಳ ಅಪಹಾರಕನ ಹೆಸರು ವೀರಪ್ಪನ್ ಎಂದು. एतत् सभाङ्गणं श्रोतृभिः पूर्णम् । – ಈ ಸಭಾಂಗಣವು ಶ್ರೋತೃಗಳಿಂದ ಪೂರ್ಣವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

अजन्त स्त्रीलिङ्गशब्दाः

अजन्त स्त्रीलिङ्ग बालिका शब्दः

प्र वि –	बालिका	बालिके	बालिकाः	– ಹುಡುಗಿ, ಇಬ್ಬರು ಹುಡುಗಿಯರು,	ಹುಡುಗಿಯರು
सं प्र –	हे बालिके	हे बालिके	हे बालिकाः	– ಎಲೈ ಹುಡುಗಿಯೆ,	ಹುಡುಗಿಯರೆ
द्वि वि –	बालिकां	बालिके	बालिकाः	– ಹುಡುಗಿಯನ್ನು,	ಹುಡುಗಿಯರನ್ನು
तृ वि –	बालिकया	बालिकाभ्यां	बालिकाभिः	– ಹುಡುಗಿಯಿಂದ,	ಹುಡುಗಿಯರಿಂದ
च वि –	बालिकायै	बालिकाभ्यां	बालिकाभ्यः	– ಹುಡುಗಿಗೆ,	ಹುಡುಗಿಯರಿಗೆ
प वि –	बालिकायाः	बालिकाभ्यां	बालिकाभ्यः	– ಹುಡುಗಿಯದೆಸೆಯಿಂದ	
ष वि –	बालिकायाः	बालिकयोः	बालिकानां	– ಹುಡುಗಿಯ,	ಹುಡುಗಿಯರ
स वि –	बालिकायां	बालिकयोः	बालिकासु	– ಹುಡುಗಿಯಲ್ಲಿ,	ಹುಡುಗಿಯರಲ್ಲಿ

ವಿ.ಸೂ. ಸಾಮಾನ್ಯವಾಗಿ ಕನ್ನಡದಲ್ಲಿ ಎಕಾರಾಂತ ಶಬ್ದವು ಸಂಸ್ಕೃತದಲ್ಲಿ ಆ ಕಾರಾಂತ ಸ್ತ್ರೀಲಿಂಗ ಶಬ್ದವೆಂದು ಊಹಿಸಿಕೊಳ್ಳಬೇಕು. ಉದಾ शाला – ಶಾಲೆ, माला – ಮಾಲೆ, भिक्षा – ಭಿಕ್ಷೆ लज्जा – ಲಜ್ಜೆ रमा – ರಮೆ, लता – ಲತೆ, भाषा – ಭಾಷೆ क्षमा – ಕ್ಷಮೆ गुहा – ಗುಹೆ, छाया – ಛಾಯೆ, उपासना – ಉಪಾಸನೆ, माया – ಮಾಯೆ भार्या – ಭಾರ್ಯೆ, (ಹೆಂಡತಿ) क्रीडा – ಕ್ರೀಡೇ, देवता – ದೇವತೆ कृपा – ಕೃಪೆ करुणा – ಕರುಣೆ दया – ದಯೆ आज्ञा – ಆಜ್ಞೆ कथा – ಕಥೆ रसना – ನಾಲಿಗೆ, नासिका – ಮೂಗು अयोध्या – ಅಯೋಧ್ಯೆ विद्या – ವಿದ್ಯೆ कुल्या – ಕಾಲುವೆ चिन्ता – ಚಿಂತೆ प्रजा – ಪ್ರಜೆ शिला – ಶಿಲೆ गङ्गा – ಗಂಗೆ योग्यता – ಯೋಗ್ಯತೆ अर्हता – ಅರ್ಹತೆ जनता – ಜನತೆ एकता – ಏಕತೆ जागरूकता – ಜಾಗರೂಕತೆ, दरिद्रता – ದರಿದ್ರತೆ, गुहा – ಗುಹೆ, ಇತ್ಯಾದಿ.

उदाहरण वाक्यानि

सा बालिका – ಅವಳು ಹುಡುಗಿ. ते भार्ये – ಅವರಿಬ್ಬರು ಹೆಂಡತಿಯರು. ताः प्रजाः – ಅವರು ಪ್ರಜೆಗಳು. हे बालिके, तव नाम किम्? ಎಲೈ ಹುಡುಗಿಯೇ, ನಿನ್ನ ಹೆಸರೇನು? हे बालिके, युवयोः नाम किम्? ಎಲೈ ಇಬ್ಬರು ಹುಡುಗಿಯರೆ, ನಿಮ್ಮಿಬ್ಬರ ಹೆಸರೇನು? हे बालिकाः, युष्माकं नाम किम्? ಎಲೈ ಹುಡುಗಿಯರೆ, ನಿಮ್ಮ ಹೆಸರೇನು? भिक्षुकः भिक्षां याचति। ಭಿಕ್ಷುಕನು ಭಿಕ್ಷೆಯನ್ನು ಬೇಡುತ್ತಾನೆ. तां बालिकां आह्वयति – ಆ ಹುಡುಗಿಯನ್ನು ಕರೆಯುತ್ತಾನೆ. ते बालिके पश्यामि – ಆ ಇಬ್ಬರು ಹುಡುಗಿಯರನ್ನು ನೋಡುತ್ತೇನೆ. ताः बालिकाः निन्दामि – ಆ ಹುಡುಗಿಯರನ್ನು ನಿಂದಿಸುತ್ತೇನೆ. माता तया बालिकया पुष्पमालां रचयति। – ತಾಯಿಯು ಆ ಹುಡುಗಿಯಿಂದ ಹೂಮಾಲೆಯನ್ನು ರಚಿಸುತ್ತಾಳೆ. ताभिः क्रीडाभिः उत्सहः वर्धते – ಆ ಆಟಗಳಿಂದ ಉತ್ಸಾಹವು ಹೆಚ್ಚುತ್ತದೆ. तस्यै उमायै नमः – ಆ ಉಮೆಗೆ ನಮಸ್ಕಾರ. प्रजाभ्यः स्वस्ति – ಪ್ರಜೆಗಳಿಗೆ ಶುಭವಾಗಲಿ. वृक्षस्य शाखाभ्यः फलानि गलन्ति। ಮರದ ಗೆಲ್ಲುಗಳಿಂದ (ಪಂ.ವಿ.) ಹಣ್ಣುಗಳು ಉದುರುತ್ತವೆ. श्रीरामः सीतालक्ष्मणाभ्यां सह अयोध्यायाः वनं प्रविष्टः। ಶ್ರೀ ರಾಮನು ಸೀತಾ ಲಕ್ಷ್ಮಣರೊಂದಿಗೆ ಅಯೋಧ್ಯೆಯಿಂದ (ಪಂ.ವಿ.) ಕಾಡನ್ನು ಪ್ರವೇಶಿಸಿದನು. विहङ्गमाः शाखयोः मध्ये नीडानि रचयन्ति – ಹಕ್ಕಿಗಳು ಎರಡುಗೆಲ್ಲುಗಳ ಮಧ್ಯದಲ್ಲಿ ಗೂಡುಗಳನ್ನು ರಚಿಸುತ್ತವೆ. सीतायाःपतिः श्रीरामः – ಸೀತೆಯ ಪತಿಯು ಶ್ರೀ ರಾಮನು एषा बालिकानां शाला – ಇದು ಹುಡುಗಿಯರ ಶಾಲೆ. सिंहः गुहायां वसति – ಸಿಂಹವು ಗುಹೆಯಲ್ಲಿ ವಾಸಿಸುತ್ತದೆ. विवाहकाले वधूवरौ परस्परं मालयोः विनिमयं कुरुतः – ಮದುವೆಯ ಸಮಯದಲ್ಲಿ ಮಧೂವವರು ಪರಸ್ಪರ ಮಾಲೆಗಳ ವಿನಿಮಯವನ್ನು ಮಾಡಿಕೊಳ್ಳುತ್ತಾರೆ. लतासु कुसुमानि विकसन्ति – ಬಳ್ಳಿಗಳಲ್ಲಿ ಹೂಗಳು ಅರಳುತ್ತವೆ.

Sri Vidyabharathi Book Centre, Sringeri

ईकारान्तः स्त्रीलिङ्गः जननी शब्दः In Public Domain. Digitized by eGangotri नदी शब्दः

प्र वि –	जननी ತಾಯಿ	जनन्यौ	जनन्यः	नदी	नद्यौ	नद्यः
सं प्र –	हे जननि ಎಲೈ ತಾಯಿಯೆ	हे जनन्यौ	हे जनन्यः	हे नदि	हे नद्यौ	हे नद्यः
द्वि वि –	जननीं ತಾಯಿಯನ್ನು	जनन्यौ	जननीः	नदीं	नद्यौ	नदीः
तृ वि –	जनन्या ತಾಯಿಯಿಂದ	जननीभ्यां	जननीभिः	नद्या	नदीभ्यां	नदीभिः
च वि –	जनन्यै ತಾಯಿಗೆ	जननीभ्यां	जननीभ्यः	नद्यै	नदीभ्यां	नदीभ्यः
प वि –	जनन्याः ತಾಯಿಯದೆಸೆಯಿಂದ	जननीभ्यां	जननीभ्यः	नद्याः	नदीभ्यां	नदीभ्यः
ष वि –	जनन्याः ತಾಯಿಯ	जनन्योः	जननीनां	नद्याः	नद्योः	नदीनां
स वि –	जनन्यां ತಾಯಿಯಲ್ಲಿ	जनन्योः	जननीपु	नद्यां	नद्योः	नदीपु

ಹೀಗೆಯೇ – काली, वाणी, देवी, सखी, योगिनी, वापी (ಬಾವಿ) लेखनी, पत्नी, पुरी, नटी, कुमारी, मही (ಭೂಮಿ) दासी, भागीरथी, श्रेणी, रजनी (ರಾತ್ರಿ) गौरी, नारी, हरिणी (ಹೆಣ್ಣುಜಿಂಕೆ) शर्वरी (ರಾತ್ರಿ) सिंही, वेणी, मृगी।

ईकारान्तः स्त्रीलिङ्गः नारी शब्दः स्त्री शब्दः

प्र वि –	नारी	नार्यौ	नार्यः	स्त्री	स्त्रियौ	स्त्रियः
सं प्र –	हे नारि	हे नार्यौ	है नार्यः	हे स्त्रि	हे स्त्रियौ	हे स्त्रियः
द्वि वि –	नारीं	नार्यौ	नरीः	स्त्रीं, स्त्रियं	स्त्रियौ	स्त्रीः, स्त्रियः
तृ वि –	नार्या	नारीभ्यां	नारीभिः	स्त्रिया	स्त्रीभ्यां	स्त्रीभिः
च वि –	नार्यै	नारीभ्यां	नारीभ्यः	स्त्रियै	स्त्रीभ्यां	स्त्रीभ्यः
प वि –	नार्याः	नारीभ्यां	नारीभ्यः	स्त्रियाः	स्त्रीभ्यां	स्त्रीभ्यः
ष वि –	नार्याः	नार्योः	नारीणाम्	स्त्रियाः	स्त्रियोः	स्त्रीणां
स वि –	नार्यां	नार्योः	नारीषु	स्त्रियां	स्त्रियोः	स्त्रीषु

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

एषा नारी ಇವಳು ಹೆಂಗಸು, एते कुमार्यौ। ಇವರಿಬ್ಬರು ಕುಮಾರಿಯರು, एताः दास्यः। – ಇವರು ದಾಸಿಯರು, हे जननि, मां उद्धर। – ಎಲೈ ತಾಯಿಯೆ, ನನ್ನನ್ನು ಉದ್ಧರಿಸು, हे जनन्यः, देशस्य संस्कृतिं रक्षत। – ಎಲೈ ಮಾತೆಯರೆ ದೇಶದ ಸಂಸ್ಕೃತಿಯನ್ನು ರಕ್ಷಿಸಿರಿ.

शिशुः जननीम् आलिङ्गति – ಮಗುವು ತಾಯಿಯನ್ನು ಅಪ್ಪಿಕೊಳ್ಳುವುದು. राज्ञी दास्यौ निन्दति। – ರಾಣಿಯು ಇಬ್ಬರು ದಾಸಿಯರನ್ನು ನಿಂದಿಸುತ್ತಾಳೆ. भारतीयाः नदीः पूजयन्ति। – ಭಾರತೀಯರು ನದಿಗಳನ್ನು ಪೂಜಿಸುತ್ತಾರೆ. सा लेखन्या लिखति। – ಅವಳು ಪೆನ್ನಿನಿಂದ ಬರೆಯುತ್ತಾಳೆ. राज्ञी सखीभिः अलङ्कारं कारयति। – ರಾಣಿಯು ಗೆಳತಿಯರಿಂದ ಅಲಂಕಾರವನ್ನು ಮಾಡಿಸುತ್ತಾಳೆ. पतिः पत्न्यै मल्लिकामालाम् अर्पयति। ಪತಿಯು ಹೆಂಡತಿಗೆ ಮಲ್ಲಿಗೆಯ ಮಾಲೆಯನ್ನು ಅರ್ಪಿಸುತ್ತಾನೆ. नारीभ्यः सुवर्णभूषणानि रोचन्ते। – ಹೆಂಗಸರಿಗೆ ಸುವರ್ಣ ಅಲಂಕಾರಗಳು ಇಷ್ಟವಾಗುತ್ತವೆ. व्याघ्राः अटव्याः बहिः सञ्चरन्ति। – ಹುಲಿಗಳು ಕಾಡಿನ ಹೊರಗೆ (ಪಂ.ವಿ) ಸಂಚರಿಸುತ್ತಿವೆ. मीनाः नदीभ्यःबहिः न आगच्छन्ति। – ಮೀನುಗಳು ನದಿಗಳಿಂದ ಹೊರಗೆ (ಪಂ.ವಿ) ಬರುವುದಿಲ್ಲ. सीतायाः पतिः श्रीरामः। ಸೀತೆಯ ಪತಿಯು ಶ್ರೀರಾಮನು, अत्र नद्योः सङ्गमः भवति – ಇಲ್ಲಿ ಎರಡು ನದಿಗಳ ಸಂಗಮವಾಗಿದೆ. नदीनां जलं न क्षारम्। ನದಿಗಳ ನೀರು ಉಪ್ಪಾಗಿಲ್ಲ, मत्स्याः नद्यां निवसन्ति। – ಮೀನುಗಳು ನದಿಯಲ್ಲಿ ವಾಸಿಸುತ್ತವೆ. नदीषु गङ्गा पवित्रतमा। – ನದಿಗಳಲ್ಲಿ ಗಂಗೆಯು ಹೆಚ್ಚು ಪವಿತ್ರವಾಗಿದೆ. पितुः वचनपरिपालनाय परशुरामः मातरम् एव अमारयत्। ತಂದೆಯ ಮಾತಿನ ಪರಿಪಾಲನೆಗಾಗಿ ಪರಶುರಾಮನು ತಾಯಿಯನ್ನೇ ಕೊಂದನು. द्रौपद्याः पञ्चभर्तारः आसन्। – ದ್ರೌಪದಿಗೆ ಐವರು ಗಂಡಂದಿರು ಇದ್ದರು. कंसस्य भगिन्याः विवाहः वसुदेवेन सह अभवत्। – ಕಂಸನ ಸಹೋದರಿಯ ಮದುವೆಯು ವಸುದೇವನೊಂದಿಗೆ ನಡೆಯಿತು. काश्यां गङ्गा प्रवहति। – ಕಾಶಿಯಲ್ಲಿ ಗಂಗೆಯು ಹರಿಯುತ್ತದೆ. भरतः कैकेय्याः पुत्रः। ಭರತನು ಕೈಕೇಯಿಯ ಮಗನು.

प्रेममय्या वाण्या मित्राणि वशीकुरु। ಪ್ರೀತಿಯಿಂದ ಕೂಡಿದ ಮಾತಿನಿಂದ ಮಿತ್ರರನ್ನು ವಶಮಾಡಿಕೋ. मेदिन्यां शूराः एव जयन्ति। ಭೂಮಿಯಲ್ಲಿ ಶೂರರೇ ಗೆಲ್ಲುತ್ತಾರೆ. मेघमण्डलात् सौदामिनी पतिता – ಮೇಘಮಂಡಲದಿಂದ ಮಿಂಚು ಬಿದ್ದಿತು. जननी जन्मभूमिः च स्वर्गात् अपि गरीयसी। ತಾಯಿ ಮತ್ತು ಜನ್ಮ ಭೂಮಿಯು ಸ್ವರ್ಗಕ್ಕಿಂತಲೂ ದೊಡ್ಡದು. स्त्रीषु शकुन्तला सुन्दरतमा। – ಸ್ತ್ರೀಯರಲ್ಲಿ ಶಕುಂತಳೆಯು ಹೆಚ್ಚು ಸುಂದರಳು. तासु राज्ञीषु का सुकुमारतमा ಆ ರಾಣಿಯರಲ್ಲಿ ಯಾವಳು ಹೆಚ್ಚು ಸುಕುಮಾರಳು. पुराणेषु स्त्रीणां शौर्यस्य कथाः वर्णिताः। ಪುರಾಣಗಳಲ್ಲಿ ಸ್ತ್ರೀಯರ ಶೌರ್ಯದ ಕಥೆಗಳು ವರ್ಣಿಸಲ್ಪಟ್ಟಿವೆ. एकान्ते परकीयाभिः स्त्रीभिः सह संभाषणं न कर्तव्यम्। ಏಕಾಂತದಲ್ಲಿ ಬೇರೆ ಹೆಂಗಸರೊಂದಿಗೆ ಸಂಭಾಷಣೆಯನ್ನು ಮಾಡಬಾರದು. मनुष्यः धिया ज्ञानं गृह्णाति – ಮನುಷ್ಯನು ಬುದ್ಧಿಶಕ್ತಿಯಿಂದ ಜ್ಞಾನವನ್ನು ಗ್ರಹಿಸುತ್ತಾನೆ. तन्त्रीणां मधुरः शब्दः श्रूयते। – ವೀಣೆಗಳ ಮಧುರವಾದ ಶಬ್ದವು ಕೇಳುತ್ತಿದೆ. विद्या लक्ष्म्या सह प्रकाशते। ವಿದ್ಯೆಯು ಸಂಪತ್ತಿನೊಂದಿಗೆ ಶೋಭಿಸುತ್ತದೆ. जनन्याः वचनं न उल्लङ्घनीयम्। ತಾಯಿಯ ಮಾತು ಉಲ್ಲಂಘಿಸಲ್ಪಡಬಾರದು. कवाटं अङ्गुल्या ताडयति। ಬಾಗಿಲನ್ನು ಬೆರಳಿನಿಂದ ಬಡಿಯುತ್ತಾನೆ. नगरीषु काशीनगरी पवित्रतमा। ನಗರಗಳಲ್ಲಿ ಕಾಶೀನಗರವು ಹೆಚ್ಚು ಪವಿತ್ರವಾಗಿದೆ. रूप्यकस्य पञ्चकदल्यः। – ರೂಪಾಯಿಗೆ ಐದು ಬಾಳೇ ಹಣ್ಣುಗಳು. संस्कृतभारत्याः अपरं नाम गीर्वाण भारती इति। – ಸಂಸ್ಕೃತಭಾಷೆಯ ಇನ್ನೊಂದು ಹೆಸರು ಗೀರ್ವಾಣ ಭಾಷೆ ಎಂದು. धूल्या आवृते दर्पणे मुखं न दृश्यते– ಧೂಳಿನಿಂದ ಆವರಿಸಲ್ಪಟ್ಟ ಕನ್ನಡಿಯಲ್ಲಿ ಮುಖವೂ ಕಾಣುವುದಿಲ್ಲ.

Sri Vidyabharathi Book Centre, Sringeri

CC-0. In Public Domain. Digitized by eGangotri

ईकारान्तः स्त्रीलिङ्गः श्रीशब्दः ಲಕ್ಷ್ಮೀ, ಕಾಂತಿ, ಸಂಪತ್ತು

प्र वि –	श्रीः	श्रियौ	श्रियः
सं प्र –	हेश्रीः	हेश्रियौ	हे श्रियः
द्वि वि –	श्रियं	श्रियौ	श्रियः
तृ वि –	श्रिया	श्रीभ्यां	श्रीभिः
च वि –	श्रियै, श्रिये	श्रीभ्यां	श्रीभ्यः
प वि –	श्रियाः, श्रियः	श्रीभ्यां	श्रीभ्यः
ष वि –	श्रियाः, श्रियः	श्रियोः	श्रीणाम्
स वि –	श्रियां, श्रियि	श्रियोः	श्रीषु

ಹೀಗೆಯೇ ह्री ನಾಚಿಕೆ, धी ಬುದ್ಧಿ, भी ಇತ್ಯಾದಿ

ವಿ. ಸೂ. लक्ष्मी ಮತ್ತು तन्त्री ವೀಣೆ ಈ ಶಬ್ದಗಳಿಗೆ ಪ್ರಥಮಾ ವಿಭಕ್ತಿ ಏಕವಚನದಲ್ಲಿ लक्ष्मीः, तन्त्रीः ಎಂದೂ ರೂಪವಾಗುತ್ತದೆ. ಉಳಿದ ರೂಪಗಳು जननी ಶಬ್ದದಂತೆಯೇ ಆಗುತ್ತವೆ.

इकारान्तः स्त्रीलिङ्गः मतिशब्दः

मतिः ಬುದ್ಧಿ	मती	मतयः
हे मते ಎಲೈ ಬುದ್ಧಿಯೆ	हे मती	हे मतयः
मतिम् ಬುದ್ಧಿಯನ್ನು	मती	मतीः
मत्या ಬುದ್ಧಿಯಿಂದ	मतिभ्यां	मतिभिः
मत्यै, मतये ಬುದ್ಧಿಗೆ	मतिभ्यां	मतिभ्यः
मत्याः मतेः ಬುದ್ಧಿಯ ದೆಸೆಯಿಂದ	मतिभ्यां	मतिभ्यः
मत्याः मतेः ಬುದ್ಧಿಯ	मत्योः	मतीनां
मत्यां, मतौ ಬುದ್ಧಿಯಲ್ಲಿ	मत्योः	मतिषु

ಧಾತುಗಳಿಗೆ ಭಾವಾರ್ಥದಲ್ಲಿ क्तिन् ಎಂಬ ಕೃತ್ ಪ್ರತ್ಯಯ ಬಂದು ಸ್ತ್ರೀಲಿಂಗವಾಗುವ ಶಬ್ದಗಳನ್ನು ಹೀಗೆಯೇ ನಡೆಸಬೇಕು. ಉದಾಃ श्रुति, कीर्ति, मूर्ति, कृति, धृति, प्रकृति, स्तुति, भक्ति, शक्ति, वृद्धि, शान्ति, कान्ति, रुचि

उकारान्तः स्त्रीलिङ्गः धेनु शब्दः – ದನ

प्र वि –	धेनुः ದನವು	धेनू	धेनवः ದನಗಳು
सं प्र –	हे धेनो ಎಲೈದನವೇ	हे धेनू	हे धेनवः
द्वि वि –	धेनुं ದನವನ್ನು	धेनू	धेनूः
तृ वि –	धेन्वा ದನದಿಂದ	धेनुभ्यां	धेनुभिः
च वि –	धेन्वै, धेनवे ದನಕ್ಕೆ	धनुभ्यां	धेनुभ्यः
प वि –	धेन्वाः, धेनोः ದನದದೆಸೆಯಿಂದ	धेनुभ्यां	धेनुभ्यः
ष वि –	धेन्वाः, धेनोः ದನದ	धेन्वोः	धेनूनां
स वि –	धेन्वां, धेनौ ದನದಲ್ಲಿ	धेन्वोः	धेनुषु

ओकारान्तः स्त्रीलिङ्गः गो शब्दः – ದನ

गौः	गावौ	गावः
हे गौः	हे गावौ	हे गावः
गां	गावौ	गाः
गवा	गोभ्यां	गोभिः
गवे	गोभ्यां	गोभ्यः
गोः	गोभ्यां	गोभ्यः
गोः	गवोः	गवाम्
गवि	गवोः	गोषु

ಹೀಗೆಯೇ रज्जुः – ಹಗ್ಗ रेणु – ಧೂಳು तनु – ದೇಹ ಇತ್ಯಾದಿ

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

धेनवः अस्माकं सम्पत्। ದನಗಳು ನಮ್ಮ ಸಂಪತ್ತು ग्रामीणाः जनाः घेनूः पालयन्ति - ಹಳ್ಳಿಯ ಜನರು ದನಗಳನ್ನು ಪಾಲಿಸುತ್ತಾರೆ. गोपालकृष्णः गाः चारयति स्म - ಗೋಪಾಲಕೃಷ್ಣನು ದನಗಳನ್ನು ಮೇಯಿಸುತ್ತಿದ್ದನು. शिशुरूपी श्रीकृष्णः श्रिया, दीप्त्या कान्त्या च भूमिम् अवतीर्णः उदयरविः इव दृश्यते स्म। ಶಿಶುರೂಪೀ ಶ್ರೀಕೃಷ್ಣನು ತನ್ನ ದೇಹ ಸೌಂದರ್ಯದಿಂದ ತೇಜಸ್ಸಿನಿಂದ ಮತ್ತು ಕಾಂತಿಯಿಂದ ಭೂಮಿಗೆ ಇಳಿದ ಉದಯಕಾಲದ ಸೂರ್ಯನಂತೆ ಕಾಣುತ್ತಿದ್ದ. श्रियै नमः - ಲಕ್ಷ್ಮಿಗೆ ನಮಸ್ಕಾರ. गवा क्षीरं लभ्यते। ದನದಿಂದ ಹಾಲು ಲಭಿಸುವುದು. धेनुभ्यः तृणं रोचते। ದನಗಳಿಗೆ ಹುಲ್ಲು ರುಚಿಸುವುದು. श्रियाः पतिः श्रीपतिः। - ಲಕ್ಷ್ಮೀಯ ಪತಿಯು ಶ್ರೀಪತಿ. मानवाः स्व धिया आलोचयन्ति - ಮಾನವರು ತಮ್ಮ ಬುದ್ಧಿಯಿಂದ ಆಲೋಚಿಸುತ್ತಾರೆ. श्रिया देयम्, ह्रिया देयय्, भिया देयम्। - ಸಂಪದ್ಭರಿತವಾಗಿ ದಾನಕೊಡಬೇಕು. ನಾಚಿಕೆಯಿಂದ ದಾನಕೊಡಬೇಕು. ಭಯದಿಂದ ದಾನಕೊಡಬೇಕು. चावुण्डरायः बाहुबलेः मूर्तिम् अकारयत् - ಚಾವುಂಡರಾಯನು ಬಾಹು ಬಲಿಯ ಮೂರ್ತಿಯನ್ನು ಮಾಡಿಸಿದನು. शिल्पी देवमूर्तिनां निर्माणं करोति। ಶಿಲ್ಪಿಯು ದೇವಮೂರ್ತಿಗಳ ನಿರ್ಮಾಣವನ್ನು ಮಾಡುತ್ತಾನೆ. भारतदेशः विश्वशान्त्यै प्रयतति - ಭಾರತದೇಶವು ವಿಶ್ವಶಾಂತಿಗಾಗಿ ಪ್ರಯತ್ನಿಸುತ್ತಿದೆ. लोको भिन्नरुचिः - ಲೋಕವು ಬೇರೆ ಬೇರೆ ಅಭಿರುಚಿ ಉಳ್ಳದ್ದು. धेनुषु कामधेनुः पूज्यतमा। - ದನಗಳಲ್ಲಿ ಕಾಮಧೇನುವು ಹೆಚ್ಚು ಪೂಜ್ಯವಾದದ್ದು. कालिदासस्य कृतीः (ದ್ವಿ.ಬ.) अहं पठितवान् - ಕಾಳಿದಾಸನ ಕೃತಿಗಳನ್ನು (ಗ್ರಂಥಗಳನ್ನು) ನಾನು ಓದಿದೆನು. वृद्धः प्रकृत्या साधुः आसीत् ಬುದ್ದನು ಸ್ವಾಭಾವಿಕವಾಗಿ ಸಾಧು ಆಗಿದ್ದನು. धेनूनां क्षीरं पथ्यम् - ದನಗಳ ಹಾಲು ಆರೋಗ್ಯಕರ. व्याघ्रः स्वशक्त्या मृगयां करोति। ಹುಲಿಯು ಸ್ವಶಕ್ತಿಯಿಂದ ಬೇಟೆಯನ್ನು ಮಾಡುತ್ತದೆ. वेदाः श्रुतयः इति प्रसिद्धाः - ವೇದಗಳು ಶ್ರುತಿಗಳು ಎಂದು ಪ್ರಸಿದ್ಧವಾಗಿವೆ. देवताः स्तुत्या सन्तुष्यन्ति - ದೇವತೆಗಳು ಸ್ತುತಿಯಿಂದ ಸಂತೋಷಗೊಳುತ್ತಾರೆ. स्वर्गलोकस्य धेन्वाः नाम कामधेनुः - ಸ್ವರ್ಗಲೋಕದ ದನದ ಹೆಸರು ಕಾಮಧೇನು.

विशुद्धया बुद्ध्या युक्तः मनुष्यः बन्धनात् मुक्तः भवति। ಪರಿಶುದ್ಧವಾದ ಬುದ್ಧಿಯಿಂದ ಕೂಡಿದ ಮನುಷ್ಯನು ಬಂಧನದಿಂದ ಮುಕ್ತನಾಗುತ್ತಾನೆ. ज्ञातिभिः सह धर्मम् आचर - ಬಂಧುಗಳೊಂದಿಗೆ ಧರ್ಮವನ್ನು ಆಚರಿಸು. महापुरुषाणाम् उक्तिः सदा हितकारिणी भवति। - ಮಹಾಪುರುಷರ ಮಾತು ಯಾವಾಗಲೂ ಹಿತವನ್ನುಂಟುಮಾಡುವಂತದ್ದಾಗಿದೆ. भूत्यै न प्रमदितव्यम्। ಸಂಪತ್ತಿಗಾಗಿ ತಪ್ಪಿ ನಡೆಯಬಾರದು. रज्वा गजस्य रक्षणं न शक्यते। - ಹಗ್ಗದಿಂದ ಆನೆಯ ರಕ್ಷಣೆಯು ಸಾಧ್ಯವಿಲ್ಲ. रेणुभिः दर्पणम् आच्छन्नम्। - ಧೂಳುಗಳಿಂದ ಕನ್ನಡಿಯು ಮುಚ್ಚಲ್ಪಟ್ಟಿದೆ. गोभ्यः जलं देहि। ದನಗಳಿಗೆ ನೀರನ್ನು ಕೊಡು. गवां क्षीरं पथ्यं भवति। - ದನಗಳ ಹಾಲು ಆರೋಗ್ಯಕರವಾಗಿದೆ. गोः धेनुः इति नमान्तरम् अस्ति। ದನಕ್ಕೆ ಧೇನು ಎಂಬ ಇನ್ನೊಂದು ಹೆಸರಿದೆ. गावः लोकस्य मातरः ದನಗಳು ಲೋಕಕ್ಕೆ ತಾಯಂದಿರು. गोपः गां दोग्धि। ಗೊಲ್ಲನು ದನವನ್ನು ಕರೆಯುತ್ತಾನೆ. गावः तृणानि स्वादन्ति। - ದನಗಳು ಹಲ್ಲುಗಳನ್ನು ತಿನ್ನುತ್ತವೆ. गौः माता इव पूजनीया। ದನವು ತಾಯಿಯಂತೆ ಪೂಜನೀಯವಾಗಿದೆ. सर्पभीताः जनाः रज्जुं दृष्ट्वा सर्पम् इव भ्रमन्ति। ಸರ್ಪಕ್ಕೆ ಹೆದರಿರುವ ಜನರು ಹಗ್ಗವನ್ನು ನೋಡಿ ಸರ್ಪವನ್ನು ನೋಡಿದಂತೆ ಭ್ರಮೆ ಪಡುತ್ತಾರೆ. सरिताम् उगमस्थलं पर्वतेषु एव भवन्ति - ನದಿಗಳ ಉಗಮ ಸ್ಥಳವು ಪರ್ವತಗಳಲ್ಲೇ ಇರುತ್ತವೆ. ऋत्विजः यागं कुर्वन्ति। - ಋತ್ವಿಜರು (ಯಜ್ಞಮಾಡುವ ಪುರೋಹಿತರು) ಯಾಗವನ್ನು ಮಾಡುತ್ತಾರೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ऊकारान्तः स्त्रीलिङ्गः वधू शब्दः ವಧುಮಗಳು, ಸೊಸೆ   **ऊकारान्तः स्त्रीलिङ्ग भू शब्दः – ಭೂಮಿ**

प्र वि –	वधूः ಸೊಸೆಯು	वध्वौ	वध्वः	भूः	भुवौ	भुवः
सं प्र –	हे वधु ಎಲ್ಲೈವಧುವೆ	हे वध्वौ	हे वध्वः	हेभूः	हे भुवौ	हे भुवः
द्वि वि –	वधूं ಮಧುಮಗಳನ್ನು	वध्वौ	वधूः	भुवं	भुवौ	भुवः
तृ वि –	वध्वा ಸೊಸೆಯಿಂದ	वधूभ्यां	वधूभिः	भुवा	भूभ्यां	भूभिः
च वि –	वध्वै ಸೊಸೆಗಾಗಿ	वधूभ्यां	वधूभ्यः	भुवै, भुवे	भूभ्यां	भूभ्यः
प वि –	वध्वाः ಸೊಸೆಯದೆಸೆಯಿಂದ	वधूभ्यां	वधूभ्यः	भुवाः, भुवः	भूभ्यां	भूभ्यः
ष वि –	वध्वाः ಸೊಸೆಯ	वध्वोः	वधूनाम्	भुवाः, भुवः	भुवोः	भुवाम्
स वि –	वध्वां ಸೊಸೆಯಲ್ಲಿ	वध्वोः	वधूषु	भुवां, भुवि	भुवोः	भूषु

ಹೀಗೆಯೇ – चूमू ಸೈನ್ಯ, श्वश्रू – ಅತ್ತೆ ಇತ್ಯಾದಿ   ಹೀಗೆಯೇ – भ्रू ಹುಬ್ಬು ಇತ್ಯಾದಿ.

औकारान्तः स्त्रीलिङ्गः नौ शब्दः ನೌಕ   **ऐकारान्तः रै शब्दः ಶ್ರೀಮಂತ**

प्र वि –	नौः ನೌಕೆ	नावौ	नावः	राः	रायौ	रायः
द्वि वि –	नावं ನೌಕೆಯನ್ನು	नावौ	नावः	रायम्	रायौ	रायः
तृ वि –	नावा ನೌಕೆಯಿಂದ	नौभ्यां	नौभिः	राया	राभ्यां	राभिः
च वि –	नावे ನೌಕೆಗೆ	नौभ्यां	नौभ्यः	राये	राभ्यां	राभ्यः
प वि –	नावः ನೌಕೆಯದೆಸೆಯಿಂದ	नौभ्यां	नौभ्यः	रायः	राभ्यां	राभ्यः
ष वि –	नावः ನೌಕೆಯ	नावोः	नावां	रायः	रायोः	रायाम्
स वि –	नावि ನೌಕೆಯಲ್ಲಿ	नावोः	नौषु	रायि	रायोः	रासु

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

एषा भारतभूः। ಇದು ಭಾರತ ಭೂಮಿ भूपतिः भुवं पालयति। ಭೂಪತಿಯು ಭೂಮಿಯನ್ನು ಪಾಲಿಸುತ್ತಾನೆ. उपग्रहः भुवं परितः भ्रमति। - ಉಪಗ್ರಹವು ಭೂಮಿಯ ಸುತ್ತಲೂ ತಿರುಗತ್ತದೆ. भुवः उपरि मेघाः वर्षन्ति। ಭೂಮಿಯ ಮೇಲೆ ಮೋಡಗಳು ಮಳೆಸುರಿಸುತ್ತವೆ. मानवाः, भुवि वसन्ति। ಮಾನವರು ಭೂಮಿಯಲ್ಲಿ ವಾಸಿಸುತ್ತಾರೆ. नौः, जले चलति - ದೋಣಿಯು ನೀರಿನಲ್ಲಿ ಚಲಿಸುತ್ತದೆ. समुद्रे नावः सञ्चरन्ति - ಸಮುದ್ರದಲ್ಲಿ ನೌಕೆಗಳು ಸಂಚರಿಸುತ್ತವೆ. पुरा नावा विदेशं गच्छन्ति स्म - ಹಿಂದೆ ನೌಕೆಯಿಂದ ವಿದೇಶಕ್ಕೆ ಹೋಗುತ್ತಿದ್ದರು. वध्वै स्वस्ति - ಮಧುಮಗಳಿಗೆ ಶುಭವಾಗಲಿ. वधूपु दमयन्ती श्रेष्ठतमा। - ಹೆಂಗಸರಲ್ಲಿ ದಮಯಂತಿಯು ಶ್ರೇಷ್ಠಳು. एषा मदीया भूः - ಇದು ನನ್ನ ಭೂಮಿ. भुवा विना मानवानां अस्तित्वम् एव नास्ति। ಭೂಮಿ ಇಲ್ಲದಿದ್ದರೆ ಮಾನವರ ಅಸ್ತಿತ್ವವೇ ಇಲ್ಲ, भुवः कृते सहोदराः कलहं कुर्वन्ति - ಭೂಮಿಯ ಸಲುವಾಗಿ ಸಹೋದರರು ಜಗಳಮಾಡುತ್ತಾರೆ. गौः क्षीरं ददाति। ದನವು ಹಾಲನ್ನು ಕೊಡುತ್ತದೆ. वध्वः भूषणैः अलङ्कृताः - ಸ್ತ್ರೀಯರು ಆಭರಣಗಳಿಂದ ಅಲಂಕೃತರಾಗಿದ್ದಾರೆ. गवा क्षीरं लभ्यते - ದನದಿಂದ ಹಾಲು ಸಿಗುತ್ತದೆ. गोषु श्रीकृष्णः अन्तर्भवति - ದನಗಳಲ್ಲಿ ಶ್ರೀಕೃಷ್ಣನು ಅಂತರ್ಗತನಾಗಿದ್ದಾನೆ. सीमा प्रदेशे चमूः सदा जागृता अस्ति - ಗಡಿಪ್ರದೇಶದಲ್ಲಿ ಸೈನ್ಯವು ಯಾವಾಗಲೂ ಜಾಗೃತವಾಗಿದೆ. जनरल् कारियप्पः महान् चमूपतिः आसीत् - ಜನರಲ್ ಕಾರಿಯಪ್ಪನು ಮಹಾನ್ ದಂಡನಾಯಕನಾಗಿದ್ದನು. श्वश्रूः वधूः च सदा कलहं कुरुतः - ಅತ್ತೆ ಮತ್ತು ಸೊಸೆ ಯಾವಾಗಲೂ ಜಗಳಮಾಡುತ್ತಾರೆ. जामातरः श्वश्रूः मातृवत् सत्कुर्वन्ति - ಅಳಿಯಂದಿರು ಅತ್ತೆಯರನ್ನು ತಾಯಿಯಂತೆ ಸತ್ಕರಿಸುತ್ತಾರೆ. जमाता श्वश्रे शाटिकां क्रीणाति। ಅಳಿಯನು ಅತ್ತೆಗಾಗಿ ಸೀರೆಯನ್ನು ಕೊಂಡುಕೊಳ್ಳುತ್ತಾನೆ. वध्वः अञ्जनेन स्वभ्रुवौ भूषयन्ति - ಹೆಂಗಸರು ಕಾಡಿಗೆಯಿಂದ ತಮ್ಮ ಹುಬ್ಬುಗಳನ್ನು ಅಲಂಕರಿಸುತ್ತಾರೆ.

पुरा नौषु वणिजः विदेशं व्यापारार्थं गच्छन्ति स्म। ಹಿಂದೆ ನೌಕೆಗಳಲ್ಲಿ ವ್ಯಾಪಾರಿಗಳು ವಿದೇಶಕ್ಕೆ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. एते दारवः नौभ्यः आनीताः। - ಈ ಮರಗಳು ನೌಕೆಗಳಿಗಾಗಿ ತರಲ್ಪಟ್ಟವೆ. रवीन्द्रनाथ ठागोर् महाशयेन इङ्ग्लाण्ड् देशं प्रति गमनसमये नावि गीताञ्जलि काव्यं आङ्ग्लभाषां प्रति भाषान्तरं कृतम्। वधूभिः एव वरदक्षिणाबिरुद्धं प्रतिभटनं करणीयम्। ಮದುವೆಯಾಗಲಿರುವ ಹೆಣ್ಣುಮಕ್ಕಳಿಂದಲೇ ವರದಕ್ಷಿಣೆಯ ವಿರುದ್ಧ ಪ್ರತಿಭಟನೆಯು ಮಾಡಲ್ಪಡತಕ್ಕದ್ದು. वधूषु पक्षपातः न करणीयः - ಸೊಸೆಯರಲ್ಲಿ ಪಕ್ಷಪಾತವು ಮಾಡಲ್ಪಡಬಾರದು. श्वशुरः वध्वै शाटिकाम् आनयति। ಮಾವನು ಸೊಸೆಗಾಗಿ ಸೀರೆಯನ್ನು ತರುತ್ತಾನೆ. भोः श्वशुराः, वधूः सुताः इव पालयत। ಎಲೈ ಮಾವಂದಿರೇ, ಸೊಸೆಯರನ್ನೂ ಹೆಣ್ಣು ಮಕ್ಕಳನ್ನು ಪಾಲಿಸುವಂತೆ ಪಾಲಿಸಿರಿ. इदानीन्तनकाले धनपिशाचयः पुरुषाः वधूनां दहनमपि कुर्वन्ति। ಇತ್ತೀಚಿನ ಕಾಲದಲ್ಲಿ ಧನಪಿಶಾಚಿಗಳಾದ ಪುರುಷರು ಸೊಸೆಯರ ದಹನವನ್ನೂ ಮಾಡುತ್ತಾರೆ. यदा यदा धर्मग्लानिः भवति तदा तदा देवः भुवि अवतरति। ಯಾವಾಗ ಯಾವಾಗ ಧರ್ಮಕ್ಕೆ ಹಾನಿಯು ಉಂಟಾಗುತ್ತದೋ ಆವಾಗ ದೇವನು ಭೂಮಿಯಲ್ಲಿ ಅವತರಿಸುತ್ತಾನೆ. गङ्गा स्वर्गात् भुवम् अवतीर्णा - ಗಂಗೆಯು ಸ್ವರ್ಗದಿಂದ ಭೂಮಿಗೆ ಇಳಿದು ಬಂದಳು. भ्रुवोः मध्येललाटे तिलकं स्थापयन्ति - ಗಂಗೆಯು ಸ್ವರ್ಗದಿಂದ ಭೂಮಿಗೆ ಇಳಿದು ಬಂದಳು. मम नगरे श्वश्रूणां सङ्घः अस्ति - ನನ್ನ ನಗರದಲ್ಲಿ ಅತ್ತೆಯರ ಸಂಘವು ಇದೆ. स्वश्रूः वध्वा कार्यं कारयति - ಅತ್ತೆಯು ಸೊಸೆಯಿಂದ ಕಾರ್ಯವನ್ನು ಮಾಡಿಸುತ್ತಾಳೆ. सावित्री वने श्रद्धया श्वश्रूं श्वशुरं च सेवितवती - ಸಾವಿತ್ರಿಯು ಕಾಡಿನಲ್ಲಿ ಶ್ರದ್ಧೆಯಿಂದ ಅತ್ತೆಯನ್ನು ಮತ್ತು ಮಾವನನ್ನು ಸೇವಿಸಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

नपुंसक लिङ्ग, अजन्त शब्दाः

इकारान्तः नपुंसकलिङ्गः वारि शब्दः — शुचि शब्द

प्र वि –	वारि ನೀರು	वारिणी	वारीणि	शुचि	शुचिनी	शुचीनि
सं प्र –	हे वारे, वारि ಎಲೈ ನೀರೆ	हे वारिणी	हे वारीणि	हे शुचे, शुचि	शुचिनी	शुचीनि
द्वि वि –	वारि ನೀರನ್ನು	वारिणी	वारीणि	शुचि	शुचिनी	शुनीनि
तृ वि –	वारिणा ನೀರಿನಿಂದ	वारिभ्यां	वारिभिः	शुचिना	शुचिभ्यां	शुचिभिः
च वि –	वारिणे ನೀರಿಗಾಗಿ	वारिभ्यां	वारिभ्यः	शुचिने	शुचिभ्यां	शुचिभ्यः
प वि –	वारिणः ನೀರಿನ ದೆಸೆಯಿಂದ	वारिभ्यां	वारिभ्यः	शुचिनः	शुचिभ्यां	शुचिभ्यः
ष वि –	वारिणः ನೀರಿನ	वारिणोः	वारीणाम्	शुचिनः	शुचिनोः	शुचीनां
स वि –	वारिणि ನೀರಿನಲ್ಲಿ	वारिणोः	वारिषु	शुचिनि	शुचिनोः	शुचिषु

ಹೀಗೆಯೇ – आदि, सुरभि ಪರಿಮಳ

इकारान्तः नपुंसकलिङ्ग दधि शब्दः ಮೊಸರು — मधु – ಜೇನು

प्र वि –	दधि ಮೊಸರು	दधिनी	दधीनि	मधु	मधुनी	मधूनि
सं प्र –	हे दधे, दधि	दधिनी	दधीनि	हे मधो, हे मधु	हे मधुनी	हे मधूनि
द्वि वि –	दधि ಮೊಸರನ್ನು	दधिनी	दधीनि	मधु	मधुनी	मधूनि
तृ वि –	दध्ना ಮೊಸರಿನಿಂದ	दधिभ्यां	दधिभिः	मधुना	मधुभ्यां	मधुभिः
च वि –	दध्ने ಮೊಸರಿಗಾಗಿ	दधिभ्यां	दधिभ्यः	मधुने	मधुभ्यां	मधुभ्यः
प वि –	दध्नः ಮೊಸರಿನ ದೆಸೆಯಿಂದ	दधिभ्यां	दधिभ्यः	मधुनः	मधुभ्यां	मधुभ्यः
ष वि –	दध्नः ಮೊಸರಿನ	दध्नोः	दध्नाम्	मधुनः	मधुनोः	मधूनाम्
स वि –	दध्नि ಮೊಸರಿನಲ್ಲಿ	दध्नोः	दधिषु	मधुनि	मधुनोः	मधुषु

ಹೀಗೆಯೇ – अम्बु ನೀರು, श्मश्रु – ಮೀಸೆ, वसु, अश्रु – ಕಣ್ಣೀರು, गुरु – ದೊಡ್ಡದು, मृदु, स्वादु, दारु – ಮರ, ಇತ್ಯಾದಿ.

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

तत् शीतं वारि। ಅದು ತಂಪಾದ ನೀರು. अहं तत् वारि पिबामि। ನಾನು ಆ ನೀರನ್ನು ಕುಡಿಯುತ್ತೇನೆ. वारिणा भूमिः आर्द्रा भवति। ನೀರಿನಿಂದ ಭೂಮಿಯು ಒದ್ದೆಯಾಗುತ್ತದೆ. वारिणा विना जनाः न जीवन्ति। ನೀರಿಲ್ಲದೆ ಜನರು ವಾಸಿಸುವುದಿಲ್ಲ. मरुभूमौ वारिणे बहु कष्टम् अनुभवन्ति। ಮರುಭೂಮಿಯಲ್ಲಿ ನೀರಿಗಾಗಿ ಬಹು ಕಷ್ಟವನ್ನು ಅನುಭವಿಸುತ್ತಾರೆ. मीनाः वारिणः वहिः न आगच्छन्ति। ಮೀನುಗಳು ನೀರಿನಿಂದ ಹೊರಗೆ (ಪಂ.ವಿ) ಬರುವುದಿಲ್ಲ. नारी वरिणः कुम्भं वहति। - ಹೆಂಗಸು ನೀರಿನ ಕೊಡವನ್ನು ಹೊರುತ್ತಿದ್ದಾಳೆ. वर्षकाले वारीणां धाराः आकाशात् पतन्ति। ಮಳೆಗಾಲದಲ್ಲಿ ನೀರಿನ ಧಾರೆಗಳು ಆಕಾಶದಿಂದ ಬೀಳುತ್ತವೆ. मीनाः मकराः च वरिणि जीवन्ति। - ಮೀನುಗಳು ಮತ್ತು ಮೊಸಳೆಗಳು ನೀರಿನಲ್ಲಿ ವಾಸಿಸುತ್ತವೆ. अहं शुचीनि - वस्त्राणि एव धरामि। ನಾನು ಶುಚಿಯಾದ ವಸ್ತ್ರಗಳನ್ನೇ ಧರಿಸುತ್ತೇನೆ. शुचिना चित्तेन ध्यानं कर्तव्यम् - ಶುಚಿಯಾದ ಮನಸ್ಸಿನಿಂದ ಧ್ಯಾನ ಮಾಡಬೇಕು. शुचिनि सुरभिनि वातावरणे तपः करणीयम् - ಶುಚಿಯಾದ ಸುಗಂಧಮಯವಾದ ವಾತಾವರಣದಲ್ಲಿ ತಪಸ್ಸು ಮಾಡಬೇಕು. मध्याह्ने दघ्नः भोजनम् आरोग्यकरम्। ಮಧ್ಯಾಹ್ನ ಮೊಸರಿನ ಊಟವು ಆರೋಗ್ಯಕರವಾಗಿದೆ. दधि धवलम् अस्ति। - ಮೊಸರು ಬಿಳಿಯಾಗಿದೆ. दध्ना आरोग्यं वर्धते। ಮೊಸರಿನಿಂದ ಆರೋಗ್ಯವು ಹೆಚ್ಚುವುದು. रात्रौ दध्ना भोजनं निषिद्धम्। ರಾತ್ರಿಯಲ್ಲಿ ಮೊಸರಿನಿಂದ ಊಟವು ನಿಷಿದ್ಧವು. पुरुषः स्मश्रु धरति। ಗಂಡಸು ಮೀಸೆಯನ್ನು ಧರಿಸುತ್ತಾನೆ. इयं उत्पीटिका दारुणा निर्मिता। ಈ ಮೇಜು ಮರದಿಂದ ನಿರ್ಮಿಸಲ್ಪಟ್ಟಿದೆ. अम्बुनि कमलानि जायन्ते। ನೀರಿನಲ್ಲಿ ಕಮಲಗಳು ಹುಟ್ಟುತ್ತವೆ. नारिकेलस्य जलं स्वादु भवति। शूराः स्मश्रुणः उपरि हस्तं स्थापयन्ति। ಶೂರರು ಮೀಸೆಯ ಮೇಲೆ ಕೈಯನ್ನು ಇಡುತ್ತಾರೆ. महापुरुषाणां हृदयानि कुसुमात् अपि मृदूनि। ಮಹಾಪುರುಷರ ಹೃದಯಗಳು ಹೂವಿಗಿಂತಲೂ ಮೃದುವಾಗಿದೆ.

भ्रमराः पुष्पात् भ्रमन्ति, मधु च चूषन्ति - ಭ್ರಮರಗಳು ಹೂವಿನಿಂದ ಹೂವಿಗೆ ಸಂಚರಿಸುತ್ತವೆ ಮತ್ತು ಮಕರಂದವನ್ನು ಹೀರುತ್ತವೆ. मक्षिकासञ्चितं मधु समूलं विनश्यति - ಜೇನುನೊಣಗಳಿಂದ ಸಂಗ್ರಹಿಸಲ್ಪಟ್ಟ ಜೇನು ಪೂರ್ಣವಾಗಿ ನಾಶ ಹೊಂದುತ್ತದೆ. मधुनि औषधिगुणः अस्ति - ಜೇನಿನಲ್ಲಿ ಔಷಧಿ ಗುಣವು ಇದೆ. शुचिनः वरिणः पानम् आरोग्यकरम् - ಶುಚಿಯಾದ ನೀರಿನ ಕುಡಿಯುವಿಕೆಯು ಆರೋಗ್ಯಕರವಾಗಿದೆ. वारिणि लवणं द्रवति - ನೀರಿನಲ್ಲಿ ಉಪ್ಪು ಕರಗುತ್ತದೆ. मुहुः मुहुः वारि पिबेत् - ಪುನಃ ಪುನಃ ನೀರನ್ನು ಕುಡಿಯಬೇಕು. पारिजात कुसुमानां सुरभि बहुदूरं प्रसरति - ಪಾರಿಜಾತ ಹೂಗಳ ಪರಿಮಳ ಬಹುದೂರ ಹರಡುತ್ತದೆ. अम्बुनि कमलानि जायन्ते - ನೀರಿನಲ್ಲಿ ಕಮಲಗಳು ಹುಟ್ಟುತ್ತವೆ. वारि, अन्नम्, अनिलं च जीवनावश्यक वस्तूनि - ನೀರು ಅನ್ನ ಮತ್ತು ಗಾಳಿ ಇವು ಜೀವನಾವಶ್ಯಕವಾದ ವಸ್ತುಗಳಾಗಿವೆ. इदानीं सर्वेषां वस्तूनां मूल्यं अधिकं भवति - ಈಗ ಎಲ್ಲಾ ವಸ್ತುಗಳ ಬೆಲೆಯು ಅಧಿಕವಾಗಿದೆ. वैरिवधूनां अश्रूणि ललाटे तिलकं प्रक्षालयति - ವೈರಿ ಹೆಂಗಸರ ಕಣ್ಣೀರುಗಳು ಹಣೆಯಲ್ಲಿ ತಿಲಕವನ್ನು ತೊಳೆಯುತ್ತಿವೆ. एतानि फलानि वहुस्वादूनि - ಈ ಹಣ್ಣುಗಳು ತುಂಬಾ ಸಿಹಿಯಾಗಿವೆ. एतत् आसनं दारुणा निर्मितम् - ಈ ಆಸನವು ಮರದಿಂದ ನಿರ್ಮಿಸಲ್ಪಟ್ಟಿದೆ. इदानीं दारुभिः विना गृहनिर्माणं शक्यते - ಈಗ ಮರಗಳಿಲ್ಲದಿದ್ದರೂ, ಮನೆಕಟ್ಟಲು ಸಾಧ್ಯವಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

हलन्त / व्यञ्जनान्त शब्दाः

ವ್ಯಜನಾಂತ ಶಬ್ದಗಳ ಏಳೂ ವಿಭಕ್ತಿಗಳ ಪ್ರತ್ಯಯಗಳು

प्र वि –		औ	अः
सं प्र –		औ	अः
द्वि वि –	अम्	औ	अः
तृ वि –	आ	भ्यां	भिः
च वि –	ए	भ्यां	भ्यः
प वि –	अः	भ्यां	भ्यः
ष वि –	अः	ओः	आम्
स वि –	इ	ओः	सु

नकारान्तः पुल्लिङ्गः मरुत् शब्दः

मरुत् ಗಾಳಿಯು	मरुतौ	मरुतः
हे मरुत् ಎಲೈ ಗಾಳಿಯೆ	हे मरुतौ	हे मरुतः
मरुतम् ಗಾಳಿಯನ್ನು	मरुतौ	मरुतः
मरुता ಗಾಳಿಯಿಂದ	मरुद्भ्यां	मरुद्भिः
मरुते ಗಾಳಿಗಾಗಿ	मरुद्भ्यां	मरुद्भ्यः
मरुतः ಗಾಳಿಯ ದೆಸೆಯಿಂದ	मरुद्भ्यां	मरुद्भ्यः
मरुतः ಗಾಳಿಯ	मरुतोः	मरुतां
मरुति ಗಾಳಿಯಲ್ಲಿ	मरुतोः	मरुत्सु

ಹೀಗೆಯೇ – भूभृत् – ರಾಜ, कर्मकृत् – ಕರ್ಮ ಮಾಡುವವ विश्वजित्, तडित् –ಮಿಂಚು (स्त्री लि), सरित् ನದೀ (स्त्री), हरित् – ಹಸಿರು (स्त्री), जाग्रत् – ಇತ್ಯಾದಿ

चकारान्तः स्त्रीलिङ्गः वाच् शब्दः ಮಾತು

प्र वि –	वाक् ಮಾತು	वाचौ	वाचः
सं प्र –	हे वाक् ಎಲೈ ಮಾತೆ,	हे वाचौ	हे वाचः
द्वि वि –	वाचम् ಮಾತನ್ನು	वाचौ	वाचः
तृ वि –	वाचा ಮಾತಿನಿಂದ	वाग्भ्यां	वाग्भिः
च वि –	वाचे ಮಾತಿಗಾಗಿ	वाग्भ्यां	वाग्भ्यः
प वि –	वाचः ಮಾತಿನ ದೆಸೆಯಿಂದ	वाग्भ्यां	वाग्भ्यः
ष वि –	वाचः ಮಾತಿನ	वाचोः	वाचाम्
स वि –	वाचि ಮಾತಿನಲ್ಲಿ	वाचोः	वाक्षु

ಹೀಗೆಯೇ – त्वच् ಚರ್ಮ (ಸ್ತ್ರೀ), जलमुच् –ಮೋಡ ಒಳ್ಳೇ ಮಾತನಾಡುವವ, ಇತ್ಯಾದಿ

जकारान्तः पुल्लिङ्गः भिषज् ಶಬ್ದಃ ವೈದ್ಯ

भिषक् ವೈದ್ಯನು	भिषजौ	भिषजः
हे भिषक् ಎಲೈ ವೈದ್ಯನೆ	हे भिषजौ	हे भिषजः
भिषजं ವೈದ್ಯನನ್ನು	भिषजौ	भिषजः

ಉಳಿದದ್ದು वाच् ಶಬ್ದದಂತೆ. ಹೀಗೆಯೇ हुतभुज् – ಅಗ್ನಿ स्रज् – ಮಾಲೆ (ಸ್ತ್ರೀಲಿಂಗ) ऋत्विज् –ಯಜ್ಞ ಮಾಡುವವ

जकारान्तः राज् शब्दः ರಾಜ

प्र वि –	राट् ರಾಜನು	राजौ	राजः
सं प्र –	हे राट्	हे राजौ	हे राजः
द्वि वि –	राजम्	राजौ	राजः
तृ वि –	राजा	राड्भ्यां	राड्भिः

ಉಳಿದದ್ದು वाच् ಶಬ್ದದಂತೆ. ಹೀಗೆಯೇ साम्राज्, सुवाच् परिव्राज् –ಸನ್ಯಾಸೀ

ವಿ.ಸೂ : ಯಾವುದೇ ವ್ಯಂಜನಾಂತ ಶಬ್ದಗಳಿಗೆ ಮೇಲಿನ ಏಳೂ ವಿಭಕ್ತಿ ವಚನಗಳ ಪ್ರತ್ಯಯಗಳನ್ನು ನೆನಪಿನಲ್ಲಿಟ್ಟು, ಸೇರಿಸಿದರೆ ಬೇಕಾದ ರೂಪಗಳನ್ನು ಕೂಡಲೇ ಹೇಳಬಹುದು. [illegible] ರೂಪಗಳು ಮಾತ್ರ ಕೆಲವೊಮ್ಮೆ ಬದಲಾಗುವುದುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

मरुत् सर्वत्र वाति। - ಗಾಳಿಯು ಎಲ್ಲಾ ಕಡೆ ಬೀಸುತ್ತಿದೆ. सर्वे शीतं मरुतं इच्छन्ति। - ಎಲ್ಲರೂ ತಂಪಾದ ಗಾಳಿಯನ್ನು ಬಯಸುತ್ತಾರೆ. मरुता अग्निः प्रज्वलति। - ಗಾಳಿಯಿಂದ ಬೆಂಕಿಯು ಹೆಚ್ಚು ಜ್ವಲಿಸುವುದು. मरुते नमः। - ವಾಯುವಿಗೆ ನಮಸ್ಕಾರ. हनुमान् मरुतः पुत्रः। - ಹನುಮಂತನು ವಾಯುವಿನ ಮಗನು. मरुतः गन्धः नास्ति। ಗಾಳಿಗೆ ಪರಿಮಳವು ಇಲ್ಲ. मरुति रोगाणवः प्रसरन्ति। - ಗಾಳಿಯಲ್ಲಿ ರೋಗಾಣುಗಳು ಹರಡುತ್ತವೆ. अहं भिषक् अस्मि। - ನಾನು ವೈದ್ಯನಾಗಿದ್ದೇನೆ. आवां भिषजौ स्वः।- ನಾವಿಬ್ಬರು ವೈದ್ಯರಾಗಿದ್ದೇವೆ. वयं भिषजः स्मः। - ನಾವು ವೈದ್ಯರಾಗಿದ್ದೇವೆ. त्वं सत्यवाचं वद। - ನೀನು ಸತ್ಯವಾದ ಮಾತನ್ನಾಡು. युवां असत्यवाचं मा वदतम्। - ನೀವಿಬ್ಬರು ಅಸತ್ಯ ಮಾತನ್ನು ಹೇಳಬೇಡಿರಿ. यूयं मम वाचः अनुसरत। - ನೀವು ನನ್ನ ಮಾತುಗಳನ್ನು ಅನುಸರಿಸಿರಿ. कायेन वाचा मनसा परिशुद्धः भव। - ದೇಹದಿಂದ ಮಾತಿನಿಂದ ಮತ್ತು ಮನಸ್ಸಿನಿಂದ ಪರಿಶುದ್ಧನಾಗು. प्रियवाग्भिः सर्वे जन्तवःसन्तुष्यन्ति। - ಪ್ರಿಯ ಮಾತುಗಳಿಂದ ಎಲ್ಲಾ ಪ್ರಾಣಿಗಳು ಸಂತೋಷಗೊಳ್ಳುತ್ತವೆ. भिषजे धनं ददाति। - ವೈದ್ಯನಿಗೆ ಹಣವನ್ನು ಕೊಡುತ್ತಾನೆ. वाचि का दरिद्रता ಮಾತಿನಲ್ಲಿ ಬಡತನವೇನು. भिषजि भेषजे च विश्वासं कुरु। ವೈದ್ಯನಲ್ಲಿ ಮತ್ತು ಔಷಧಿಯಲ್ಲಿ ವಿಶ್ವಾಸವಿಡು, धन्वन्तरिः भिषजां अधिदेवता। - ಧನ್ವಂತರಿಯು ವೈದ್ಯರ ಅಧಿದೇವತೆ. वाचः आरम्भे हरिः ॐ इति वदत। - ಮಾತಿನ ಆರಂಭದಲ್ಲಿ ಹರಿಃ ಓಂ ಎಂದು ಹೇಳಿರಿ. उत्तरभारते बहुसरितः प्रवहन्ति। - ಉತ್ತ ಭಾರತದಲ್ಲಿ ತುಂಬಾ ನದಿಗಳು ಹರಿಯುತ್ತವೆ. जनाः गङ्गासरिति स्नान्ति। - ಜನರು ಗಂಗಾ ನದಿಯಲ್ಲಿ ಸ್ನಾನ ಮಾಡುತ್ತಾರೆ.

सरितां पतिः समुद्रः - ನದಿಗಳ ಪತಿಯು ಸಮುದ್ರ, तडिता वृक्षः दग्धः - ಮಿಂಚಿನಿಂದ ಮರವು ಸುಟ್ಟಿತು. मरुता वृक्षः भग्नः - ಗಾಳಿಯಿಂದ ಮರವು ಮುರಿಯಿತು. भिषजा रोगस्य निवारणं भवति - ವೈದ್ಯನಿಂದ ರೋಗದ ನಿವಾರಣೆಯಾಗುತ್ತದೆ. भेरी त्वचा निर्मिता - ನಗಾರಿಯು ಚರ್ಮದಿಂದ ನಿರ್ಮಿಸಲ್ಪಟ್ಟಿದೆ. अर्चकः स्रग्भिः देवमूर्तिं भूषयति - ಅರ್ಚಕನು ಮಾಲೆಗಳಿಂದ ದೇವ ಮೂರ್ತಿಯನ್ನು ಅಲಂಕರಿಸುತ್ತಾನೆ. मालाकारः पुष्पैः स्रजं निर्माति - ಹೂವಾಡಿಗನು ಹೂಗಳಿಂದ ಮಾಲೆಯನ್ನು ನಿರ್ಮಿಸುತ್ತಾನೆ. अहं संस्कृतवाचा वदामि - ನಾನು ಸಂಸ್ಕೃತ ಭಾಷೆಯಿಂದ ಮಾತನಾಡುತ್ತೇನೆ. यः संसारात् निर्विण्णः भवति सः परिव्राट् - ಯಾವನು ಸಂಸಾರದಿಂದ ವೈರಾಗ್ಯವುಳ್ಳವನಾಗುತ್ತಾನೋ ಅವನು ಸನ್ಯಾಸಿ. साम्राट् अशोकः कायेन वाचा मनसा अहिंसाम् आचरितवान् - ಸಾಮ್ರಾಟ್ ಅಶೋಕನು ದೇಹದಿಂದ ಮಾತಿನಿಂದ ಮತ್ತು ಮನಸ್ಸಿನಿಂದ ಅಹಿಂಸೆಯನ್ನು ಆಚರಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

तकारान्तः पुल्लिङ्गः भगवत् शब्दः

प्र वि –	भगवान्	भगवन्तौ	भगवन्तः
	ಭಗವಂತನು		
सं प्र –	हे भगवन्	हे भगवन्तौ	हे भगवन्तः
	ಎಲೈ ಭಗವಂತನೆ		
द्वि वि –	भगवन्तम्	भगवन्तौ	भगवतः
	ಭಗವಂತನನ್ನು		
तृ वि –	भगवता	भगवद्भ्यां	भगवद्भिः

ಉಳಿದವು मरुत् ಶಬ್ದದಂತೆ

तकारान्तः पुल्लिङ्गः महत् शब्दः

महान्	महान्तौ	महान्तः
ದೊಡ್ಡವ		
हे महन्	हे महान्तौ	हे महान्तः
ಎಲೈ ಮಹಾ ಪುರುಷನೇ		
महान्तं	महान्तौ	महतः
ದೊಡ್ಡವನನ್ನು		
महता	महद्भ्यां	महद्भिः
ದೊಡ್ಡವನಿಂದ		

ಉಳಿದವು मरुत् ಶಬ್ದದಂತೆ.

ಉಳ್ಳವ ಎಂಬ ಅರ್ಥದಲ್ಲಿ ನಾಮಪದಕ್ಕೆ ಮಪುತ್ ಎಂಬ ತದ್ಧಿತ ಪ್ರತ್ಯಯ ಸೇರಿ ಈ ರೀತಿಯ ಶಬ್ದಗಳಾಗುತ್ತವೆ. ಕನ್ನಡದಲ್ಲಿ ವಂತ ಅಥವಾ ಮಂತ ಎಂದು ಕೊನೆಯಲ್ಲಿ ಸೇರಿಸಿ ಹೇಳುವ ಶಬ್ದಗಳು ಸಂಸ್ಕೃತದಲ್ಲಿ ಈ ರೀತಿಯ ತ ಕಾರಾಂತ ಶಬ್ದವಾಗುವುವು. ಉದಾ– ಶ್ರೀಮಂತ– श्रीमत् ಸಂಪತ್ತು ಉಳ್ಳುವ, धीमत् – ಬುದ್ಧಿ ಶಕ್ತಿ ಉಳ್ಳವ, ಧನವಂತ – धनवत्, ರೂಪವಂತ –रूपवत्, ಗುಣವಂತ – गुणवत्, ಹನುಮಂತ – हनुमत्, ದವಡೆ ಉಳ್ಳವ, ಸತ್ಯವಂತ – सत्यवत्, ಧೈರ್ಯವಂತ – धैर्यवत्, ಹಿಮವಂತ – हिमवत्, ಭಾಗ್ಯವಂತ – भाग्यवत्, वपुष्मत् – ಸುಂದರ ದೇಹವುಳ್ಳವ, आयुष्मत्, ಆಯುಸ್ಸು ಉಳ್ಳವ, बलवत्, विद्यावत्, मघवत् – ಇಂದ್ರ, ಇತ್ಯಾದಿ. ಹೀಗೆಯೇ– यावत्, तावत् – ಎಷ್ಟರಲ್ಲಿ, ಅಷ್ಟರಲ್ಲಿ, कियत् ಎಷ್ಟು ಪರಿಣಾಮವನ್ನು ಸೂಚಿಸುವುದು. एतावत् – ಇಷ್ಟು, तावत् – ಅಷ್ಟು, इयत् – ಇಷ್ಟು ಹೀಗೆಯೇ ಭೂತಕಾಲದ ತವತು ಪ್ರತ್ಯಯಾಂತ ಕೃದಂತ ಶಬ್ದಗಳೂ ಹೀಗೆಯೇ ರೂಪವನ್ನು ಹೊಂದುತ್ತವೆ. ಉದಾ पठितवत् ಓದಿದನು, लिखितवत् ಬರೆದನು, गतवत् ಹೋದನು. दृष्टवत् – ನೋಡಿದನು ಇತ್ಯಾದಿ.

ಇವುಗಳ ಸ್ತ್ರೀಲಿಂಗ ರೂಪ –
भगवती, पठितवती, यावती, तावती।
ಇವು नदी ಶಬ್ದದಂತೆ ರೂಪಗಳನ್ನು ಹೊಂದುತ್ತವೆ.
ಇವುಗಳ ನಪುಂಸಕ ಲಿಂಗ ರೂಪ –
पठितवत्, यावत्, तावत्। ಇತ್ಯಾದಿ
ಇವು ನಪುಸಂಕ ಲಿಂಗ जगत् ಶಬ್ದದಂತೆ ರೂಪಗಳನ್ನು ಹೊಂದುತ್ತವೆ.

तकारान्तः नपुंसक लिङ्गः महत् शब्दः ದೊಡ್ಡದು

प्र वि –	महत्	महती	महन्ति
	ದೊಡ್ಡದು		
सं प्र –	हे महत्	हे महती	महन्ति
द्वि वि –	महत्	महती	महन्ति

ಉಳಿದವು महत् मरुत् ಶಬ್ದದಂತೆ.

नपुंसक ल्लिङ्गः जगत् शब्दः

प्र वि –	जगत्	जगती	जगन्ति
	ಜಗತ್ತು		
सं प्र –	हे जगत्	हे जगती	जगन्ति
	ಎಲೈ ಜಗತ್ತೇ		
द्वि वि –	जगत्	जगती	जगन्ति
	ಜಗತ್ತನ್ನು		

ಉಳಿದವು मरुत् ಶಬ್ದದಂತೆ

ಎಲ್ಲಾ ತ ಕಾರಾಂತ ಶಬ್ದಗಳ ಸ್ತ್ರೀಲಿಂಗ ರೂಪ भगवती, महती, यावती ಇತ್ಯಾದಿ जननी ಶಬ್ದದಂತೆ ರೂಪಗಳನ್ನು ಹೊಂದುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

भगवान् श्रीकृष्णः मम इष्टदेवता – ಭಗವನ್ ಶ್ರೀಕೃಷ್ಣನು ನನ್ನ ಇಷ್ಟದೇವತೆಯು. हे भगवन्, मां पाहि। – ಹೇ ಭಗವಂತನೇ, ನನನ್ನು ರಕ್ಷಿಸು कष्टकाले भगवन्तं स्मर – ಕಷ್ಟಕಾಲದಲ್ಲಿ ಭಗವಂತನನ್ನು ಸ್ಮರಿಸು. भगवता श्रीकृष्णेन रुक्मिणी अपहृता। – ಭಗವಂತನಾದ ಶ್ರೀ ಕೃಷ್ಣನಿಂದ ರುಕ್ಮಿಣಿಯು ಅಪಹರಿಸಲ್ಪಟ್ಟಳು. भगवते श्रीकृष्णाय नमः – ಭಗವಂತನಾದ ಶ್ರೀಕೃಷ್ಣನಿಗೆ ನಮಸ್ಕಾರ. महद्भ्यः पुरुषेभ्यः स्वस्ति। ಮಹಾತ್ಮರಾದ ಪುರುಷರಿಗೆ ಶುಭವಾಗಲಿ. भगवतः अनुग्रहेण मूकः अपि वाचालः भवति। – ಭಗವಂತನ ಅನುಗ್ರಹದಿಂದ ಮೂಕನೂ ಮಾತಾಡುವವನಾಗುತ್ತಾನೆ. महत्सु द्वेषः न कर्तव्यः। – ಮಹಾತ್ಮರಲ್ಲಿ ದ್ವೇಷಮಾಡಬಾರದು. भगवति दृढभक्तिः भवतु। – ಭಗವಂತನಲ್ಲಿ ದೃಢವಾದ ಭಕ್ತಿಯು ಇರಲಿ.

श्रीकृष्णः दुःखे मग्नस्य जगतः हिताय जातः अस्ति इति मुनयः अनन्दन्। – ಶ್ರೀ ಕೃಷ್ಣನು ದುಃಖದಲ್ಲಿ ಮುಳುಗಿರುವ ಜಗತ್ತಿನ ಹಿತಕ್ಕಾಗಿ ಹುಟ್ಟಿದ್ದಾನೆ ಎಂದು ಮುನಿಗಳು ಆನಂದಿಸಿದರು. श्रीरामः सर्वजगतां राजा आसीत् – ಶ್ರೀರಾಮನು ಎಲ್ಲಾ ಜಗತ್ತುಗಳ ರಾಜನಾಗಿದ್ದ. भीमः महता साहसेन दुर्योधनं अमारयत्। – ಭೀಮನು ದೊಡ್ಡ ಸಾಹಸದಿಂದ ದುರ್ಯೋಧನನನ್ನು ಕೊಂದನು. भगवत्यै सरस्वत्यै नमः। – ಪೂಜ್ಯಳಾದ ಸರಸ್ವತಿಗೆ ನಮಸ್ಕಾರ. कालिदासः शाकुन्तलं नाम नाटकं लिखितवान् – ಕಾಳಿದಾಸನು ಶಾಕುಂತಲವೆಂಬ ನಾಟಕವನ್ನು ಬರೆದನು. सावित्री सत्यवन्तं परिणीतवती। – ಸಾವಿತ್ರಿಯು ಸತ್ಯವಾನನನ್ನು ಮದುವೆಯಾದಳು. छात्राः पाठं सम्यक् पठितवन्तः। – ವಿದ್ಯಾರ್ಥಿಗಳು ಪಾಠವನ್ನು ಚೆನ್ನಾಗಿ ಓದಿದರು. बालिकाः शालां गतवत्यः। – ಹುಡುಗಿಯರು ಶಾಲೆಗೆ ಹೋದರು. सत्पुत्रं, सत्पत्नीं, सन्मित्रं च जगति पुण्यकृतः लभन्ते – ಒಳ್ಳೇಮಗನನ್ನು ಒಳ್ಳೆಯ ಹೆಂಡತಿಯನ್ನು ಮತ್ತು ಒಳ್ಳೇ ಸ್ನೇಹಿತನನ್ನು ಈ ಜಗತ್ತಿನಲ್ಲಿ ಪುಣ್ಯವಂತರು ಹೊಂದುತ್ತಾರೆ.

जगतः पितरौ वन्दे पार्वतीपरमेश्वरौ – ಜಗತ್ತಿಗೆ ತಾಯಿ ತಂದೆಯರಾದ ಪಾರ್ವತೀ ಪರಮೇಶ್ವರರನ್ನು ವಂದಿಸುತ್ತೇನೆ. हनुमान् अब्धिम् अतरत्, दुष्करं किं महात्मनाम् – ಹನುಮಂತನು ಸಮುದ್ರವನ್ನು ದಾಟಿದನು. ಮಹಾತ್ಮರಿಗೆ ಅಸಾಧ್ಯವಾದುದೇನು. यावत् भेकः सर्पं न पश्यति तावत् वटवटायते – ಎಲ್ಲಿಯವರೆಗೆ ಕಪ್ಪೆಯು ಹಾವನ್ನು ನೋಡುವುದಿಲ್ಲವೋ ಅಲ್ಲಿಯವರೆಗೆ ವಟಗುಟ್ಟುತ್ತದೆ. पतता महत्फलेन शीर्षं सशब्दम् भग्नम् – ಬೀಳುತ್ತಿರುವ ದೊಡ್ಡ ಹಣ್ಣಿನಿಂದ ತಲೆಯು ಶಬ್ದದೊಂದಿಗೆ ಬಿರಿಯಿತು. गुणवन्तं पुत्रं, मित्रं च जगति पुण्यकृतः लभन्ते – ಗುಣಶಾಲಿಯಾದ ಮಗನನ್ನು ಮತ್ತು ಮಿತ್ರನನ್ನು ಜಗತ್ತಿನಲ್ಲಿ ಪುಣ್ಯವಂತರು ಪಡೆಯುತ್ತಾರೆ. भाग्यवान् यत्र यत्र गच्छति, तत्रैव गच्छन्ति सम्पदः – ಭಾಗ್ಯವಂತನು ಎಲ್ಲೆಲ್ಲಿಗೆ ಹೋಗುತ್ತಾನೋ ಅಲ್ಲಿಗೇ ಸಂಪತ್ತುಗಳು ಹೋಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

तकारान्तः पुल्लिङ्गः पठत् शब्दः ಓದುತ್ತಾ

प्र वि –	पठन्	पठन्तौ	पठन्तः
	ಓದುತ್ತಾ		
सं प्र –	हे पठन्	हे पठन्तौ	हे पठन्तः
	ಎಲೈ ಓದುತ್ತಾ ಇರುವವನೆ		
द्वि वि –	पठन्तं	पठन्तौ	पठतः
	ಓದುತ್ತಿರುವವನನ್ನು		
तृ वि –	पठता	पठद्भ्यां	पठद्भिः
	ಓದುತ್ತಿರುವವನಿಂದ		

ಉಳಿದ ರೂಪಗಳು ಮರುತ್ ಶಬ್ದದಂತೆ.

ಇದು ವರ್ತಮಾನ ಕಾಲದಲ್ಲಿ ಶತೃ ಪ್ರತ್ಯಯಾಂತ ಕೃದಂತ ರೂಪ. ಇದರಂತೆ लिखत् ಬರೆಯುತ್ತಾ क्रीडत् ಆಡುತ್ತಾ, गच्छत् ಹೋಗುತ್ತಾ ಇರುವವ. ಇದರ ಸ್ತ್ರೀಲಿಂಗ ರೂಪ पठन्ती, लिखन्ती ಬರೆಯುತ್ತಾ ಇರುವವಳು. ಇತ್ಯಾದಿ. ಇದು जननी ಶಬ್ದದಂತೆ, ಇದರ ನಪುಸಕಲಿಂಗ पठत्, लिखत् ಇತ್ಯಾದಿ, ಇದು जगत् ಶಬ್ದದಂತೆ.

दकारान्तः पुल्लिङ्गः विद् शब्दः ತಿಳಿದವ

प्र वि –	वित्	विदौ	विदः
	ತಿಳಿದವ		
सं प्र –	हे वित्	हे विदौ	हे विदः
	ಎಲೈ ತಿಳಿದವನೇ		
द्वि वि –	विदम्	विदौ	विदः
	ತಿಳಿದವನನ್ನು		
तृ वि –	विदा	विद्भ्यां	विद्भिः
	ತಿಳಿದವನಿಂದ		
च वि –	विदे	विद्भ्यां	विद्भ्यः
	ತಿಳಿದವನಿಗಾಗಿ		
प वि –	विदः	विद्भ्यां	विद्भ्यः
	ಜ್ಞಾನಿಯ ದೆಸೆಯಿಂದ		
ष वि –	विदः	विदोः	विदाम्
	ತಿಳಿದವನ		
स वि –	विदि	विदोः	वित्सु

ಹೀಗೆಯೇ – सुहृद् – ಗೆಳೆಯ

शास्त्रविद्, वेदविद् ।

ಸ್ತ್ರೀಲಿಂಗಗಳು – मृद् ಮಣ್ಣು शरद्, आपद्, विपद्, सम्पद्, परिषद् – ಸಭೆ

तकारान्तः पुल्लिङ्गः भवत् शब्दः ತಾವು

भवान्	भवन्तौ	भवन्तः
ತಾವು		
हे भवन्	हे भवन्तौ	हे भवन्तः
भवन्तं	भवन्तौ	भवतः
ತಮ್ಮನ್ನು		
भवता	भवद्भ्यां	भवद्भिः
ತಮ್ಮಿಂದ		
भवते	भवद्भ्यां	भवद्भ्यः
ತಮಗಾಗಿ		
भवतः	भवद्भ्यां	भवद्भ्यः
ತಮ್ಮ ದೆಸೆಯಿಂದ		
भवतः	भवतोः	भवताम्
ತಮ್ಮ		
भवति	भवतोः	भवत्सु
ತಮ್ಮಲ್ಲಿ		

ಇದರ ಸ್ತ್ರೀಲಿಂಗರೂಪ भवती ಇದು जननी ಶಬ್ದದಂತೆ.

धकारान्तः स्त्रीलिङ्गः क्षुध् शब्दः ಹಸಿವು

क्षुत्	क्षुधौ	क्षुधः
ಹಸಿವು		
हे क्षुत्	हे क्षुधौ	हे क्षुधः
क्षुधम्	क्षुधौ	क्षुधः
ಹಸಿವೆಯನ್ನು		
क्षुधा	क्षुद्भ्यां	क्षुद्भिः
ಹಸಿವೆಯಿಂದ		
क्षुधे	क्षुद्भ्यां	क्षुद्भ्यः
ಹಸಿವೆಗಾಗಿ		
क्षुधः	क्षुद्भ्यां	क्षुद्भ्यः
ಹಸಿವೆಯದೆಸೆಯಿಂದ		
क्षुधः	क्षुधोः	क्षुधाम्
ಹಸಿವೆಯ		
क्षुधि	क्षुधोः	क्षुत्सु
ಹಸಿವೆಯಲ್ಲಿ		

ಹೀಗೆಯೇ, युध् समिध् ಸಮಿಧೆ ಇತ್ಯಾದಿ

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

सः पुस्तकं पठन् अस्ति। - ಅವನು ಪುಸ್ತಕವನ್ನು ಓದುತ್ತಾ ಇದ್ದಾನೆ. सा पुस्तकं पठन्ती अस्ति। ಅವಳು ಪುಸ್ತಕವನ್ನು ಓದುತ್ತಾ ಇದ್ದಾಳೆ. ते बालकाः क्रीडन्तः सन्ति। ಆ ಬಾಲಕರು ಆಡುತ್ತಾ ಇದ್ದಾರೆ. ताः बालिकाः नृत्यन्त्यः सन्ति। - ಆ ಹುಡುಗಿಯರು ನರ್ತಿಸುತ್ತಾ ಇದ್ದಾರೆ. कृपया भवान् मम गृहम् आगच्छतु। - ದಯವಿಟ್ಟು ತಾವು ನನ್ನ ಮನೆಗೆ ಬರಬೇಕು. भवन्तं मम गृहं आह्वयामि - ತಮ್ಮನ್ನು ನನ್ನ ಮನೆಗೆ ಆಹ್ವಾನಿಸುತ್ತೇನೆ.

क्षमस्व, भवता एतत् अकार्यं कारयन् अस्मि - ಕ್ಷಮಿಸಿ, ತಮ್ಮಿಂದ ಈ ಅಕಾರ್ಯವನ್ನು ಮಾಡಿಸುತ್ತಾ ಇದ್ದೇನೆ. एतत् पुस्तकं भवते यच्छामि - ಈ ಪುಸ್ತಕವನ್ನು ತಮಗೆ ಕೊಡುತ್ತೇನೆ. भवतः नाम किम् -ತಮ್ಮ ಹೆಸರೇನು. भवति मम पुस्तकम् अस्ति वा - ತಮ್ಮಲ್ಲಿ ನನ್ನ ಪುಸ್ತಕವು ಇದೆಯೋ? इदानीं मम क्षुत् भवति। ಈಗ ನನಗೆ ಹಸಿವೆಯಾಗುತ್ತದೆ. शिशुः क्षुधं कदापि न सहते - ಮಗು ಹಸಿವೆಯನ್ನು ಎಂದೂ ಕೂಡ ಸಹಿಸುವುದಿಲ್ಲ, एकदा क्षुधा पीडितः विश्वामित्रः मांसभक्षणम् अपि इष्टवान् - ಒಮ್ಮೆ ಹಸಿವೆಯಿಂದ ಪೀಡಿತನಾದ ವಿಶ್ವಾಮಿತ್ರನು ಮಾಂಸ ತಿನ್ನುವುದನ್ನೂ ಬಯಸಿದ. क्षुधि किमपि न दृश्यते -ಹಸಿವೆಯಲ್ಲಿ ಏನೂ ಕಾಣುವುದಿಲ್ಲ, जिज्ञासा अस्ति चेत् शास्त्रविदं पुरुषं पृच्छतु - ತಿಳಿಯಲು ಇಚ್ಛೆ ಇರುವುದಾದರೆ ಶಾಸ್ತ್ರವನ್ನು ತಿಳಿದಿರುವ ಪುರುಷನನ್ನು ಪ್ರಶ್ನಿಸು. वेदवित् ब्राह्मणः पूजनीयः - ವೇದವನ್ನು ತಿಳಿದಿರುವ ಬ್ರಾಹ್ಮಣನು ಪುಜನೀಯನು. सम्पदि आपदि च यः उपकरोति, स एव सन्मित्रम् - ಸಂಪತ್ತಿನಲ್ಲಿ ಮತ್ತು ಆಪತ್ತಿನಲ್ಲಿ ಯಾವನು ಉಪಕರಿಸುತ್ತಾನೋ ಅವನೇ ಒಳ್ಳೇ ಮಿತ್ರನು. कुम्भकारः मृदा कुम्भं करोति। - ಕುಂಭಾರನು ಮಣ್ಣಿನಿಂದ ಮಡಿಕೆಯನ್ನು ಮಾಡುತ್ತಾನೆ. विश्वहिन्दूपरिषदः शाखा अत्रापि अस्ति। ವಿಶ್ವಹಿಂದೂ ಪರಿಷತ್ತಿನ ಶಾಖೆಯು, ಇಲ್ಲಿಯೂ ಇದೆ. विधानपरिषदि सदस्याः सर्वे उपस्थिताः - ವಿಧಾನ ಪರಿಷತ್ತಿನಲ್ಲಿ ಸದಸ್ಯರೆಲ್ಲರೂ ಉಪಸ್ಥಿತರಾಗಿದ್ದಾರೆ. श्रीरामः धनुर्विदां श्रेष्ठः - ಶ್ರೀರಾಮನು ಬಿಲ್ಲುಗಾರರಲ್ಲಿ ಶ್ರೇಷ್ಠನು.

आपदाम् अपहर्तारं, दातारं सर्वसम्पदां श्रीरामं नमामि - ಆಪತ್ತುಗಳ ಹೋಗಲಾಡಿಸುವ, ಎಲ್ಲಾ ಸಂಪತ್ತುಗಳ ದಾತನಾದ ಶ್ರೀ ರಾಮನನ್ನು ನಮಿಸುವೆನು. भजतां कल्पवृक्षाय, नमतां कामधेनवे श्री राघवेन्द्राय नमः - ಭಜಿಸುವವರಿಗೆ ಕಲ್ಪವೃಕ್ಷದಂತಿರುವ, ನಮಿಸುತ್ತಿರುವವರಿಗೆ ಕಾಮಧೇನುವಿನಂತಿರುವ ಶ್ರೀ ರಾಘವೇಂದ್ರನಿಗೆ ನಮಸ್ಕಾರ. भवति मम विश्वासः नास्ति - ತಮ್ಮಲ್ಲಿ ನನಗೆ ವಿಶ್ವಾಸವಿಲ್ಲ. मृदा निर्मिता नौः जले मज्जति - ಮಣ್ಣಿನಿಂದ ನಿರ್ಮಿಸಲ್ಪಟ್ಟ ನೌಕೆಯು ನೀರಿನಲ್ಲಿ ಮುಳುಗುತ್ತದೆ. वेदविदः ब्राह्मणाः परिषत्सु शोभन्ते - ವೇದವನ್ನು ತಿಳಿದಿರುವ ಬ್ರಾಹ್ಮಣರು ಸಭೆಗಳಲ್ಲಿ ಶೋಭಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

नकारान्तः पुल्लिङ्गः पथिन् शब्दः – ದಾರಿ | **आत्मन् शब्दः – ಆತ್ಮ, ತಾನು**

प्र वि –	पन्थाः ದಾರಿ	पन्थानौ	पन्थानः	आत्मा ತಾನು	आत्मानौ	आत्मानः
सं प्र –	हे पन्थाः	हे पन्थानौ	हे पन्थानः	हे आत्मन् ಎಲೈ ಆತ್ಮವೇ	हे आत्मानौ	हे आत्मानः
द्वि वि –	पन्थानं ದಾರಿಯನ್ನು	पन्थानौ	पथः	आत्मानं ತನ್ನನ್ನು	आत्मानौ	आत्मनः
तृ वि –	पथा ದಾರಿಯಿಂದ	पथिभ्यां	पथिभिः	आत्मना ತನ್ನಿಂದ	आत्मभ्यां	आत्मभिः
च वि –	पथे ದಾರಿಗಾಗಿ	पथिभ्यां	पथिभ्यः	आत्मने ತಮಗಾಗಿ	आत्मभ्यां	आत्मभ्यः
प वि –	पथः ದಾರಿಯದೆಸೆಯಿಂದ	पथिभ्यां	पथिभ्यः	आत्मनः ತನ್ನ ದೆಸೆಯಿಂದ	आत्मभ्यां	आत्मभ्यः
ष वि –	पथः ದಾರಿಯ	पथोः	पथाम्	आत्मनः ತನ್ನ	आत्मनोः	आत्मनां
स वि –	पथि ದಾರಿಯಲ್ಲಿ	पथोः	पथिषु	आत्मनि ತನ್ನಲ್ಲಿ	आत्मनोः	आत्मसु

ವ್ಯಾ. ವಿ. – ಸಮಾಸದ ಕೊನೆಯಲ್ಲಿ पथिन् ಶಬ್ದವು ಸೇರುವಾಗ टच् ಪ್ರತ್ಯಯ ಬಂದು अकारान्त राम ಶಬ್ದದಂತೆ ರೂಪಹೊಂದುವುದು. ಉದಾ राजपथः महापथः ಇತ್ಯಾದಿ.

ಹೀಗೆಯೇ, ब्रह्मन् – ಬ್ರಹ್ಮ शर्मन् ಇದರ ಎಲ್ಲಾ न ಕಾರಕ್ಕೆ ಕಾರಗಳು ण ಕಾರಗಳಾಗುತ್ತವೆ. ಉದಾ – ब्रह्मा- ब्रह्माणौ-ब्रह्माणः

नकारान्तः पुल्लिङ्ग पथिन् शब्दः | **श्वन् शब्दः ನಾಯಿ**

प्र वि –	राजा ರಾಜನು	राजानौ	राजानः	श्वा ನಾಯಿ	श्वानौ	श्वानः
सं प्र –	हे राजन् ಎಲೈ ರಾಜನೆ	राजानौ	राजानः	हे श्वन् ಎಲೈ ನಾಯಿಯೆ	हे श्वानौ	हे श्वानः
द्वि वि –	राजानम् ರಾಜನನ್ನು	राजानौ	राज्ञः	श्वानं ನಾಯಿಯನ್ನು	श्वानौ	शुनः
तृ वि –	राज्ञा ರಾಜನಿಂದ	राजभ्यां	राजभिः	शुना ನಾಯಿಯಿಂದ	श्वभ्यां	श्वभिः
च वि –	राज्ञे ರಾಜನಿಗಾಗಿ	राजभ्यां	राजभ्यः	शुने ನಾಯಿಗಾಗಿ	श्वभ्यां	श्वभ्यः
प वि –	राज्ञः ರಾಜನದೆಸೆಯಿಂದ	राजभ्यां	राजभ्यः	शुनः ನಾಯಿಯ ದೆಸೆಯಿಂದ	श्वभ्यां	श्वभ्यः
ष वि –	राज्ञः ರಾಜನ	राज्ञोः	राज्ञाम्	शुनः ನಾಯಿಯ	शुनोः	शुनाम्
स वि –	राज्ञि ರಾಜನಲ್ಲಿ	राज्ञोः	राजसु	शुनि ನಾಯಿಯಲ್ಲಿ	शुनोः	स्वसु

ವ್ಯಾ.ವಿ. ಈ ಶಬ್ದವು ಸಮಾಸದ ಕೊನೆಯಲ್ಲಿ अ ಕಾರಾಂತ राम ಶಬ್ದದಂತೆ ರೂಪಹೊಂದುವುದು. [illegible]

ಹೀಗೆಯೇ – मूर्धन् – ತಲೆ, गरिमन् – ದೊಡ್ಡದು. लघिमन् – ಸಣ್ಣದು, सीमन् – ಗಡಿ ಇತ್ಯಾದಿ.

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

महद्भिः दर्शिताः पन्थानः अनुसरणीयाः। ಮಹಾತ್ಮರಿಂದ ತೋರಿಸಲ್ಪಟ್ಟ ಮಾರ್ಗಗಳು ಅನುಸರಣೀಯವಾಗಿವೆ. प्रयाणिकः बालकं पन्थानं पृच्छति। - ಪ್ರಯಾಣಿಕನು ಬಾಲಕನಲ್ಲಿ (ದ್ವಿ.ವಿ.) ದಾರಿಯನ್ನು ಕೇಳುತ್ತಾನೆ. अनेनैव पथा गन्तव्यम् । ಇದೇ ದಾರಿಯಿಂದ ಹೋಗಬೇಕು. स्वयंसेवकाः ग्रामे पथः निर्माणं कुर्वन्तः सन्ति। - ಸ್ವಯಂ ಸೇವಕರು ಹಳ್ಳಿಯಲ್ಲಿ ದಾರಿಯ ನಿರ್ಮಾಣವನ್ನು ಮಾಡುತ್ತಿದ್ದಾರೆ. एतेषु, कः पन्थाः समीपतमः ಈ ದಾರಿಗಳಲ್ಲಿ ಯಾವ ದಾರಿಯು ಹೆಚ್ಚು ಸಮೀಪವಾಗಿದೆ. आत्मना एव आत्मा रक्षणीया। ತನ್ನಿಂದಲೇ ತಾನು ರಕ್ಷಿಸಲ್ಪಡಬೇಕು. शिशुः दर्पणे आत्मानं पश्यति, हसति च। ಮಗು ಕನ್ನಡಿಯಲ್ಲಿ ತನ್ನನ್ನು ನೋಡುತ್ತದೆ ಮತ್ತು ನಗುತ್ತದೆ. प्रथमतः आत्मनि विश्वसनीयः। ಮೊದಲು ತನ್ನಲ್ಲಿ ವಿಶ್ವಾಸವಿಡತಕ್ಕದ್ದು. इन्द्रः यथा देवतानां राजा तथा रामः सर्वस्य लोकस्य राजा। - ಇಂದ್ರನು ಹೇಗೆ ದೇವತೆಗಳ ರಾಜನೋ ಹಾಗೆ ರಾಮನು ಎಲ್ಲಾ ಲೋಕಕ್ಕೂ ಒಡೆಯನು. कविः राजानं स्तौति। ಕವಿಯು ರಾಜನನ್ನು ಹೊಗಳುತ್ತಾನೆ. यथा राजा तथा प्रजाः। - ಹೇಗೆ ರಾಜನೋ ಹಾಗೆ ಪ್ರಜೆಗಳು. राजानः बुहुवल्लभाः। ರಾಜರು ಬಹು ಪತ್ನಿವುಳ್ಳವರಾಗಿದ್ದಾರೆ. राज्ञः वाचः अनुल्लङ्घनीयाः। ರಾಜನ ಮಾತುಗಳು ಮೀರಲ್ಪಡತಕ್ಕದ್ದಲ್ಲ. राज्ञः सेवकः त्वां आह्वयति। ರಾಜನ ಸೇವಕನು ನಿನ್ನನ್ನು ಕರೆಯುತ್ತಾನೆ. राज्ञि श्रेष्ठरत्नानि सन्ति। - ರಾಜನಲ್ಲಿ ಶ್ರೇಷ್ಠ ರತ್ನಗಳು ಇವೆ. राजसु यधिष्ठिरः श्रेष्ठः। ರಾಜರಲ್ಲಿ ಯುಧಿಷ್ಠಿರನು ಶ್ರೇಷ್ಠನು. मयि विदेशीयः श्वा अस्ति। - ನನ್ನಲ್ಲಿ ವಿದೇಶದ ನಾಯಿಯು ಇದೆ. त्वयि कति श्वानः सन्ति ನಿನ್ನಲ್ಲಿ ಎಷ್ಟು ನಾಯಿಗಳಿವೆ. हे श्वन्, स्वामिभक्तिं वोधय। - ಎಲೈ ನಾಯಿಯೇ, ಸ್ವಾಮಿ ಭಕ್ತಿಯನ್ನು ನನಗೆ ಬೋಧಿಸು. ब्राह्मणे शुनि च पण्डिताः समदर्शिनः। - ಬ್ರಾಹ್ಮಣನಲ್ಲಿ ಮತ್ತು ನಾಯಿಯಲ್ಲಿ ಪಂಡಿತರು ಸಮದರ್ಶಿಗಳಾಗಿರುವರು. मूर्धनि केशाः प्ररोहन्ति - ತಲೆಯಲ್ಲಿ ತಲೆಕೂದಲುಗಳು ಬೆಳೆಯುತ್ತವೆ. भारतस्य उत्तरसीमनि हिमालय पर्वतः विराजते - ಭಾರತದ ಉತ್ತರ ಗಡಿಯಲ್ಲಿ ಹಿಮಾಲಯ ಪರ್ವತವು ಶೋಭಿಸುತ್ತಿದೆ.

न्यायात् यथः (प वि) प्रविचलन्ति पदं न धीराः - ನ್ಯಾಯವಾದ ದಾರಿಯಿಂದ ಧೀರರು ಒಂದು ಹೆಜ್ಜೆಯೂ ಮೀರಿ ನಡೆಯುವುದಿಲ್ಲ. उद्धरेत् आत्मना आत्मानम् - ತನ್ನನ್ನು ತನ್ನಿಂದಲೇ ಉದ್ಧರಿಸಿಕೊಳ್ಳಬೇಕು. न आत्मानम् अवसादयेत् - ತನ್ನನ್ನು ತಾನೇ ತಿರಸ್ಕರಿಸಿಕೊಳ್ಳಬಾರದು. आत्मा एव आत्मनः बन्धुः - ತಾನೇ ತನಗೆ ಬಂಧು. आत्मा एव रिपुः आत्मनः - ತಾನೇ ತನಗೆ ಶತ್ರುವು. शुनः स्वामिनिष्ठाम् अनुसर - ನಾಯಿಯ ಸ್ವಾಮಿನಿಷ್ಠೆಯನ್ನು ಅನುಸರಿಸು. अद्य नगरे शुनां प्रदर्शनम् अस्ति - ಇಂದು ನಗರದಲ್ಲಿ ನಾಯಿಗಳ ಪ್ರದರ್ಶನವಿದೆ. आरक्षकाणां श्वानः अपराधिनः अनुसरन्ति - ಪೋಲೀಸರ ನಾಯಿಗಳು ಅಪರಾಧಿಗಳನ್ನು ಅನುಸರಿಸುತ್ತವೆ. ब्रह्मणः चतुर्मुखानि सन्ति - ಬ್ರಹ್ಮನಿಗೆ ನಾಲ್ಕು ಮುಖಗಳಿವೆ. वेदान्तिनः विभुं ब्रह्म इति समुपासते - ವೇದಾಂತಿಗಳು ಸರ್ವವ್ಯಾಪೀ ಪರಮಾತ್ಮನನ್ನು ಬ್ರಹ್ಮ ಎಂದು ಉಪಾಸನೆ ಮಾಡುತ್ತಾರೆ.

CC-0. In Public Domain. Digitized by eGangotri

नकारान्तः पुल्लिङ्गः मघवन् शब्दः ಇಂದ್ರ — युवन् शब्दः ಯುವಕ

प्र वि –	मघवा ಇಂದ್ರನು	मघवानौ	मघवानः	युवा ಯುವಕನು	युवानौ	युवानः
सं प्र –	हे मघवन् ಎಲೈ ಇಂದ್ರನೇ,	मघवानौ	मघवानः	हे युवन् ಎಲೈ ಯುವಕನೇ	युवानौ	युवानः
द्वि वि –	मघवानं ಇಂದ್ರನನ್ನು	मघवानौ	मघोनः	युवानं ಯುವಕನನ್ನು	युवानौ	यूनः
तृ वि –	मघोना ಇಂದ್ರನಿಂದ	मघवभ्यां	मघवभिः	यूना ಯುವಕನಿಂದ	युवभ्यां	युवभिः
च वि –	मघोने ಇಂದ್ರನಿಗಾಗಿ	मघवभ्यां	मघवभ्यः	यूने ಯುವಕನಿಗಾಗಿ	युवभ्यां	युवभ्यः
प वि –	मघोनः ಇಂದ್ರನದೆಸೆಯಿಂದ	मघवभ्यां	मघवभ्यः	यूनः ಯುವಕನ ದೆಸೆಯಿಂದ	युवभ्यां	युवभ्यः
ष वि –	मघोनः ಇಂದ್ರನ	मघोनोः	मघोनाम्	यूनः ಯುವಕನ	यूनोः	यूनाम्
स वि –	मघोनि ಇಂದ್ರನಲ್ಲಿ	मघोनोः	मघवसु	यूनि ಯುವಕನಲ್ಲಿ	यूनोः	युवसु

नकारान्तः पुल्लिङ्गः गुणिन् शब्दः –ಗುಣವಂತ

प्र वि –	गुणी ಗುಣವಂತನು	गुणिनौ	गुणिनः
सं प्र –	हे गुणिन् ಎಲೈ ಗುಣಶಾಲಿಯೆ	हे गुणिनौ	हे गुणिनः
द्वि वि –	गुणिनं ಗುಣಿಯನ್ನು	गुणिनौ	गुणिनः
तृ वि –	गुणिना ಗುಣಿಯಿಂದ	गुणिभ्यां	गुणिभिः
च वि –	गुणिने ಗುಣಿಗಾಗಿ	गुणिभ्यां	गुणिभ्यः
प वि –	गुणिनः ಗುಣಿಯದೆಸೆಯಿಂದ	गुणिभ्यां	गुणिभ्यः
ष वि –	गुणिनः ಗುಣಿಯ	गुणिनोः	गुणिनां
स वि –	गुणिनि ಗುಣಿಯಲ್ಲಿ	गुणिनोः	गुणिषु

ವ್ಯಾ.ವಿ. ಉಳ್ಳವ ಎಂಬ ಅರ್ಥದಲ್ಲಿ ನಾಮ ಪದಕ್ಕೆ इन् ಪ್ರತ್ಯಯ ಬಂದು न ಕಾರಾಂತ ಶಬ್ದವಾಗುವುದು. ಕನ್ನಡದಲ್ಲಿ ಗುಣವುಳ್ಳವ ಗುಣಿ ಎಂದಾದರೆ ಸಂಸ್ಕೃತದಲ್ಲಿ ಗುಣವುಳ್ಳವ गुणिन् ಎಂದಾಗುವುದು. ಪ್ರ.ವಿ.ಏ.ವ. गुणी जीवी ಎಂದಾಗುವುದು. ಉದಾ ಜೀವವುಳ್ಳವ जीविन् ಜೀವಿ ರೂಪವುಳ್ಳವ रूपिन्–(रूपी)

गुणिन् ಶಬ್ದದಂತೆ ಪಾಪವುಳ್ಳವ पापिन् – ಯೋಗವುಳ್ಳವ – योगिन् – ಯೋಗಿ, प्राणिन्, मेधाविन् – ಬುದ್ಧಿವಂತ भागिनि्, देहिन्, अभिलाषिन् आकाङ्क्षिन् – हस्तिन् – करिन् – शुण्डिन् – ಸೊಂಡಿಲು ಉಳ್ಳದ್ದು–ಆನೆ धनिन्, सन्यासिन्, मन्त्रिन्, तन्त्रिन्, शूलिन्, यशस्विन्, बलिन्, धर्मिन्, स्वर्गिन् – ಇತ್ಯಾದಿ ಯಾವುದಾದರೊಂದು ಕ್ರಿಯೆಯನ್ನು ಮಾಡುವವ ಎಂಬರ್ಥದಲ್ಲೂ ಧಾತುವಿಗೆ इन् ಪ್ರತ್ಯಯ ಬಂದು न ಕಾರಾಂತ ಶಬ್ದವಾಗುವುದು. ಉದಾ ನ್ಯಾಯವನ್ನು ಹೇಳುವವ न्यायवादिन्, सत्यवादिन्, अधिकारिन्, विद्यार्थिन्, उपकारिन्, मध्यवर्तिन्, धूरगामिन्, भाविन्, दूरदर्शिन्, समीपवर्तिन्, अनुयायिन्, सहाध्यायिन्, सहपाठिन्, वर्षिन् ಇತ್ಯಾದಿ.

CC-O. In Public Domain. Digitized by eGangotri

उदाहरण वाक्यानि

युवा विवेकानन्दः अमेरिकं गतवान् । – ಯುವಕನಾದ ವಿವೇಕಾನಂದನು ಅಮೇರಿಕಕ್ಕೆ ಹೋದನು. एते युवानः क्रीडाङ्गणे खेलन्ति । ಈ ಯುವಕರು ಕ್ರೀಡಾಂಗಣದಲ್ಲಿ ಆಡುತ್ತಾರೆ. हे युवन्, शक्त्याः दुरुपयोगं मा कुरु । – ಎಲೈ ಯುವಕನೆ, ಶಕ್ತಿಯ ದುರುಪಯೋಗವನ್ನು ಮಾಡಬೇಡ. हे युवानः, प्रतिदिनं व्ययामं कुरुत । ಎಲೈ ಯುವಕರೆ, ಪ್ರತಿದಿನ ವ್ಯಾಯಾಮವನ್ನು ಮಾಡಿರಿ. युवानं मा कोपय । – ಯುವಕನನ್ನು ಕೋಪಗೊಳಿಸಬೇಡ. यूनः मित्रवत् पश्यन्तु – ಯುವಕರನ್ನು ಮಿತ್ರರಂತೆ ನೋಡಿರಿ. सर्वकारः युवभिः सैनिकैः देशरक्षणं कारयति – ಸರಕಾರವು ಯುವಕರಾದ ಸೈನಿಕರಿಂದ ದೇಶರಕ್ಷಣೆಯನ್ನು ಮಾಡಿಸುತ್ತದೆ. युवभ्यः उद्योगः अवश्यं कल्पनीयः – ಯುವಕರಿಗೆ ಉದ್ಯೋಗವು ಅವಶ್ಯವಾಗಿ ಕೊಡಲ್ಪಡಬೇಕು. यूनः भावः यौवनम् – ಯುವಕನ ಸದ್ಭಾವವೇ ಯೌವನ. प्रायशः यूनि विचारशीलता न भवति । ಸಾಮಾನ್ಯವಾಗಿ ಯುವಕನಲ್ಲಿ ವಿಚಾರಶೀಲತೆ ಇರುವುದಿಲ್ಲ. युवसु उत्साहः भवति । – ಯುವಕರಲ್ಲಿ ಉತ್ಸಾಹವಿರುತ್ತದೆ. गुणी – गुणिनं वेत्ति – ಒಬ್ಬ ಗುಣಿಯು ಇನ್ನೊಬ್ಬ ಗುಣಿಯನ್ನು ತಿಳಿಯುತ್ತಾನೆ. अहं गुणिनां पक्षपती । – ನಾನು ಗುಣಿಗಳ ಪಕ್ಷಪಾತಿ. धनिनः विविधललित – कलाः पोषयन्ति । – ಶ್ರೀಮಂತರು ವಿವಿಧ ಲಲಿತಕಲೆಗಳನ್ನು (ಸ್ತ್ರೀ.ಲಿ.) ಪೋಷಿಸುತ್ತಾರೆ. हस्तिनः शुण्डा दीर्घा । ಆನೆಯ ಸೊಂಡಿಲು ಉದ್ದವಾಗಿದೆ. गङ्गा पापिनाम् पापं दूरीकरोति । – ಗಂಗೆಯು ಪಾಪಿಗಳ ಪಾಪವನ್ನು ದೂರಮಾಡುತ್ತಾಳೆ. यशस्वी श्रीरामः पुनः अयोध्यां प्रतिगतः । – ಯಶಸ್ವಿಯಾದ ಶ್ರೀರಾಮನು ಮತ್ತೆ ಅಯೋಧ್ಯೆಗೆ ಹಿಂತಿರುಗಿದ. विद्यार्थी विद्याम् अर्थयते । – ವಿದ್ಯಾರ್ಥಿಯು ವಿದ್ಯೆಯನ್ನು ಬೇಡುತ್ತಾನೆ. जयन्तः मघोनः पुत्रः । – ಜಯಂತನು ಇಂದ್ರನ ಮಗನು. एषः वित्तकोशस्य अधिकारिणः पुत्रः – ಇವನು ಬ್ಯಾಂಕಿನ ಅಧಿಕಾರಿಯ ಮಗನು. अपराधी न्यायवादिना असत्यं प्रतिपादयति । ಅಪರಾಧಿಯು ನ್ಯಾಯವಾದಿಯಿಂದ ಅಸತ್ಯವನ್ನು ಪ್ರತಿಪಾದಿಸುತ್ತಾನೆ. इदानींतनकाले सत्यवादिनां पुरस्कारः नास्ति ಇತ್ತೀಚಿನ ಕಾಲದಲ್ಲಿ ಸತ್ಯವಾದಿಗಳಿಗೆ ಗೌರವವೇ ಇರುವುದಿಲ್ಲ. शूलिने नमः – ಶಿವನಿಗೆ ನಮಸ್ಕಾರ.

सुखार्थी वा त्यजेत् विद्याम् – ಸುಖವನ್ನು ಬಯಸುವವನಾಗಿದ್ದರೆ ವಿದ್ಯೆಯನ್ನು ಬಿಡಬೇಕು. विद्यार्थी वा त्यजेत् सुखम् – ವಿದ್ಯೆಯನ್ನೂ ಬಯಸುವಿಯಾಗಿದ್ದರೆ ಸುಖವನ್ನು ಬಿಡಬೇಕು. सुखार्थिनः कुतः विद्या – ಸುಖವನ್ನು ಬಯಸುವವನಿಗೆ ವಿದ್ಯೆ ಎಲ್ಲಿಂದ? कुतः विद्यार्थिनः सुखम् – ವಿದ್ಯೆಯನ್ನು ಬಯಸುವವನಿಗೆ ಸುಖವೆಲ್ಲಿಂದ. मौनिनः कलहः नास्ति – ಮೌನಿಗೆ ಜಗಳವಿಲ್ಲ. क्षमी, योगी च युवा जगति निरुपद्रवी भवति – ಕ್ಷಮಿಸುವ ಗುಣವುಳ್ಳ, ಯೋಗಾಭ್ಯಾಸ ಮಾಡಿರುವ ಯುವಕನು ಜಗತ್ತಿನಲ್ಲಿ ನಿರುಪದ್ರವಿಯಾಗಿರುತ್ತಾನೆ. गीती, शीघ्री शिरः कम्पी पाठकः पाठकेषु अधमः – ರಾಗವಾಗಿ ಓದುವ, ಶೀಘ್ರವಾಗಿ ಓದುವ, ತಲೆಯನ್ನು ಕಂಪಿಸುತ್ತಾ ಓದುವವನು, ಓದುವವರಲ್ಲಿ ಅಧಮನು. अल्पविद्या महागर्वी कुरुपी बहुचेष्टितः – ಅಲ್ಪ ವಿದ್ಯೆಯುಳ್ಳವನು ತುಂಬಾ ಗರ್ವವುಳ್ಳವನಾಗುತ್ತಾನೆ. ಕೆಟ್ಟ ರೂಪವುಳ್ಳವನು ತುಂಬಾ ಚೇಷ್ಟೆ ಮಾಡುವವನಾಗುತ್ತಾನೆ.

Sri Vidyabharathi Book Centre, Sringeri

CC-0. In Public Domain. Digitized by eGangotri

श कारान्तः स्त्रीलिङ्गः दिश्शब्दः | **षकारान्तः पुल्लिङ्ग द्विष् शब्दः**

प्र वि –	दिक्	दिशौ	दिशः	द्विट्	द्विषो	द्विषः
	ದಿಕ್ಕು			ವೈರಿ		
सं प्र –	हे दिक्	दिशौ	दिशः	हे द्विट्	हे द्विषौ	हे द्विषः
				ಎಲೈ ವೈರಿಯೆ		
द्वि वि –	दिशम्	दिशौ	दिशः	द्विषं	द्विषौ	द्विषः
	ದಿಕ್ಕನ್ನು			ವೈರಿಯನ್ನು		
तृ वि –	दिशा	दिग्भ्यां	दिग्भिः	द्विषा	द्विड्भ्यां	द्विड्भिः
	ದಿಕ್ಕಿನಿಂದ			ವೈರಿಯಿಂದ		
च वि –	दिशे	दिग्भ्यां	दिग्भ्यः	द्विषे	द्विड्भ्यां	द्विड्भ्यः
	ದಿಕ್ಕಿಗಾಗಿ			ವೈರಿಗೆ		
प वि –	दिशः	दिग्भ्यां	दिग्भ्यः	द्विषः	द्विड्भ्यां	द्विड्भ्यः
	ದಿಕ್ಕಿನ ದೆಸೆಯಿಂದ			ವೈರಿಯ ದೆಸೆಯಿಂದ		
ष वि –	दिशः	दिशोः	दिशाम्	द्विषः	द्विषोः	द्विषाम्
	ದಿಕ್ಕಿನ			ವೈರಿಯ		
स वि –	दिशि	दिशोः	दिक्षु	द्विषि	द्विषोः	द्विट्सु
	ದಿಕ್ಕಿನಲ್ಲಿ			ವೈರಿಯಲ್ಲಿ		

ಹೀಗೆ – दृश् ಕಣ್ಣು, तादृश् – ಅಂತಹ | ಹೀಗೆ – त्विष् ಕಾಂತಿ

सकारान्तः स्त्रीलिङ्गः चन्द्रमस् शब्दः ಚಂದ್ರ | **पुल्लिङ्ग विद्वस् शब्द**

प्र वि –	चन्द्रमाः	चन्द्रमसौ	चन्द्रमसः	विद्वान्	विद्वांसौ	विद्वांसः
	ಚಂದ್ರನು			ಪಂಡಿತ		
सं प्र –	हे चन्द्रमः	चन्द्रमसौ	चन्द्रमसः	हे विद्वन्	विद्वांसौ	विद्वांसः
	ಎಲೈ ಚಂದ್ರನೆ			ಎಲೈಪಂಡಿತನೆ		
द्वि वि –	चन्द्रमसम्	चन्द्रमसौ	चन्द्रमसः	विद्वांसं	विद्वांसौ	विदुषः
	ಚಂದನನ್ನು			ಪಂಡಿತನನ್ನು		
तृ वि –	चन्द्रमसा	चन्द्रमोभ्यां	चन्द्रमोभिः	विदुषा	विद्वद्भ्यां	विद्वद्भिः
	ಚಂದ್ರನಿಂದ			ವಿದ್ವಾಂಸನಿಂದ		
च वि –	चन्द्रमसे	चन्द्रमोभ्यां	चन्द्रमोभ्यः	विदुषे	विद्वद्भ्यां	विद्वद्भ्यः
	ಚಂದ್ರನಿಗಾಗಿ			ವಿದ್ವಾಂಸನಿಗಾಗಿ		
प वि –	चन्द्रमसः	चन्द्रमोभ्यां	चन्द्रमोभ्यः	विदुषः	विद्वद्भ्यां	विद्वद्भ्यः
	ಚಂದ್ರನ ದೆಸೆಯಿಂದ			ವಿದ್ವಾಂಸನ ದೆಸೆಯಿಂದ		
ष वि –	चन्द्रमसः	चन्द्रमसोः	चन्द्रमसां	विदुषः	विदुषोः	विदषां
	ಚಂದ್ರನ			ಪಂಡಿತನ		
स वि –	चन्द्रमासि	चन्द्रमासोः	चन्द्रमस्सु	विदुषि	विदुषोः	विद्वत्सु
	ಚಂದ್ರನಲ್ಲಿ			ಪಂಡಿತನಲ್ಲಿ		

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

विदुषे स्वस्ति। ವಿದ್ವಾಂಸನಿಗೆ ಶುಭವಾಗಲಿ. विद्वद्भ्यः नमः – ವಿದ್ವಾಂಸರಿಗೆ ನಮಸ್ಕಾರ. विदुषां सङ्गः अभिमानमूलः ವಿದ್ವಾಂಸರ ಸಂಗ ಅಭಿಮಾನಕ್ಕೆ ಮೂಲಕಾರಣವು.

अष्टदिशः सन्ति – ಎಂಟು ದಿಕ್ಕುಗಳಿವೆ. मम दक्षिणतः पूर्वा दिक् अस्ति। ನನ್ನ ಬಲಬದಿಗೆ ಪೂರ್ವದಿಕ್ಕು ಇದೆ. मम वामतः पश्चिमा दिक् अस्ति – ನನ್ನ ಎಡಬದಿಗೆ ಪಶ್ಚಿಮ ದಿಕ್ಕಿದೆ. पूर्वस्यां दिशि सूर्यः उदेति। – ಪೂರ್ವದಿಕ್ಕಿನಲ್ಲಿ ಸೂರ್ಯನು ಉದಯಿಸುತ್ತಾನೆ. भारतस्य कीर्तिः दिक्षु प्रासरत्। ಭಾರತದ ಕೀರ್ತಿಯು ದಿಕ್ಕುದಿಕ್ಕುಗಳಲ್ಲಿ ಹರಡಿದೆ. सर्वाभ्यः दिग्भ्यः उत्तमविचाराः आयान्तु। ಎಲ್ಲಾ ದಿಕ್ಕುಗಳಿಂದ (ಪಂ.ವಿ.) ಉತ್ತಮ ವಿಚಾರಗಳು ಬರಲಿ. पाण्डवानां सहोदराः एव द्विषः आसन्। ಪಾಂಡವರಿಗೆ ಸಹೋದರರೇ ವೈರಿಗಳಾಗಿದ್ದರು. तान् द्विषः ते न सहन्ते स्म – ಆ ವೈರಿಗಳನ್ನು ಅವರು ಸಹಿಸುತ್ತಿರಲಿಲ್ಲ. तेषां द्विषां वधाय ते बहु प्रयत्नं कृतवन्तः। ಆ ವೈರಿಗಳ ವಧೆಗಾಗಿ ಅವರು ಬಹು ಪ್ರಯತ್ನಿಸಿದರು. अन्तिमे द्विट्सु अश्वत्थामा एकः अवशिष्टः। ಕೊನೆಗೆ ವೈರಿಗಳಲ್ಲಿ ಅಶ್ವತ್ಥಾಮನೊಬ್ಬನು ಉಳಿದನು. सः द्विषां पाण्डवानां वधाय ब्रह्मास्त्रम् आज्ञापयत्। ಅವನು ಶತ್ರುಗಳಾದ ಪಾಂಡವರ ವಧೆಗಾಗಿ ಬ್ರಹ್ಮಾಸ್ತ್ರವನ್ನು ಆಜ್ಞಾಪಿಸಿದನು. द्विषः गृहे वासः न कर्तव्यः। ವೈರಿಯ ಮನೆಯಲ್ಲಿ ಎಂದೂ ವಾಸಮಾಡಬಾರದು. आकाशे चन्द्रमाः रात्रौ शोभते। – ಆಕಾಶದಲ್ಲಿ ಚಂದ್ರನು ರಾತ್ರಿಯಲ್ಲಿ ಶೋಭಿಸುತ್ತಾನೆ. भाद्रपदमासस्य चतुर्थ्यां तिथौ चन्द्रमाः न दर्शनीयः – ಭಾದ್ರಪದ ಮಾಸದ ನಾಲ್ಕನೆಯ ಚೌತಿ ತಿಥಿಯಂದು ಚಂದ್ರನನ್ನು ನೋಡಬಾರದು. यथा चन्द्रमसि कलङ्कः, तथा महात्मसु अपि कलङ्कः दृश्यते – ಹೇಗೆ ಚಂದ್ರನಲ್ಲಿ ಕಳಂಕವಿದೆಯೋ ಹಾಗೆ ಮಹಾತ್ಮರಲ್ಲೂ ಕಳಂಕವು ಕಾಣಿಸಿಗುವುದು. किन्तु चन्द्रमसः गुणानां मध्ये एको हि दोषः निमजति ಆದರೆ ಚಂದ್ರನ ಗುಣಗಳ ಮಧ್ಯೆ ಒಂದು ದೋಷವು ಮುಳುಗಿ ಹೋಗುತ್ತದೆ. ಕಾಣುವುದಿಲ್ಲ ಎಂದರ್ಥ. विद्वांसः सर्वत्र पूज्यन्ते ವಿದ್ವಾಂಸರು ಎಲ್ಲಾ ಕಡೆ ಪೂಜಿಸಲ್ಪಡುತ್ತಾರೆ. विद्वान् एव जानाति, विद्वत्परिश्रमम्। ಪಾಂಡಿತ್ಯದ ಪರಿಶ್ರಮವನ್ನು ವಿದ್ವಾಂಸನೇ ತಿಳಿಯುತ್ತಾನೆ. राजा विदुषः पुरस्करोति –ರಾಜನು ವಿದ್ವಾಂಸರನ್ನು ಪುರಸ್ಕರಿಸುತ್ತಾನೆ.

विदुषां गृहेषु सदा पुराणप्रवचनानि प्रचलन्ति – ವಿದ್ವಾಂಸರ ಮನೆಗಳಲ್ಲಿ ಪುರಾಣ ಪ್ರವಚನಗಳು ನಡೆಯುತ್ತಿವೆ. विदुषि सद्गुणाः निवसन्ति – ವಿದ್ವಾಂಸನಲ್ಲಿ ಸದ್ಗುಣಗಳು ನೆಲೆಸಿವೆ. विदुषां सम्मेलने राजकारिणां किं कार्यम्? ವಿದ್ವಾಂಸರ ಸಮ್ಮೇಳನದಲ್ಲಿ ರಾಜಕಾರಣಿಗಳಿಗೆ ಏನು ಕೆಲಸ? विद्वद्भिः अनेके ग्रन्थाः लिखिताः – ವಿದ್ವಾಂಸರಿಂದ ಅನೇಕ ಗ್ರಂಥಗಳು ರಚಿಸಲ್ಪಟ್ಟಿವೆ. म्याक्स्मुलर् इति जर्मन् विदुषा वेदस्य व्याख्या लिखिता – ಮ್ಯಾಕ್ಸ್‌ಮುಲರ್ ಎಂಬ ಜರ್ಮನ್ ವಿದ್ವಾಂಸನಿಂದ ವೇದಕ್ಕೆ ವಿಮರ್ಶೆಯು ಬರೆಯಲ್ಪಟ್ಟಿದೆ. विद्या दिक्षु दिक्षु, कीर्तिं वितनोति – ವಿದ್ಯೆಯು ದಿಕ್ಕು ದಿಕ್ಕುಗಳಲ್ಲಿ ಕೀರ್ತಿಯನ್ನು ವಿಸ್ತಾರಗೊಳಿಸುತ್ತದೆ. अस्ति उत्तरस्यां दिशि देवतात्मा हिमालयो नाम नगाधिराजः – ಉತ್ತರ ದಿಕ್ಕಿನಲ್ಲಿ ದೇವತೆಗಳಿಗೆ ಆತ್ಮದಂತಿರುವ ಹಿಮಾಲಯವೆಂಬ ಪರ್ವತವು ಇದೆ. यमः दक्षिणदिशः अधिपतिः – ಯಮನು ದಕ್ಷಿಣ ದಿಕ್ಕಿನ ಅಧಿಪತಿಯು.

Sri Vidyabharathi Book Centre, Sringeri

CC-0. In Public Domain. Digitized by eGangotri

सकारान्तः स्त्रीलिङ्गः आशिस् शब्दः ಆಶೀರ್ವಾದ

प्र वि –	आशीः ಆಶೀರ್ವಾದ	आशिषौ	आशिषः
सं प्र –	हे आशीः	हे आशिषौ	हे आशिषः
द्वि वि –	आशिषम् ಆಶೀರ್ವಾದವನ್ನು	आशिषौ	आशिषः
तृ वि –	आशिषा ಆಶೀರ್ವಾದದಿಂದ	आशीर्भ्यां	आशीर्भिः

ಉಳಿದವುಗಳನ್ನು ಹೀಗೆಯೇ ಊಹಿಸಿಕೊಳ್ಳಬೇಕು.

सकारान्तः पुल्लिङ्ग – पुंस् शब्दः ಗಂಡಸು

पुमान् ಗಂಡಸು	पुमांसौ	पुमांसः
हे पुमान् ಎಲೈ ಗಂಡಸೆ,	पुमोसौ	हे पुमासः
पुमांसं ಗಂಡಸನ್ನು	पुमांसौ	पुंसः
पुसा ಗಂಡಸಿನಿಂದ	पुंभ्यां	पुंभिः

ಉಳಿದವುಗಳನ್ನು ಹೀಗೆಯೇ ಊಹಿಸಿಕೊಳ್ಳಬೇಕು.

सकारान्तः नपुंसकलिङ्गः मनस् शब्दः

प्र वि –	मनः ಮನಸ್ಸು	मनसी	मनांसि
सं प्र –	हे मनः ಎಲೈ ಮನಸ್ಸೇ	हे मनसी	हे मनांसि
द्वि वि –	मनः ಮನಸ್ಸನ್ನು	मनसी	मनांसि
तृ वि –	मनसा ಮನಸ್ಸಿನಿಂದ	मनोभ्यां	मनोभिः
च वि –	मनसे ಮನಸ್ಸಿಗೆ	मनोभ्यां	मनोभ्यः
प वि –	मनसः ಮನಸ್ಸಿನ ದೆಸೆಯಿಂದ	मनोभ्यां	मनोभ्यः
ष वि –	मनसः ಮನಸ್ಸಿನ	मनसोः	मनसाम्
स वि –	मनसि ಮನಸ್ಸಿನಲ್ಲಿ	मनसोः	मनस्सु

नपुंसकलिङ्गः धनुस् शब्दः ಬಿಲ್ಲು

धनुः ಬಿಲ್ಲು	धनुषी	धनूषि
हे धनुः	हे धनुषी	हे धनूषि
धनुः ಬಿಲ್ಲನ್ನು	धनुषी	धनूंषि
धनुषा ಬಿಲ್ಲಿನಿಂದ	धनुर्भ्यां	धनुर्भिः
धनुषे ಬಿಲ್ಲಿಗಾಗಿ	धनुर्भ्यां	धनुर्भ्यः
धनुषः ಬಿಲ್ಲಿನ ದೆಸೆಯಿಂದ	धनुर्भ्यां	धनुर्भ्यः
धनुषः ಬಿಲ್ಲಿನ	धनुषोः	धनुषाम्
धनुषि ಬಿಲ್ಲಿನಲ್ಲಿ	धनुषोः	धनुष्षुः

ಹೀಗೆಯೇ आयुस् – ಆಯಸ್ಸು ज्योतिस् – ನಕ್ಷತ್ರ, चक्षुस् – ಕಣ್ಣು वपुस् – ದೇಹ ಇತ್ಯಾದಿ

ಕನ್ನಡದಲ್ಲಿ ಸ್ಸು ಕೊನೆಗಿರುವ ಶಬ್ದವು ಸಂಸ್ಕೃತದಲ್ಲಿ स् ಕಾರಾಂತ ನಪುಂಸಕಲಿಂಗ ಶಬ್ದವೆಂದು ತಿಳಿದು मनस् ಶಬ್ದಂತೆ ರೂಪಗಳನ್ನು ಊಹಿಸಿಕೊಳ್ಳಬೇಕು. ಉದಾ: मनस् –ಮನಸ್ಸು वर्चस् –ವರ್ಚಸ್ಸು, वचस् –ಮಾತು तेजस् ओजस् अम्बस् – ನೀರು तपस्, वयस्, तमस् – ಕತ್ತಲೆ, यशस्, शिरस्, सरस् (ಸರೋವರ) रजस् – ಧೂಳು पयस् – ಹಾಲು अयस् –ಕಬ್ಬಿಣ नभस् –ಆಕಾಶ.

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

शिष्येभ्यः मम आशिषः - ಶಿಷ್ಯರಿಗೆ ನನ್ನ ಆಶೀರ್ವಾದಗಳು. माता पुत्रेभ्यः आशीर्वदति - ತಾಯಿ ಮಕ್ಕಳಿಗೆ ಆಶೀರ್ವಾದವನ್ನು ಹೇಳುತ್ತಾಳೆ. (ಮಾಡುತ್ತಾಳೆ) गुरवः शिष्येभ्यः आशिषः कुर्वन्ति - ಗುರುಗಳು ಶಿಷ್ಯರಿಗೆ ಆಶೀರ್ವಾದಗಳನ್ನು ಮಾಡುತ್ತಾರೆ.

गुरोः आशिषा अहम् उत्तीर्णः - ಗುರುವಿನ ಆಶೀರ್ವಾದದಿಂದ ನಾನು ಪಾಸಾದೆನು. वसिष्ठस्य आशीर्भिः दिलीपस्य सन्ततिः अभवत् - ವಸಿಷ್ಠನ ಆಶೀರ್ವಾದಗಳಿಂದ ದಿಲೀಪನಿಗೆ ಸಂತತಿಯಾಯಿತು. ज्येष्ठानां आशीर्भिः कनिष्ठाः कर्तव्यं कुर्वन्ति - ಹಿರಿಯರ ಆಶೀರ್ವಾದಗಳಿಗಾಗಿ ಚಿಕ್ಕವರು ಕರ್ತವ್ಯವನ್ನು ಮಾಡುತ್ತಾರೆ. गुरूणाम् आशीषां प्रभावेण शिष्याः यशस्विनः भवन्ति - ಗುರುಗಳ ಆಶೀರ್ವಾದಗಳ ಪ್ರಭಾವದಿಂದ ಶಿಷ್ಯರು ಯಶಸ್ವಿಗಳಾಗುವರು. ज्येष्ठानां आशिषि मम अतीव विश्वासः विद्यते - ಹಿರಿಯರ ಆಶೀರ್ವಾದದಲ್ಲಿ ನನಗೆ ತುಂಬಾ ವಿಶ್ವಾಸವಿದೆ. पुमांसःसर्वे धीराः न भवन्ति। ಗಂಡಸರೆಲ್ಲರೂ ಧೀರರಾಗಿರುವುದಿಲ್ಲ, अलसं पुमांसं दूरीकुरु - ಸೋಮಾರಿ ಪುರುಷನನ್ನು ದೂರಮಾಡು. युवपुंसः देशरक्षणे नियोजयेत् - ಯುವಗಂಡಸರನ್ನು ದೇಶರಕ್ಷಣೆ ಕಾರ್ಯದಲ್ಲಿ ತೊಡಗಿಸಬೇಕು. स्त्रियः रक्षणकार्यं पुंभिः कारयन्ति - ಹೆಂಗಸರು ರಕ್ಷಣಕಾರ್ಯವನ್ನು ಗಂಡಸರಿಂದ ಮಾಡಿಸುತ್ತಾರೆ. पुंसां मध्ये अर्जुनः श्रेष्ठः। - ಪುರುಷರ ಮಧ್ಯೆ ಅರ್ಜುನನು ಶ್ರೇಷ್ಠನು. श्रीरामः कोदण्डधनुः धरति स्म - ಶ್ರೀರಾಮನು ಕೋದಂಡ ಧನುಸ್ಸನ್ನು ಧರಿಸುತ್ತಿದ್ದನು. अर्जुनः गाण्डीवधनुषा अयुध्यत - ಅರ್ಜುನನು ಗಾಂಡೀವ ಧನುಸ್ಸಿನಿಂದ ಯುದ್ಧಮಾಡಿದನು.

सत्संगतिः चेतः प्रसादयति - ಸಜ್ಜನರ ಒಡನಾಟವು ಚಿತ್ತವನ್ನು ಪ್ರಸನ್ನಗೊಳಿಸುತ್ತದೆ. नभसः भूषणं चन्द्रः - ಆಕಾಶಕ್ಕೆ ಚಂದ್ರನು ಅಲಂಕಾರವಾಗಿದ್ದಾನೆ. पिबन्ति नद्यः स्वयमेव नाम्बः - ನದಿಗಳು ತಾವೇ ಸ್ವತಃ ನೀರನ್ನು ಕುಡಿಯುವುದಿಲ್ಲ, यदा सूर्यः नभसः मध्यम् आगच्छति तदा मध्याह्नः भवति - ಯಾವಾಗ ಸೂರ್ಯನು ಆಕಾಶದ ಮಧ್ಯಕ್ಕೆ ಬರುತ್ತಾನೋ ಆಗ ಮಧ್ಯಾಹ್ನ. सायं सूर्यः नभसः अवतरति - ಸಂಜೆ ಸೂರ್ಯನು ಆಕಾಶದಿಂದ ಕೆಳಗಿಳಿಯುತ್ತಾನೆ. मनसि परितुष्टे को अर्थवान् को दरिद्रः ಮನಸ್ಸಿನಲ್ಲಿ ಸಂತೋಷಗೊಳ್ಳಲು ಯಾರು ಶ್ರೀಮಂತ ಯಾರು ಬಡವ कायेन वाचा मनसा परहितं चिन्तय - ದೇಹದಿಂದ, ಮಾತಿನಿಂದ ಮತ್ತು ಮನಸ್ಸಿನಿಂದ ಪರರ ಹಿತವನ್ನು ಚಿಂತಿಸು. मनस्येकं वचस्येकं कर्मण्येकं महात्मनाम्।

मनस्येकं वचस्येकं कर्मण्येकं दुरात्मनाम् - ಮಹಾತ್ಮರ ಮನಸ್ಸಿನಲ್ಲೂ (मनसि एक) ಮಾತಿನಲ್ಲೂ (वचसि एकं) ಕರ್ಮದಲ್ಲೂ (कर्मणि एकं) ಒಂದೇ ಆಗಿರುತ್ತದೆ (ಅಂದರೆ ಮನಸ್ಸಿನಲ್ಲಿ ಆಲೋಚಿಸಿದಂತೆ ಮಾತನಾಡುತ್ತಾರೆ. ಅದರಂತೆ ನಡೆಯುತ್ತಾರೆ ಎಂದರ್ಥ. ಆದರೆ ದುರಾತ್ಮರ ಮನಸ್ಸಿನಲ್ಲೊಂದು, ಮಾತಿನಲ್ಲೊಂದು, ಕಾರ್ಯದಲ್ಲೊಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

सकारान्तः पुल्लिङ्गः – ज्यायान् शब्दः ಹಿರಿಯವ

प्र वि –	ज्यायान् ದೊಡ್ಡವ	ज्यायांसौ	ज्यायांसः
सं प्र –	हे ज्यायन् ಎಲೈ ದೊಡ್ಡವನೆ	ज्यायांसौ	ज्यासांसः
द्वि वि –	ज्यायांसम् ಹಿರಿಯವನನ್ನು	ज्यायांसौ	ज्यायसः
तृ वि –	ज्यायसा	ज्यायोभ्यां	ज्यायोभिः

ಉಳಿದವು मनस् ಶಬ್ದದಂತೆ. ಹೀಗೆಯೇ कनीयस् ಚಿಕ್ಕವ प्रेयस् ಪ್ರಿಯ ಇತ್ಯಾದಿ.

रेफान्त पुर्शब्दः ನಗರ

प्र वि –	पूः	पुरौ	पुरः
सं प्र –	हे पूः	पुरौ	पुरः
द्वि वि –	पुरम्	पुरौ	पुरः
तृ वि –	पुरा	पूर्भ्याम्	पूर्भिः

ಉಳಿದುದನ್ನು ಹೀಗೆಯೇ ಊಹಿಸಿಕೊಳ್ಳಬೇಕು.

आकारान्तः जराशब्दः ಮುದಿತನ (ಸ್ತ್ರೀಲಿಂಗ)

प्र वि –	जरा	जरसौ, जरे	जरसः, जराः
द्वि वि –	जरसं, जरो	जरसौ, जरे	जरसः, जराः
तृ वि –	जरसा, जरया	जराभ्यां	जराभिः
च वि –	जरसे, जरायै	जराभ्यां	जराभ्यः
प वि –	जरसः, जरायाः	जराभ्यां	जराभ्यः
ष वि –	जरसः, जरायाः	जरयोः	जराणाम्
स वि –	जरसि, जरायां	जरयोः	जरासु

आ कारान्त स्त्रीलिङ्ग – आम्वा, अक्का शब्द – ತಾಯಿ. ಈ ಶಬ್ದವು ಸ್ತ್ರೀಲಿಂಗ वालिका ಶಬ್ದದಂತೆ ಆದರೆ ಸಂ. ಪ್ರ ವಿಭಕ್ತಿಯಲ್ಲಿ ಮಾತ್ರ हे अम्व (ಏಕವಚನ ಮಾತ್ರ) ಎಂದಾಗುವುದು.

रेफान्तः स्त्रीलिङ्गः गिर् शब्दः

गीः ಮಾತು	गिरौ	गिरः
हे गीः ಎಲೈ ಮಾತೆ,	हे गिरौ	हे गिरः
गिरं ಮಾತನ್ನು	गिरौ	गिरः
गिरा ಮಾತಿನಿಂದ	गीर्भ्यां	गीर्भिः

ಉಳಿದುದನ್ನು ಹೀಗೆಯೇ ಊಹಿಸಿಕೊಳ್ಳಬೇಕು.

श कारान्तः नपुंसकलिङ्गः तादृश् शब्दः ಅಂತಹ

प्र वि –	तादृक्	तादृशी	तादृंशि
द्वि वि –	तादृक्	तादृशी	तादृंशि

ತೃತೀಯ ವಿಭಕ್ತಿಯ ಅನಂತರ दिश् ಶಬ್ದದಂತೆ.
ಹೀಗೆಯೇ यादृश् शब्दः

न कारान्तः नपुंसकलिङ्गः दण्डिन् शब्दः

प्र वि –	दण्डि	दण्डिनी	दण्डीनि
द्वि वि –	दण्डि	दण्डिनी	दण्डीनि

ಉಳಿದವು गुणिन् ಶಬ್ದದಂತೆ

ऋ कारान्तः नृ शब्दः – ಮನುಷ್ಯ

ना	नरौ	नरः
नरं	नरौ	नॄन्
न्रा	नृभ्याम्	नृभिः
न्रे	नृभ्याम्	नृभ्यः
नुः	नृभ्याम्	नृभ्यः
नुः	न्रोः	नॄणां
नरि	न्रोः	नृषु

उदाहरण वाक्यानि

अस्मिन् समारम्भे ज्यायांसः बान्धवाः अग्रे उपविष्टाः। ಈ ಸಮಾರಂಭದಲ್ಲಿ ಹಿರಿಯ ಬಂಧುಗಳು ಮುಂದೆ ಕುಳಿತುಕೊಂಡಿದ್ದಾರೆ. कनीयांसः अधः उपविष्टाः ಸಣ್ಣವರು ಕೆಳಗೆ ಕುಳಿತುಕೊಂಡರು. कैकेय्याः गिरः श्रुत्वा दशरथः वहुदुःखितः ಕೈಕೇಯಿಯ ಮಾತುಗಳನ್ನು ಕೇಳಿ ದಶರಥನು ತುಂಬಾ ದುಃಖಿಸಿದನು. मम अपहास्यगिरा अनुजः कृद्धः अभवत् ನನ್ನ ಅಪಹಾಸ್ಯಕರವಾದ ಮಾತಿನಿಂದ ತಮ್ಮನು ತುಂಬಾ ಸಿಟ್ಟುಗೊಂಡನು. दुःशासनस्य गीर्भिः भीमसेनः अक्रुध्यत्। ದುಃಶಾಸನನ ಮಾತುಗಳಿಂದ ಭೀಮನು ಸಿಟ್ಟುಗೊಂಡನು. यादृंशि बीजानि तादृंशि फलानि। ಎಂತಹ ಬೀಜಗಳೋ ಅಂತಹ ಫಲಗಳು. दिलीपस्य जरसा विना वृद्धत्वमासीत् – ದಿಲೀಪನಿಗೆ ದೇಹದ ಮುದಿತನವಿಲ್ಲದೆ ಜ್ಞಾನದಲ್ಲಿ ವೃದ್ಧನಾಗಿದ್ದ. जरसि सर्वे कष्टमनुभवन्ति। ಮುದಿತನದಲ್ಲಿ ಎಲ್ಲರೂ ಕಷ್ಟವನ್ನು ಅನುಭವಿಸುತ್ತಾರೆ. नृणाम् आचारो परमो धर्मः – ಮನುಷ್ಯರಿಗೆ ಸದಾಚಾರವೇ ದೊಡ್ಡಧರ್ಮವಾಗಿದೆ. अम्ब, मम दोषान् क्षमस्व – ತಾಯಿ, ನನ್ನ [illegible] गुरोः गिरं न तिरस्करोतु – ಗುರುವಿನ ಮಾತನ್ನು ತಿರಸ್ಕರಿಸಬೇಡ.

Sri Vidyabharathi Book Centre, Sringeri

CC-O. In Public Domain. Digitized by eGangotri

सर्वनाम शब्दाः

दकारान्तः पुल्लिङ्ग तद् शब्दः ಅವನು

प्र वि –	सः	तौ	ते
	ಅವನು	ಅವರಿಬ್ಬರೂ	ಅವರು
द्वि वि –	तं	तौ	तान्
	ಅವನನ್ನು		ಅವರನ್ನು
तृ वि –	तेन	ताभ्यां	तैः
	ಅವನಿಂದ		ಅವರಿಂದ
च वि –	तस्मै	ताभ्यां	तेभ्यः
	ಅವನಿಗೆ		ಅವರಿಗೆ
प वि –	तस्मात्	ताभ्यां	तेभ्यः
	ಅವನ ದೆಸೆಯಿಂದ		
ष वि –	तस्य	तयोः	तेषां
	ಅವನ		ಅವರ
स वि –	तस्मिन्	तयोः	तेषु
	ಅವನಲ್ಲಿ		ಅವರಲ್ಲಿ

दकारान्तः पुल्लिङ्ग एतद् शब्दः ಇವನು

एषः	एतौ	एते
ಇವನು	ಇವರಿಬ್ಬರು	ಇವರು
एतम्	एतौ	एतान्
ಇವನನ್ನು		ಇವರನ್ನು
एतेन	एताभ्यां	एतैः
ಇವನಿಂದ		ಇವರಿಂದ
एतस्मै	एताभ्यां	एतेभ्यः
ಇವನಿಗೆ		ಇವರಿಗೆ
एतस्मात्	एताभ्यां	एतेभ्यः
ಇವನ ದೆಸೆಯಿಂದ		
एतस्य	एतयोः	एतेषाम्
ಇವನ		ಇವರ
एतस्मिन्	एतयोः	एतेषु
ಇವನಲ್ಲಿ		ಇವರಲ್ಲಿ

तद् शब्दः स्त्री लिङ्गः ಅವಳು

प्र वि –	सा	ते	ताः
	ಅವಳು	ಅವರಿಬ್ಬರು	ಅವರು
द्वि वि –	तां	ते	ताः
	ಅವಳನ್ನು		
तृ वि –	तया	ताभ्यां	ताभिः
	ಅವಳಿಂದ		
च वि –	तस्यै	ताभ्यां	ताभ्यः
	ಅವಳಿಗೆ		
प वि –	तस्याः	ताभ्यां	ताभ्यः
	ಅವಳ ದೆಸೆಯಿಂದ		
ष वि –	तस्याः	तयोः	तासाम्
	ಅವಳ		
स वि –	तस्यां	तयोः	तासु
	ಅವಳಲ್ಲಿ		

एतद् शब्दः – स्त्री लिङ्गः ಇವಳು

एषा	एते	एताः
ಇವಳು	ಇವರಿಬ್ಬರು	ಇವರು
एताम्	एते	एताः
ಇವಳನ್ನು		
एतया	एताभ्यां	एताभिः
ಇವಳಿಂದ		
एतस्यै	एताभ्यां	एताभ्यः
ಇವಳಿಗೆ		
एतस्याः	एताभ्यां	एताभ्यः
ಇವಳ ದೆಸೆಯಿಂದ		
एतस्याः	एतायोः	एतासां
ಇವಳ		
एतस्यां	एतयोः	एतासु
ಇವಳಲ್ಲಿ		

तद् शब्दः नपुंसक लिङ्गः ಅದು

प्र वि –	तत्	ते	तानि
	ಅದು	ಅವೆರಡು	ಅವು
द्वि वि –	तत्	ते	तानि
	ಅದನ್ನು		ಅವನ್ನು

ಉಳಿದವು ಪುಲ್ಲಿಂಗದಂತೆ

एतद् शब्दः नपुंसक लिङ्गः ಇದು

एतत्	एते	एताति
ಇದು	ಇವೆರಡು	ಇವು
एतत्	एते	एतानि
ಇದನ್ನು		ಇವನ್ನು

ಉಳಿದವು ಪುಲ್ಲಿಂಗದಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

मकारान्तः पुल्लिङ्गः किम् शब्दः ಯಾರು?

प्र वि –	कः ಯಾರು	कौ	के
द्वि वि –	कम् ಯಾರನ್ನು	कौ	कान् ಯಾರನ್ನು
तृ वि –	केन ಯಾರಿಂದ	काभ्यां	कैः
च वि –	कस्मै ಯಾರಿಗೆ	काभ्यां	केभ्यः
प वि –	कस्मात् ಯಾರಿಂದ	काभ्यां	केभ्यः
ष वि –	कस्य ಯಾರ	कयोः	केषाम्
स वि –	कस्मिन् ಯಾರಲ್ಲಿ	कयोः	केषु

दकारान्तः पुल्लिङ्ग यद् शब्दः ಯಾವನು?

यः ಯಾವನು	यौ	ये
यम् ಯಾವನನ್ನು	यौ	यान्
येन ಯಾವನಿಂದ	याभ्यां	यैः
यस्मै ಯಾವನಿಗೆ	याभ्यां	येभ्यः
यस्मात् ಯಾವನ ದೆಸೆಯಿಂದ	याभ्यां	येभ्यः
यस्य ಯಾವನ	ययोः	येषां
यस्मिन् ಯಾವನಲ್ಲಿ	ययोः	येषु

यः ಯಾವನೋ – सः ಅವನು ಈ ಅರ್ಥದಲ್ಲಿ यद् ಶಬ್ದ

किम् शब्दः स्त्रीलिङ्गे – ಯಾವಳು ?

प्र वि –	का ಯಾವಳು	के	काः ಯಾರು
द्वि वि –	कां ಯಾವಳನ್ನು	के	काः
तृ वि –	कया ಯಾವಳಿಂದ	काभ्यां	काभिः ಯಾರಿಂದ
च वि –	कस्यै ಯಾವಳಿಗೆ	काभ्यां	काभ्यः
प वि –	कस्याः ಯಾವಳ ದೆಸೆಯಿಂದ	काभ्यां	काभ्यः
ष वि –	कस्याः ಯಾವಳ	कयोः	कासां
स वि –	कस्यां ಯಾವಳಲ್ಲಿ	कयोः	कासु

स्त्रीलिङ्गे

या ಯಾವಳು	ये	याः
यां ಯಾವಳನ್ನು	ये	याः
यया ಯಾವಳಿಂದ	याभ्यां	याभिः
यस्यै ಯಾವಳಿಗೆ	याभ्यां	याभ्यः
यस्याः ಯಾವಳ ದೆಸೆಯಿಂದ	याभ्यां	याभ्यः
यस्याः ಯಾವಳ	ययोः	यासां
यस्यां ಯಾವಳಲ್ಲಿ	ययोः	यासु

किम् शब्दः नपुंसक लिङ्गे

प्र वि –	किम् ಏನು	के	कानि ಯಾವುವು
द्वि वि –	किं ಏನನ್ನು	के	कानि

ಉಳಿದವು ಪುಲ್ಲಿಂಗ ರೂಪದಂತೆ

नपुंसक लिङ्गे

यद् ಯಾವುದು	ये	यानि
यद् ಯಾವುದನ್ನು	ये	यानि ಇವನ್ನು

ಉಳಿದವು ಪುಲ್ಲಿಂಗದಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

सः तम् आह्वयति – ಅವನು ಅವನನ್ನು ಕರೆಯುತ್ತಾನೆ. तौ लवकुशौ तत् रामायणं काव्यम् गायतः – ಆ ಲವಕುಶರು ಆ ರಾಮಾಯಣ ಕಾವ್ಯವನ್ನು ಹಾಡುತ್ತಿದ್ದಾರೆ. ते तानि पुस्तकानि पठन्ति। – ಅವರು ಆ ಪುಸ್ತಕಗಳನ್ನು ಓದುತ್ತಾರೆ. सा तान् युवकान् अपश्यत्। – ಅವಳು ಆ ಯುವಕರನ್ನು ನೋಡಿದಳು. ताः बालिकाः तेन सह अगच्छन् – ಆ ಹುಡುಗಿಯರು ಅವನೊಂದಿಗೆ ಹೋದರು. तैः पुरषैः ताभिः च एषः समारम्भः व्यवस्थापितः – ಆ ಗಂಡಸರಿಂದ ಮತ್ತು ಆ ಹೆಂಗಸರಿಂದ ಈ ಸಮಾರಂಭವು ವ್ಯವಸ್ಥಾಪಿಸಲ್ಪಟ್ಟಿತು. एतानि पुस्तकानि तस्मै अर्पयतु। – ಈ ಪುಸ್ತಕಗಳನ್ನು ಅವನಿಗೆ ಅರ್ಪಿಸು. एतान् ग्रन्थान् तेभ्यः वितरन्तु – ಆ ಗ್ರಂಥಗಳನ್ನು ಅವರಿಗೆ ವಿತರಿಸಿರಿ. तस्मात् वृक्षात् पर्णानि पतिष्यन्ति। ಆ ಮರದಿಂದ ಎಲೆಗಳು ಬೀಳುತ್ತವೆ. एताभ्यः शाखाभ्यः कपयः पतिष्यन्ति। ಈ ಗೆಲ್ಲುಗಳಿಂದ ಕಪಿಗಳು ಬೀಳುತ್ತವೆ. तस्मिन् धनं नास्ति – ಅವನಲ್ಲಿ ಹಣವು ಇಲ್ಲ. तस्याम् अतीव प्रीतिः अस्ति – ಅವಳಲ್ಲಿ ತುಂಬಾ ಪ್ರೀತಿ ಇದೆ. तासु शालासु पर्याप्ताः शिक्षकाः न सन्ति – ಆ ಶಾಲೆಗಳಲ್ಲಿ ಬೇಕಾದಷ್ಟು ಶಿಕ್ಷಕರು ಇಲ್ಲ. एतेषां मनसि किमस्ति? – ಇವರ ಮನಸ್ಸಿನಲ್ಲಿ ಏನಿದೆ. तेषु आत्मशक्तिः वर्तते ಅವರಲ್ಲಿ ಆತ್ಮ ಶಕ್ತಿಯು ಇದೆ. सः तस्यै कुप्यति – ಅವನು ಅವಳ ಮೇಲೆ ಕೋಪಗೊಳ್ಳುತ್ತಾನೆ.

सः कः? ಅವನು ಯಾರು? तौ कौ? ಅವರಿಬ್ಬರು ಯಾರು? ते के? ಅವರು ಯಾರು? सा कं पश्यति? ಅವಳು ಯಾವನನ್ನು ನೋಡುತ್ತಾಳೆ? ते कौ पश्यतः? ಅವರಿಬ್ಬರು (ಸ್ತ್ರೀ ಲಿಂಗ) ಯಾರಿಬ್ಬರನ್ನು ನೋಡುತ್ತಾರೆ? ताः कान् पश्यन्ति? ಅವರು ಹೆಂಗಸರು ಯಾರನ್ನು ನೋಡುತ್ತಾರೆ? सः केन क्रीडति? ಅವನು ಯಾವುದರಿಂದ ಆಡುತ್ತಾನೆ? सा कया लिखति? ಅವಳು ಯಾವುದರಿಂದ (ಸ್ತ್ರೀ ಲಿಂಗ) ಬರೆಯುತ್ತಾಳೆ? जनाः काभ्यां पश्यन्ति? ಜನರು ಯಾವುದರಿಂದ ನೋಡುತ್ತಾರೆ? तत् कार्यं केन कृतम्? ಆ ಕೆಲಸ ಯಾರಿಂದ ಮಾಡಲ್ಪಟ್ಟಿತು. कस्मै त्रीणि नेत्राणि? ಯಾರಿಗೆ ಮೂರು ಕಣ್ಣುಗಳು? दानं केभ्यः न देयम्? ದಾನವು ಯಾರಿಗೆ ಕೊಡಬಾರದು? कस्मात् वृक्षात् पतितम् इदं फलम्? ಯಾವ ಮರದಿಂದ ಬಿದ್ದಿದೆ ಈ ಹಣ್ಣು? गणेशः कस्य पुत्रः? ಗಣೇಶನು ಯಾರ ಮಗ? केषां देशः भारतदेशः? ಭಾರತ ದೇಶವು ಯಾರ ದೇಶ? विद्यार्थिनः केषु लिखन्ति? – ವಿದ್ಯಾರ್ಥಿಗಳು ಯಾವುದರಲ್ಲಿ ಬರೆಯುತ್ತಾರೆ? आभरणानि काभ्यः रोचन्ते? ಆಭರಣಗಳು ಯಾರಿಗೆ ರುಚಿಸುತ್ತವೆ? श्रीरामः कस्याः पुत्रः? ಶ್ರೀ ರಾಮನು ಯಾವಳ ಮಗ? कासाम् एताः शाटिकाः? ಈ ಸೀರೆಗಳು ಯಾರದ್ದು? (ಸ್ತ್ರೀ ಲಿಂಗ) कस्यां शालायां सः पठति? – ಅವನು ಯಾವ ಶಾಲೆಯಲ್ಲಿ ಓದುತ್ತಿದ್ದಾನೆ? यस्यास्ति वित्तं स नरः कुलीनः? ಯಾವನಿಗೆ ಹಣವಿದೆಯೋ ಆ ಮನುಷ್ಯನು ಒಳ್ಳೇ ಕುಲದವನು. या नृत्यति सा नर्तकी – ಯಾವಳು ನರ್ತಿಸುತ್ತಾಳೋ ಅವಳು ನರ್ತಕೀ. यस्मिन् गृहे वनिताः पूज्यन्ते, तस्मिन् गृहे देवताः निवसन्ति – ಯಾವನ ಮನೆಯಲ್ಲಿ ಹೆಂಗಸರು ಪೂಜಿಸಲ್ಪಡುತ್ತಾರೋ ಆ ಮನೆಯಲ್ಲಿ ದೇವತೆಗಳು ವಾಸಿಸುತ್ತಾರೆ.

Sri Vidyabharathi Book Centre, Sringeri

CC-0. In Public Domain. Digitized by eGangotri

दकारान्तः त्रिलिङ्गसमानः युष्मद् शब्दः - ನೀನು | **दकारान्तः त्रिलिङ्गसमानः अस्मद् शब्दः - ನಾನು**

प्र वि -	त्वं ನೀನು	युवां ನೀವಿಬ್ಬರು	यूयं ನೀವು	अहं ನಾನು	आवां ನಾವಿಬ್ಬರು	वयं ನಾವು
द्वि वि -	त्वां, त्वा ನಿನ್ನನ್ನು	युवां, वां	युष्मान्, वः ನಿಮ್ಮನ್ನು	मां, मा ನನ್ನನ್ನು	आवां, नौ	अस्मान्, नः ನಮ್ಮನ್ನು
तृ वि -	त्वया ನಿನ್ನಿಂದ	युवाभ्यां	युष्माभिः ನಿಮ್ಮಿಂದ	मया ನನ್ನಿಂದ	आवाभ्यां	अस्माभिः ನಮ್ಮಿಂದ
च वि -	तुभ्यं, ते ನಿನಗೆ	युवाभ्यां वां	युष्मभ्यं, वः ನಿಮಗೆ	मह्यं, मे ನನಗೆ	आवाभ्यां, नौ	अस्मभ्यं, नः ನಮಗೆ
प वि -	त्वत् ನಿನ್ನ ದೆಸೆಯಿಂದ	युवाभ्यां	युष्मभ्यं	मत् ನನ್ನ ದೆಸೆಯಿಂದ	आवाभ्यां	अस्मत्
ष वि -	तव, ते ನಿನ್ನ	युवयोः वां	युष्माकं, वः ನಿಮ್ಮ	मम, मे ನನ್ನ	आवयोः, नौ	अस्माकं, नः ನಮ್ಮ
स वि -	त्वयि ನಿನ್ನಲ್ಲಿ	युवयोः	युष्मासु ನಿಮ್ಮಲ್ಲಿ	मयि ನನ್ನಲ್ಲಿ	आवयोः	अस्मासु ನಮ್ಮಲ್ಲಿ

मकारान्तः पुल्लिङ्गः इदम् शब्दः - ಇವನು | **स्त्रीलिङ्गः इदम् शब्दः - ಇವಳು**

प्र वि -	अयं ಇವನು	इमौ ಇವರಿಬ್ಬರು	इमे ಇವರು	इयं ಇವಳು	इमे ಇವರಿಬ್ಬರು	इमाः ಇವರು
द्वि वि -	इमं, एनं ಇವನನ್ನು	इमौ, एनौ	इमान्, एनान् ಇವರನ್ನು	इमां, एनां ಇವಳನ್ನು	इमे, एने	इमाः, एनाः ಇವರನ್ನು
तृ वि -	अनेन, एनेन ಇವನಿಂದ	आभ्यां	एभिः ಇವರಿಂದ	अनया, एनया ಇವಳಿಂದ	आभ्यां	आभिः ಇವರಿಂದ
च वि -	अस्मै ಇವನಿಗೆ	आभ्यां	एभ्यः	अस्यै ಇವಳಿಗೆ	आभ्यां	आभ्यः ಇವರಿಗೆ
प वि -	अस्मात् ಇವನ ದೆಸೆಯಿಂದ	आभ्याम्	एभ्यः	अस्याः ಇವಳ ದೆಸೆಯಿಂದ	आभ्यां	आभ्यः
ष वि -	अस्य ಇವನ	अनयोः	एषाम् ಇವರ	अस्याः ಇವಳ	अनयोः, एनयोः	आसां ಇವರ
स वि -	अस्मिन् ಇವನಲ್ಲಿ	अनयोः	एषु ಇವರಲ್ಲಿ	अस्यां ಇವಳಲ್ಲಿ	अनयोः	आसु ಇವರಲ್ಲಿ

ನಪುಂಸಕ ಲಿಂಗ ರೂಪ

प्र वि - इदं इमे इमानि - ಇದು ಇವೆರಡು, ಇವು, द्वि वि - इदं इमे इमानि - ಇದನ್ನು, ಇವೆರಡನ್ನು ಇವನ್ನು - ಉಳಿದದ್ದು ಪುಲ್ಲಿಂಗ ರೂಪದಂತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

अकारान्तः पुल्लिङ्गः सर्व शब्दः – ಎಲ್ಲ

प्र वि –	सर्वः ಎಲ್ಲ	सर्वौ	सर्वे ಎಲ್ಲರೂ
सं प्र –	हे सर्व	हे सर्वौ	हे सर्वे
द्वि वि –	सर्वं	सर्वौ	सर्वान्
तृ वि –	सर्वेण	सर्वाभ्यां	सर्वैः
च वि –	सर्वेस्मै	सर्वाभ्यां	सर्वेभ्यः
प वि –	सर्वस्मात्	सर्वाभ्यां	सर्वेभ्यः
ष वि –	सर्वस्य	सर्वयोः	सर्वेषां
स वि –	सर्वस्मिन्	सर्वयोः	सर्वेषु

स्त्रीलिङ्गः – सर्व शब्दः

प्र वि –	सर्वा	सर्वे	सर्वाः
सं प्र –	हे सर्वे	सर्वे	सर्वाः
द्वि वि –	सर्वां	सर्वे	सर्वाः
तृ वि –	सर्वया	सर्वाभ्यां	सर्वाभिः
च वि –	सर्वस्यै	सर्वाभ्यां	सर्वाभ्यः
प वि –	सर्वस्याः	सर्वाभ्यां	सर्वाभ्यः
ष वि –	सर्वस्याः	सर्वयोः	सर्वासां
स वि –	सर्वस्यां	सर्वयोः	सर्वासु

ನಪುಂಸಕ ಲಿಂಗ

प्र वि –	सर्वं	सर्वे	सर्वाणि
द्वि वि –	सर्वं	सर्वे	सर्वाणि

ಉಳಿದದ್ದು ಪುಲ್ಲಿಂಗ ರೂಪದಂತೆ

सकारान्तः पुल्लिङ्गः अदस् शब्दः – ಅವನು

प्र वि –	असौ ಅವನು	अमू ಅವರಿಬ್ಬರು	अमी ಅವರು
द्वि वि –	अमुं ಅವನನ್ನು	अमू	अमून्
तृ वि –	अमुना ಅವನಿಂದ	अमूभ्यां	अमीभिः
च वि –	अमुष्मै ಅವನಿಗೆ	अमूभ्यां	अमीभ्यः
प वि –	अमुष्मात् ಅವನ ದೆಸೆಯಿಂದ	अमूभ्यां	अमीभ्यः
ष वि –	अमुष्य ಅವನ	अमुयोः	अमीषाम्
स वि –	अमुष्मिन् ಅವನಲ್ಲಿ	अमुयोः	अमीषु

स्त्री लिङ्गः अदस् शब्दः – ಅವಳು

प्र वि –	असौ ಅವಳು	अमू	अमूः
द्वि वि –	अमूं ಅವಳನ್ನು	अमू	अमूः
तृ वि –	अमुया ಅವಳಿಂದ	अमूभ्यां	अमूभिः
च वि –	अमुष्यै ಅವಳಿಗೆ	अमूभ्यां	अमूभ्यः
प वि –	अमुष्याः ಅವಳಿಂದ	अमूभ्यां	अमूभ्यः
ष वि –	अमुष्याः ಅವಳ	अमुयोः	अमूषां
स वि –	अमुष्यां ಅವಳಲ್ಲಿ	अमुयोः	अमूषु

नपुंसक लिङ्गः अदस् शब्दः – ಅದು

प्र वि –	अदः ಅದು	अमू	अमूनि ಅವು
द्वि वि –	अदः ಅದನ್ನು	अमू	अमूनि ಅವನ್ನು

ಉಳಿದದ್ದು ಪುಲ್ಲಿಂಗ ರೂಪದಂತೆ

ಹೀಗೆಯೇ – विश्व, कतर – कतम ಎಷ್ಟನೆಯವನು, अन्य, अन्यतर, इतर, पूर्व, पर, अवर – दक्षिण, उत्तर, अपर, अधर, स्व, अन्तर, अन्यतर – ಇತ್ಯಾದಿ.

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

सर्वे जनाः सुखिनो भवन्तु ಎಲ್ಲಾ ಜನರು ಸುಖಿಗಳಾಗಲಿ. सर्वः सर्वं न जानाति – ಎಲ್ಲರೂ ಎಲ್ಲವನ್ನೂ ತಿಳಿದಿಲ್ಲ. सर्वैरपि देशः रक्षणीयः – ಎಲ್ಲರಿಂದಲೂ ದೇಶವು ರಕ್ಷಿಸಲ್ಪಡತಕ್ಕದ್ದು. सर्वेभ्यः शुभं भूयात् – ಎಲ್ಲರಿಗೂ ಶುಭವಾಗಲಿ. सर्वेषाम् मतमेव मम मतम् – ಎಲ್ಲರ ಅಭಿಪ್ರಾಯವೇ ನನ್ನ ಅಭಿಪ್ರಾಯ. सर्वेषु ग्रामेष्वपि देवालयः अस्ति – ಎಲ್ಲಾ ಗ್ರಾಮಗಳಲ್ಲೂ ದೇವಾಲಯವು ಇದೆ. सर्वाः प्रजाः (ಸ್ತ್ರೀ. ಲಿಂ.) संस्कृतिं रक्षन्तु – ಎಲ್ಲಾ ಪ್ರಜೆಗಳೂ ಸಂಸ್ಕೃತಿಯನ್ನು ರಕ್ಷಿಸಲಿ. सर्वासु शाखासु अपि पुष्पणि विकसितानि – ಎಲ್ಲಾ ಗೆಲ್ಲುಗಳಲ್ಲೂ ಹೂಗಳು ಅರಳಿವೆ. सर्वाणि कार्याणि समाप्तनि – ಎಲ್ಲಾ ಕಾರ್ಯಗಳು ಮುಗಿದವು. असौ ऋषिः – ಇವನು ಋಷಿ. असौ मम माता – ಇವಳು ನನ್ನ ತಾಯಿ. अमुष्मिन् लोके सर्वे सुखमिच्छन्ति – ಈ ಲೋಕದಲ್ಲಿ ಎಲ್ಲರೂ ಸುಖವನ್ನು ಬಯಸುತ್ತಾರೆ. अमी कृषीवलाः हलेन भूमिं कर्षन्ति – ಈ ರೈತರು ನೇಗಿಲಿನಿಂದ ಭೂಮಿಯನ್ನು ಉಳುತ್ತಾರೆ. अमूः महिलाः वस्त्रणि प्रक्षालयन्ति – ಈ ಹೆಂಗಸರು ಬಟ್ಟೆಗಳನ್ನು ಒಗೆಯುತ್ತಿದ್ದಾರೆ. सर्वे भषकाः शुनकाः सर्वान् अपि दृष्ट्वा भषन्ति – ಎಲ್ಲಾ ಬೊಗಳುವ ನಾಯಿಗಳು ಎಲ್ಲರನ್ನೂ ನೋಡಿ ಬೊಗಳುತ್ತವೆ. सर्वेषु भटेषु अपि शौर्यं न भवति – ಎಲ್ಲಾ ಸೈನಿಕರಲ್ಲೂ ಶೌರ್ಯವು ಇರುವುದಿಲ್ಲ. अस्मिन् फलके इमानि अक्षराणि लिखन्तु – ಈ ಕರಿ ಹಲಗೆಯಲ್ಲಿ ಈ ಅಕ್ಷರಗಳನ್ನು ಬರೆಯಿರಿ. सर्वेभ्यः देशेभ्यः अपि विमानानि आगच्छान्ति – ಎಲ್ಲಾ ದೇಶಗಳಿಂದಲೂ (ಪ. ವಿ.) ವಿಮಾನಗಳು ಬರುತ್ತವೆ. सर्वेभ्यः अपि ऐकैकं किलोपरिमित तण्डुल तोलयतु – ಎಲ್ಲರಿಗೂ ಕೂಡ ಒಂದೊಂದು ಕಿಲೊ ಅಕ್ಕಿಯನ್ನು ತೂಕ ಮಾಡು.

उदाहरण वाक्यानि

सुगन्धं जिघ्रसि – ನೀನು ಪರಿಮಳವನ್ನು ಮೂಸುವಿ. युवां क्षीरं पिबथः – ನೀವಿಬ್ಬರು ಹಾಲನ್ನು ಕುಡಿಯುತ್ತೀರಿ. यूयं सत्यं वदथ – ನೀವು ಸತ್ಯವನ್ನು ಹೇಳುವಿರಿ. अहं पादपम् आरोहामि – ನಾನು ಮರವನ್ನು ಹತ್ತುತ್ತೇನೆ. आवां बीजानि वपावः – ನಾವಿಬ್ಬರು ಬೀಜಗಳನ್ನು ಬಿತ್ತುತ್ತೇವೆ. वयं देवं भजामः – ನಾವು ದೇವರನ್ನು ಭಜಿಸುತ್ತೇವೆ.

सः त्वां मां च गृहं आह्वयति – ಅವನು ನಿನ್ನನ್ನು ಮತ್ತು ನನ್ನನ್ನು ಮನೆಗೆ ಆಹ್ವಾನಿಸುತ್ತಾನೆ. युष्मान् अस्मान् च सः देवः अवति – ನಿಮ್ಮನ್ನು ಮತ್ತು ನಮ್ಮನ್ನು ಆ ದೇವರು ರಕ್ಷಿಸುತ್ತಾನೆ. त्वया मया च सत्यमेव वक्तव्यम् – ನಿನ್ನಿಂದ ಮತ್ತು ನನ್ನಿಂದ ಸತ್ಯವೇ ಹೇಳಲ್ಪಡಬೇಕು. अयं तुभ्यं मह्यं च द्रुह्यति – ಇವನು ನಿನಗೂ ನನಗೂ ದ್ರೋಹ ಬಗೆಯುತ್ತಾನೆ. इमे त्वत् किं प्राप्तवन्तः? ಇವರು ನಿನ್ನಿಂದ ಏನನ್ನು ಪಡೆದರು? बुद्धिः तवापि अस्ति ममापि अस्ति। – ಬುದ್ಧಿಯು ನಿನಗೂ ಇದೆ ನನಗೂ ಇದೆ. त्वयि यथा प्रीतिः तथा मयि अपि अस्ति – ನಿನ್ನ ಮೇಲೆ ಹೇಗೆ ಪ್ರೀತಿ ಇದೆಯೋ ಹಾಗೆ ನನ್ನ ಮೇಲೆಯೂ ಇದೆ. भवन्तः इमान् श्लोकान् जानन्ति वा? ನೀವು ಈ ಶ್ಲೋಕಗಳನ್ನು ತಿಳಿದಿದ್ದೀರೋ अनया बहूपकारः कृतः – ಇವಳಿಂದ ಬಹೂಪಕಾರವು ಮಾಡಲ್ಪಟ್ಟಿದೆ. अस्मिन् सर्वे गुणाः निवसन्ति – ಇವನಲ್ಲಿ ಎಲ್ಲಾ ಗುಣಗಳೂ ನೆಲೆಸಿವೆ. अस्यां नगर्यां उत्तममार्गाः सन्ति। ಈ ನಗರದಲ್ಲಿ ಉತ್ತಮ ಮಾರ್ಗಗಳಿವೆ. इमानि पुस्तकानि मह्यं देहि – ಈ ಪುಸ್ತಕವನ್ನು ನನಗೆ ಕೊಡು.

Sri Vidyabharathi Book Centre, Sringeri

CC-O. In Public Domain. Digitized by eGangotri

संख्या प्रकरणम्

अकारान्तः एक शब्दः – ಮೂರು ಲಿಂಗಗಳಲ್ಲಿ ಏಕವಚನ ಮಾತ್ರ

इकारान्तः द्वि शब्दः – ಮೂರು ಲಿಂಗಗಳಲ್ಲಿ ದ್ವಿವಚನ ಮಾತ್ರ

	पुल्लिङ्गे	स्त्रीलिङ्गे	नपुंसकलिङ्गे	पुल्लिङ्गे	स्त्रीलिङ्गे	नपुंसकलिङ्गे
प्र वि –	एकः	एका	एकम्	द्वौ	द्वे	द्वे
	ಒಂದು, ಒಬ್ಬನು	ಒಬ್ಬಳು	ಒಂದು	ಇಬ್ಬರು, ಎರಡು	ಇಬ್ಬರು	ಎರಡು
द्वि वि –	एकम्	एकाम्	एकम्	द्वौ	द्वे	द्वे
	ಒಂದನ್ನು	ಒಬ್ಬಳನ್ನು	ಒಂದನ್ನು	ಇಬ್ಬರನ್ನು	ಇಬ್ಬರನ್ನು	ಎರಡನ್ನು
तृ वि –	एकेन	एकया	एकेन	द्वाभ्यां	द्वाभ्यां	द्वाभ्यां
	ಒಬ್ಬನಿಂದ	ಒಬ್ಬಳಿಂದ	ಒಂದರಿಂದ	ಇಬ್ಬರಿಂದ		
च वि –	एकस्मै	एकस्यै	एकस्मै	द्वाभ्यां	द्वाभ्यां	द्वाभ्यां
	ಒಬ್ಬನಿಗೆ	ಒಬ್ಬಳಿಗೆ	ಒಂದಕ್ಕೆ	ಇಬ್ಬರಿಗೆ		
प वि –	एकस्मात्	एकस्याः	एकस्मात्	द्वाभ्यां	द्वाभ्यां	द्वाभ्यां
	ಒಬ್ಬನ ದೆಸೆಯಿಂದ		ಒಬ್ಬಳಿಂದಾಗಿ		ಇಬ್ಬರ ದೆಸೆಯಿಂದ	
ष वि –	एकस्य	एकस्याः	एकस्य	द्वयोः	द्वयोः	द्वयोः
	ಒಬ್ಬನ	ಒಬ್ಬಳ	ಒಂದರ	ಇಬ್ಬರ		
स वि –	एकस्मिन्	एकस्यां	एकस्मिन्	द्वयोः	द्वयोः	द्वयोः
	ಒಬ್ಬನಲ್ಲಿ	ಒಬ್ಬಳಲ್ಲಿ	ಒಂದರಲ್ಲಿ	ಇಬ್ಬರಲ್ಲಿ		ಎರಡರಲ್ಲಿ

इकारान्तः त्रि शब्दः – ಮೂರು ಲಿಂಗಗಳಲ್ಲಿ ಬಹುವಚನ ಮಾತ್ರ

रेफान्तः चतुर् शब्दः – ಮೂರು ಲಿಂಗಗಳಲ್ಲಿ ಬಹುವಚನ ಮಾತ್ರ

	पुल्लिङ्गे	स्त्रीलिङ्गे	नपुंसकलिङ्गे	पुल्लिङ्गे	स्त्रीलिङ्गे	नपुंसकलिङ्गे
प्र वि –	त्रयः	तिस्रः	त्रीणि	चत्वारः	चतस्रः	चत्वारि
	ಮೂವರು, ಮೂರು	ಮೂವರು	ಮೂರು	ನಾಲ್ಕು	ನಾಲ್ವರು	ನಾಲ್ಕು
द्वि वि –	त्रीन्	तिस्रः	त्रीणि	चतुरः	चतस्रः	चत्वारि
	ಮೂವರನ್ನು		ಮೂರನ್ನು	ನಾಲ್ವರು		
तृ वि –	त्रिभिः	तिसृभिः	त्रिभिः	चतुर्भ्यः	चतसृभ्यः	चतुर्भ्यः
	ಮೂವರಿಂದ		ಮೂರರಿಂದ	ನಾಲ್ವರಿಗಾಗಿ		
च वि –	त्रिभ्यः	तिसृभ्यः	त्रिभ्यः	चतुर्भ्यः	चतसृभ्यः	चतुर्भ्यः
	ಮೂವರಿಗೆ		ಮೂರಕ್ಕೆ	ನಾಲ್ವರ ದೆಸೆಯಿಂದ		
प वि –	त्रिभ्यः	तिसृभ्यः	त्रिभ्यः	चतुर्णाम्	चतसृणां	चतुर्णाम्
	ಮೂವರ ದೆಸೆಯಿಂದ				ನಾಲ್ವರ	
ष वि –	त्रयाणां	तिसृणां	त्रयाणां	चतुर्षु	चतसृषु	चतुर्षु
	ಮೂವರ			ನಾಲ್ವರಲ್ಲಿ		
स वि –	त्रिषु	त्रिसृषु	त्रिषु			
	ಮೂವರಲ್ಲಿ		ಮೂವರಲ್ಲಿ			

Sri Vidyabharathi Book Centre, Sringeri

CC-O. In Public Domain. Digitized by eGangotri

उदाहरण वाक्यानि

एको देवः - ದೇವನೊಬ್ಬನೇ. एका माता - ತಾಯಿಯೊಬ್ಬಳು. एकं व्रह्म - ಬ್ರಹ್ಮ ಒಂದೇ, ದೇವರೊಬ್ಬನೆ द्वौ ग्रन्थौ स्तः। - ಎರಡು ಗ್ರಂಥಗಳಿವೆ. एकं मित्राय यच्छति। - ಒಂದನ್ನು ಮಿತ್ರನಿಗೆ ಕೊಡುತ್ತಾನೆ. अस्मिन् वृक्षे द्वे शाखे स्तः। एकां छेदं करोति - ಈ ಮರದಲ್ಲಿ ಎರಡು ಗೆಲ್ಲುಗಳಿವೆ. (ಸ್ತ್ರೀ. ಲಿಂಗ) ಒಂದನ್ನು ಕಡಿಯುತ್ತಾನೆ. एकेन हस्तेन पात्रं गृह्णाति, अपरेण हस्तेन धेनुं क्षीरं दोग्धि - ಒಂದು ಕೈಯಿಂದ ಪಾತ್ರವನ್ನು ಹಿಡಿಯುತ್ತಾನೆ, ಮತ್ತೊಂದು ಕೈಯಿಂದ ದನವನ್ನು ಹಾಲನ್ನು ಕರೆಯುತ್ತಾನೆ. एकस्मिन् वृक्षे एव फलानि सन्ति - ಒಂದು ಮರದಲ್ಲಿ ಮಾತ್ರ ಹಣ್ಣುಗಳಿವೆ. द्वौ बालकौ खेलतः - ಇಬ್ಬರು ಬಾಲಕರು ಆಡುತ್ತಿದ್ದಾರೆ. द्वौ पादौ अपि सम्यक् प्रक्षालय। - ಎರಡು ಕಾಲುಗಳನ್ನೂ ಚೆನ್ನಾಗಿ ತೊಳೆದುಕೋ. द्वयोः शालयोः मध्ये मङ्गल-क्रीडाङ्गणं भवति - ಎರಡು ಶಾಲೆಗಳ ಮಧ್ಯದಲ್ಲಿ ಮಂಗಳ ಕ್ರೀಡಾಂಗಣವು ಇದೆ. चत्वारः वेदाः सन्ति - ನಾಲ್ಕು ವೇದಗಳಿವೆ. दशरथस्य तिस्त्रः राज्ञ्यः आसन् - ದಶರಥನಿಗೆ ಮೂವರು ರಾಣಿಯರು ಇದ್ದರು. भारते त्रयः मताचार्याः प्रसिद्धाः - ಭಾರತದಲ್ಲಿ ಮೂವರು ಮತಾಚಾರ್ಯರು ಪ್ರಸಿದ್ಧರು. तिसृषु राज्ञीषु कौसल्या ज्येष्ठा - ಮೂವರು ರಾಣಿಯರಲ್ಲಿ ಕೌಸಲ್ಯೆಯು ದೊಡ್ಡವಳು. मगधराज्यं विशालम् आसीत् - ಪ್ರಾಚೀನ ಭಾರತದ ನಾಲ್ಕು ರಾಜ್ಯಗಳಲ್ಲಿ ಮಗಧ ರಾಜ್ಯವು ವಿಶಾಲವಾಗಿತ್ತು, चतुर्णां वेदानां अध्ययनं एकस्मिन् जन्मनि असाध्यस् - ನಾಲ್ಕು ವೇದಗಳ ಅಧ್ಯಯನವು ಒಂದು ಜನ್ಮದಲ್ಲಿ ಅಸಾಧ್ಯವು. क्रीडाङ्गणे वालकद्वयं, बालिका त्रयं च क्रीडति - ಕ್ರೀಡಾಂಗಣದಲ್ಲಿ ಇಬ್ಬರು ಬಾಲಕರು ಮತ್ತು ಇಬ್ಬರು ಹುಡುಗಿಯರು ಆಡುತ್ತಿದ್ದಾರೆ.

द्वौ पक्षौ - शुक्लपक्षः कृष्णपक्षः च - ಎರಡು ಪಕ್ಷಗಳು - ಶುಕ್ಲ ಪಕ್ಷ ಮತ್ತು ಕೃಷ್ಣ ಪಕ್ಷ. द्वे अयने - दक्षिणायनं उत्तरायणं च - ಎರಡು ಆಯನಗಳು ದಕ್ಷಿಣಾಯನ ಮತ್ತು ಉತ್ತರಾಯಣ त्रीणि वचनानि - ಮೂರು ವಚನಗಳು. चत्वारि खाद्यानि - भक्ष्यं, भोज्यम्, लेह्यम् चोष्यं च - ನಾಲ್ಕು ತಿನ್ನುವ ಆಹಾರಗಳು ತಿನ್ನುವಂತದ್ದು, ಉಣ್ಣುವಂತದ್ದು, ನೆಕ್ಕುವಂತದ್ದು ಮತ್ತು ಹೀರುವಂತದ್ದು. यौवनं धनसम्पत्तिः प्रभुत्वम् अविवेकता एकैकमपि अनर्थाय किम् यत्र चतुष्टयम् - ಯೌವನ, ಧನಸಂಪತ್ತು, ಅಧಿಕಾರ, ಅವಿವೇಕತನ ಇವು ಒಂದೊಂದು ಅನರ್ಥಕ್ಕೆ ಕಾರಣವಾಗಬಹುದು. ಇನ್ನು ಇವು ನಾಲ್ಕೂ ಇದ್ದರೆ ಹೇಳುವುದೇನು? दानं भोगो नाशः तिस्त्रः गतयः वित्तस्य = ದಾನ - ಅನುಭವಿಸುವಿಕೆ ಮತ್ತು ನಾಶ ಇವು ಹಣದ ಮೂರು ಅವಸ್ಥೆಗಳು. दशरथस्य चत्वारः पुत्राः। ದಶರಥನಿಗೆ ನಾಲ್ವರು ಮಕ್ಕಳು. तेषु रामः प्रथमः सूनुः - ಅವರಲ್ಲಿ ರಾಮನು ಮೊದಲ ಮಗನು. चतुर्षु लक्ष्मणः अन्यतमः - ನಾಲ್ವರಲ್ಲಿ ಲಕ್ಷ್ಮಣನು ಒಬ್ಬನು. पञ्चसु पाण्डवेषु सहदेवः अन्तिमः। क्रीडाङ्गणे त्रिंशत् बालकाः क्रीडन्ति। तेषु दशमः बालकः कन्दुकं क्षिप्तवान् - ಕ್ರೀಡಾಂಗಣದಲ್ಲಿ ಮೂವತ್ತು ಬಾಲಕರು ಆಡುತ್ತಿದ್ದಾರೆ. ಅವರಲ್ಲಿ ಹತ್ತನೇ ಹುಡುಗನು ಚೆಂಡನ್ನು ಎಸೆದನು. उत्पीटिकायां चत्वारि पुस्तकानि तिस्त्रः लेखन्यः च सन्ति - ಮೇಜಿನಲ್ಲಿ ನಾಲ್ಕು ಪುಸ್ತಕಗಳು ಮತ್ತು ಮೂರು ಲೇಖನಿಗಳು ಇವೆ. भित्तौ तिस्त्रः घाटिकाः सन्ति - ಗೋಡೆಯಲ್ಲಿ ಮೂರು ಗಡಿಯಾರಗಳು ಇವೆ.

CC-O. In Public Domain. Digitized by eGangotri

पञ्च ಅನಂತರ अष्टादश ದ ವರೆಗೆ ಮೂರು ಲಿಂಗಗಳಲ್ಲೂ ಒಂದೇ

ರೂಪ ಮತ್ತು ನಿತ್ಯ ಬಹುವಚನ

		पञ्च ಐವರು, ಐದು	षट् ಆರು	सप्त ಏಳು
प वि	–	पञ्च ಐವರು	षट् ಆರು	सप्त ಏಳು
द्वि वि	–	पञ्च ಐವರನ್ನು	षट् ಆರು ಮಂದಿಯನ್ನು	सप्त ಏಳನ್ನು
तृ वि	–	पञ्चभिः ಐವರಿಂದ	षड्भिः	सप्तभिः ಏಳರಿಂದ
च वि	–	पञ्चभ्यः ಐವರಿಗೆ	षड्भ्यः	सप्तभ्यः
प वि	–	पञ्चभ्यः ಐವರ ದೆಸೆಯಿಂದ	षड्भ्यः	सप्तभ्यः
ष वि	–	पञ्चानां ಐವರ	षण्णाम्	सप्तानां
स वि	–	पञ्चसु ಐವರಲ್ಲಿ	षट्सु	सप्तसु

ಉಳಿದ नवदश ದ ವರೆಗೆ ಹೀಗೆಯೇ ಊಹಿಸಬೇಕು. विंशति – ಇಪ್ಪತ್ತು, त्रिंशत् – ಮೂವತ್ತು, चत्वारिंशत् – ನಲ್ವತ್ತು, पञ्चाशत् – ಐವತ್ತು, षष्टि – ಅರುವತ್ತು, सप्ततिः – ಎಪ್ಪತ್ತು, अशीतिः – ಎಂಭತ್ತು, नवतिः – ತೊಂಭತ್ತು, कोटि ಇವು ಸ್ತ್ರೀಲಿಂಗ ಶಬ್ದಗಳು. इ ಕಾರಾಂತ ಸಂಖ್ಯಾ ಶಬ್ದಗಳು मति ಶಬ್ದದಂತೆಯೂ, त ಕಾರಾಂತ ಶಬ್ದಗಳು मरुत् ಶಬ್ದದಂತೆಯೂ ರೂಪಗಳನ್ನು ಹೊಂದುತ್ತವೆ.

शतं ನೂರು, सहस्रं, अयुतं – ಹತ್ತುಸಾವಿರ, लक्ष्यं, प्रयुतं – ಹತ್ತುಲಕ್ಷ – ಇವು ನಪುಂಸಕ ಲಿಂಗ ಶಬ್ದಗಳು.

संख्यागणना क्रमः

संख्या			क्रमवाचकः	
१	एकः	ಒಂದು	प्रथमः	ಒಂದನೆಯ
२	द्वौ	ಎರಡು	द्वितीयः	ಎರಡನೆಯ
३	त्रयः	ಮೂರು	तृतीयः	ಮೂರನೆಯ
४	चत्वारः	ನಾಲ್ಕು	चतुर्थः	ನಾಲ್ಕನೆಯ
५	पञ्च	ಐದು	पञ्चमः	ಐದನೆಯ
६	षट्	ಆರು	षष्ठः	ಆರನೆಯ
७	सप्त	ಏಳು	सप्तमः	ಏಳನೆಯ
८	अष्ट	ಎಂಟು	अष्टमः	ಎಂಟನೆಯ
९	नव	ಒಂಭತ್ತು	नवमः	ಒಂಭತ್ತನೆಯ
१०	दश	ಹತ್ತು	दशमः	ಹತ್ತನೆಯ
११	एकादश		एकादशः	
१२	द्वादश		द्वादशः	
१३	त्रयोदश		त्रयोदशः	
१४	चतुर्दश		चतुर्दशः	
१५	पञ्चदश		पञ्चदशः	
१६	षोडश		पोडशः	

१७	सप्तदश	सप्तदशः
१८	अष्टादश	अष्टादशः
१९	नवदश	नवदशः
	एकोनविंशति	
२०	विंशति	विंशः, विंशतितमः
२१	एकविंशति	एकविंशः एकविंशतितमः
२२	द्वाविंशति	द्वाविंशः द्वाविंशतितमः
२३	त्रयोविंशति	त्रयोविंशः त्रयोविंशतितमः
२४	चतुर्विंशति	चतुर्विंशः चतुःविंशतितमः
२५	पञ्चविंशति	पञ्चविंशः पञ्चविंशतितमः
२६	षड्विंशति	षड्विंशः षड्विंशतितमः
२७	सप्तविंशति	सप्तविंशः सप्तविंशतितमः
२८	अष्टाविंशति	अष्टाविंशः अष्टाविंशतितमः
२९	नवविंशति	नवविंशः नवविंशतितमः
	एकोनत्रिंशत्	
३०	त्रिंशत्	त्रिंशः त्रिविंशतितमः
३१	एकत्रिंशत्	एकत्रिंशः एकविंशतितमः

वि सू – विंशति ಯ ಅನಂತರ ಅದಕ್ಕೆ तम ಸೇರಿದರೂ ಸಂಖ್ಯಾ ವಾಚಕವಾಗುತ್ತದೆ. उदा – विंशतितमः – ಇಪ್ಪತ್ತನೆಯ ಕ್ರಮವಾಚಕ ಸಂಖ್ಯೆಯ ಸ್ತ್ರೀಲಿಂಗರೂಪ ಬೇಕಾಗಿದ್ದರೆ ಮೊದಲ ಮೂರಕ್ಕೆ आ ಸೇರಿಸಬೇಕು. ಅನಂತರದ ಕ್ರಮವಾಚಕಗಳಿಗೆ ई ಪ್ರತ್ಯಯವನ್ನು ಸೇರಿಸಬೇಕು. ಉದಾ. प्रथमा, द्वितीया, तृतीया, चतुर्थी, पञ्चमी, षष्ठी ಇತ್ಯಾದಿ.

Sri Vidyabharathi Book Centre, Sringeri

CC-0. In Public Domain. Digitized by eGangotri

३२	द्वात्रिंशत्	द्वात्रिंशः
३३	त्रयस्त्रिंशत्	त्रयस्त्रिंशः
३४	चतुस्त्रिंशत्	चतुस्त्रिंशः
३५	पञ्चत्रिंशत्	पञ्चत्रिंशः
३६	षट्त्रिंशत्	षट्त्रिंशः
३७	सप्तत्रिंशत्	सप्तत्रिंशः
३८	अष्टत्रिंशत्	अष्टत्रिंशः
३९	नवत्रिंशत्	नवत्रिंशः
४०	चत्वारिंशत्	चत्वारिंशः
४१	एकचत्वारिंशत्	एकचत्वारिंशः
४२	द्वाचत्वारिंशत् द्विचत्वारिंशत्	द्वाचत्वारिंशः
४३	त्रिचत्वारिंशत्	त्रिचत्वारिंशः
४४	चतुश्चत्वारिंशत्	चतुश्चत्वारिंशः
४५	पञ्चचत्वारिंशत्	पञ्चचत्वारिंशः
४६	षट्चत्वारिंशत्	षट्चत्वारिंशः
४७	सप्तचत्वारिंशत्	सप्तचत्वारिंशः
४८	अष्टचत्वारिंशत्	अष्टचत्वारिंशः
४९	नवचत्वारिंशत्	नवचत्वारिंशः
५०	पञ्चाशत्	पञ्चाशः
५१	एकपञ्चाशत्	एकपञ्चाशः
५२	द्वापञ्चाशत् द्विपञ्चाशत्	द्विपञ्चाशः
५३	त्रिपञ्चाशत्	त्रिपञ्चाशः
५४	चतुःपञ्चाशत्	चतुःपञ्चाशः
५५	पञ्चपञ्चाशत्	
५६	षट् पञ्चाशत्	षट् पञ्चाशः
५७	सप्त पञ्चाशत्	सप्त पञ्चांशः
५८	अष्ट पञ्चाशत्	अष्ट पञ्चाशः
५९	नव पञ्चाशत्	नव पञ्चाशः
६०	षष्टिः	षष्टः, षष्टि
६१	एकषष्टिः	एकषष्टः, एकषष्टि
६२	द्वाषष्टिः द्विषष्टिः	द्विषष्टः, द्विषष्टि
६३	त्रिषष्टिः	त्रिषष्टः
६४	चतुष्षष्टिः	चतुष्षष्टः
६५	पञ्चषष्टिः	पञ्चषष्टः
६६	षट्षष्टिः	षट्षष्टः
६७	सप्तषष्टिः	सप्तषष्टः
६८	अष्टषष्टिः	अष्टषष्टः
६९	नवषष्टिः	नवषष्टः
७०	सप्ततिः	सप्ततितमः
७१	एकसप्ततिः	एकसप्ततः
७२	द्वासप्ततिः, द्विसप्तति	द्विसप्ततः
७३	त्रिसप्ततिः	त्रिसप्ततः
७४	चतुस्सप्ततिः	चतुस्सप्ततः
७५	पञ्चसप्ततिः	पञ्चसप्ततः
७६	षट्सप्ततिः	षट्सप्ततः
७७	सप्तसप्ततिः	सप्तसप्ततः
७८	अष्टसप्ततिः	अष्टसप्ततः
७९	नवसप्ततिः	नवसप्ततः
८०	अशीतिः	अशीतः
८१	एकाशीतिः	एकाशीतः
८२	द्व्यशीतिः	द्व्यशीतः
८३	त्र्यशीतिः	त्र्यशीतः
८४	चतुरशीतिः	चतुरशीतः
८५	पंञ्चाशीतिः	पंञ्चाशीतः
८६	षडशीतिः	षडशीतः
८७	सप्ताशीतिः	सप्ताशीतः
८८	अष्टाशीतिः	अष्टाशीतः
८९	नवाशीतिः	नवाशीतः
९०	नवतिः	नवतः
९१	एकनवतिः	एकनवतः
९२	द्विनवतिः	द्विनवतः
९३	त्रिनवतिः	त्रिनवतः
९४	चतुर्नवतिः	चतुर्नवतः
९५	पञ्चनवतिः	पञ्चनवतः
९६	षण्णवतिः	षण्णवतः
९७	सप्तनवतिः	सप्तनवतः
९८	अष्टनवतिः	अष्टनवतः
९९	नवनवतिः	नवनवतः
१००	शतम्	शततमः
२००	द्विशतम्	द्विशततमः
३००	त्रिशतम्	त्रिशततमः
४००	चतुःशतम्	चतुःशततमः
५००	पञ्चशतम्	पञ्चशततमः
६००	षट्शतम्	षट्शततमः
७००	सप्तशतम्	सप्तशततमः
८००	अष्टशतम्	अष्टशततमः
९००	नवशतम्	नवशततमः
१०००	दशशतम्, सहस्रम्	सहस्रतमः
१०,०००	दशसहस्रम्, अयुतम्	अयुततमः
१,००,०००	लक्षम्	लक्षतमः
१०,००,०००	दशलक्षम्, प्रयुतम्	
१००,००,०००	कोटि (ಪು.೯. ೮೦)	

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆಯೇ ಮುಂದೆ ಹತ್ತುಪಟ್ಟು ಹೆಚ್ಚುತ್ತಾ ಅಧಿಕವಾದ ಹಾಗೆ – अर्बुदम् – ದಶಕೋಟಿ, अब्जम् – ನೂರು ಕೋಟಿ – 100,00,00,000, खर्वम् – ಒಂದು ಸಾವಿರ ಕೋಟಿ, निखर्वम् – ಹತ್ತು ಸಾವಿರ ಕೋಟಿ, – महापद्मः ಹತ್ತು ಲಕ್ಷ ಕೋಟಿ, जलधि, ನೂರು ಮಿಲಿಯ, अन्त्यम्, परार्धम्।

100 ರಿಂದ ಮುಂದಿನ ಸಂಖ್ಯೆಗಳನ್ನು अधिक ಅಥವಾ उत्तर ಶಬ್ದಗಳ ಉಪಯೋಗದಿಂದ ಸೂಚಿಸಬೇಕು. ಉದಾ 101 एकोत्तरशतम्/एकाधिकं/शतम् एकाधिकशतम् 112 – द्वादशाधिक शतम्। 754 चतुः पञ्चाशदुत्तरं सप्तशतम्। 1050 – पञ्चाशदधिकसहस्त्रम्। 199638 – अष्टत्रिंशधिक षट् शताधिक नवनवति सहस्राधिक लक्षम्।

विंशति ಯಿಂದ नवनवति ವರೆಗಿನ ಮತ್ತು कोटि ಈ ಸಂಖ್ಯಾ ವಾಚಕ ಶಬ್ದಗಳು ಸ್ತ್ರೀಲಿಂಗದಲ್ಲಿದ್ದು ನಿತ್ಯ ಏಕವಚನ ಪದಗಳಾಗಿವೆ. ಇವುಗಳಲ್ಲಿ न ಕಾರಾಂತ ಸಂಖ್ಯಾ ಶಬ್ದಗಳು मरुत् ಶಬ್ದದಂತೆಯೂ इ ಕಾರಾಂತ ಸಂಖ್ಯಾ ಶಬ್ದಗಳು मति ಶಬ್ದದಂತೆಯೂ ಏಳೂ ವಿಭಕ್ತಿಯಲ್ಲಿ ರೂಪಗಳನ್ನು ಹೊಂದುತ್ತವೆ.

ಇವು ಏಕವಚನ ನಾಮಪದಗಳಿಗೆ ವಿಶೇಷಣವಾದಾಗಲೂ ಏಕವಚನದಲ್ಲೇ ಉಪಯೋಗಿಸಲ್ಪಡುತ್ತವೆ. ಉದಾ – विंशति कार्मिकाः गृहनिर्माणं कुर्वन्ति। – ಇಪ್ಪತ್ತು ಕಾರ್ಮಿಕರು ಗೃಹ ನಿರ್ಮಾಣವನ್ನು ಮಾಡುತ್ತಾರೆ. त्रिंशत् स्त्रियः वस्त्राणि सीव्यन्ति। – ಇಪ್ಪತ್ತು ಹೆಂಗಸರು ವಸ್ತ್ರಗಳನ್ನು ಹೊಲಿಯುತ್ತಾರೆ. चत्वारिंशत् बालकाः कक्ष्यायां पठन्ति। – ನಲವತ್ತು ಬಾಲಕರು ತರಗತಿಯಲ್ಲಿ ಓದುತ್ತಾರೆ. षष्टिः कन्यकाः अस्मिन् देवालये गायन्ति। ಅರುವತ್ತು ಕನ್ಯೆಯರು ಈ ದೇವಾಲಯದಲ್ಲಿ ಹಾಡುತ್ತಾರೆ. सप्ततिः पुष्पाणि अस्यां मालायां सन्ति। अशीतिः क्षात्रियाः युद्धे मृताः। ಎಂಭತ್ತು ಕ್ಷತ್ರಿಯರು ಯುದ್ಧದಲ್ಲಿ ಸತ್ತರು. नवतिः रत्नानि अस्मिन् सुवर्णापणे सन्ति। ತೊಂಭತ್ತು ರತ್ನಗಳು ಈ ಚಿನ್ನದ ಅಂಗಡಿಯಲ್ಲಿ ಇವೆ. नवनवतिः जनाः अणुस्फोटात् मृताः। ತೊಂಭತ್ತೊಂಭತ್ತು ಜನರು ಅಣು ಸ್ಫೋಟದಿಂದ ಸತ್ತರು.

शत सहस्र ಇತ್ಯಾದಿ ಸಂಖ್ಯಾವಾಚಕ ಶಬ್ದಗಳು ನಪುಂಸಕಲಿಂಗದಲ್ಲಿದ್ದು ಏಕವಚನದಲ್ಲಿ ಉಪಯೋಗಿಸಲ್ಪಡುತ್ತವೆ. ಉದಾ शतं वृक्षाः अस्मित् उद्याने सन्ति। – ನೂರು ಮರಗಳು ಈ ಉದ್ಯಾನದಲ್ಲಿ ಇವೆ. सहस्र फलानि आम्रवृक्षे सन्ति। ಸಾವಿರ ಹಣ್ಣುಗಳು ಮಾವಿನ ಮರದಲ್ಲಿ ಇವೆ. अयुतं (दशसहस्रं) रूप्यकाणि व्ययितानि। – लक्षं सैनिकाः देशरक्षणाय युध्यन्ते। ಲಕ್ಷ ಸೈನಿಕರು ದೇಶ ರಕ್ಷಣೆಗಾಗಿ ಯುದ್ಧ ಮಾಡುತ್ತಾರೆ. अयुतं पुस्तकानि ग्रन्थालये सन्ति। ದಶ ಸಹಸ್ರ ಪುಸ್ತಕಗಳು ಗ್ರಂಥಾಲಯದಲ್ಲಿ ಇವೆ. कोटिःप्रजाः भारते दरिद्राः ಕೋಟಿ ಜನರು ಭಾರತದಲ್ಲಿ ದರಿದ್ರರು.

1 **ಸಂಖ್ಯಾವಾಚಕ ಕ್ರಿಯಾ ವಿಶೇಷಣಗಳು :** सकृत् ಒಮ್ಮೆ ಒಂದು ಸಲ, द्वि – ಎರಡು ಸಲ, त्रि – ಮೂರು ಸಲ, चतुः – ನಾಲ್ಕು ಸಲ. ಇನ್ನು ಮುಂದಿನ ಸಂಖ್ಯಾ ವಾಚಕ ಕ್ರಿಯಾ ವಿಶೇಷಣಗಳಿಗೆ ಇದೇ ಅರ್ಥದಲ್ಲಿ कृत्वः ಸೇರಿಸಬೇಕು. पञ्चकृत्वः ಐದು ಸಲ, षट्कृत्वः ಆರು ಸಲ, सप्तकृत्वः – ಏಳು ಸಲ, अष्टकृत्वः – ಎಂಟು ಸಲ ಇತ್ಯಾದಿ.

2 ''ಎಷ್ಟು ವಿಧ'' ಎಂದು ವಿಧಗಳ ಅಥವಾ ಪ್ರಕಾರಗಳ ಸಂಖ್ಯೆಯನ್ನು ಸೂಚಿಸಲು धा ಎಂಬುದನ್ನು ಸೇರಿಸಬೇಕು. ಉದಾ एकधा – ಒಂದು ವಿಧವಾಗಿ, द्विधा/द्वेधा – ಎರಡು ರೀತಿಗಳಲ್ಲಿ, त्रिधा/त्रेधा – ಮೂರು ರೀತಿಗಳಲ್ಲಿ, चतुर्धा – ನಾಲ್ಕು ರೀತಿಗಳಲ್ಲಿ, पञ्चधा – ಐದು ರೀತಿಗಳಲ್ಲಿ, षट्धा, षोढा – ಆರು ರೀತಿಗಳಲ್ಲಿ, सप्तधा – ಏಳು ರೀತಿಗಳಲ್ಲಿ (ಏಳಾಗಿ)

3 एकशः ಒಂದೊಂದಾಗಿ, द्विधः – ಎರಡೆರಡಾಗಿ, त्रिधः – ಮೂರು ಮೂರಾಗಿ, चतुःशः – ನಾಲ್ಕು ನಾಲ್ಕಾಗಿ ಇತ್ಯಾದಿ

4 ಸಮೂಹ ವಾಚಕ ಸಂಖ್ಯೆಗಳು – ಉದಾ – द्वयम्/द्वियतम् – ಎರಡರ ಗುಂಪು, त्रयम्/त्रितयम् – ಮೂರರ ಗುಂಪು, चतुष्टयम् ನಾಲ್ವರ ಗುಂಪು ಇತ್ಯಾದಿ.

5 क ಸೇರಿದಾಗಲೂ ಸಮೂಹಾರ್ಥವನ್ನು ಸೂಚಿಸುವ ಸಂಖ್ಯೆಗಳು ಆಗುತ್ತವೆ. ಉದಾ – द्विकम् – ಎರಡು ವಸ್ತುಗಳ ಸಮೂಹ, त्रिकम्, चतुष्कम्, पञ्चकम्, षट्कम्, नवकम्, दशकम् ಇತ್ಯಾದಿ.

6 ದಿನಗಳ ಅಥವಾ ರಾತ್ರಿಗಳ ಸಮೂಹ ಸೂಚಕ ಸಂಖ್ಯೆಗಳು ಉದಾ एकाहः – ಒಂದು ದಿನ. द्वयहः – ಎರಡು ದಿನಗಳ ಸಮೂಹ, द्विरात्रम् – ಎರಡು ರಾತ್ರಿಗಳ ಸಮೂಹ, त्रयहः – ಮೂರು ದಿನಗಳ ಸಮೂಹ, त्रिरात्रम् – ಮೂರು ರಾತ್ರಿಗಳ ಸಮೂಹ, ಹಾಗೆಯೇ चतुरहः, चतुरात्रम्, पञ्चाहः, पञ्चरात्रम्, षडरः, षड्रात्रम्, सप्ताहः, सप्तरात्रम्।

7 ವರ್ಷಗಳ ಸಮೂಹ ಸೂಚಕ ಸಂಖ್ಯೆಗಳು ಉದಾ एकहायनः – ಒಂದು ವರ್ಷ, द्विहायनः, त्रिहायनः, चतुर्हायनः

Sri Vidyabharathi Book Centre, Sringeri

CC-O. In Public Domain. Digitized by eGangotri

सन्धि प्रकरणम्

ಎರಡು ವರ್ಣಗಳು ಪರಸ್ಪರ ಕೂಡಿದಾಗ ಉಂಟಾಗುವ ಬದಲಾವಣೆಗೆ ಸಂಧಿ ಎನ್ನುತ್ತಾರೆ.

ಸಂಧಿಗಳು ಮೂರು ವಿಧ :–

1 अच् सन्धिः/स्वरसन्धिः, 2 हल् सन्धिः / व्यञ्जनसन्धिः, 3 विसर्गसन्धिः

1 स्वरसन्धिः/अच् सन्धिः

1 सवर्णदीर्घसन्धिः

ಹ್ರಸ್ವ ಅಥವಾ ಧೀರ್ಘಗಳಾದ अ, इ, उ, ऋ ಸ್ವರಗಳ ಮುಂದೆ ಕ್ರಮವಾಗಿ ಹ್ರಸ್ವ ಅಥವಾ ದೀರ್ಘಗಳಾದ अ, इ, उ, ऋ ಸ್ವರಗಳು ಬಂದರೆ ಅವೆರಡರ ಸ್ಥಾನದಲ್ಲಿ ಕ್ರಮವಾಗಿ आ, ई, ऊ, ॠ ಗಳು ಆದೇಶವಾಗಿ ಬರುತ್ತವೆ. ಉದಾ

अ	+	अ	=	आ	–	अल्प	+	अपराधः	=	अल्पापराधः
इ	+	इ	=	ई	–	मुनि	+	इन्द्रः	=	मुनीन्द्रः
उ	+	उ	=	ऊ	–	गुरु	+	उपदेशः	=	गुरूपदेशः
ऋ	+	ऋ	=	ॠ	–	पितृ	+	ऋणम्	=	पितॄणम्

अस्मि+इति=अस्मीति, वित्त+अपहारकः=वित्तापहारकः, निपुणस्य+अपि=निपुणस्यापि, अत्र+अन्तरे= अत्रान्तरे, कुत्र+अपि=कुत्रापि, सर्व+अविनय+अधिष्ठानताम्=सर्वाविनयाधिष्ठानताम्, न+अल्पं=नाल्पम्, अ+आ =आ – रस+आस्वादः=रसास्वादः, आ+अ=आ – विद्या+अभ्यासः=विद्याभ्यासः, आ+आ=आ – विद्या+आलयः=विद्यालयः, मधुर+अक्षरम्=मधुराक्षरम्, दर्भ+आसनम्। देव+आलय=देवालय, हरि+ईश=हरीश, गुरु+उपदेश=गुरूपदेशः, मातृ+ऋणम्=मातॄणम्, पाणीमौ, रत्नाकरः, न+आसीत्=नासीत्, विद्या+अर्जनम् =विद्यार्जनम्, ज्ञाता+अस्मि=ज्ञातास्मि

2 गुणसन्धिः

ए, ओ, अर् ಇವು ಗುಣಾಕ್ಷರಗಳು. ಹ್ರಸ್ವ ಅಥವಾ ದೀರ್ಘವಾದ अ ಕಾರಕ್ಕೆ, ಹ್ರಸ್ವ ಅಥವಾ ದೀರ್ಘವಾದ इ ಕಾರವು ಪರವಾದರೆ ए ಕಾರವೂ, उ ಕಾರವು ಪರವಾದರೆ ओ ಕಾರವೂ, ऋ ಕಾರವು ಪರವಾದರೆ अर् ಕಾರವು ಪೂರ್ವ ಪರಸ್ಥಾನಗಳಲ್ಲಿ ಏಕಾದೇಶವಾಗಿ ಬರುವುದು. ಉದಾ

अ+इ=ए – राम+इति=रामेति, अ+उ=ओ – सूर्य+उदयः=सूर्योदयः, अ+ऋ=अर् – देव+ऋषिः=देवर्षिः, महा+ईश्वरः=महेश्वरः, गङ्गा+उदकं=गङ्गोदकं, पर+उपकारः=परोपकारः, परम+उत्कृष्ट=परमोत्कृष्ट, गण+ईश=गणेशः, चन्द्र+उदय=चन्द्रोदयः, ब्रह्मा+ऋषि=ब्रह्मर्षिः, पुरुष+उत्तम=पुरुषोत्तमः, देव+ऋषि=देवर्षिः न+इमाः=नेमाः

Sri Vidyabharathi Book Centre, Sringeri

CC-O. In Public Domain. Digitized by eGangotri

परम+उज्वला=परमोज्वला, जिह्वा+इति=जिह्वेति, न+उद्घाटयिष्यामि=नोद्धाटयिष्यामि, अर्थ+उपाजनं =अर्थोपार्जनम्, गृह+उत्कण्ठः=गृहोत्कण्ठः, कष्टेन+उपार्जितम्=कष्टेनोपार्जितम्, यथा+इयम्=यथेयम्, ईर्ष्यया+इव =ईर्ष्ययेव, गुण+उपेतः=गुणोपेतः। इव+उदितं=इवोदितम्, परिचयस्य+उद्देशः=परिचयस्योद्देशः, च+उल्लेखः =चोल्लेखः, धीर+उद्धतः=धीरोद्धतः

3 वृद्धिसन्धिः

ऐ, औ ಇವು ವೃದ್ಧಿ ಅಕ್ಷರಗಳು.

अ, आ ಕಾರಗಳ ಮುಂದೆ, ए, ऐ ಕಾರಗಳು ಬಂದರೆ ऐ ಕಾರವೂ, ओ, औ ಕಾರಗಳು ಬಂದರೆ औ ಕಾರವೂ ಪೂರ್ವ ಪರಗಳ ಸ್ಥಾನಗಳಲ್ಲಿ ಏಕಾದೇಶವಾಗಿ ಬರುವುವು. ಉದಾ –

अ+ए=ऐ - एक+एकम्=एकैकम्, अ+ऐ=ऐ - देव+ऐश्वर्यं=देवैश्वर्यं, अ+ओ=औ - वन+ओषधिः= वनौषधिः, अ+औ=औ - नव+औदार्यं=नवौदार्यम्, तथा+एव=तथैव, अद्य+एव=अद्यैव, महा+ओषधिः= महौषधिः, मृग+ओघः=मृगौघः, एक+एकम्=एकैकम्, दृष्ट्वा+एतत्=दृष्ट्वैतत्, च+एव=चैव, च+एनम्= चैनम्, तेन+एव=तेनैव, मत+ऐक्यम्=मतैक्यम्, सह+एव=सहैव, अनायासेन+एव=अनायासेनैव, न+एकः= नैकः, संस्कृतेन+एव=संस्कृतेनैव, मा+एवं=मैवम्, तेन+एव=तेनैव।

4 यण् सन्धिः

य्, व्, र्, ल् ಇವು ಯಣ್ ಅಕ್ಷರಗಳು.

ಹ್ರಸ್ವ ಅಥವಾ ದೀರ್ಘಗಳಾದ इ, उ, ऋ ಕಾರಗಳ ಮುಂದೆ ಅಸವರ್ಣ ಸ್ವರಗಳು ಬಂದರೆ इ ಗೆ य्, उ ಗೆ व्, ऋ ಗೆ र् ಕಾರವು ಆದೇಶವಾಗಿ ಬರುತ್ತದೆ. ಉದಾ –

इ+अ=य्+अ - यदि+अपि=यद्यपि, उ+अ=व्+अ - मधु+अरिः=मध्वरिः, ऋ+अ=र्+अ=पितृ+अंशः =पित्रंशः, जननी+आह=जनन्याह, वधू+आगमनम्=वध्वागमनम्, अति+उत्तमः=अत्युत्तमः, इति+अपि=इत्यपि, मातृ+अंशः=मात्रंशः, गमिष्यामि+अहं=गमिष्याम्यहं, पार्वती+अधुना=पार्वत्यधुना, यदि+अत्र=यद्यत्र, अति+ उन्नतः=अत्युन्नतः, हि+एष=ह्येषः, भवतु+अधुना=भवत्वधुना, इति+आधुनिकः=इत्याधुनिकः, साधुषु+अपि =साधुष्वपि, गुरु+आज्ञा=गुर्वाज्ञा, ओमित्येतत्=ओमिति+एतत्, अपि+आसीत्=अप्यासीत्, जिह्वेति+अभिधाना =जिह्वेत्यभिधाना, वस्त्राणि+उत्पादयति=वस्त्राण्युत्पादयति, अपि+एषाम्=अप्येषाम्, अपि+उपदेष्टव्यम्= अप्युपदेष्टव्यम्। स्मरामि+अहम्=स्मराम्यहम्, इति+आह=इत्याह, अति+अर्थः=अत्यर्थः।

5 यान्त – वान्तादेश सन्धिः

ए ऐ ओ औ ಕಾರಗಳ ಮುಂದೆ ಸ್ವರಗಳು ಬಂದರೆ ಇವುಗಳ ಬದಲಿಗೆ ಕ್ರಮವಾಗಿ अय्, आय्, अव्, आव्,ಗಳು ಆದೇಶವಾಗಿ ಬಂದು यान्तादेश – वान्तादेश ಸಂಧಿಯಾಗುವುದು. ಉದಾ – हरे+ए=हरय्+ए=हरये। नै+अक - नाय्+अक=नायकः। विष्णो+इति-विष्णव्+इति=विष्णविति। द्वौ+अपि=द्वाव्+अपि=द्वावपि। तालवृन्तौ+इव =तालवृन्ताविव। एतौ+अपि=एतावपि। रात्रौ+अस्य=रात्रावस्य।

Sri Vidyabharathi Book Centre, Sringeri

CC-O. In Public Domain. Digitized by eGangotri

6) पूर्वरूपसन्धिः–

ए ओ ಕಾರಗಳ ಮುಂದೆ अ ಕಾರವು ಬಂದರೆ, ಆ अ ಕಾರವು ए, ओ ಗಳಲ್ಲಿ ಸೇರಿಹೋಗುತ್ತದೆ. ಅಂದರೆ ಪೂರ್ವ ಪರ ಸ್ವರಗಳಿಗೆ ಪೂರ್ವರೂಪವು ಏಕಾದೇಶವಾಗಿ ಬರುತ್ತದೆ. अ ಕಾರದ ಸ್ಥಾನದಲ್ಲಿ ಅದನ್ನು ಸೂಚಿಸಲು ಅವಗ್ರ (ऽ) ಚಿಹ್ನೆಯನ್ನು ಬಳಸುತ್ತಾರೆ. ಉದಾ–

ए+अ=ए – अन्ते+अपि=अन्तेऽपि। ओ+अ=ओ – रामोऽपि। एते+अपि – एतेऽपि। रामो+अवदत् =रामोऽवदत्। ब्रह्मरूपोऽयम्=ब्रह्मरूपः + अयं (ಕೊನೆಗೆ ओ ಕಾರಕ್ಕೆ ವಿಸರ್ಗ ಬರುವುದು, ಆದುದರಿಂದ ವಿಸರ್ಗ ಸಂಧಿಯೂ ಆಗುವುದು). ते+अपि=तेऽपि। एते+अत्र=एतेऽत्र। कुतः+अयम्=कुतोऽयम्। रामोऽत्र=रामः+अत्र। नैकोऽपि= न+ एकः+अपि। विस्मृतो+अहम्=विस्मृतो+अहम्=विस्मृतोऽहं असाध्यः+अपि=असाद्योऽपि। भूयो+अपि=भूयोऽपि। सर्वे+अपि=सर्वेऽपि कः+अयम्=कोऽयम्। काव्ये+अपि+काव्येऽपि।

7) प्रकृतिभाव सन्धिः–

ई ಕಾರಾಂತ, ऊ ಕಾರಾಂತ ಅಥವಾ ए ಕಾರಾಂತ ದ್ವಿವಚನದ ಮುಂದೆ ಸ್ವರಾಕ್ಷರ ಪರವಾಗಿದ್ದರೆ ಸಂಧಿಯಾಗುವುದಿಲ್ಲ. ಇದನ್ನು ಪ್ರಕೃತಿಭಾವಸಂಧಿ ಎನ್ನುತ್ತಾರೆ. ಉದಾ हरी+एतौ=हरी एतौ। सधू+ऊचतुः – सधू ऊचतुः। लते+इमे=लते इमे।

व्यञ्जनसन्धिः/हल्सन्धिः

ಎಲ್ಲಿ ಎರಡು ವ್ಯಂಜನಾಕ್ಷರಗಳಿಗೆ ಅತ್ಯಂತ ಸಾಮಿಪ್ಯವಿರುವುದೋ ಅಲ್ಲಿ ಹಲ್ ಸಂಧಿ ಅಥವಾ ವ್ಯಂಜನ ಸಂಧಿಯು ಆಗುತ್ತದೆ.

1) श्चुत्व सन्धिः –

स ಕಾರದ ಮತ್ತು त ವರ್ಗದ (त थ द ध न) ವ್ಯಂಜನಗಳ ಮುಂದೆ श ಕಾರ ಮತ್ತು च ವರ್ಗದ (च छ ज झ ञ) ವ್ಯಂಜನಗಳು ಬಂದರೆ स ಕಾರಕ್ಕೆ श ಕಾರವೂ त ವರ್ಗದ ವ್ಯಂಜನಗಳಿಗೆ च ವರ್ಗದ ವ್ಯಂಜನಗಳೂ ಆದೇಶವಾಗಿ ಬರುವುದು. (त ವರ್ಗಕ್ಕೆ ಅದರ ಎದುರಿಗೆ च ವರ್ಗದ ಯಾವ ಅಕ್ಷರವಿದೆಯೋ ಅದೇ ಬರುವುದು.) ಉದಾ –

हरिः+शेते, हरिस्+शेति, हरिश्+शेते = हरिश्शेते (ಮೊದಲು ವಿಸರ್ಗಕ್ಕೆ स् ಕಾರ ಬಂದು ವಿಸರ್ಗ ಸಂಧಿ ಆದ ಅನಂತರ ಶ್ಚುತ್ವ ಸಂಧಿ) रामः+च=रामस्+च=रामश्च। तत्+च – तच्च।

नदीः+च – नदीस्+च – नदीश्च। अपठत्+च अपठच् + च – अपठच्च। तत्+ज्वलति – तज्+ज्वलति = तज्ज्वलति, तस्मात्+च+तस्माच्च। सत्+चित् – सच्+चित् = सच्चित्। गुणिन्+जय+गुणिञ्जयः। शिवभक्ताः+च=शिवभक्ताश्च। निर्गुणश्च=निर्गुणः+च। स्थगितः+च=स्थगितश्च। मन्दाः+चरितम्=मन्दाश्चरितम्

2) ष्टुत्व सन्धिः –

स ಮತ್ತು त ವರ್ಗದ ವ್ಯಂಜನಗಳ ಮುಂದೆ ष् ಮತ್ತು ट ವರ್ಗದ ವ್ಯಂಜನಗಳು ಬಂದರೆ स ಕಾರಕ್ಕೆ ष ಕಾರವೂ, त ವರ್ಗದ ವ್ಯಂಜನಗಳಿಗೆ ट ವರ್ಗದ ವ್ಯಂಜನಗಳೂ ಆದೇಶವಾಗಿ ಬರುತ್ತವೆ. (त ವರ್ಗಕ್ಕೆ ಅದರ ಮುಂದೆ ट ವರ್ಗದ ಯಾವ ಅಕ್ಷರವಿದೆಯೋ ಅದೇ ಅಕ್ಷರ ಬರುವುದು.) ಉದಾ – हरिः + षष्ठः – हरिस् + षष्ठः – हरिष् + षष्ठः = हरिष्षष्ठः। तत् + टीका – तट् +

Sri Vidyabharathi Book Centre, Shimoga

CC-0. In Public Domain. Digitized by eGangotri

टीका = तट्टीका। रामः + षष्ठः – रामस् + षष्ठः – रामष् + षष्ठः – रामष्षष्ठः। रामः + टीकते – रामस् + टीकते – रामष् + टीकते – रामष्टीकते (ಮೊದಲು ವಿಸರ್ಗಕ್ಕೆ म ಕಾರ ಬಂದು ವಿಸರ್ಗ ಸಂಧಿ ಆಗುವುದು.)

3) जश्त्व सन्धिः –

ಪದದ ಕೊನೆಯಲ್ಲಿರುವ ವರ್ಗೀಯ ವ್ಯಂಜನಕ್ಕೆ (ಮುಖ್ಯವಾಗಿ ವರ್ಗದ ಮೊದಲನೆಯ ವರ್ಣಗಳು क च ट त प) ಸ್ವರವಾಗಲಿ ಮೃದುವ್ಯಂಜನವಾಗಲಿ (ಪ್ರತಿವರ್ಗದ ಕೊನೆಯ ಮೂರು ಅಕ್ಷರಗಳು ಮತ್ತು य र ल व) ಪರವಾದರೆ ಆಯಾ ವರ್ಗದ ಮೂರನೆಯ ಅಕ್ಷರವು (जश्) ಆದೇಶವಾಗಿ ಬರುತ್ತದೆ.

तावत् + एनम् = तावदेनम्। वाक् + ईश – वाग् + ईश = वागीशः। अच् + अन्तः = अज् + अन्तः = अजन्तः। तत् + अपि – तद् + अपि = तदपि। तत् + यथा – तद् + यथा – तद्यथा। अप् + जम् – अब् + जम् = अब्जम्। षट् + आननः – षड् + आननः = षडाननः। जगत् + गुरुः – जगद् + गुरुः – जगद्गुरुः। सत् + गुण – सद् + गुण – सद्गुणः। तत् + अनन्तरं – तद् + अनन्तरं – तदनन्तरम्। बृहत् + गात्रः = वृहद्गात्रः। तत् + अपि – तदपि। यत् + एतत् – यदेतत्। वाक् + ईशः – वागीशः। प्राक् + एव = प्रागेव। वाक् + देवता – वाग्देवता। कस्यस्वित् + धनम् = कस्यस्वि द्धनम्। तत् + एव = तदेव तत् + आरभ्य = तदारभ्य। सत् + गुणः = सद्गुणः।

4) अनुनासिक सन्धिः –

ವರ್ಗದ ಮೊದಲನೆಯ ಅಕ್ಷರಕ್ಕೆ ಅನುನಾಸಿಕವು ಪರವಾದರೆ, ಅದಕ್ಕೆ ಆ ವರ್ಗದ ಅನುನಾಸಿಕವು ಆದೇಶವಾಗಿ ಬರುತ್ತದೆ. ಉದಾ – वाक् + नियम – वाङ्नियमः। जगत् + नाथः – जगन् + नाथः – जगन्नाथः। षट् + मुखः – षण् + मुखः – षण्मुखः। चित् + मयः – चिन् + मयः चिन्मयः। तत् + मङ्गलम् – तन्मङ्गलम्। वाक् + मय – वाङ् + मयः – वाङ्मयः।

5) अनुस्वारसन्धिः –

ಪದದ ಕೊನೆಯಲ್ಲಿರುವ म ಕಾರಕ್ಕೆ ವ್ಯಂಜನಗಳು ಬಂದರೆ ಅವುಗಳಿಗೆ ಅನುಸ್ವಾರವು ಬರುತ್ತದೆ. ಉದಾ – वस्त्रम् + हरति = वस्त्रं हरति। रामम् + वन्दे = रामं वन्दे। अहम् + वन्दे – अहं वन्दे।

सत्वसन्धिः –

ಇದೂ ಅನುಸ್ವಾರ ಸಂಧಿಯೇ. ಪದದ ಕೊನೆಯಲ್ಲಿರುವ न ಕಾರಕ್ಕೆ च, छ ಗಳು ಪರವಾದರೆ, न ಕಾರಕ್ಕೆ श ಕಾರವೂ ಅದರ ಪೂರ್ವದಲ್ಲಿ ಅನುಸ್ವಾರವೂ, ट ठ ಗಳು ಪರವಾದರೆ न ಕಾರಕ್ಕೆ ष ಕಾರವೂ ಅದರ ಪೂರ್ವದಲ್ಲಿ ಅನುಸ್ವಾರವೂ, त थ ಗಳು ಪರವಾದರೆ न ಕಾರಕ್ಕೆ स ಕಾರವೂ ಅದರ ಪೂರ್ವದಲ್ಲಿ ಅನುಸ್ವಾರವೂ ಆದೇಶವಾಗಿ ಬರುತ್ತದೆ. ಉದಾ

तान् + च = तांश् + च = तांश्च। एतान् + छात्रान् = एतांश् + छात्रान् = एतांश्छात्रान्। पाठान् + टीकते – पठांष् टीकते – पाठांष्टीकते। बालान् + तदा = बालांस् + तदा = बालांस्तदा। कस्मिन् + चित् = कस्मिंश्चित्। अस्मिन् + तडागे = अस्मिंस्तडागे।

Sri Vidyabharathi Book Centre, Sringeri

6) परसवर्ण सन्धिः –

CC-O. In Public Domain. Digitized by eGangotri

ಪದಾಂತವಲ್ಲದ ಅನುಸ್ವಾರದ ಮುಂದೆ श ष स ह ಬಿಟ್ಟು ಉಳಿದ ವ್ಯಂಜನಗಳು ಬಂದರೆ ಆ ವ್ಯಂಜನಗಳ ಸವರ್ಣ ಅನುನಾಸಿಕಗಳು ಅನುಸ್ವಾರಕ್ಕೆ ಆದೇಶವಾಗಿ ಬರುತ್ತವೆ. ಉದಾ –शां + तः – शान्तः। अं + कितः – अङ्कितः। अं + चितः = अञ्चितः। ग्रं +थः – ग्रन्थः। दां + तः – दान्तः। कं + पितः – कम्पितः। गुं + फितः – गुम्फितः। त्वं + करोषि – त्वङ्करोषि। अं + जनम् – अञ्जनम्। अं + डः = अण्डः। इं + धनम् = इन्धनम्। सं + ततिः = सन्ततिः।

लत्वसन्धिः – त ವರ್ಗದ ವ್ಯಂಜನಗಳ ಮುಂದೆ ल ಕಾರವು ಬಂದರೆ ಅವುಗಳಿಗೆ ल ಕಾರವು ಆದೇಶವಾಗಿ ಬರುವುದು. त ಕಾರದ ಮುಂದೆ ल ಕಾರವು ಬಂದರೆ ल ಆದೇಶವಾಗುವುವು. ಉದಾ – तत् + लीनम् = तल्लीनम्। यत् + लोकम् – यल् + लोकम् – यल्लोकम्। तत् + लयः – तल् + लयः – तल्लयः।

7) ङमुडागम सन्धिः – ङ्, ण्, न् ಗಳು ಮತ್ತು ಇವುಗಳ ಹಿಂದೆ ಹ್ರಸ್ವಸ್ವರವಿದ್ದು ಮುಂದೆ ಯಾವುದೇ ಸ್ವರ ಬಂದರೆ ಇವು ದ್ವಿತ್ವಗೊಳ್ಳುವುದು. ಉದಾ – सुगुण् + ईशः – सुगुण्णीशः। अस्मिन् + अवकाशे = अस्मिन्नवकाशे।

6) छत्वसन्धिः – ಪ್ರತಿ ವರ್ಗದ ಮೊದಲ ನಾಲ್ಕು ಅಕ್ಷರಗಳ ಮುಂದೆ ಇರುವ ಯಾವುದೇ श ಕಾರಕ್ಕೆ ಸ್ವರ ಅಥವಾ ह य व र ल ಪೈಕಿ ಯಾವುದಿದ್ದರೂ श ಕಾರವು छ ಕಾರವಾಗುತ್ತದೆ.

ಉದಾ – तत् + शिवः – तच् + शिवः – तच् छिवः = तच्छिवः। तत् + श्लोकः – तच् + श्लोकः – तच् + छ्लोकः = तच्छ्लोकः। उत् + श्वासः – उच् + छ्वासः = उच्छ्वासः। तत् + शास्त्रम् – तच्छास्त्रं। एतत् + श्रुत्वा – एतच्छ्रुत्वा।

6) छादिसन्धिः – ಹ್ರಸ್ವ ಸ್ವರಾಂತ ಪದ ಮತ್ತು आ, मा ಗಳ ಮುಂದೆ छ ಕಾರ ಬಂದರೆ ಅವೆರಡರ ನಡುವೆ च् ಆಗಮ ಬರುತ್ತದೆ. शिव + छत्रम् – शिवच्छत्रम्। परि + छदः – परिच्छदः। तरु + छाया – तरुच्छाया । आ + छादनम् – आच्छादनम्। मा + छिन्धि – माच्छिन्धि।

विसर्ग सन्धिः

ವಿಸರ್ಗದ ಮುಂದೆ ಸ್ವರ ಅಥವಾ ವ್ಯಂಜನಗಳು ಬಂದಾಗ ವಿಸರ್ಗಕ್ಕೆ ಆಗುವ ಬದಲಾವಣೆ ವಿಸರ್ಗಸಂಧಿ ಎನ್ನುತ್ತಾರೆ.

(ಕರ್ಕಶ ವ್ಯಂಜನಗಳು – ಪ್ರತಿಯೊಂದು ವರ್ಗದ ಮೊದಲ ಎರಡು ಅಕ್ಷರಗಳಿಗೂ, श ष स ಗಳಿಗೂ ಕರ್ಕಶವ್ಯಂಜನ ಗಳೆನ್ನುತ್ತಾರೆ. ಉಳಿದವುಗಳು ಮೃದುವ್ಯಂಜನಾಕ್ಷರಗಳು).

1) उ ಕಾರವಾಗುವ ನಿಯಮ – ಹ್ರಸ್ವ अ ಕಾರದ ಮುಂದೆ ಇರುವ ವಿಸರ್ಗಕ್ಕೆ अ ಕಾರವಾಗಲಿ, ಮೃದುವ್ಯಂಜನವಾಗಲಿ ಪರವಾದರೆ ವಿಸರ್ಗವು उ ಕಾರವಾಗುತ್ತದೆ. ಉದಾ – रामः + अपि – राम + उ + अपि = (गुण) – रामो + अपि रामोऽपि। गजः + याति + गज उ + याति – गजो याति। देवः + अयम् – देव उ + अयम् – देवो + अयं – देवोऽयम्। मृगः असौ – मृगोऽसौ। कः + अत्र = कोऽत्र। सः + अहम् = सोऽहम्। पुत्रः + वमति – पुत्रो वमति। रामः + जयति = रामो जयति। देवोऽपि, वृषभोऽपि, वृक्षोऽसौ, नरोऽसौ, लोकोऽयम्, नृपो जयति। गजः + गच्छति = गजो गच्छति।

ವಿ.ಸೂ. ರೇಫಾಂತವಾದ (र ಕಾರಾಂತ) ಅವ್ಯಯಗಳ ವಿಸರ್ಗವು उ ಕಾರವಾಗುವುದಿಲ್ಲ, ಮೂಲವಾದ ರೇಫವೇ ಆಗಿರುತ್ತದೆ. ಉದಾ – अन्तः + गतः – अन्तर्गतः। पुनः + अयम् = पुनरयम् + स्वः + लोकः = स्वर्लोकः। प्रातः + नमामि = प्रातर्नमामि। पुनः + जातः = पुनर्जातः। अन्तः + जलम् – अन्तर्जलम्।

Sri Vidyabharathi Book Centre, Sringeri

CC-O. In Public Domain. Digitized by eGangotri

2) रेफ (र ಕಾರ) ವಾಗುವ ನಿಯಮ – अ आ ಕಾರಗಳನ್ನು ಬಿಟ್ಟು ಉಳಿದ ಸ್ವರದ ಮುಂದೆ ಇರುವ ವಿಸರ್ಗಕ್ಕೆ ಸ್ವರವಾಗಲಿ, ಮೃದುವ್ಯಂಜನವಾಗಲಿ ಪರವಾದರೆ ವಿಸರ್ಗವು रेफ (र ಕಾರ) ವಾಗುತ್ತದೆ. ಉದಾ – पितुः + अनन्तरम् = पितुरनन्तरं। पितुः + गेहे = पितुर्गेहे। मुनिः + इति = मुनिरिति। भानुः + असौ – भानुरसौ। तैः + इदम् – तैरिदम्। गौः + इयम् – गौरियम्। कविः + जयति – कविर्जयति। श्रीः + भवति = श्रीर्भवति। धेनुः + गच्छति – धेनुर्गच्छति। धेनूः + नमति = धेनूर्नमति। मातुः + वन्दते – मातुर्वन्दते। मुनेः + महिमा = मुनेर्महिमा।

एतैः + भक्षितम् = एतैर्भक्षितम्। भानोः + मयूख – भानोर्मयूख। नौः + याति = नौर्याति। एतैः + जितः = एतैर्जितः। तैः + उक्तम् – तैरुक्तम्। मुनिरेषः। सर्वैरुक्तम्। मनुरसौ। स्थाणुरयम्। गिरिर्महान्। गिरेरब्धिर्महान्। अब्धेर्नभो महत्। नभसोऽपि महद्ब्रह्म। ततोऽप्याशा गरीयसी। पितुरिच्छा – पितुः + इच्छा। हरिः + अवदत् = हरिरवदत्। परिणतिः + आसीत् = परिणतिरासीत्। सूक्तिः + इयम् = सूक्तिरियम्। ताभिः + उपदेशः = ताभिरुपदेशः। तयोः + अभिनये = तयोरभिनये।

3) लोप ವಾಗುವ ನಿಯಮ

1 ಹ್ರಸ್ವ अ ಕಾರದ ಮುಂದೆ ಇರುವ ವಿಸರ್ಗಕ್ಕೆ ಹ್ರಸ್ವ अ ಕಾರವನ್ನು ಬಿಟ್ಟು ಉಳಿದ ಸ್ವರವು ಪರವಾದರೆ ವಿಸರ್ಗವು ಲೋಪವಾಗುತ್ತದೆ. ಉದಾ – वालः + इति = बाल इति। नृपः + इति = नृप इति। शरः + एष = शर एष। अश्वः आगतः अश्व आगतः। गोपः इति – गोप इति। कः इति = क इति। देवः + उवाच = देव उवाच। करः + आसीत् = कर आसीत्।

2 आ ಕಾರದ ಮುಂದೆ ಇರುವ ವಿಸರ್ಗಕ್ಕೆ ಸ್ವರವಾಗಲಿ, ಮೃದುವ್ಯಂಜನವಾಗಲಿ ಪರವಾದರೆ ವಿಸರ್ಗವು ಲೋಪವಾಗುತ್ತದೆ. ಉದಾ – ताः + गच्छन्ति = ता गच्छन्ति। बालकाः + अद्य – बालका अद्य। लोकाः + इमे – लोका इमे। देवाः + इमे – देवा इमे। ताः + नमन्ति – ता नमन्ति। गजाः + धावन्ति – गजा धावन्ति। मृगाः + अत्र मृगा अत्र। सुराः + नम्याः – सुरा नम्याः।

3 सः ಮತ್ತು एषः ಎಂಬ ಪದಗಳ ವಿಸರ್ಗಕ್ಕೆ ಹ್ರಸ್ವ अ ಕಾರವನ್ನು ಬಿಟ್ಟು ಉಳಿದ ಯಾವ ಅಕ್ಷರವು ಪರವಾದರೂ ವಿಸರ್ಗವು ಲೋಪವಾಗುತ್ತದೆ. ಉದಾ – सः + एवम् – स एवम्। एषः + गतः – एष गतः। सः + नमति = स नमति। एषः + आगतवान् – एष आगतवान्। सः + एव – स एव। एषः + कार्यम् – एष कार्यम्। सः + इति – स इति।

4) स ಕಾರವಾಗುವ ನಿಯಮ –

ವಿಸರ್ಗಕ್ಕೆ क ख प फ ಗಳನ್ನು ಬಿಟ್ಟು ಉಳಿದ ಕರ್ಕಶವ್ಯಂಜನವು ಪರವಾದರೆ ವಿಸರ್ಗವು स ಕಾರವಾಗುತ್ತದೆ. ಕರ್ಕಶ ವ್ಯಂಜನಗಳಲ್ಲಿ च छ श ಗಳು ಪರವಾದರೆ स ಕಾರವು श ಕಾರವಾಗುತ್ತದೆ. ट ठ ष ಗಳು ಪರವಾದರೆ स ಕಾರವು ष ಕಾರವಾಗುತ್ತದೆ. (श्चुत्व ಮತ್ತು ष्टुत्व ಸಂಧಿಗಳಾಗುತ್ತವೆ ಎಂದರ್ಥ) ಉದಾ –

रामः + च = रामस् + च = रामश्च (ಶ್ಚುತ್ವಸಂಧಿ)। चतुरः + छात्रः – चतुरस् + छात्रः – चतुरश्छात्रः (ಶ್ಚುತ್ವ)। कविः + टीकते – कविस् + टीकते – कविष् + टीकते = कविष्टीकते (ष्टुत्व ಸಂಧಿ)। धनुः + ठङ्कारः – धुनुष्ठङ्कारः (ष्टुत्व)। रामः + षष्ठः – रामष्षष्ठः। गौः + तत्र = गौस्तत्रः।

वालः + तिष्ठति = वालस्तिष्ठति। मुनिः + सः = मुनिस्सः देवः + तत्र = देवस्तत्र। गिरिः + च गिरिश्च। मुनिस्तथा। एतैस्सह। कास्तत्र। एताश्च। वालः + तिष्ठति = वालस्तिष्ठति। कः + चित् = कश्चित्। शिवः + तु = शिवस्तु।

CC-O. In Public Domain. Digitized by eGangotri

समास प्रकरणम्

तत्पुरुष समासः

ಸಮಾಸದಲ್ಲಿ ಉತ್ತರ ಪದವು ಪ್ರಧಾನವಾಗಿದ್ದರೆ ಅದು ತತ್ಪುರುಷಸಮಾಸ. (उत्तरपदार्थप्रधानः तत्पुरुषः 1) राजपुत्रम् आनय (ರಾಜನ ಮಗನನ್ನು ಕರೆತಾ) ಎಂಬ ವಾಕ್ಯದಲ್ಲಿ ಕ್ರಿಯೆಯು ಉತ್ತರ ಪದಕ್ಕೆ ಪುತ್ರ ಮಾತ್ರ ಸಂಬಂಧಿಸುತ್ತದೆ. ರಾಜನನ್ನು ಕರೆತಾ ಎಂದರ್ಥವಲ್ಲ, ರಾಜನ ಮಗನನ್ನು ಕರೆತಾ ಎಂದರ್ಥ. ತತ್ಪುರುಷ ಸಮಾಸದಲ್ಲಿ ಪೂರ್ವ ಪದಗಳು ಬೇರೆ ಬೇರೆ ವಿಭಕ್ತಿಗಳಲ್ಲಿರುತ್ತವೆ. ಆದರೆ ಉತ್ತರ ಪದವು ಪ್ರಥಮ ವಿಭಕ್ತಿಯಲ್ಲೇ ಇರುತ್ತದೆ. ತತ್ಪುರುಷ ಸಮಾಸವು ಮುಖ್ಯವಾಗಿ ಆರು ವಿಧ.

1) विभक्ति तत्पुरुषः। ಅಲುಕ್ ಸಮಾಸವೂ ಇದರಲ್ಲೇ ಸೇರುತ್ತದೆ. **2) नञ् तत्पुरुषः 3) प्रादि तत्पुरुषः 4) उपपद तत्पुरुषः 5) समानाधिकरण तत्पुरुषः अथवा कर्मधारयः 6) संख्यातत्पुरुषः अथवा द्विगुः।**

विभक्ति तत्पुरुष समासः – ಇದು ತತ್ಪುರುಷದ ಒಂದನೇ ಪ್ರಭೇದ. ಈ ಸಮಾಸದ ವಿಗ್ರಹವಾಕ್ಯದಲ್ಲಿ ಮೊದಲಿನ ಪದವು ಪ್ರಥಮದಿಂದ ಸಪ್ತಮೀ ವಿಭಕ್ತಿಯ ವರೆಗಿನ ಯಾವುದಾದರೊಂದು ವಿಭಕ್ತಿಯಲ್ಲಿರುತ್ತದೆ. ಆದುದರಿಂದ ಪೂರ್ವ ಪದದ ವಿಭಕ್ತಿಗನುಸಾರವಾಗಿ ಇದು ಏಳು ವಿಧ.

1) प्रथमातत्पुरुषः – पूर्व, अपर, अधर, उत्तर, मध्य अर्ध ಈ ಪದಗಳು ನಪುಂಸಕಲಿಂಗದಲ್ಲಿದ್ದು, ಒಂದೇ ವಸ್ತುವಿನ ಭಾಗಗಳನ್ನು ಹೇಳುವಾಗ षष्ठी तत्पुरुष ಸಮಾಸದ ಪೂರ್ವಪದಗಳಾಗಿ ಬರುತ್ತವೆ. ಪೂರ್ವಪದವು ಪ್ರಥಮ ವಿಭಕ್ತಿಯಾದುದರಿಂದ ಪ್ರಥಮ ತತ್ಪುರುಷವೆಂದೂ ಹೇಳುವುದುಂಟು. ಇದನ್ನೇ अंशी ಸಮಾಸವೆಂದೂ ಕರೆಯುತ್ತಾರೆ. ಉದಾ – अपरं कायस्य – अपरकायः। ದೇಹದ ಇನ್ನೊಂದು ಭಾಗ. अधरं देहस्य – अधरदेहः – ದೇಹದ ಕೆಳಭಾಗ, उत्तरे निशायाः – उत्तरनिशा – ರಾತ್ರಿಯ ಉತ್ತರ ಭಾಗ, मध्यं हस्तस्य – मध्यहस्तः – ಕೈಯ ಮಧ್ಯಭಾಗ. पूर्वं अह्नः – पूर्वाह्णः – ಹಗಲಿನ ಮೊದಲ ಭಾಗ, अपरम् अह्नः – अपराह्णः। मध्यम् अह्नः – मध्याह्नः – ಹಗಲಿನ ಮಧ್ಯಭಾಗ. उत्तरं कायस्य – उत्तरकायः। पूर्वं कायस्य पूर्वकायः। अर्धं रात्रेः – अर्धरात्रम्। अर्धं कायस्य – अर्धकायः।

2) द्वितीया तत्पुरुषः – दुःखम् अतीतः – दुःखातीतः – ದುಃಖವನ್ನು ಮೀರಿದವ. **कृष्णं श्रितः – कृष्णश्रितः –** ಕೃಷ್ಣನನ್ನು ಆಶ್ರಯಿಸಿದವನು. ग्रामं गतः – ग्रामगतः – ಹಳ್ಳಿಗೆ ಹೋದವನು. अश्वम् आरूढः – अश्वारूढः – ಕುದುರೆಯನ್ನು ಏರಿದವನು. नरकं पतितः – नरकपतितः – ನರಕಕ್ಕೆ ಬಿದ್ದವನು. दुःखं प्राप्तः – दुःखप्राप्तः – ದುಃಖವನ್ನು ಹೊಂದಿದವನು. सुखप्राप्तः। विद्याम् आपन्नः – विद्यापन्नः – ವಿದ್ಯೆಯನ್ನು ಹೊಂದಿದವನು. अन्नं बुभुक्षुः – अन्नबुभुक्षुः – ಅನ್ನವನ್ನು ಊಟಮಾಡಲು ಬಯಸುವವ.

Sri Vidyabharathi Book Centre, Sringeri

CC-O. In Public Domain. Digitized by eGangotri

3) तृतीया तत्पुरुषः – नखैः भिन्नः – नखभिन्नः – ಉಗುರುಗಳಿಂದ ತುಂಡು ಮಾಡಲ್ಪಟ್ಟ. वाचा कलहः – वाक्कलहः – ಮಾತಿನಿಂದ ಜಗಳ. पित्रा तुल्यः – पितृतुल्यः – ತಂದೆಗೆ ಸಮಾನನು. मासेन पूर्वः – मासपूर्वः – ತಿಂಗಳ ಹಿಂದಿನ, मात्रा सदृशः – मातृसदृशः – ತಾಯಿಗೆ ಸಮಾನನು. पितृसमः। एकेन ऊनः – एकोनः – ಒಂದು ಕಮ್ಮಿಯಾಗಿರುವಂತದ್ದು. विद्यया निपुणः – विद्यानिपुणः – ವಿದ್ಯೆಯಿಂದ ನಿಪುಣನು. गुडेन मिश्रः – गुडमिश्रः – ಬೆಲ್ಲದಿಂದ ಮಿಶ್ರವಾದದ್ದು. दध्ना ओदनः – दध्योदनः ಮೊಸರಿನಿಂದ ಮಾಡಿದ ಅನ್ನ (ಮೊಸರನ್ನ) हरिणा त्रातः – हरित्रातः – ಹರಿಯಿಂದ ರಕ್ಷಿಸಲ್ಪಟ್ಟವ. लोभेन – मोहितः – लोभमोहितः – ಲೋಭದಿಂದ ಮೋಹಕ್ಕೊಳಗಾದವನು. बाणैः हतः – बाणहतः – ಬಾಣಗಳಿಂದ ಕೊಲ್ಲಲ್ಪಟ್ಟವ. दुःखेन आर्तः – दुःखार्तः – ದುಃಖದಿಂದ ದೀನನಾದವನು. विद्यया विभूषितः – विद्याविभूषितः – ವಿದ್ಯೆಯಿಂದ ಅಲಂಕರಿಸಲ್ಪಟ್ಟವನು.

4) चतुर्थी तत्पुरुषः – द्विजाय अयं – द्विजार्थम् – ಬ್ರಾಹ್ಮಣನಿಗಾಗಿ ಇರುವಂತದ್ದು – यवागूः – ಗಂಜಿ ಇತ್ಯಾದಿ. भूतेभ्यः बलिः – भूतवलिः – ಭೂತಗಳಿಗಾಗಿ ಹಾಕುವ ಬಲ್ಯನ್ನ गवे हितम् – गोहितम् – ದನಕ್ಕಾಗಿ ರಕ್ಷಿಸಲ್ಪಟ್ಟ ವಸ್ತು. यूपाय दारूः – यूपदारूः – ಯಜ್ಞಸ್ತಂಭಕ್ಕಾಗಿ ಇರುವ ಮರ. कुण्डलाय हिरण्यम् – कुण्डलहिरण्यम् – ಕಂಡಲ ನಿರ್ಮಿಸಲು ತಂದಿರುವ ಚಿನ್ನ. घटाय मृत् – घटमृत् – ಮಡಿಕೆಯ ನಿರ್ಮಾಣಕ್ಕೆ ತಂದಿರುವ ಮಣ್ಣು. गुरवे दक्षिणा – गुरुदक्षिणा – ಗುರುವಿಗಾಗಿ ಕೊಡಲು ತಂದಿರುವ ದಕ್ಷಿಣೆ. पुत्राय रक्षितम् – पुत्ररक्षित् – ಮಕ್ಕಳಿಗೆ ಕಾದಿಟ್ಟ ವಸ್ತು. प्रजाभ्यः सुखम् – प्रजासुखम् – ಪ್ರಜೆಗಳ ಸುಖಕ್ಕಾಗಿ ಮಾಡುವ ಕಾರ್ಯ.

5) पञ्चमी तत्पुरुषः – चोरात् भयम् – चोरभयम् ಕಳ್ಳರಿಂದ ಭಯ. व्यघ्रात् भयम् – व्याघ्रभयम् – ಹುಲಿಯಿಂದ ಭಯ. चोरात् भीतः – चोरभीतः – ಕಳ್ಳರಿಂದ ಹೆದರಿದವ. चोरात् भीतिः – चोरभीतिः। चोरात् भीः – चोरभीः। स्वर्गात् पतितः – स्वर्गपतितः – ಸ್ವರ್ಗದಿಂದ ಬಿದ್ದವನು. पापात् मुक्तः – पापमुक्तः – ಪಾಪದಿಂದ ಬಿಡುಗಡೆ ಹೊಂದಿದವನು. वृकात् भीतिः वृकभीतिः – ತೋಳದಿಂದ ಹೆದರಿಕೆ. ज्ञातिभ्यः भीः – ज्ञातिभीः – ಬಂಧುಗಳ ಕಾಟದಿಂದ ಆಗುವ ಭಯ. बन्धात् मुक्तः – बन्धमुक्तः – ಬಂಧನದಿಂದ ಬಿಡುಗಡೆ ಹೊಂದಿದವ. ग्रामात् निर्गतः – ग्रामनिर्गतः। अधर्मात् जुगुप्सा – अधर्मजुगुप्सा। भोगोपरतः – ಭೋಗದಿಂದ ನಿವೃತ್ತಿ ಹೊಂದಿದವನು, ವೈರಾಗ್ಯಶಾಲಿ.

6) षष्ठी तत्पुरुषः – राज्ञः पुरुषः राजपुरुषः – ರಾಜನ ಮಗ. वृक्षस्य मूलम् – वृक्षमूलम् – ಮರದ ಬುಡ. विवेचनायाः अवसरे – विवेचनावसरे। तरोः छाया –तरुच्छाया – ಮರದ ನೆರಳು. देवानां पूजकः – देवपूजकः – ದೇವರ ಪೂಜೆ ಮಾಡುವವ.सर्वेषां महान् – सर्वमहान् – ಎಲ್ಲರಿಗೂ ದೊಡ್ಡವ. स्वस्य भवनं – स्वभवनम्। राज्ञः आज्ञा – राजाज्ञा। लोकानां रञ्जनम् – लोकरञ्जनम्। राज्ञः सभा – राजसभा। नद्याः तीरम् – नदीतीरम्। पुत्राणां अपराधः पुत्रापराधः। पुत्रस्य जन्म – पुत्रजन्म। मातुः भक्तः मातृभक्तः। नायकस्य लक्षणं – नायकलक्षणम्। भोजनस्य वेला – भोजनवेला। ओदनस्य परिवेषकः – ओदनपरिवेषकः – ಅನ್ನದ (ಅನ್ನವನ್ನು) ಬಡಿಸುವವ. भुवः भर्ता – भूभर्ता – ಭೂಮಿಯ ಒಡೆಯ. नरपतिः। विद्यानां गुरुः – विद्यागुरुः । भुवः शिरः – भूशिरः। सूर्यस्य उदयः – सूर्योदयः। दिनानां त्रयं – दिनत्रयम्। उपजीविकायाः साधनम् – अपजीविका साधनम्। विवाहस्य समयः – विवाह समयः। वित्तस्य अपहारकः – वित्तापहारकः। स्वस्य कण्ठः – स्वकण्ठः। पार्थिवानां उचितम् – पार्थिवोचितम्। स्वस्य स्थानं – स्वस्थानं, सुवर्णस्य ग्रन्थिः – सुवर्णग्रन्थिः।

Sri Vidyabharathi Book Centre, Sringeri

CC-0. In Public Domain. Digitized by eGangotri

7) **सप्तमी तत्पुरुषः** – अक्षेषु शौण्डः – अक्षशौण्डः ಜೂಜಾಟದಲ್ಲಿ ನಿಪುಣನು. कलासु चतुरः – कलाचतुरः – ಕಲೆಗಳಲ್ಲಿ ನಿಪುಣನು. वाक्येषु पटुः – वाक्यपटुः – ಮಾತನಾಡುವುದರಲ್ಲಿ ನಿಪುಣನು. कार्येषु कुशलः – कार्यकुशलः – ಕಾರ್ಯಗಳಲ್ಲಿ ಕುಶಲನು. कर्मणि कुशलः – कर्मकुशलः – ಕೆಲಸದಲ್ಲಿ ಕುಶಲನು. आतपे शुष्कः – आतपशुष्कः – ಬಿಸಿಲಿನಲ್ಲಿ ಒಣಗಿದ್ದು, स्थाल्यां पाकः – स्थालीपाकः – ಬಾಣಲೆಯಲ್ಲಿ ಬೆಂದದ್ದು, ईश्वरे अधीनः ईश्वराधीनः – ದೇವರಲ್ಲಿ ಅಧೀನನು. तीर्थकाकः – ತೀರ್ಥಸ್ಥಳದಲ್ಲಿ ಕಾಗೆಯಂತಿರುವವನು. कूपे मण्डूकः – कूपमण्डूकः – ಬಾವಿಯಲ್ಲಿ ಕಪ್ಪೆಯಂತಿರುವವನು. (ನಿಂದಾರ್ಥ) विद्यासु गुरुः – विद्यागुरुः। प्रवासे निरतः – प्रवासनिरतः। भाषासु अभिज्ञः – भाषाभिज्ञः। शरीरे बद्धः शरीरबद्धः।

8) **नञ् तत्पुरुषः** – ಇದು ತತ್ಪುರುಷ ಸಮಾಸದ ಎರಡನೆಯ ವಿಧ. ನಿಷೇದಾರ್ಥ ಸೂಚಕವಾದ ಅವ್ಯಯವು नञ् (न) ಸಮಾಸದ ಪೂರ್ವಪದವಾಗಿದ್ದರೆ ಅದು **नञ् तत्पुरुष** ಸಮಾಸವಾಗುತ್ತದೆ. नञ् ಅವ್ಯಯವು ವ್ಯಂಜನಗಳ ಹಿಂದೆ अ ಮತ್ತು ಸ್ವರಗಳ ಹಿಂದೆ अन् ಆಗಿ ಬರುವುದು. ಉದಾ – न ब्राह्मणः – अब्राह्मणः। न धर्मः – अधर्मः। – न अश्वः – अनश्वः। न उदारः – अनुदारः। न कुलम् अस्य – नकुलः – ಕುಲ ಇಲ್ಲದವ. न क्षरति इति – नक्षत्रम् ನಾಶವಿಲ್ಲದುದು. न सुरः – असुरः। न प्रियः – अप्रियः। न धर्म – अधर्म। न क्षत्रियः अक्षत्रियः। न सत् असत् – ಕೆಟ್ಟದ್ದು. न युक्तः – अयुक्तः। न तुल्यः – अतुल्यः – ಅಸಮಾನ. न अन्वयः – अनन्वयः। न अर्थः – अनर्थः। न अनुकूलम् – अननुकूलम्। न असूया – अनसूया। न ईश्वरः – अनीश्वरः। न आरम्भः – अनारम्भः। न आत्मन् – अनात्मन्।

9) **प्रादि – तत्पुरुषः** । ಇದು ತತ್ಪುರುಷದ ಮೂರನೇ ವಿಧ. **प्र परा** ಮುಂತಾದ ಉಪಸರ್ಗಗಳು ಪೂರ್ವಪದವಾಗಿರುವ ತತ್ಪುರುಷ ಸಮಾಸವನ್ನು **प्रादि – तत्पुरुष** ಸಮಾಸವೆನ್ನುತ್ತಾರೆ. ಉದಾ – प्रकर्षेण कम्पः प्रकम्पः – ಬಲವಾದ ಕಂಪನ. प्रकृष्टेन गतिः – प्रगतिः। प्रकृष्टेन वातः – प्रवातः ಬಲವಾದ ಗಾಳಿ – ಬಿರುಗಾಳಿ, प्रचण्डः। परागतः मुरवस्य – पराङ्मुखः – ಮುಖಹಿಂತಿರುಗಿಸಿದವನು. अभिगतः मुखम् – अभिमुखः – ಅನುಕೂಲನು. विगतः अर्थात् – व्यर्थः – ಪ್ರಯೋಜನವಿಲ್ಲದ್ದು, विगतः रूपम् – विरूपः। प्रगतः आचार्यः – प्राचार्यः। शोभनः पुरुषः – सुपुरुषः – ಒಳ್ಳೇಪುರುಷನು. कुत्सितो राजा – किंराजः – ಕೆಟ್ಟರಾಜ. कुत्सितः पुरुषः – कापुरुषः – ಕೆಟ್ಟ ಮನುಷ್ಯ. कुत्सितम् अन्नम् – कदन्नम् – ಕೆಟ್ಟ ಆಹಾರ, ಇತ್ಯಾದಿ.

4) **उपपद तत्पुरुषः** – ಇದು ತತ್ಪುರುಷ ಸಮಾಸದ ನಾಲ್ಕನೇ ವಿಧ. ಈ ಸಮಾಸದಲ್ಲಿ ಉತ್ತರ ಪದವು ಕೃದಂತವಾಗಿರುತ್ತದೆ. ಉದಾ – कुम्भं करोति इति कुमभकारः – ಕುಂಭಾರ. अग्रे जायते इति – अग्रजः – ಅಣ್ಣ, ಮೊದಲು ಹುಟ್ಟಿದವ ಎಂಬರ್ಥದಲ್ಲಿ, सामं गायति इति – सामगः। खे गच्छति इति – खगः – ಆಕಾಶಕ್ಕೆ ಹೋಗುವಂತದ್ದು ಹಕ್ಕಿ, जलं मुञ्चति इति – जलमुच् – ನೀರನ್ನು ಬಿಡುವಂತದ್ದು ಮೋಡ. द्वारि तिष्ठति इति – द्वारस्थः ದ್ವಾರದಲ್ಲಿ ನಿಲ್ಲುವವನು. निशायां चरति इति – निशाचरः – ರಾತ್ರಿ ಸಂಚರಿಸುವ ರಾಕ್ಷಸ. सूत्राणि धारयति इति – सूत्रधारः – (ಹಗ್ಗವನ್ನು ಧರಿಸುವವ) प्रियं वदति इति प्रियंवदः – ಪ್ರಿಯವಾದುದನ್ನು ಮಾತನಾಡುವವ. भुजेन गच्छति इति – भुजगः – ಹಾವು. उरसा गच्छति इति – उरगः।

ವಿ.ಸೂ. – ಸ್ವತಂತ್ರವಾದ ಕೃದಂತಗಳು ಉತ್ತರಪದವಾಗಿ ಬರುವಾಗ ಈ ಸಮಾಸವಾಗುವುದಿಲ್ಲ, ಕೇವಲ षष्ठी तत्पुरुष ಸಮಾಸವಾಗುತ್ತದೆ. ಉದಾ – जलधरः – ಇಲ್ಲಿ ಮೊದಲು धरति इति – धरः (ಹೊರುವಂತದ್ದು) ಎಂದು ಕೃದಂತ ರೂಪವಾದ ಮೇಲೆ जलस्य धरः – जलधरः ಎಂದು ष – तत्पुरुष ಸಮಾಸವಾಗುವುದು. ಹೀಗೆಯೇ – कुलस्य भूषणं – कुलभूषणम्। मधोः सूदनः – मधुसूदनः। अरीणां नन्दनः – अरिनन्दनः – ಶತ್ರುಗಳಿಗೆ ಸಂತೋಷವನ್ನುಂಟು ಮಾಡುವವ.

CC-O. In Public Domain. Digitized by eGangotri

कर्मधारय समासः

ಕರ್ಮಧಾರಯ ಸಮಾಸದ ವಿಗ್ರಹವಾಕ್ಯದಲ್ಲಿ ಎರಡೂ ಪದಗಳೂ ಪ್ರಥಮ ವಿಭಕ್ತಿಯಲ್ಲಿ ಇರುತ್ತವೆ. ಸಾಮಾನ್ಯವಾಗಿ ಪೂರ್ವಪದವು ಉತ್ತರ ಪದಕ್ಕೆ ಮತ್ತು ಉತ್ತರ ಪದವು ಪೂರ್ವಪದಕ್ಕೆ ವಿಶೇಷಣವಾಗಿದ್ದು, ಉತ್ತರ ಪದಾರ್ಥ ಪ್ರಧಾನವಾಗಿದ್ದರೆ ಕರ್ಮಧಾರಯ ಸಮಾಸ. ಇದರಲ್ಲಿ ಎಂಟು ವಿಧ.

1) विशेषण पूर्वपद कर्मधारयः – ಇದರಲ್ಲಿ ಪೂರ್ವಪದವು ವಿಶೇಷಣವಾಗಿದ್ದು, ಉತ್ತರ ಪದವು ವಿಶೇಷ್ಯವಾಗಿರುತ್ತದೆ. ಉದಾ – नीलं च तत् उत्पलं च – नीलोत्पलम् । नीलानि च तानि उत्पलानि च – नीलोत्पलानि। नीलः च असौ मेघः च – नीलमेघः। गम्भीरः च असौ नादः च – गम्भीरनादः। कृष्णः च असौ सर्पः च – कृष्णसर्पः। महान् च असौ राजा च – महाराजः। प्रिया च असौ भार्या च प्रियभार्या। श्वेतं च तत् वस्त्रं च – श्वेतवस्त्रम्। परमश्चासौ राजा च – परमराजः – ಶ್ರೇಷ್ಠನಾದ ರಾಜ रमणीया च असौ लता च – रमणीयलता। परमश्च असौ श्रेष्ठश्च – परमश्रेष्ठः। महत् च तत् काव्यम् च – महाकाव्यम्। प्रथमश्च असौ आश्रमश्च – प्रथमाश्रमः। उत्तमाः च ते गुणाः च – उत्तमगुणाः।

(ವಿ.ಸೂ. ಪುಲ್ಲಿಂಗದಲ್ಲಿ ಮತ್ತು ಸ್ತ್ರೀಲಿಂಗದಲ್ಲಿ ನಡುವೆ असौ ಎಂಬ ಮತ್ತು ನಪುಂಸಕ ಲಿಂಗದಲ್ಲಿ तत् ಎಂಬ ಸರ್ವನಾಮವನ್ನು ಸೇರಿಸಿ ವಿಗ್ರಹವಾಕ್ಯ ಮಾಡಬೇಕು.)

2) विशेषणोभयपदकर्मधारयः – ಈ ಸಮಾಸದಲ್ಲಿ ಎರಡು ಪದಗಳೂ ವಿಶೇಷಣವಾಗಿದ್ದು ಒಂದೇ ವಿಶೇಷ್ಯದ ವಿಶೇಷಣಗಳಾಗಿರುತ್ತವೆ. ಉದಾ – शीतं च तत् उष्णं च – शीतोष्णम् (जलम्)। शुक्लः च असौ कृष्णः च – शुक्लकृष्णः। शान्तः च असौ अनुकूलः च शान्तानुकूलः, युवा च असौ खल्वाटः च – ಬೊಕ್ಕತಲೆಯ ತರುಣ, राजा च असौ ऋषिः च – राजर्षिः, महान् च असौ ऋषिः च – महर्षिः, हृष्टाः च ताः पुष्टाः च – हृष्टपुष्टाः (गावः)। नीलं च तत् उत्पलं च नीलोत्पलम्

3) उपमान पूर्वपदकर्मधारयः – ಇದರಲ್ಲಿ ಪೂರ್ವಪದವು ಉಪಮಾನವಾಚಕವಾಗಿದ್ದು, ಸಾಧಾರಣ ಧರ್ಮವು ಉಪಮೇಯವು ಉತ್ತರಪದವಾಗಿರುತ್ತದೆ. ಉದಾ – मेघः इव श्यामः – मेघश्यामः (कृष्णः) घनः इव श्यामः – घनश्यामः – ಮೋಡದಂತೆ ಶ್ಯಾಮ (ನೀಲ) ಬಣ್ಣವುಳ್ಳವನು. ಶ್ರೀ ಕೃಷ್ಣ, हंसः इव गद्गदा – हंसगद्गदा – ಹಂಸದಂತೆ ಧ್ವನಿವುಳ್ಳವಳು. छाया इव चपलः – छाया चपलः – ನೆರಳಿನಂತೆ ಚಂಚಲ, फेनः इव धवलः – फेनधवलः – ನೊರೆಯಂತೆ ಬಿಳಿ, हिमालयः इव शीतलः – हिमशीतलः, दन्तः इव धवलः – दन्तधवलः, चन्द्रः इव मुखम् – चन्द्रमुखम्।

4) उपमानोत्तरपद कर्मधारयः – ಉಪಮೇಯ ವಾಚಕವಾದ ಪದವು ಪೂರ್ವಪದವಾಗಿದ್ದು, ಉಪಮಾನ ವಾಚಕವಾದ ಉತ್ತರ ಪದದೊಡನೆ ಸೇರಿ ಸಮಾಸವಾದರೆ ಉಪಮಾನೋತ್ತರ ಪದ ಕರ್ಮಧಾರಯ ಸಮಾಸವಾಗುತ್ತದೆ. ಉದಾ – नरः सिंहः इव – नरसिंहः – ಪುರುಷ ಶ್ರೇಷ್ಠ, पुरुषः सिंहः इव – पुरुषसिंहः, मुखं कमलम् इव – मुखकमलम्। पुरुषः व्याघ्रः इव – पुरुषव्याघ्रः, राजा ऋषिः इव – राजर्षिः।

5) अवधारण पूर्वपद कर्मधारयः – ಈ ಸಮಾಸದಿಂದ ಇದೇ ಅದು ಎಂದು ನಿಶ್ಚಯಾತ್ಮಕವಾಗಿ ಹೇಳಲ್ಪಡುತ್ತದೆ. ಇಲ್ಲಿ ಉಪಮಾನ ಉಪಮೇಯಗಳಿಗೆ ಅಭೇದವಿರುವುದು. ಉದಾ विद्या एव धनम् – विद्याधनम् – ವಿದ್ಯೆಯೇ ಹಣ, मुखं एव चन्द्रः – मुखचन्द्रः, ಮುಖವೇ ಚಂದ್ರ, दुःखम् एव अग्निः – दुःखाग्निः – ದುಃಖವೇ ಬೆಂಕಿ. शोकः एव अग्निः – शोकाग्निः।

Sri Vidyabharathi Book Centre, Sringeri

CC-0. In Public Domain. Digitized by eGangotri

6) सम्भावना पूर्वपद कर्मधारयः – ಇದರಲ್ಲಿ ತಿಳಿಸಲ್ಪಡುವ ವಸ್ತು ಅಥವಾ ವ್ಯಕ್ತಿ ವಾಚಕ ಪದವು ಪೂರ್ವಪದವಾಗಿರುತ್ತದೆ. ಉತ್ತರ ಪದವು ಜಾತಿವಾಚಕವಾಗಿರುವುದು. ವಿಗ್ರಹವಾಕ್ಯದಲ್ಲಿ ಪೂರ್ವಪದದ ಬಳಿಕ इति (ಎಂಬುದು) ಬರುತ್ತದೆ. ಉದಾ आम्रः इति वृक्षः – आम्रवृक्षः – ಮಾವು ಎಂಬ ಮರ, अश्वत्थः इति वृक्षः – अश्वत्थवृक्षः, कालिदासः इति कविः – कालिदास कविः, चूतः इति वृक्षः – चूतवृक्षः, तुङ्गा इति नदी – तुङ्गानदी, युधिष्ठिरः इति राजा युधिष्ठिरराजः, सह्यः इति पर्वतः – सह्यपर्वतः, दाडिमः इति वृक्षः – दाडिमवृक्षः।

7) मयूरव्यंसकादि कर्मधारयः – मयूरव्यंसक ಈ ಮೊದಲಾದ ಸಮಾಸಗಳು ಕೆಲವೊಮ್ಮೆ ವಿಶೇಷಣೋತ್ತರ ಪದಗಳಾಗಿಯೂ, ಇನ್ನು ಕೆಲವೊಮ್ಮೆ ಅನಿಯಮಿತಗಳಾಗಿಯೂ ಇರುತ್ತವೆ.

1) ನಿಂದಾರ್ಥಕ ಕರ್ಮಧಾರಯ ಸಮಾಸಗಳೂ ವಿಶೇಷಣೋತ್ತರ ಪದಗಳಾಗಿವೆ. ಉದಾ – नरः च असौ अधमः च – नराधमः।

2) ಅನಿಯಮಿತ ಉದಾ अन्यः देशः देशान्तरम्, अन्यत् वनम् – वनान्तरम्, अन्यः ग्रमः – ग्रामान्तरम्, न विद्यते किञ्चनम् अस्य – अकिञ्चनः, अश्रेणयः श्रेणयः सम्पद्यमानाः कृताः – श्रेणीकृताः

8) मध्यमपदलोपी कर्मधारयः – (शाकपार्थिवादि कर्मधारय) – ಈ ವಿಧದ ಸಮಾಸದ ವಿಗ್ರಹವಾಕ್ಯಗಳ ಮೊದಲನೆಯ ಪದವು ಒಂದು ಸಮಾಸವೇ ಆಗಿದ್ದು, ಅದರ ಉತ್ತರ ಪದವು ಲೋಪ ಹೊಂದಿ **शाकपार्थिव** ಮೊದಲಾದ ಸಮಾಸವಾಗುತ್ತದೆ. ಇದನ್ನು ಮಧ್ಯಮ ಪದಲೋಪೀ ಕರ್ಮಧಾರಯ ಸಮಾಸವೆಂದು ಕರೆಯುತ್ತಾರೆ. ಉದಾ – शाकप्रियः पार्थिवः – शाकपर्थिवः ಇಲ್ಲಿ शाकप्रियः ಎಂಬುದು ಸಮಾಸವೇ ಆಗಿದೆ. (शाकास्य प्रियः) ಇದರ ಉತ್ತರ ಪದವಾದ प्रिय शाकपार्थिवः ಎಂಬಲ್ಲಿ ಲೋಪವಾಗಿದೆ. शर्करामिश्रम् अन्नम् – शर्करान्नम्, पर्णनिर्मिता कुटी – पर्णकुटी, छायाप्रधानः तरुः – छायातरुः, देवपूजकः ब्राह्मणः – देवब्राह्मणः।

9) कृदन्तोभयपद कर्मधारयः – ಒಬ್ಬನೇ ವ್ಯಕ್ತಿಯು ಒಂದರ ಹಿಂದೆ ಇನ್ನೊಂದರಂತೆ ಗೈದ ಎರಡು ಕ್ರಿಯೆಗಳನ್ನು ಎರಡು ಕೃದಂತಗಳಿಂದ ಹೇಳಿದರೆ ಈ ಸಮಾಸವಾಗುತ್ತದೆ. ಉದಾ – आदौ स्नातः, पश्चात् अनुलिप्तः – स्नातानुलिप्तः – ಸ್ನಾನ ಮಾಡಿ ಅನಂತರ ಲೇಪಿಸಿಕೊಂಡವ आदौ पीतम् पश्चात् उद्गीर्णम् – पीतोद्गीर्णम्, ಕುಡಿದು ಉಗುಳಲ್ಪಟ್ಟ, आदौ जातः पश्चात् मृतः – जातमृतः – ಹುಟ್ಟಿ ಸತ್ತವನು.

10) उपसर्गपदकर्मधारयः – ಈ ಸಮಾಸದಲ್ಲಿ ಒಂದೇ ವಿಭಕ್ತಿಯ ಪದಗಳು ಇರುತ್ತವೆ. ಪ್ರಾದಿ ತತ್ಪುರುಷ ಸಮಾಸದಲ್ಲಿ ಈ ನಿಯಮವಿಲ್ಲ. ಉದಾ – अतिशयितः वेगः – अतिवेगः, अनुगतं रूपम् – अनुरूपम्, अनुरुपः कामः – अनुकामः, ईषत् रक्तः – आरक्तः – ಸ್ವಲ್ಪ ಕೆಂಪಾದ, कुत्सिता सरित् – कुसरित् – ಕೆಟ್ಟ ನದಿ, विभिन्नः देशः – विदेशः, शोभनं पुष्पम् – सुपुष्पम्; शोभनः जनः – सुजनः – सुजनः, सुतराम् अल्पम् – स्वल्पम् – दुष्टः जनः – दुर्जनः।

11) ''अन्य'' ಎಂಬರ್ಥದಲ್ಲಿ **''अन्तर''** ಎಂಬ ಪದವು ಸಮಾಸದ ಕೊನೆಯಲ್ಲಿ ಬರುತ್ತದೆ. ಉದಾ – अन्यः गजः – गजान्तरम्, अन्या शाला – शालान्तरम्, अन्या भाषा – भाषान्तरम्, अन्यं वनं – वनान्तरम्।

CC-O. In Public Domain. Digitized by eGangotri

द्विगु समासः

''संख्यापूर्वो द्विगुः'' – ಇದು ತತ್ಪುರುಷ ಸಮಾಸದ ಪ್ರಭೇದವು. ಸಂಖ್ಯಾವಾಚಕ ಪದವು ನಾಮಪದಕ್ಕಿಂತ ಮೊದಲು ಇದ್ದರೆ ದ್ವಿಗು ಸಮಾಸವಾಗುವುದು. ದ್ವಿಗು ಸಮಾಸದಿಂದ ಸಮೂಹ, ಅಪತ್ಯ (ಮಗು) ಮೊದಲಾದ ಅರ್ಥಗಳು ತಿಳಿಸಲ್ಪಡುತ್ತವೆ. ಸಮಸ್ತ ಪದವು ಸಮೂಹವಾಚಕವಾದಾಗ ಕೆಲವು ಕಡೆ ಈ ಕಾರಾಂತವೂ, ಕೆಲವು ಕಡೆ ನಪುಂಸಕಲಿಂಗವೂ ಆಗುತ್ತದೆ. ಉದಾ –

त्रयाणां लोकानां समाहारः – त्रिलोकी, पञ्जानां वटानां समाहारः – पञ्चवटी – ಐದು ಆಲದ ಮರಗಳ ಗುಂಪು, त्रयाणां भुवनानां समाहारः – त्रिभुवनं, चतुर्णां युगानां समाहारः – चतुर्युगम्, षण्णां मातॄणाम् अपत्यं पुमान् – षाण्मातुरः, पञ्चानां गवां समाहारः – पञ्चगावम्, द्वयोः रात्र्योः समाहारः – द्विरात्रम् – नवानां रात्रीणां समाहारः नवरात्रम्, पञ्चानां पात्राणां समाहारः – पञ्चपात्रं, अष्टानां अध्यायानां समाहारः – अष्टाध्यायी, तिसृणां रात्रीणां समाहारः – त्रिरात्रम्, त्रिलोकम् – त्रयाणां लोकानां समाहारः।

द्वन्द्वसमास

उभयपदार्थ प्रधानो द्वन्द्वः।

ಸಮಸ್ತ ಪದದಲ್ಲಿರುವ ಎಲ್ಲಾ ಅರ್ಥಗಳೂ ಮುಖ್ಯವಾಗಿದ್ದರೆ ದ್ವಂದ್ವ ಸಮಾಸವೆಂದು ಹೇಳುತ್ತಾರೆ. ನಾಮಪದಗಳು ಎರಡೇ ಇದ್ದಲ್ಲಿ ಸಮಸ್ತ ಪದವು ದ್ವಿವಚನದಲ್ಲೂ, ಎರಡಕ್ಕಿಂತ ಹೆಚ್ಚಿದ್ದರೆ ಬಹುವಚನದಲ್ಲೂ ಇರುತ್ತದೆ. ಇದು ಎರಡು ವಿಧ.

1) इतरेतर द्वन्द्व – ಈ ಸಮಾಸದಲ್ಲಿ ಎರಡು ಅಥವಾ ಹೆಚ್ಚಿನ ಪದಗಳು ಪ್ರತ್ಯೇಕವಾಗಿ ತಿಳಿಸಲ್ಪಟ್ಟು, ಪ್ರತಿಯೊಂದು ಪದವೂ ಪ್ರಧಾನವಾಗಿರುತ್ತದೆ. ಸಮಾಸದ ಕೊನೆಯ ಪದದ ಲಿಂಗವೇ ಸಮಸ್ತ ಪದದ ಲಿಂಗವಾಗುತ್ತದೆ. ಎರಡು ಪದಗಳು ಸೇರಿ ಸಮಾಸವಾದರೆ ಸಮಸ್ತ ಪದವು ದ್ವಿವಚನದಲ್ಲೂ, ಹೆಚ್ಚು ಪದಗಳಿದ್ದರೆ ಬಹುವಚನದಲ್ಲೂ ಇರುತ್ತದೆ. ಉದಾ –

1) द्विपद – इतरेतर द्वन्द्व – रामलक्ष्मणौ – रामः च लक्ष्मणः च, आहारनिद्रे (स्त्री. लि. ದ್ವಿ. ವಚನ) आहारः च निद्रा च, कौसल्याकैकेय्यौ – कौसल्या च कैकेयी च, पार्वती परमेश्वरौ – पार्वती च परमेश्वरः च, हरिहरौ – हरिः च हरः च, तरुलते – तरुः च लता च (स्त्री. लि.) शिशिरवसन्तौ – शिशिरश्च वसन्तश्च, कुक्कुटमयूर्यौ – कुक्कुटश्च मयूरी च (श्त्री. लि. द्वि. व.) ಕೋಳಿ ಮತ್ತು ಹೆಣ್ಣುನವಿಲು फलपुष्पाणि – फलानि च पुष्पाणि च। गजाश्वौ – गजः च अश्वः च, केशवश्च बलरामश्च – केशवबलरामौ, देवाश्च दानवाश्च – देवदानवाः, रूपं च गुणश्च – रूपगुणौ।

Sri Vidyabharathi Book Centre, Sringeri

CC-O. In Public Domain. Digitized by eGangotri

2) बहुपद इतरेतर द्वन्द्वः – रामश्च लक्ष्मणश्च भरतश्च शत्रुघ्नश्च – रामलक्ष्मणभरतशत्रुघ्नाः, आहारः च निद्रा च भयं च मैथुनं च – आहारनिद्राभयमैथुनानि, आयुः च आरोग्यं च ऐश्वर्यं च – आयुरारोग्यैश्वर्याणि, कन्दाः च मूलानि च फलानि च – कन्दमूलफलानि, गन्धः च अक्षताः च पुष्पाणि च – गन्धाक्षतपुष्पणि, कौसल्या च सुमित्रा च कैकेयी च – कौसल्यासुमित्राकैकेय्यः, ब्रह्मा च विष्णुश्च महेश्वरश्च – ब्रह्मविष्णुमहेश्वराः, धर्मश्च अर्थश्च कामश्च मोक्षश्च – धर्मार्थकाममोक्षाः, युधिष्ठिरभीमार्जुननकुलसहदेवाः ।

3) समाहारद्वन्द्व समासः – ಈ ಸಮಾಸದಲ್ಲಿ ಸೇರಿದ ಪದಗಳು ಸಮೂಹಾರ್ಥವನ್ನು ತಿಳಿಸುತ್ತವೆ. ಇದು ಯಾವಾಗಲೂ ಏಕವಚನ ನಪುಂಸಕಲಿಂಗದಲ್ಲಿಯೇ ಇರುತ್ತದೆ. ಸಮೂಹಾರ್ಥವೇ ಪ್ರಧಾನವಾಗಿರುತ್ತದೆ. ಉದಾ –

पाणी च पादौ च एतेषां समाहारः पाणिपादम् – ಎರಡು ಕೈಗಳು ಎರಡು ಪಾದಗಳು ಇವುಗಳ ಒಂದು ಗುಂಪು ಉದಾ – पाणिपादं प्रक्षालय – ಕೈಕಾಲುಗಳನ್ನು ತೊಳೆ अक्षिणी च भ्रुवौ च एतेषां समाहारः अक्षिभ्रुवम् – ಕಣ್ಣು ಹುಬ್ಬುಗಳು, रथिकाः च अश्वारोहाः च एतेषां समाहारः – रथिकाश्वरोहम् ಉದಾ – राजा रथिकाश्वरोहं नयति – ರಾಜನು ರಥಿಕ ಮತ್ತು ಕುದುರೆ ಸವಾರರ ಗುಂಪನ್ನು ಕರೆದೊಯ್ಯುತ್ತಿದ್ದಾನೆ. आहारः च निद्रा च भयं च मैथुनं च एतेषां समाहारः – आहारनिद्राभयमौथुनम् – ಇಲ್ಲಿ ನಾಲ್ಕು ಪ್ರಾಣಿ ಜೀವನದ ಗುಣಗಳ ಸಮೂಹ ಎಂದರ್ಥ. ಆಹಾರ ನಿದ್ರಾ ಭಯ ಮೈಥುನಗಳು, अक्षिणी च श्रोत्रौ च एतेषां समहाराः – अक्षिश्रोत्रम् – ಕಣ್ಣು ಕಿವಿಗಳು, मांसं च शोणितं च एतयोः समाहारः – मांसशोणितम् – ಮಾಂಸ ರಕ್ತ, अश्वः च हस्ती च रथः च एतेषां समाहारः – अश्वहस्तिरथम् – ಕುದುರೆ ಆನೆ ರಥಗಳು, शुकाः च बकाः च एतेषां समाहारः – शुकबकम् – ಗಿಳಿ ಬಕ, उष्ट्राः च खराः च एतेषां समाहारः – उष्ट्रखरम् – ಒಂಟೆ ಮತ್ತು ಕತ್ತೆಗಳು, मशकाः च मत्कुणाः च एतेषां समाहारः – मशकमत्कुणम् – ಸೊಳ್ಳೆ, ತಿಗಣೆಗಳು, गङ्गा च सिन्धुः च एतयोः समाहारः – गङ्गासिन्धु, अहिश्व नकुलश्च एतयोः समाहारः – अहिनकुलम् – ಹಾವು ಮುಂಗುಸಿಗಳು, गावः च व्याघ्राः च एतेषां समाहारः – गोव्याघ्रम्, समिधः च कुशाः च, एतेषां समाहारः – समित्कुशम्

3) एकशेष वृत्तिः – ಈ ವೃತ್ತಿಯಲ್ಲಿ ಒಂದೇ ಪದವು ಉಳಿಯುತ್ತದೆ. ಪದಗಳು ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳಲ್ಲಿದ್ದರೆ ಪುಲ್ಲಿಂಗ ಪದವು ಉಳಿಯುತ್ತದೆ. ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಿದ್ದರೆ ನಪುಂಸಕ ಲಿಂಗದ ಪದವು ಉಳಿಯುತ್ತದೆ. ಸಾಮಾನ್ಯವಾಗಿ ಈ ಸಮಾಸವು ಒಂದೇ ಜಾತಿಯ ಸ್ತ್ರೀ ಪುರುಷ ವಾಚಕ ಪದಗಳಿಂದ ಉಂಟಾಗಿರುತ್ತದೆ. ಉದಾ –

हंसः च हंसी च – हंसौ – ಗಂಡು ಮತ್ತು ಹೆಣ್ಣು ಹಂಸಗಳು, भ्राता च स्वसा च – भ्रातरौ – ಅಣ್ಣ ತಂಗಿಯರು, माता च पिता च – पितरौ – ತಾಯಿ ತಂದೆಯರು ಅಥವಾ मतापितरौ, श्रश्रूः च श्वशुरः च – श्वशुरौ – ಅತ್ತೆ ಮಾವಂದಿರು अथवा श्वश्रूश्वशुरौ, बालकश्च वालकश्च – बालकौ, युवतिश्च युवतिश्च – युवती कुक्कुटी च कुक्कुटश्च – कुक्कुटौ – ಹೆಣ್ಣು ಗಂಡು ಕೋಳಿಗಳು, ब्राह्मणश्च ब्राह्मणी च – ब्राह्मणौ, अजश्च अजा च – अजौ

बहुव्रीहि समासः

अन्यपदार्थप्रधानः बहुव्रीहिः । ಸಮಸ್ತ ಪದವು ಅನ್ಯ ಪದಾರ್ಥಕ್ಕೆ ವಿಶೇಷಣವಾಗಿದ್ದರೆ ಅದು ಬಹುವ್ರೀಹಿ ಸಮಾಸವಾಗುತ್ತದೆ. ಈ ಸಮಾಸದಲ್ಲಿ ಅನ್ಯ ಪದಾರ್ಥಕ್ಕೆ ಪ್ರಾಧಾನ್ಯತೆ ಇರುತ್ತದೆ. ಕೆಲವು ಕರ್ಮಧಾರಯ ಸಮಾಸಗಳು ಅನ್ಯ ಪದಾರ್ಥಕ್ಕೆ ವಿಶೇಷಣವಾಗಿದ್ದರೆ ಬಹುವ್ರೀಹಿ ಸಮಾಸಗಳಾಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಉದಾ – गम्भीरनादः – गम्भीरः च असौ नादः च ಎಂಬುದು ಕರ್ಮಧಾರಯ ಸಮಾಸ. ಆದರೆ ಇದು ಬೇರೊಂದು ಪದಕ್ಕೆ ವಿಶೇಷಣವಾಗಿದ್ದರೆ ಬಹುವ್ರೀಹಿ ಸಮಾಸವಾಗುತ್ತದೆ. ಉದಾ – गम्भीरः नादः यस्य सः – गम्भीरनादः – व्याघ्रः। महावाहुः – महान् च असौ वाहुः च – ಇದು ಕರ್ಮಧಾರಯ ಸಮಾಸ. ಆದರೆ महान्तौ बाहू यस्य सः – ಎಂದು ವಿಗ್ರಹ ವಾಕ್ಯ ಮಾಡಿದರೆ ಮಹಾ ಭುಜಗಳುಳ್ಳ ರಾಜನು ಎಂದು ಅನ್ಯ ಪದಾರ್ಥಕ್ಕೆ ವಿಶೇಷಣವಾಗಿ ಬಹುವ್ರೀಹಿ ಸಮಾಸವಾಗುವುದು. ಬಹುವ್ರೀಹಿ ಸಮಾಸದಲ್ಲಿ ಎರಡು ವಿಧ – 1) समानाधिकरण बहुव्रीहिः 2) व्यधिकरण बहुव्रीहिः

1) समानाधिकरण बहुव्रीहिः – ಈ ಸಮಾಸದಲ್ಲಿ ವಿಗ್ರಹವಾಕ್ಯದ ಎರಡೂ ಪದಗಳು ಒಂದೇ ವಿಭಕ್ತಿಯಲ್ಲಿರುತ್ತವೆ. ವಿಗ್ರಹವಾಕ್ಯದಲ್ಲಿ ಬರುವ ಪದವು ದ್ವಿತೀಯಾದಿಂದ ಸಪ್ತಮೀ ತನಕ ಯಾವುದಾದರೊಂದು ಯೋಗ್ಯ ವಿಭಕ್ತಿ ರೂಪದಲ್ಲಿರುತ್ತದೆ. ಉದಾ –

प्राप्तम् उदकं यं सः – प्राप्तोदकः (ग्रामः) – ಯಾವ ಸ್ಥಳಕ್ಕೆ ನೀರು ಒದಗಿದೆಯೋ ಆ ಸ್ಥಳ – ಒಂದು ಹಳ್ಳಿ, नियतानि इन्द्रियाणि येन सः – (ब्राह्मणः) नियतेन्द्रियः – ಯಾವನಿಂದ ಇಂದ್ರಿಯಗಳು ನಿಯಂತ್ರಿಸಲ್ಪಟ್ಟಿದೆಯೋ ಅವನು, ಬ್ರಾಹ್ಮಣ, दत्तः पशुः यस्मै सः – दत्तपशुः – ಯಾರಿಗೆ ಪಶುವು ಕೊಡಲ್ಪಟ್ಟಿದೆಯೋ ಅವನು, ರೈತನು ಎಂದರ್ಥ, निर्गताः जनाः यस्मात् सः – निर्जनः (प्रदेशः)। पीतम् अम्बरं यस्य सः = पीताम्बरः (विष्णुः) ಪೀತ ಬಣ್ಣದ ಬಟ್ಟೆ ಯಾರಿಗೆ ಉಂಟೋ ಅವನು, ವಿಷ್ಣು, वीराः पुरुषाः यस्मिन् सः – वीरपुरुषः ग्रामः ವೀರರಾದ ಪುರುಷರು ಯಾವ ಪ್ರದೇಶದಲ್ಲಿ ಇದ್ದಾರೋ ಆ ಪ್ರದೇಶ, ಒಂದು ಗ್ರಾಮ, धृतं वस्त्रं येन सः – धृतवस्त्रः – ಯಾವನಿಂದ ಬಟ್ಟೆ ಧರಿಸಲ್ಪಟ್ಟಿದೆಯೋ ಅವನು, प्राप्तः आनन्दः यं सः – प्राप्तानन्दः – ಆನಂದ ಪಡೆದವನು, महाबलः – महत् वलं यस्य सः । रक्ताक्षः – रक्ते अक्षिणी यस्य सः – ಕೆಂಪಾದ ಎರಡು ಕಣ್ಣುಗಳುಳ್ಳವನು, त्रिलोचनः – त्रीणि लोचनानि यस्य सः – ಶಿವ निर्मलजला – निर्मलं जलं यस्याः सा (ನದೀ), प्राप्ताग्निः प्राप्तः अग्निः यं सः – ಅಗ್ನಿ ಹೊಂದಿದವನು, पीतोदकः – पीतम् उदकं येन सः – ಯಾವನಿಂದ ನೀರು ಕುಡಿಯಲ್ಪಟ್ಟಿದೆಯೋ ಅವನು ನೀರು ಕುಡಿದವ, कृतं कृत्यं येन सः – कृतकृत्यः – ಯಾವನಿಂದ ಕಾರ್ಯವು ಮಾಡಲ್ಪಟ್ಟಿದೆಯೋ ಅವನು, सन्तुष्टहृदयः – संन्तुष्टं हृदयं यस्य सः। दृढः निश्चयः यस्य सः – दृढनिश्चयः। लम्बौ कर्णौ यस्य सः – लम्बकर्णः। विदितः वृत्तान्तः येन सः – विदितवृत्तान्तः (ವೃತ್ತಾಂತ ತಿಳಿದವ) जितानि इन्द्रियाणि येन सः – जितेन्द्रियः। निर्गतं धनं यस्मात् सः निर्धनः। व्यर्थ श्रमः यस्य सः – व्यर्थश्रमः। आसन्नः मृत्युः यस्य सः – आसन्नमृत्युः। समारोपितः संस्कारः येन सः – समारोपितसंस्कारः। जिता तन्द्रिः येन सः – जिततन्द्रिः। प्रीतं हृदयं येन सः – प्रीतहृदयः। अधीतानि सर्वशास्त्राणि येन सः – अधीतसर्वशास्त्रः। चारु च तत् दर्शनं च – चारुदर्शनम्। चारुदर्शनं यस्य सः – चारुदर्शनः। स्थिरा मतिः यस्य सः – स्थिरमतिः। मन्दा बुद्धिः यस्य सः मन्दबुद्धिः।

2) व्यधिकरण बहुव्रीहिः – ವಿಗ್ರಹ ವಾಕ್ಯದಲ್ಲಿ ಪದಗಳು ಬೇರೆ ಬೇರೆ ವಿಭಕ್ತಿಯಲ್ಲಿದ್ದರೆ ಅದು ವ್ಯಧಿಕರಣ ಬಹುವ್ರೀಹಿ. ಉದಾ चक्रपाणिः – चक्रं पाणौ यस्य सः – ಯಾವನ ಕೈಯಲ್ಲಿ ಚಕ್ರವಿದೆಯೋ ಅವನು, ವಿಷ್ಣು, नीलः कण्ठे यस्य सः – ನೀಲಿಯು ಯಾವನ ಕುತ್ತಿಗೆಯಲ್ಲಿದೆಯೋ ಅವನು, ಶಿವ.

चन्द्रमौलिः – चद्रः मौलौ यस्य सः – ಯಾವನ ತಲೆಯಲ್ಲಿ ಚಂದ್ರನಿರುವನೋ ಅವನು, ಶಿವ. पद्मनाभः – पद्मं नाभौ यस्य सः – ಯಾವನ ಹೊಕ್ಕಳಲ್ಲಿ ಕಮಲವಿದೆಯೋ ಅವನು (ವಿಷ್ಣು). मृगाक्षी – मृगस्य अक्षिणी इव अक्षिणी यस्याः सा – ಜಿಂಕೆಯಂತೆ ಎರಡು ಕಣ್ಣುಗಳುಳ್ಳವಳು मृगलोचना – मृगस्य लोचने इव लोचने यस्याः सा – ಜಿಂಕೆಯ ಕಣ್ಣುಗಳಂತೆ ಎರಡು ಕಣ್ಣುಗಳುಳ್ಳವಳು. गजाननः – गजस्य आनम् इव आननं यस्य सः – ಗಣಪತಿ. तपोधनः – तपः एव धनं यस्य सः – ಋಷಿ. सुगन्धिः – शोभनः गन्धः यस्य सः। द्विपादः – द्वौ पादौ यस्य सः। चतुष्पादः – चत्वारः पादाः यस्य सः – ನಾಲ್ಕು ಕಾಲುಗಳುಳ್ಳದ್ದು, ಪ್ರಾಣಿ. व्याघ्रपादः – व्याघ्रस्य पादः इव पादः यस्य सः। हरिणाक्षी – हरिणस्य अक्षिणी इव अक्षिणी यस्याः साः। विशालाक्षी – विशाले अक्षिणी यस्याः सा। शूलपाणिः – शूलं पणौ यस्य सः। शस्त्रं पाणौ यस्य सः – शस्त्रपाणिः।

Sri Vidyabharathi Book Centre, Sringeri

CC-O. In Public Domain. Digitized by eGangotri

उपमान बहुव्रीहिः – ಉದಾ – कमलाननः – कमलम् इव अननं यस्य सः। अरविन्दलोचना अरविन्दे इव लोचने यस्याः सा। मेघनादः – मेघस्य नादः इव नादः यस्य सः। वृकोदरः – वृकस्य उदरम् इव उदरं यस्य सः (ಭೀಮ) ತೋಳದ ಹೊಟ್ಟೆಯಂತೆ ಹೊಟ್ಟೆ ಉಳ್ಳವನು.

नञ् बहुव्रीहिः – अविद्यमानः पुत्रः यस्य सः अपुत्रः। अनन्तः – न विद्यते अन्तः यस्य सः। अनादिः – न आदिः यस्य सः।

3) **प्रादि बहुव्रीहिः** – प्रबलः – प्रकृष्टं बलं यस्य सः। निर्भयः – निर्गतं भयं यस्मात् सः। अवमुखः – ಬಾಗಿದ ಮುಖವುಳ್ಳವನು अवनतं मुखं यस्य सः। विधवा – विगतः धवः यस्याः सा – ಗಂಡನನ್ನು ಕಳೆಕೊಂಡವಳು. अतिबलः - अतिशयितं बलं यस्य सः। अभिमुखः – अभिगतं मुखं यस्य सः। निर्दयः – निर्गता दया यस्मात् सः। सुहृत् – शोभनं हृदयं यस्य सः – ಒಳ್ಳೇ ಹೃದಯವುಳ್ಳವ, ಸ್ನೇಹಿತ.

4) **संख्या बहुव्रीहिः** – त्रिलोचनः – त्रीणी लोचनानि यस्य सः ಶಿವ पञ्चबाणः – पञ्चबाणाः यस्य सः - मन्मथः। द्वित्राः – द्वौ वा त्रयो वा – ಇಬ್ಬರೋ ಮೂವರೋ ಜನರು. त्रिचतुराः–त्रयो वा चतुरो वा – ಮೂವರೋ ನಾಲ್ವರೋ, ಮೂರುನಾಲ್ಕು ಮಂದಿ ಎಂದರ್ಥ. पञ्चषाः – पञ्च वा षड् वा – ಐದಾರು ಮಂದಿ.

5) **सहबहुव्रीहिः** – सहपुत्रः, सपुत्रः – पुत्रेण सह यः वर्तते सः – ಮಗನೊಂದಿಗೆ ಇರುವವ.

सकामः – कामेन सह – ಆಸೆಯೊಂದಿಗೆ, सभार्यः – भार्यया सह – ಹೆಂಡತಿಯೊಂದಿಗೆ. सहोदरः, सोदरः – समानं उदरं यस्य सः। साभिमानम् अभिमानेन सह। दारपुत्रैः सह वर्तते इति – सदारपुत्रः।

6) **कर्मव्यतिहार बहुव्रीहिः** – केशाकेशि – केशेषु केशेषु गृहीत्वा इदं युद्धं प्रवृत्तम् युद्धम्।

ತಲೆಕೂದಲು ಹಿಡಿದುಕೊಂಡು ನಡೆದ ಯುದ್ಧ.

दण्डादण्डि, मुसलामुसलि (ಒನಕೆಯಿಂದ ಯುದ್ಧ). मुष्टामुष्टि।

अव्यीभाव समासः

पूर्वपदार्थप्रधानः अव्ययीभावः। ಅವ್ಯಯವು ಸಮರ್ಥವಾದ ನಾಮಪದದೊಂದಿಗೆ ಸೇರಿ ಸಮಾಸವಾದರೆ ಅದು ಅವ್ಯಯೀಭಾವ ಸಮಾಸವಾಗುತ್ತದೆ. ಸಮಸ್ತ ಪದವು ಅವ್ಯಯವಾಗಿರುತ್ತದೆ. ಈ ಸಮಾಸದಲ್ಲಿ ಸಾಮಾನ್ಯವಾಗಿ ಪೂರ್ವಪದವು ಅವ್ಯಯವಾಗಿದ್ದು ಅದರ ಅರ್ಥಕ್ಕೆ ಪ್ರಾಧಾನ್ಯತೆ ಬರುವುದು. ಕೆಲವು ಕಡೆ ನಾಮಶಬ್ದವೂ ಪೂರ್ವಪದವಾಗಿ ಇರುವುದುಂಟು. ಸಾಮಾನ್ಯವಾಗಿ ಈ ಸಮಾಸವು ವಾಕ್ಯದಲ್ಲಿ ಕ್ರಿಯಾವಿಶೇಷಣದಂತೆ ಬಳಸಲ್ಪಡುತ್ತದೆ. ಉದಾ – उपनगरम् – नगरस्य समीपे। प्रत्यहम् – अहनि अहनि ಪ್ರತಿದಿನ । शक्तिम् अनतिक्रम्य – यथाशक्ति – ಶಕ್ತಿಯನ್ನು ಮೀರದೆ ಅಂದರೆ ಶಕ್ತಿಯಿದ್ದಷ್ಟು, रूपस्य योग्यम् – अनुरूपम्। क्षेत्रस्य समीपम् उपक्षेत्रम् – ಗದ್ದೆಯ ಸಮೀಪ

CC-O. In Public Domain. Digitized by eGangotri

विघ्नानां अभावः – निर्विघ्नम्। नद्याः समीपम् = उपनदि/उपनदम्। गुणस्य योग्यम् – अनुगुणम् (ಯೋಗ್ಯತೆಯ ಅರ್ಥದಲ್ಲಿ) प्रतिगृहम् – गृहे गृहे – ಪ್ರತಿಮನೆಯಲ್ಲಿ, प्रतिदिनम् – दिने दिने – ಪ್ರತಿದಿನ, यथाविधि – विधिम् अनतिक्रम्य – ವಿಧಿಯಂತೆ. यथामति – मतिम् अनतिक्रम्य – ಬುದ್ಧಿ ಇದ್ದಷ್ಟು. अनुक्रमम् – क्रमम् अनतिक्रम्य – ಕ್ರಮವನ್ನು ಅನುಸರಿಸಿ (ಅನುಕ್ರಮಾರ್ಥದಲ್ಲಿ). सचक्रम् – चक्रेण युगपत् – ಚಕ್ರದಜೊತೆಗೆ सरथम् – रथेन युगपत्। सतृणम् – तृणमपि अपरित्यज्य – ಉದಾ सतृणं खादति – ಎಲೆಯನ್ನೂ ಬಿಡದೆ ಪೂರ್ಣವಾಗಿ ತಿನ್ನುತ್ತಾನೆ ಎಂದರ್ಥ, सबालम् – बालान् अपि अपरित्यज्य – ಮಕ್ಕಳನ್ನೂ ಬಿಡದೆ (ಮಕ್ಕಳನ್ನೂ ಸೇರಿಸಿ), अतिसीमम् – सीमानम् अतिक्रम्य – ಮೇರೆಮೀರಿ.

परोक्षम् – अक्ष्णोः परम् ಕಣ್ಣಿದುರಿಗೆ, प्रत्यक्षम् – अक्ष्णोः प्रति। आसमुद्रम् - समुद्रम् - अभिव्याप्य – ಸಮುದ್ರದ ವರೆಗೆ. आजलधि – जलधिम् अभिव्याप्य – ಸಮುದ್ರದ ವರೆಗೆ. ಹೀಗೆಯೇ – आजन्म। आकैलासम्। आचन्द्रार्कम् – ಸೂರ್ಯಚಂದ್ರರು ಇರುವವರೆಗೆ. मध्येगङ्गम् – गङ्गायाः मध्ये। शाकस्य लेशः – शाकप्रति – ಸ್ವಲ್ಪಕಾಯಿ ಪಲ್ಲೆ, यावदवकाशम् – यावत् अवकाशः तावत् – ಅವಕಾಶವಿದ್ದಷ್ಟು. यावत्तैलम् – यावत् तैलं तावत् – ಎಣ್ಣೆ ಇರುವವರೆಗೆ. सुजनम् – जनानां समूहः (ಸಮೃದ್ಧಿ ಅರ್ಥದಲ್ಲಿ) अधिवृक्षम् – वृक्षे इति। सुभिक्षम् – भिक्षाणां समृद्धिः। निर्मक्षिकम् – मक्षिकाणाम् अभावः – ನೊಣಗಳಿಲ್ಲದಿರುವಿಕೆ. प्रत्यर्थम् – अर्थम् प्रति। सूपप्रति – सूपस्य लेशः – ಸ್ವಲ್ಪ ತೋವೆ. शाकस्य लेशः – शाकप्रति। हरौ इति – अधिहरि। ग्रामं ग्रामं प्रति – प्रतिग्रामम्। समक्षं – अक्ष्णोः समीपम्।

कारकम्

ಕ್ರಿಯೆಯನ್ನು ಅನ್ವಯಿಸತಕ್ಕದ್ದೇ ಕಾರಕವು. ಕಾರಕವೆಂದರೆ ಕ್ರಿಯೆಯನ್ನು ಉಂಟು ಮಾಡತಕ್ಕದ್ದು ಎಂದರ್ಥ. ಯಾವುದಕ್ಕೆ ಕ್ರಿಯೆಯೊಡನೆ ಸಂಬಂಧವಿದೆಯೋ ಅದನ್ನು ಕಾರಕವೆಂದು ತಿಳಿಯಬೇಕು. ಪ್ರತಿಯೊಂದು ಕಾರಕವು ನಿರ್ದಿಷ್ಟವಾದ ಒಂದು ವಿಭಕ್ತಿಯನ್ನು ಹೊಂದುತ್ತದೆ. ಇಂತಹ ವಿಭಕ್ತಿಗಳನ್ನು ''ಕಾರಕ ವಿಭಕ್ತಿಗಳು'' ಎನ್ನುತ್ತಾರೆ. ಕಾರಕಗಳು ಆರು.

कर्तृकारकम् – ಈ ಕಾರಕದ ವಿಭಕ್ತಿ ಕರ್ತರಿ ಪ್ರಯೋಗದಲ್ಲಿ ಪ್ರಥಮಾ, ಕರ್ಮಣಿ ಪ್ರಯೋಗದಲ್ಲಿ तृतीया। ಕ್ರಿಯಾ ಪದವು ಹೇಳುವ ಕ್ರಿಯೆಯನ್ನು ಸ್ವತಂತ್ರವಾಗಿ ಮಾಡುವವನಿಗೆ ಅಥವಾ ಕ್ರಿಯೆಗೆ ಪ್ರೇರಕ ವ್ಯಕ್ತಿಯನ್ನು कर्तृ (कर्ता) ಎನ್ನುತ್ತಾರೆ. ಉದಾ – रामः लिखति। सुग्रीवः रामेण वालिनं घातयति। ಸುಗ್ರೀವನು ರಾಮನಿಂದ ವಾಲಿಯನ್ನು ಕೊಲ್ಲಿಸುತ್ತಾನೆ. ಕರ್ಮಣಿ ಪ್ರಯೋಗದಲ್ಲಿ ಕರ್ತೃ ಪದದ ಮೇಲೆ तृतीया ವಿಭಕ್ತಿ ಬರುತ್ತದೆ. ಉದಾ – रामेण पाठः लिख्यते – ರಾಮನಿಂದ ಪಾಠವು ಬರೆಯಲ್ಪಡುತ್ತದೆ. ಇಲ್ಲಿ रामेण ಕರ್ತೃಕಾರಕ.

ಕೃದಂತಗಳ ಯೋಗವಿದ್ದಾಗ ಕರ್ತೃ ಪದಗಳ ಮೇಲೆ षष्ठी ವಿಭಕ್ತಿ ಬರುತ್ತದೆ. ಅಂದರೆ ಇದೂ ಕರ್ತೃಕಾರಕವೆನಿಸುವುದು. ಉದಾ – कालिदासस्य कृतिः। बालकस्य पठनम्। देशस्य रक्षकः। सत्यस्य वक्ता श्रोता च दुर्लभः – ಸತ್ಯವನ್ನು ಹೇಳುವವ ಮತ್ತು ಕೇಳುವವ ವಿರಳ. सीता वनं गच्छति। कविः काव्यं रचयति। गुरुः शिष्यान् उपदिशति – ಗುರುವು ಶಿಷ್ಯರಿಗೆ ಉಪದೇಶಿಸುತ್ತಾನೆ. माता गायति। भगवान् रक्षति। सखा सहकरोति। ಗೆಳೆಯನು ಸಹಕರಿಸುತ್ತಾನೆ. पिता जपति – ತಂದೆ ಜಪ ಮಾಡುತ್ತಿದ್ದಾನೆ. नदी प्रवहति – ನದಿಯು ಹರಿಯುತ್ತದೆ. धेनुः तृणं खादति। वध्वः आभरणानि धरन्ति – ಹೆಂಗಸರು ಆಭರಣಗಳನ್ನು ಧರಿಸುತ್ತಾರೆ. स्वसा ईक्षते। ಸಹೋದರಿ ನೋಡುತ್ತಾಳೆ. गौः – क्षीरं यच्छति – ದನ ಹಾಲು ಕೊಡುತ್ತದೆ. संस्कृता वाक् पुरुषं समलंकरोति – ಸುಸಂಸ್ಕೃತವಾದ ಮಾತು ಮನುಷ್ಯನನ್ನು ಅಲಂಕರಿಸುತ್ತದೆ. भिषक् रोगं निवारयति। ವೈದ್ಯನು ರೋಗವನ್ನು ತಡೆಯುತ್ತಾನೆ. श्वा भषति – ನಾಯಿ ಬೊಗಳುತ್ತದೆ. युवा खेलति – ಯುವಕನು ಆಡುತ್ತಾನೆ.

Sri Vidyabharathi Book Centre, Sringeri

CC-0. In Public Domain. Digitized by eGangotri

2) कर्मकारकम् – ಈ ಕಾರಕದ ವಿಭಕ್ತಿ ಕರ್ತರಿ ಪ್ರಯೋಗದಲ್ಲಿ द्वितीया, ಕರ್ಮಣಿ ಪ್ರಯೋಗದಲ್ಲಿ प्रथमा।
ಉದಾ – **रामम् रामौ रामान्।**

ಯಾವುದನ್ನು ಕುರಿತು ಅಥವಾ ಆಶ್ರಯಿಸಿ ಕ್ರಿಯೆಯು ನಡೆಯುವುದೋ ಅದು ಕರ್ಮಕಾರಕ. ಕ್ರಿಯಾಪದದ ಮೇಲೆ ಏನನ್ನು ಯಾವುದನ್ನು? ಯಾರನ್ನು? ಮುಂತಾದ ಪ್ರಶ್ನೆ ಮಾಡಿದಾಗ ಉತ್ತರವನ್ನು ತಿಳಿಸುವ ಪದವನ್ನು ದ್ವಿತೀಯಾ ವಿಭಕ್ತಿಯಲ್ಲಿ ಹೇಳಬೇಕು. ಇದೇ ಕರ್ಮ. ಈ ಕರ್ಮವನ್ನು ತಿಳಿಸುವ ಪದಕ್ಕೆ ಕರ್ತರಿ ಪ್ರಯೋಗದಲ್ಲಿ ದ್ವಿತೀಯಾ ವಿಭಕ್ತಿಯು ಬರುತ್ತದೆ. ಉದಾ – कृष्णः श्लोकं पठति – ಕೃಷ್ಣನು ಶ್ಲೋಕವನ್ನು ಓದುತ್ತಾನೆ. हिन्दवः भगवद्गीतां पठन्ति। ಕರ್ಮಣಿ ಪ್ರಯೋಗದಲ್ಲಿ ಕರ್ಮಪದಕ್ಕೆ ಪ್ರಥಮಾ ವಿಭಕ್ತಿ ಬರುತ್ತದೆ. ಉದಾ – छात्रेण श्लोकः पठ्यते – ವಿದ್ಯಾರ್ಥಿಯಿಂದ ಶ್ಲೋಕವು ಓದಲ್ಪಡುತ್ತದೆ. सैनिकैः देशः रक्ष्यते – ಸೈನಿಕರಿಂದ ದೇಶವು ರಕ್ಷಿಸಲ್ಪಡುತ್ತದೆ.

चैत्रः तण्टुलं पचति – ಚೈತ್ರನು ಅಕ್ಕಿಯನ್ನು ಬೇಯಿಸುತ್ತಾನೆ. सः भगवन्तं नमति। छात्रः पुस्तकं पठति। बालकः शालां गच्छति। रामः हनुमन्तम् आलिङ्गति। कविः राजानं प्रशंसति। रोगी भिषजं निन्दति – ರೋಗಿಯು ವೈದ್ಯನನ್ನು ಬಯ್ಯುತ್ತಾನೆ.

3) करण कारकम् – ಈ ಕಾರಕದ ವಿಭಕ್ತಿ तृतीया ಉದಾ – रामेण रामाभ्यां रामैः।

ಒಂದು ಕೆಲಸ ಮಾಡಲು ಯಾವುದು ಸಾಧನವೋ ಅದಕ್ಕೆ ಕರಣವೆಂದು ಹೆಸರು. ಕರಣ ಮತ್ತು ಕರಣವಾಚಕಗಳ ಮೇಲೂ, ತೃತೀಯಾ ವಿಭಕ್ತಿಯು ಬರುತ್ತದೆ. ಉದಾ – रामः लेखन्या लिखति – ರಾಮನು ಪೆನ್ನಿನಿಂದ ಬರೆಯುತ್ತಾನೆ. बालकः कन्दुकेन क्रीडति – ಬಾಲಕನು ಚೆಂಡಿನಿಂದ ಆಡುತ್ತಾನೆ. भीमः बाहुभ्याम् एव युद्धं करोति – ಭೀಮನು ಬಾಹುಗಳಿಂದಲೇ ಯುದ್ಧವನ್ನು ಮಾಡುತ್ತಾನೆ. तन्तुना वस्त्रं भवति। ನೂಲಿನಿಂದ ವಸ್ತ್ರವು ಆಗುತ್ತದೆ. काष्टं कुठारेण छिनत्ति – ಕಟ್ಟಿಗೆಯನ್ನು ಕೊಡಲಿಯಿಂದ ಒಡೆಯುತ್ತಾನೆ. सः बेङ्गलूर नगरे अध्ययनेन वसति – ಅವನು ಬೆಂಗಳೂರು ನಗರದಲ್ಲಿ ಅಧ್ಯಯನಕ್ಕಾಗಿ ನೆಲೆಸಿದ್ದಾನೆ. सैनिकाः खड्गैः युद्धं कुर्वन्ति – ಸೈನಿಕರು ಖಡ್ಗದಿಂದ ಯುದ್ಧ ಮಾಡುತ್ತಾರೆ. नखनिकृन्तनेन नखान् कर्तयन्ति – ಉಗುರುಗತ್ತಿಯಿಂದ ಉಗುರುಗಳನ್ನು ಕತ್ತರಿಸುತ್ತಾರೆ. अणुस्फोटेन सहस्राधिकाः जनाः मृताः – ಅಣುಸ್ಫೋಟದಿಂದ ಸಾವಿರಕ್ಕಿಂತ ಹೆಚ್ಚು ಜನರು ಸತ್ತರು. अहं देवं मनसा स्मरामि – ನಾನು ದೇವರನ್ನು ಮನಸ್ಸಿನಿಂದ ಸ್ಮರಿಸುತ್ತೇನೆ. पुत्रः सत्कर्मणा पितरं तोषयति – ಮಗನು ಸತ್ಕರ್ಮದಿಂದ ತಂದೆಯನ್ನು ಸಂತೋಷಗೊಳಿಸುತ್ತಾನೆ. केन हेतुना त्वं रोदिषि? ಯಾವ ಕಾರಣದಿಂದ ನೀನು ಅಳುವಿ? कार्पासेन वस्त्रं, ऊर्णया कम्बलं तृणैः कटं च रचयन्ति – ಹತ್ತಿಯಿಂದ ಬಟ್ಟೆಯನ್ನು, ಉಣ್ಣೆಯಿಂದ ಕಂಬಳಿಯನ್ನು, ಹುಲ್ಲುಗಳಿಂದ ಚಾಪೆಯನ್ನು ರಚಿಸುತ್ತಾರೆ. चन्द्रिकया सर्वे तुष्यन्ति – ಬೆಳದಿಂಗಳಿಂದ ಎಲ್ಲರೂ ಸಂತೋಷಗೊಳ್ಳುವರು.

4) सम्प्रदानकारकम् – ಈ ಕಾರಕದ ವಿಭಕ್ತಿ चतुर्थी। ಉದಾ – रामाय रामाभ्यां रामेभ्यः। ಯಾರನ್ನು ಕುರಿತು ಅಥವಾ ಯಾರ ಉದ್ದೇಶವಾಗಿ ಒಂದು ವಸ್ತುವನ್ನು ಕೊಡುವುದು ಅಥವಾ ಒಂದು ಕೆಲಸವನ್ನು ಮಾಡುವುದು ಎಂಬುದನ್ನು ಸೂಚಿಸುವುದೇ ಸಂಪ್ರದಾನ. ಇಂತಹ ಶಬ್ದಗಳ ಮೇಲೆ ಚತುರ್ಥೀ ವಿಭಕ್ತಿಯು ಬರುತ್ತದೆ. ಉದಾ –

विप्राय गां ददाति – ಬ್ರಾಹ್ಮಣನಿಗೆ ದನವನ್ನು ಕೊಡುತ್ತಾನೆ. स्नानाय नदीं गच्छति। ಸ್ನಾನಕ್ಕಾಗಿ ನದಿಗೆ ಹೋಗುತ್ತಾನೆ. कवये धनम् अर्पयति – ಕವಿಗೆ ಹಣವನ್ನು ಕೊಡುತ್ತಾನೆ. शूलिने नमः – ಶಿವನಿಗೆ ನಮಸ್ಕಾರ गुरवे नमः – ಗುರುವಿಗೆ ನಮಸ್ಕಾರ पित्रे धनम् यच्छति – ತಂದೆಗೆ ಹಣವನ್ನು ಕೊಡುತ್ತಾನೆ. भिषजे शुल्कं ददाति – ವೈದ್ಯನಿಗೆ ಶುಲ್ಕವನ್ನು ಕೊಡುತ್ತಾನೆ. भक्ताः सर्वमपि भागवते समर्पयति – ಭಕ್ತನು ಎಲ್ಲವನ್ನೂ ದೇವರಿಗೆ ಅರ್ಪಿಸುತ್ತಾನೆ. काव्यं यशसे भवति – ಕಾವ್ಯವು ಯಶಸ್ಸಿಗಾಗಿ ಇದೆ. पुत्रः मात्रे (जनन्यै) शाटिकां यच्छति – ಮಗನು ತಾಯಿಗೆ ಸೀರೆಯನ್ನು ಕೊಡುತ್ತಾನೆ. सभ्याय मधुरा वाणी रोचते – ಸಜ್ಜನರಿಗೆ ಮಧುರವಾದ ಮಾತು ರುಚಿಸುತ್ತದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

शङ्कराय अभिषेकः रोचते – ಶಿವನಿಗೆ ಅಭಿಷೇಕವು ಇಷ್ಟವಾಗುತ್ತದೆ. सीता स्वचूडामणिं हनुमते समर्पितवती – ಸೀತೆಯು ತನ್ನ ಚೂಡಾಮಣಿಯನ್ನು ಹನುಮಂತನಿಗೆ ಕೊಟ್ಟಳು.

5) अपादानकारकम् – ಈ ಕಾರಕದ ವಿಭಕ್ತಿ – पञ्चमी। उदा – रामात् रामाभ्यां रामेभ्यः।

ಅಗಲಿಕೆ ಅಂದರೆ ಒಂದು ಸ್ಥಳದಿಂದ ಅಥವಾ ವಸ್ತು ವ್ಯಕ್ತಿಗಳಿಂದ ಬೇರೆಯಾಗುವಿಕೆಗೆ ಅಪಾದಾನವೆಂದು ಹೇಳುವರು. ಅಪಾದಾನಾರ್ಥದಲ್ಲಿ ಪಂಚಮೀ ವಿಭಕ್ತಿಯು ಬರುವುದು. ಉದಾ – वृक्षात् पर्णं पतति – ಮರದಿಂದ ಎಲೆಯು ಬೀಳುತ್ತದೆ. लताभ्यः पुष्पाणि गलन्ति – ಬಳ್ಳಿಗಳಿಂದ ಹೂಗಳು ಉದುರುತ್ತವೆ. हिमगिरेः गङ्गा सरित् प्रभवति – ಹಿಮಾಲಯ ಪರ್ವತದಿಂದ ಗಂಗಾ ನದಿಯು ಹುಟ್ಟುತ್ತದೆ.

गोमयात् वृश्चिकाः जायन्ते – ಸೆಗಣಿಯಿಂದ ಚೇಳುಗಳು ಹುಟ್ಟುತ್ತವೆ. ग्रामेभ्यः जनाः नगरम् आगच्छन्ति – ಹಳ್ಳಿಗಳಿಂದ ಜನರು ನಗರಕ್ಕೆ ಬರುತ್ತಾರೆ.

नभसः पतितं तोयं सागरं प्रति गच्छति – ಆಕಾಶದಿಂದ ಬಿದ್ದ ನೀರು ಸಮುದ್ರದ ಕಡೆಗೆ ಹೋಗುತ್ತದೆ.

6) अधिकरण कारकम् – ಕಾರಕದ ವಿಭಕ್ತಿ – सप्तमी उदा – रामे रामयोः रामेषु।

ಒಂದು ವಸ್ತುವು ಇರಲು ಯಾವುದು ಆಧಾರ ಅಥವಾ ಆಶ್ರಯವೋ ಅದನ್ನು ತಿಳಿಸುವ ಪದಕ್ಕೆ ಸಪ್ತಮೀ ವಿಭಕ್ತಿ ಬರುತ್ತದೆ. ಉದಾ – गुरुः आसने उपविशति – ಗುರುವು ಆಸನದಲ್ಲಿ ಕುಳಿತುಕೊಂಡಿದ್ದಾನೆ. वत्सं स्तम्भे बध्नाति – ಕರುವನ್ನು ಕಂಭದಲ್ಲಿ ಬಂಧಿಸುತ್ತಾನೆ (ಕಟ್ಟುತ್ತಾನೆ). नरेषु रामः श्रेष्ठः ಮನುಷ್ಯರಲ್ಲಿ ರಾಮನು ಶ್ರೇಷ್ಠನು. छात्राः शालायां पठन्ति – ಮಕ್ಕಳು ಶಾಲೆಯಲ್ಲಿ ಓದುತ್ತಾರೆ. तिलेषु तैलम् अस्ति – ಎಳ್ಳುಗಳಲ್ಲಿ ತೈಲವು (ಎಣ್ಣೆಯು) ಇದೆ. सदसि विद्वासः उपविशन्ति – ಸಭೆಯಲ್ಲಿ ಪಂಡಿತರು ಕುಳಿತುಕೊಂಡಿದ್ದಾರೆ. सज्जनानां धर्मे अतीव आसक्तिः भवति – ಸಜ್ಜನರಿಗೆ ಧರ್ಮದಲ್ಲಿ ತುಂಬ ಆಸಕ್ತಿಯು ಇರುತ್ತದೆ. मनसि सन्तुष्टः सदा सुखी – ಮನಸ್ಸಿನಲ್ಲಿ ಸಂತೋಷಗೊಂಡವನು ಯಾವಾಗಲೂ ಸುಖಿಯು.

ಉಪಪದ ವಿಭಕ್ತಿಗಳು – ವ್ಯಾಕರಣ ವಿಶೇಷಗಳು

उपपदविभक्तयः – क्रियापदयोगश्च

ಕಾರಕಗಳಲ್ಲದಿದ್ದರೂ ಕೆಲವು ಪದಗಳ ಯೋಗವಿದ್ದಾಗ ಪದಗಳ ಮೇಲೆ ನಿರ್ದಿಷ್ಟವಾದ ಬೇರೆ ಬೇರೆ ವಿಭಕ್ತಿಗಳು ಬರುತ್ತವೆ. ಇವುಗಳಿಗೆ ಉಪಪದ ವಿಭಕ್ತಿಗಳು ಎಂದು ಹೆಸರು. ಇವೆಲ್ಲಾ ವ್ಯಾಕರಣ ವಿಶೇಷಗಳಾಗಿವೆ.

प्रथमा विभक्तिः

ಕರ್ತರಿ ಪ್ರಯೋಗದಲ್ಲಿ ಪ್ರಥಮಾ ವಿಭಕ್ತಿಯಲ್ಲಿರುವ ಕರ್ತೃಪದವು ಕರ್ಮಣಿ ಮತ್ತು ಭಾವೆ ಪ್ರಯೋಗಗಳಲ್ಲಿ ತೃತೀಯಾ ವಿಭಕ್ತಿಯಲ್ಲಿರುವುದು. ಉದಾ – रामः सूर्यं पश्यति – रामेण सूर्यः दृश्यते (ರಾಮನಿಂದ ಸೂರ್ಯನು ನೋಡಲ್ಪಡುವನು.) वाली रामेण बाणेन हतः – ವಾಲಿಯು ರಾಮನಿಂದ ಬಾಣದಿಂದ ಕೊಲ್ಲಲ್ಪಟ್ಟನು.

भाजन, स्थान, पद – ಇವು ನಪುಂಸಕಲಿಂಗ ಏಕವಚನದಲ್ಲೇ ಇರಬೇಕು. ಉದಾ – सा मम प्रीतिभाजनम्। पतिव्रता पूज्यस्थानम्। चाचानेहरू सर्वेषां बालकानां प्रीतिपात्रम् आसीत् – ಚಾಚಾನೆಹರೂ ಎಲ್ಲಾ ಬಾಲಕರಿಗೆ ಪ್ರೀತಿಪಾತ್ರನು ಆಗಿದ್ದ. हनुमान् श्रीरामस्य प्रीतिभाजनम् (पात्रम्) आसीत्। ಹನುಮಂತನು ಶ್ರೀರಾಮನಿಗೆ ಪ್ರೀತಿಪಾತ್ರನಾಗಿದ್ದ. भारते मातरः पूज्यस्थानं लभन्ते – ಭಾರತದಲ್ಲಿ ತಾಯಂದಿರು ಪೂಜ್ಯಸ್ಥಾನವನ್ನು ಹೊಂದುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

द्वितीयाविभक्तिः

1) ಕರ್ತರಿ ಪ್ರಯೋದಲ್ಲಿ ದ್ವಿತೀಯಾ ವಿಭಕ್ತಿಯಲ್ಲಿರುವ ಕರ್ಮಪದವು ಕರ್ಮಣಿ ಪ್ರಯೋಗದಲ್ಲಿ ಪ್ರಥಮಾ ವಿಭಕ್ತಿಯಲ್ಲಿರುವುದು. ಉದಾ ಕೃಷ್ಣः श्लोकं पठति – कृष्णेन श्लोकः पठ्यते – ಕೃಷ್ಣನಿಂದ ಶ್ಲೋಕವು ಓದಲ್ಪಡುತ್ತದೆ. धेनुः तृणं खादति – धेन्वा तृणं (ನ. ಲಿಂ.) खाद्यते – ದನದಿಂದ ಹುಲ್ಲು ತಿನ್ನಲ್ಪಡುತ್ತದೆ. रामेण विग्रहः स्पृश्यते – ರಾಮನಿಂದ ವಿಗ್ರಹವು ಮುಟ್ಟಲ್ಪಡುತ್ತದೆ.

2) गच्छति, याति – ಮೊದಲಾದ ಗಮನಾರ್ಥಕ ಕ್ರಿಯಾಪದ ಬಂದಾಗ ಎಲ್ಲಿಗೆ ಹೋಗುತ್ತಾನೋ ಆ ಸ್ಥಳ ವಾಚಕ ಶಬ್ದವನ್ನು ದ್ವಿತಿಯಾ ವಿಭಕ್ತಿಯಲ್ಲಿ ಹೇಳಬೇಕು. ಉದಾ – ग्रामं गच्छति – ಹಳ್ಳಿಗೆ ಹೋಗುತ್ತಾನೆ. शालां गच्छति – ಶಾಲೆಗೆ ಹೋಗುತ್ತಾನೆ. नगरं गतवान् – ನಗರಕ್ಕೆ ಹೋದನು. काशीं याति – ಕಾಶಿಗೆ ಹೋಗುತ್ತಾನೆ. तीर्थक्षेत्रं प्रयाति – ತೀರ್ಥಕ್ಷೇತ್ರಕ್ಕೆ ಹೋಗುತ್ತಾನೆ.

ಯಾರನ್ನು ಕುರಿತು ಹೇಳುತ್ತಿದ್ದೇವೆಯೇ ಆ ಶಬ್ದವನ್ನು ದ್ವಿತೀಯಾ ವಿಭಕ್ತಿಯಲ್ಲಿ ಹೇಳಬೇಕು. ಉದಾ – पिता पुत्रं वदति – ತಂದೆಯು ಮಗನಿಗೆ ಹೇಳುತ್ತಾನೆ. कविः राजानं याचते – ಕವಿಯು ರಾಜನನ್ನು ಬೇಡುತ್ತಾನೆ. सेवकः मन्त्रिणं निवेदयति – ಸೇವಕನು ಮಂತ್ರಿಯಲ್ಲಿ ನಿವೇದಿಸಿಕೊಳ್ಳುತ್ತಾನೆ. राजा भिषजम् आज्ञापयति – ರಾಜನು ವೈದರಿಗೆ ಆಜ್ಞಾಪಿಸುತ್ತಾನೆ.

3) ಹದಿನಾರು ದ್ವಿಕರ್ಮಕ ಧಾತುಗಳ ಯೋಗ ವಿದ್ದಾಗ ಎರಡೂ ಕರ್ಮಗಳು ದ್ವಿತೀಯ ವಿಭಕ್ತಿಯನ್ನು ಹೊಂದುತ್ತವೆ. ಉದಾ – गोपः गां पयः दोग्धि – ಗೊಲ್ಲನು ದನವನ್ನು/ಹಾಲನ್ನು ಕರೆಯುತ್ತಾನೆ. वामनः बलिं वसुधां याचते ವಾಮನನು ಬಲಿಯನ್ನು ಕುರಿತು ಭೂಮಿಯನ್ನು ಬೇಡುತ್ತಾನೆ. प्रयाणिकः बालकं मार्गं पृच्छति – ಪ್ರಯಾಣಿಕನು ಬಾಲಕನಲ್ಲಿ ದಾರಿಯನ್ನು ಕೇಳುತ್ತಾನೆ. अजपालकः अजान् ग्रामं नयति/हरति – ಆಡು ಸಾಕುವವನು (ಕುರುಬನು) ಆಡುಗಳನ್ನು ಊರಿಗೆ ಕೊಂಡೊಯ್ಯುತ್ತಾನೆ. चोरान् शतं दण्डयति – ಕಳ್ಳರಿಗೆ ನೂರು ರೂಪಾಯಿ ದಂಡವಿಧಿಸುತ್ತಾನೆ. माणवकं (वटुं) धर्मं ब्रूते/शास्ति – ವಟುವಿಗೆ ಧರ್ಮವನ್ನು ಹೇಳುತ್ತಾನೆ/ವಿಧಿಸುತ್ತಾನೆ. देवदत्तं शतं जयति – ದೇವದತ್ತನನ್ನು/ನೂರು ರೂಪಾಯಿಯನ್ನು ಗೆಲ್ಲುತ್ತಾನೆ. (ದೇವದತ್ತನನ್ನು ನೂರು ರೂಪಾಯಿಗೆ ಗೆಲ್ಲುತ್ತಾನೆ. क्षीरनिधिं सुधां मथ्नन्ति – ಕ್ಷೀರಸಮುದ್ರವನ್ನು/ಅಮೃತವನ್ನು ಕಡೆಯುತ್ತಾರೆ. गुरुः शिष्यं धर्मं भाषते, (अभिदत्ते वक्ति) – ಗುರುವು ವಟುವಿಗೆ ಧರ್ಮವನ್ನು ಹೇಳುತ್ತಾನೆ.

4) पृथक् – ಪ್ರತ್ಯೇಕ, विना – ಹೊರತು, अभितः परितः – ಸುತ್ತಲೂ, धिक् – ಧಿಕ್ಕಾರ – ಮುಂತಾದ ಕೆಲವು ಅವ್ಯಯಗಳ ಯೋಗವಿದ್ದಾಗ ದ್ವಿತೀಯಾ ವಿಭಕ್ತಿ ಬರುತ್ತದೆ. ಉದಾ – रामं पृथक् सीता न जीविति – ರಾಮನನ್ನು ಬಿಟ್ಟು ಬೇರೆಯಾಗಿ ಸೀತೆಯು ಜೀವಿಸುವುದಿಲ್ಲ, बलरामं पृथक् कृष्णः न वसति – ಬಲರಾಮನನ್ನು ಬಿಟ್ಟು, ಬೇರೆಯಾಗಿ ಕೃಷ್ಣನು ವಾಸಿಸುವುದಿಲ್ಲ, कृष्णं विना राधा कथं जीविति? – ಕೃಷ್ಣನಿಲ್ಲದಿದ್ದರೆ ರಾಧೆಯು ಹೇಗೆ ಬದುಕಿಯಾಳು? व्यायामं विना न आरोग्यम् न उत्साहश्च। ವ್ಯಾಯಾಮವಿಲ್ಲದೆ ಆರೋಗ್ಯವೂ ಇಲ್ಲ, ಮತ್ತು ಉತ್ಸಾಹವೂ ಇಲ್ಲ, तं विना तृणमपि न चलति – ಅವನಿಲ್ಲದೆ (ಭಗವಂತನಿಲ್ಲದೆ) ಹುಲ್ಲು ಕೂಡಾ ಅಲ್ಲಾಡುವುದಿಲ್ಲ.

माम् अभितः अर्भकाः क्रीडन्ति – ನನ್ನ ಸುತ್ತಲೂ ಮಕ್ಕಳು ಆಡುತ್ತಾರೆ. गुरुम् अभितः/परितः शिष्याः उपविशन्ति ಗುರುವಿನ ಸುತ್ತಲೂ ಶಿಷ್ಯರು ಕುಳಿತುಕೊಂಡಿದ್ದಾರೆ. कृष्णं परितः/अभितः गोपिकाः नृत्यन्ति – ಕೃಷ್ಣನ ಸುತ್ತಲೂ ಗೋಪಿಕೆಯರು ನರ್ತಿಸುತ್ತಾರೆ. देशं परितः (अभितः) समुद्रः अस्ति। भगवन्तं परितः/अभितः देवताः स्तुवन्ति – ಭಗವಂತನ ಸುತ್ತಲೂ ದೇವತೆಗಳು ಸ್ತುತಿಸುತ್ತಿದ್ದಾರೆ. अर्जुनः रथं समन्तात् सैनिकान् अपश्यत् – ಅರ್ಜುನನು ರಥದ ಸುತ್ತಲೂ ಸೈನಿಕರನ್ನು ನೋಡಿದನು. धिक् त्वाम् – ನಿನಗೆ ಧಿಕ್ಕಾರವಿರಲಿ. धिक् माम् – ನನಗೆ ಧಿಕ್ಕಾರವಿರಲಿ. धिक् अधर्मम् – ಅಧರ್ಮಕ್ಕೆ ಧಿಕ್ಕಾರವಿರಲಿ. धिक् अदातारं धनिकम् – ದಾನಮಾಡದ ಧನಿಕನಿಗೆ ಧಿಕ್ಕಾರವಿರಲಿ. अभितः परितः धिक् – इत्यादिपदानां योगे द्वितीयाविभक्तिः भवति।

Sri Vidyabharathi Book Centre, Sringeri

CC-O. In Public Domain. Digitized by eGangotri

5) शी (शेते – ಮಲಗು) स्था (तिष्ठति – ನಿಲ್ಲು) आस् (आस्ते – ಇರು, ಕುಳಿತರು) वस् (वसति – ವಾಸಿಸುತ್ತಾನೆ.) ಈ ಧಾತುಗಳಿಗೆ अधि ಉಪಸರ್ಗವು ಸೇರಿದಾಗ ಕ್ರಿಯೆಯ ಆಧಾರವನ್ನು ಹೇಳುವ ಪದಗಳಿಗೆ द्वितीय ವಿಭಕ್ತಿಯು ಬರುತ್ತದೆ. ಉದಾ – हरिः वैकुणठम् अधिशेते – ಹರಿಯು ವೈಕುಂಠದಲ್ಲಿ ಮಲಗಿರುತ್ತಾನೆ. वासुकिः पातालम् अधितिष्ठति – ವಾಸುಕಿಯು ಪಾತಾಳದಲ್ಲಿ ನೆಲೆಸಿದ್ದಾನೆ. भूपतिः सिंहासनम् अध्यास्ते – ರಾಜನು ಸಿಂಹಾಸನದಲ್ಲಿ ಕುಳಿತಿದ್ದಾನೆ. हरिः क्षीरसागरं अधिशेते – ಹರಿಯು ಕ್ಷೀರಸಾಗರದಲ್ಲಿ ಮಲಗಿದ್ದಾನೆ. ऋषयः अटव्याम् अधिवसन्ति । ಋಷಿಗಳು ಕಾಡಿನಲ್ಲಿ ವಾಸಿಸುತ್ತಾರೆ. शिवः कैलासं अध्यास्ते – ಶಿವನು ಕೈಲಾಸದಲ್ಲಿ ನೆಲೆಸಿದ್ದಾನೆ. राज्ञ्यः अन्तःपुरं अधिवसन्ति – ರಾಣಿಯರು ಅಂತಃ ಪುರದಲ್ಲಿ ವಾಸಿಸುತ್ತಾರೆ.

6) उप, अनु, आ – ಇವು ಪೂರ್ವದಲ್ಲಿರುವ वस् ಧಾತುವು ಪ್ರಯೋಗಿಸಲ್ಪಟ್ಟಾಗ ವಾಸಿಸುವ ಸ್ಥಳವನ್ನು ತಿಳಿಸುವ ಶಬ್ದವು ದ್ವಿತೀಯಾ ವಿಭಕ್ತಿಯನ್ನು ಹೊಂದುತ್ತದೆ. ಉದಾ – राष्ट्रपतिः देहलीं (देहलीनगरं) उपवसति – ರಾಷ್ಟ್ರಪತಿಯು ದೆಹಲಿಯಲ್ಲಿ ವಾಸಿಸುತ್ತಾನೆ. धनिनः सौधम् अधिवसन्ति – ಧನಿಕರು ಮಹಡಿಮನೆಯಲ್ಲಿ ವಾಸಿಸುತ್ತಾರೆ. यक्षाः अलकाम् आवसन्ति – ಯಕ್ಷರು ಅಲಕೆಯಲ್ಲಿ ವಾಸಿಸುತ್ತಾರೆ. कृषिकाः कुटीरं अनुवसन्ति – ರೈತರು ಗುಡಿಸಲಲ್ಲಿ ವಾಸಿಸುತ್ತಾರೆ.

7) ಕ್ರಿಯೆಯನ್ನು ನಿರಂತರವಾಗಿ ಮಾಡುತ್ತಿದ್ದರೆ ಅದು ತೋರಿಸುವ ಕಾಲಾವಧಿ ಮತ್ತು ದೂರ ಇವುಗಳನ್ನು ಹೇಳುವ ಪದಗಳು ದ್ವಿತೀಯಾ ವಿಭಕ್ತಿಯಲ್ಲಿರುತ್ತದೆ. ಉದಾ सः मासम् अधीते (अध्ययनं) करोति – ಅವನು ಒಂದು ತಿಂಗಳ ಕಾಲ ಕಲಿಯುತ್ತಾನೆ. अर्जुनः हिमालयं गत्वा मासान् अतप्यत् – ಅರ್ಜುನನು ಹಿಮಾಲಯಕ್ಕೆ ಹೋಗಿ ಹಲವು ತಿಂಗಳ ವರೆಗೆ ತಪಸ್ಸು ಮಾಡಿದನು. क्रोशं कुटिला नदी ಒಂದು ಹರಿದಾರಿಯ ತನಕ ನದಿಯು ಅಂಕುಡೊಂಕಾಗಿದೆ.

8) अन्तरा/अन्तरेण ಹೊರತು, यावत् ವರೆಗೆ, सर्वतः ಎಲ್ಲಾ ಕಡೆಯಿಂದ, उभयतः ಎರಡೂ ಕಡೆಯಿಂದ, समया – ಸುತ್ತಲೂ, निकषा – ಸಮೀಪ, प्रति – ಕುರಿತು, ಕಡೆಗೆ – ಈ ಅವ್ಯಯಗಳಿಗೆ ಸಂಬಂಧಿಸಿದ ಪದಗಳು ದ್ವಿತೀಯಾ ವಿಭಕ್ತಿಯನ್ನು ಪಡೆಯುತ್ತವೆ. ಉದಾ – आरोग्यम् अन्तरा/अन्तरेण न सुखम् – ಆರೋಗ್ಯವಿಲ್ಲದೆ ಸುಖವಿಲ್ಲ. रात्रिं अन्तरा/अन्तरेण चन्द्रः न शोभते – ರಾತ್ರಿ ಇಲ್ಲದೆ ಚಂದ್ರನು ಶೋಭಿಸುವುದಿಲ್ಲ. सर्पकोटरं यावत् मांसशकलानि प्रक्षिपतु ಹಾವಿನ ಪೊಟರೆಯ ವರೆಗೆ ಮಾಂಸದ ತುಂಡುಗಳನ್ನು ಎಸೆ (ಚೆಲ್ಲು) पुरा काशीं यावत् पादाभ्यां एव गच्छन्ति स्म – ಹಿಂದೆ ಕಾಶಿಯವರಿಗೆ ಕಾಲುಗಳಿಂದಲೇ ಹೋಗುತ್ತಿದ್ದರು.

कृष्णम् उभयतः गोपाः आवृताः – ಕೃಷ್ಣನ ಎರಡೂ ಬದಿಗೆ ಗೋಪರು ಬಂದು ಮುತ್ತಿದರು. रामं उभयतः सीमा लक्ष्मणश्च उपविष्टौ – ರಾಮನ ಎರಡೂ ಬದಿಗೆ ಸೀತೆ ಮತ್ತು ಲಕ್ಷ್ಮಣರು ಕುಳಿತುಕೊಂಡಿದ್ದಾರೆ. नगरं निकषा विश्वविद्यालयः अस्ति – ನಗರದ ಸಮೀಪ ವಿಶ್ವವಿದ್ಯಾಲಯವು ಇದೆ. सः शालां प्रति गच्छति – ಅವನು ಶಾಲೆಗೆ (ಶಾಲೆಯನ್ನು ಕುರಿತು) ಹೋಗುತ್ತಾನೆ. सर्वदेवनमस्कारः केशवं प्रति गच्छति – ಎಲ್ಲಾ ದೇವರಿಗೆ ಮಾಡಿದ ನಮಸ್ಕಾರವು ಕೇಶವನಿಗೆ ಸಲ್ಲುತ್ತದೆ. अदृष्टहीनं प्रति सर्वतः आपदः आपतन्ति – ಅದೃಷ್ಟ ಹೀನನ ಬಳಿಗೆ ಎಲ್ಲಾ ಕಡೆಯಿಂದಲೂ ಆಪತ್ತುಗಳು ಬಂದು ಮುತ್ತುತ್ತವೆ. वायुः सर्वतः वाति – ಗಾಳಿಯು ಎಲ್ಲಾ ಕಡೆಯಿಂದ ಬೀಸುತ್ತದೆ. ಕ್ರಿಯಾ ವಿಶೇಷಣದ ಮೇಲೆ ದ್ವಿತೀಯ – शोभनं पचति – ಚೆನ್ನಾಗಿ ಅಡುಗೆ ಮಾಡುತ್ತಾನೆ. सविनयं भाषते – ವಿನಯಪೂರ್ವಕವಾಗಿ ಮಾತನಾಡುತ್ತಾನೆ. (......इत्यादीनां योगे द्वितीया विभक्तिः भवति)

तृतीया

1) ಕರ್ಮಣಿ ಮತ್ತು ಭಾವೇ ಪ್ರಯೋಗದಲ್ಲಿ ಮತ್ತು ವಿಧ್ಯರ್ಥಕ ಕೃದಂತಗಳನ್ನು ಬಳಸಿದಾಗ ಕರ್ತೃ ಪದವು ತೃತೀಯಾ ವಿಭಕ್ತಿಯಲ್ಲಿರುವುದು. ಉದಾ कविना कथा लिख्यते – ಕವಿಯಿಂದ ಕಥೆಯು ಬರೆಯಲ್ಪಡುತ್ತದೆ. अग्निना काष्ठं दह्यते ಬೆಂಕಿಯಿಂದ ಕಟ್ಟಿಗೆಯು ಸುಡಲ್ಪಡುತ್ತದೆ. विद्यार्थिभिः सम्यक् पठितव्यः– ವಿದ್ಯಾರ್ಥಿಗಳಿಂದ ಚೆನ್ನಾಗಿ ಓದಲ್ಪಡಬೇಕು. सर्वैः स्वातन्त्र्यं रक्षितव्यम्/रक्षणीयम्/रक्ष्यम् ।

Sri Vidyabharathi Book Centre, Sringeri

CC-O. In Public Domain. Digitized by eGangotri

2) सह, साकं, सार्धम्, समम् – (ಈ ನಾಲ್ಕಕ್ಕೂ ಜೊತೆಗೆ ಎಂದರ್ಥ) तुल्यं, समं सदृश (ಸಮಾನ, ಅದರಂತೆ, ಹೋಲಿಕೆ ಎಂದರ್ಥ) रहित ಇವುಗಳಿಗೆ ಸಂಬಂಧಿಸಿದ ಶಬ್ದಗಳಿಗೆ तृतीया – ವಿಭಕ್ತಿ ಬರುತ್ತದೆ. ಉದಾ – पुत्रेण सह/सार्धं/साकं/समं पिता आगतः – ಮಗನೊಂದಿಗೆ ತಂದೆಯು ಬಂದನು. मात्रा सह/साकं/सार्धं/समं दुहिता अपि आगच्छति – ತಾಯಿಯೊಂದಿಗೆ ಮಗಳೂ ಕೂಡ ಬರುತ್ತಾಳೆ. रामेण सह/सार्धं/साकं/समं सीतालक्ष्मणौ अपि गतौ – ರಾಮನೊಂದಿಗೆ ಸೀತಾಲಕ್ಷ್ಮಣರು ಕೂಡ ಹೋದರು. तस्याः मुखं चन्द्रेण सदृशं/तुल्यं शोभते – ಅವಳ ಮುಖವು ಚಂದ್ರನಂತೆ ಶೋಭಿಸುತ್ತಿದೆ. श्रीया रहितः, पुरुषः न शोभते – ಸಂಪತ್ತಿಲ್ಲದ ಪುರುಷನು ಶೋಭಿಸುವುದಿಲ್ಲ, अयं शिबिना सदृशः त्यागे – ಇವನು ತ್ಯಾಗದಲ್ಲಿ ಶಿಭಿಗೆ ಸಮಾನನು. रामः इन्द्रेण सदृशः राजा – ರಾಮನು ಇಂದ್ರನಿಗೆ ಸಮಾನನಾದ ರಾಜನು. हनुमान् मनसा समं वेगेन गच्छति – ಹನುಮಂತನು ಮನಸ್ಸಿಗೆ ಸಮಾನವಾದ ವೇಗದಿಂದ ಹೋಗುತ್ತಾನೆ. रामेण तुल्यं सदृशम् अन्यः नास्त्येव। तया साकं – ನಿನ್ನೊಂದಿಗೆ, मया साकम् ನನ್ನೊಂದಿಗೆ, केन साकम् ಯಾರೊಂದಿಗೆ?

3) अलं/कृतं – ಸಾಕು ಇವನ್ನು ನಿಷೇದಾರ್ಥದಲ್ಲಿ ಬಳಸಿದರೆ ಅವುಗಳಿಗೆ ಸಂಬಂಧಿಸಿದ ಪದಕ್ಕೆ तृतीया ವಿಭಕ್ತಿ ಬರುತ್ತದೆ. ಉದಾ – महीपाल, अलं तव श्रमेण। – ರಾಜನೇ, ನಿನ್ನ ಪರಿಶ್ರಮವು ಸಾಕು. कृतं संदेहेन। – ಸಂದೇಹ ಪಡಬೇಡ. अलं भोजनेन – ಊಟ ಸಾಕು. अलं निद्रया – ನಿದ್ರೆ ಸಾಕು. अलं साहसेन – ಸಾಹಸ ಸಾಕು. अलं पठनेन – ಓದುವುದು ಸಾಕು. अलं विवादेन, तूष्णीम् उपविश। – ಜಗಳ ಸಾಕು, ಸುಮ್ಮನೆ ಕುಳಿತುಕೋ.

4) विना – ಹೊರತು – ಈ ಅವ್ಯಯಕ್ಕೆ ಸಂಬಂಧಿಸಿದ ಪದಕ್ಕೆ **तृतीया** ವಿಭಕ್ತಿಯೂ ಬರಬಹುದು. ಉದಾ – तेन भगवता विना तृणमि न चलति – ಆ ಭಗವಂತನಿಲ್ಲದೆ ಹುಲ್ಲು ಕೂಡಾ ಚಲಿಸುವುದಿಲ್ಲ. उद्यमेन विना न धनार्जनम् – ಉದ್ಯೋಗವಿಲ್ಲದಿದ್ದರೆ ಹಣಸಂಪಾದನೆ ಇಲ್ಲ. हनुमता विना सीतान्वेषणं दुःसाध्यम् आसीत् – ಹನುಮಂತನಿಲ್ಲದೆ ಸೀತಾನ್ವೇಷಣೆಯು ಅಸಾಧ್ಯವಾಗಿತ್ತು.

5) ಕಾರಣವನ್ನು ಹೇಳುವ ಪದಕ್ಕೆ ತೃತೀಯ ವಿಭಕ್ತಿ ಬರುತ್ತದೆ. ಉದಾ पुण्येन हरिः दृष्टः – ಪುಣ್ಯದಿಂದ ಹರಿಯು ಕಾಣಲ್ಪಟ್ಟನು. दानेन कर्णम् अतिशेते – ದಾನದಿಂದ ಕರ್ಣನನ್ನು ಮೀರಿದ್ದಾನೆ (ಕರ್ಣನಿಗೆ ಮಿಗಿಲಾಗಿದ್ದಾನೆ) स्वरेण पितरम् अतिशेते – ಸ್ವರದಿಂದ ತಂದೆಗೆ ಮಿಗಿಲಾಗಿದ್ದಾನೆ. रामः द्वादशवर्षैः शास्त्रम् अध्ययनम् अकरोत्। ರಾಮನು ಹನ್ನೆರಡು ವರ್ಷಗಳಿಂದ ಶಾಸ್ತ್ರವನ್ನು ಅಧ್ಯಯನ ಮಾಡಿದನು.

6) ಅಗಲುವಿಕೆಯನ್ನು ಹೇಳುವಾಗ ತೃತೀಯಾ ವಿಭಕ್ತಿ ಬರುವುದು. ಉದಾ – चक्षुर्भ्यां विहीनः अन्धः भवति – ಕಣ್ಣುಗಳಿಲ್ಲದವನು ಕುರುಡನಾಗುತ್ತಾನೆ. बुध्या विहीनः अस्वतन्त्रः भवति – ಬುದ್ಧಿ ಇಲ್ಲದವನು ಅಸ್ವತಂತ್ರನಾಗುತ್ತಾನೆ. भार्यया विरहः मा भवतु – ಹೆಂಡತಿಯ ವಿಯೋಗವು ಆಗದಿರಲಿ.

7) **ಸಂತೋಷ ಆಶ್ಚರ್ಯ ಮತ್ತು ನಾಚಿಕೆಗಳನ್ನು ಹೇಳುವ ಪದಗಳಿಗೆ ತೃತೀಯಾ ವಿಭಕ್ತಿ ಬರುವುದು.** नराः रत्नैः सन्तुष्यन्ति – ಮನುಷ್ಯರು ರತ್ನಗಳಿಂದ ಸಂತೋಷಗೊಳ್ಳುತ್ತಾರೆ. कर्णस्य दानेन देवाः विस्मिताः अभवन् – ಕರ್ಣನ ದಾನದಿಂದ ದೇವತೆಗಳು ವಿಸ್ಮಿತರಾದರು. अस्य दर्शनेन अहं लज्जे – ಇವನ ದರ್ಶನದಿಂದ ನಾನು ನಾಚುತ್ತೇನೆ.

8) प्रकृति, प्राय, गोत्र, सम, विषम, द्रोण, सुख दुःख – ಇವುಗಳಿಗೆ ತೃತೀಯ ವಿಭಕ್ತಿ ಬರುತ್ತದೆ. ಉದಾ सः प्रकृत्या चारुः नालङ्कारैः – ಅವನು ಸ್ವಾಭಾವಿಕವಾಗಿ ಸುಂದರನು, ಅಲಂಕಾರಗಳಿಂದ ಅಲ್ಲ. तस्य नाम श्रीकृष्णः इति, गोत्रेण शौरिः – ಅವನ ಹೆಸರು ಶ್ರೀ ಕೃಷ್ಣ ಎಂದು, ಗೋತ್ರದಿಂದ ಶೌರಿ ಎಂದು (ಶೂರವಂಶದವ ಎಂದರ್ಥ) श्रीरामः गोत्रेण राघवः इत्येव प्रसिद्धः – ಶ್ರೀ ರಾಮನು ಗೋತ್ರದಿಂದ ರಾಘವ ಎಂದೇ ಪ್ರಸಿದ್ಧನು. द्रोणेन धान्यं क्रीणाति विक्रीणाति च – ಸೇರಿನಿಂದ ಧಾನ್ಯವನ್ನು ತೆಗೆದುಕೊಳ್ಳುತ್ತಾನೆ ಮತ್ತು ಮಾರುತ್ತಾನೆ. अरण्ये सुखेन गन्तुं न शक्यते – ಕಾಡಿನಲ್ಲಿ ಸುಖವಾಗಿ ಹೋಗಲು ಸಾಧ್ಯವಿಲ್ಲ. श्रीरामलक्ष्मणसीताश्च दुःखेन अरण्यं गच्छन्ति – ಶ್ರೀ ರಾಮ ಲಕ್ಷ್ಮಣ ಸೀತೆಯರು ದುಃಖದಿಂದ ಕಾಡಿಗೆ ಹೋಗುತ್ತಾರೆ. दश रूप्यकैः क्रीतं पुस्तकम् – ಹತ್ತು ರೂಪಾಯಿಯಿಂದ ಪುಸ್ತಕವು ತೆಗೆದುಕೊಳ್ಳಲ್ಪಟ್ಟಿತು.

9) **ಯಾವ ಅವಯವದಿಂದ ವಿಕಾರವಾಗಿದೆಯೋ ಅಂಥ ಅವಯವದ ಮೇಲೆ ತೃತೀಯಾ** अक्ष्णा काणः – ಕಣ್ಣಿನಿಂದ ಕುರುಡನು. पादेन खञ्जः – ಪಾದದಿಂದ ಕುಂಟನು. लोचनाभ्यां विहीनः – ಕಣ್ಣುಗಳಿಲ್ಲದವನು.

10) **ಹೇತುವಾಚಕದ ಮೇಲೆ – तृतीया।** दण्डेन घटः – ದಂಡದಿಂದ ಮಡಿಕೆಯು, विद्यया सुखम् – ವಿದ್ಯೆಯಿಂದ ಸುಖವು. (......... इत्यादीनां योगे तृतीया विभक्तिः भवति।)

Sri Vidyabharathi Book Centre, Sringeri

CC-O. In Public Domain. Digitized by eGangotri

चतुर्थी

1) ಕೊಡು, ಅರ್ಪಿಸು ಈ ಅರ್ಥದ ಕ್ರಿಯಾಪದಗಳು ಇದ್ದರೆ ಯಾರಿಗೆ ಕೊಡುತ್ತೇವೆಯೋ, ಅರ್ಪಿಸುತ್ತೇವೆಯೋ, ಆ ಪದಗಳನ್ನು ಚತುರ್ಥಿ ವಿಭಕ್ತಿಯಲ್ಲಿ ಹೇಳಬೇಕು. ಉದಾ –

धनिकः दरिद्रेभ्यः धनं ददाति – ಧನಿಕನು ಬಡವರಿಗೆ ಹಣವನ್ನು ಕೊಡುತ್ತಾನೆ. गृहस्थः ब्राह्मणाय दानं यच्छति – ಗೃಹಸ್ಥನು ಬ್ರಾಹ್ಮಣನಿಗೆ ದಾನವನ್ನು ಕೊಡುತ್ತಾನೆ. देवाय पूजां समर्पयति – ದೇವರಿಗೆ ಪೂಜೆಯನ್ನು ಅರ್ಪಿಸುತ್ತಾನೆ. गुरवे गुरदक्षिणां समर्पयति। – ಗುರುವಿಗೆ ಗುರುದಕ್ಷಿಣೆಯನ್ನು ಅರ್ಪಿಸುತ್ತಾನೆ.

2) ರುಚಿಸುತ್ತದೆ, ಇಷ್ಟವಾಗುತ್ತದೆ ಎಂಬರ್ಥದ ಕ್ರಿಯಾಪದವಿದ್ದರೆ (रोचते) ಯಾರಿಗೆ ರುಚಿಸುವುದೋ, ಪ್ರಿಯವಾಗುವುದೋ ಆ ನಾಮಪದಕ್ಕೆ ಚತುರ್ಥಿ ವಿಭಕ್ತಿ ಬರುತ್ತದೆ. ಉದಾ –

शङ्कराय अभिषेकः रोचते – ಶಂಕರನಿಗೆ ಅಭಿಷೇಕವು ರುಚಿಸುತ್ತದೆ. नारीभ्यः भूषणानि रोचन्ते – ಹೆಂಗಸರಿಗೆ ಅಲಂಕಾರಗಳು ಇಷ್ಟವಾಗುತ್ತವೆ. वालकाय (शिशवे) मोदकं रोचते। तस्मै किं रुचितम् – ಅವನಿಗೆ ಏನು ಇಷ್ಟವಾಗಿದೆ. मह्यं (ನನಗೆ) द्राक्षाफलं रोचते। तुभ्यं (ನಿನಗೆ) किं रोचते? हस्तिने इक्षुदण्डः रोचते – ಆನೆಗೆ ಕಬ್ಬು ಇಷ್ಟವಾಗುತ್ತದೆ. हरये रोचते भक्तिः – ಹರಿಗೆ ಭಕ್ತಿಯು ಇಷ್ಟವಾಗುತ್ತದೆ. गणपतये मोदकः रोचते। बालकाय स्वदते फलम् – ಬಾಲಕನಿಗೆ ಹಣ್ಣು ರುಚಿಸುತ್ತದೆ.

3) स्पृह् (ಇಚ್ಛಿಸು) ಧಾತುವಿನ ಕ್ರಿಯಾಪದವು ಬಂದಾಗ ಯಾವುದನ್ನು ಇಚ್ಛಿಸುತ್ತಾನೋ ಆ ನಾಮಪದವನ್ನು ಚತುರ್ಥೀ ವಿಭಕ್ತಿಯಲ್ಲಿ ಹೇಳಬೇಕು. ಉದಾ

बालकः मोदकाय स्पृहयति – ಬಾಲಕನು ಮೊದಕಕ್ಕೆ ಆಸೆ ಪಡುತ್ತಾನೆ. नार्यः कुसुमेभ्यः स्पृहयन्ति – ಹೆಂಗಸರು ಹೂಗಳ ಮೇಲೆ ಆಸೆ ಪಡುತ್ತಾರೆ. शिशुः क्षीराय स्पृहयति। पुण्यशालिनः भक्तये स्पृहयति – ಪುಣ್ಯಶಾಲಿಗಳು ಭಕ್ತಿಗಾಗಿ ಆಸೆ ಪಡುತ್ತಾರೆ. कपयः फलेभ्यः स्पृहयन्ति।

4) क्रुध्, कुप् (ಕೋಪಗೊಳ್ಳು) द्रुह् (ದ್ರೋಹ ಬಗೆ) ईर्ष् असूय् (ಅಸೂಯೆ ಪಡು) ಈ ಅರ್ಥದ ಕ್ರಿಯಾಪದಗಳು ಬಂದಾಗ ಯಾರ ಮೇಲೆ ಕೋಪಗೊಳ್ಳುವನೋ, ಅಸೂಯೆಪಡುವನೋ ಆ ನಾಮಪದದ ಮೇಲೆ ಚತುರ್ಥೀ ವಿಭಕ್ತಿ ಬರುತ್ತದೆ.

भीमः सुयोधनाय क्रुध्यति – ಭೀಮನು ಸುಯೋಧನನ ಮೇಲೆ ಸಿಟ್ಟುಗೊಳ್ಳುತ್ತಾನೆ. नृपः शत्रवे ईर्ष्यति – ರಾಜನು ಶತ್ರುವಿನ ಮೇಲೆ ಅಸೂಯೆ ಪಡುತ್ತಾನೆ. दरिद्राः धनिकेभ्यः असूयन्ति – ಬಡವರು ಶ್ರೀಮಂತರ ಮೇಲೆ ಅಸೂಯೆ ಪಡುತ್ತಾರೆ. भीमः दुःशासनाय क्रुध्यति। खलः साधवे द्रुह्यति। शिशुपालः कृष्णाय ईर्ष्यति। रावणः रामाय क्रुध्यति, द्रुह्यति असूयति च।

5) अलम् – ಎಂಬ ಅವ್ಯಯವು ಪರ್ಯಾಪ್ತಿ, ಸಾಕು, ಸಮರ್ಥ ಎಂಬ ಅರ್ಥದಲ್ಲಿ ಬಂದಾಗ ಸಂಬಂಧಿಸಿದ ಶಬ್ದಕ್ಕೆ ಚತುರ್ಥೀ ವಿಭಕ್ತಿ ಬರುವುದು. ಉದಾ –

कृष्णः चाणूराय अलम् – ಕೃಷ್ಣನು ಚಾಣೂರನಿಗೆ ಸಾಕು (ಸಮರ್ಥ) अर्जुनः कर्णाय अलम् ಅರ್ಜುನನು ಕರ್ಣನಿಗೆ ಸಾಕು. हरिः दैत्येभ्यः अलम् – ಹರಿಯು ರಾಕ್ಷಸರಿಗೆ (ಸಮರ್ಥ)

Sri Vidyabharathi Book Centre, Sringeri

CC-0. In Public Domain. Digitized by eGangotri

6) नमः, स्वस्ति (ಶುಭ) स्वाहा (ಅಗ್ನಿಗೆ) स्वधा (ಪಿತೃಗಳಿಗೆ) वषट् ಇವುಗಳನ್ನು ಬಳಸಿದಾಗ ಇವುಗಳಿಗೆ ಸಂಬಂಧಿಸಿದ ಪದಕ್ಕೆ ಚತುರ್ಥೀ ವಿಭಕ್ತಿ ಬರುತ್ತದೆ. ಉದಾ –

रामाय नमः। रामाय स्वस्ति – ರಾಮನಿಗೆ ಶುಭವಾಗಲಿ. अग्नये स्वाहा – ಅಗ್ನಿಗೆ ಸ್ವಾಹ. हरये नमः। गौर्यै नमः। सरस्वत्यै नमः। मात्रे नमः। भगवते नमः। तुभ्यं नमः – ನಿನಗೆ ನಮಸ್ಕಾರ. छात्रेभ्यः स्वस्ति – ವಿದ್ಯಾರ್ಥಿಗಳಿಗೆ ಶುಭವಾಗಲಿ. स्वस्ति प्रजाभ्यः – ಪ್ರಜೆಗಳಿಗೆ ಶುಭವಾಗಲಿ. इन्द्राय स्वाहा। मरुते स्वाहा। ब्रह्मणे स्वाह। दुर्गायै स्वाह। पितृभ्यः स्वधा। पित्रे स्वधा। मात्रे स्वधा।

7) ಯಾರನ್ನು ಕುರಿತು ಹೇಳುತ್ತಾನೋ ಆ ಶಬ್ದವನ್ನು ಚತುರ್ಥೀ ವಿಭಕ್ತಿಯಲ್ಲೂ ಹೇಳಬಹುದು. ಉದಾ –

अहं पुत्राय (पुत्रं) वदामि – ನಾನು ಮಗನಿಗೆ ಹೇಳುತ್ತೇನೆ. रामः सीतायै (सीतां) कथां कथयति। सः तस्यै (तं) भणति – ಅವನು ಅವನಿಗೆ ಹೇಳುತ್ತಾನೆ.

8) ''ಅದಕ್ಕಾಗಿ ಇದು'' ಎಂದರ್ಥ ತೋರುವಾಗ ಚತುರ್ಥೀ – फलकाय दारु – ಹಲಗೆ (ಫಲಕ)ಗಾಗಿ ಮರ, कुण्डलाय हिरण्यम् – ಕುಂಡಲಕ್ಕಾಗಿ ಚಿನ್ನ, तुभ्यम् इदम् – ನಿನಗೆ ಇದು.

9) कल्पते/भवति – ಇವುಗಳನ್ನು ಪ್ರಯೋಗಿಸುವಾಗ चतुर्थी ವಿಭಕ್ತಿ ಉದಾ –

विद्या विनयाय कल्पते/भवति – ವಿದ್ಯೆ ವಿನಯಕ್ಕಾಗಿ ಇದೆ. धनं मदाय/कल्पते/भवति। अधिकारः दर्पाय न कल्पते/भवेत् – ಅಧಿಕಾರವು ದರ್ಪಕ್ಕೆ ಕಾರಣವಾಗಬಾರದು.

पञ्चमी

1) जुगुप्सा, विराम ಮತ್ತು प्रमाद ಇವು ಮತ್ತು ಇವುಗಳ ಅರ್ಥವುಳ್ಳ ಶಬ್ದಗಳನ್ನು ಬಳಸಿದಾಗ ಜುಗುಪ್ಸೆ ಮುಂತಾದವುಗಳಿಗೆ ಸಂಬಂಧಿಸಿದ ಪದಕ್ಕೆ ಪಂಚಮೀ ವಿಭಕ್ತಿ ಬರುತ್ತದೆ. ಉದಾ

पापात् जुगुप्सते – ಪಾಪಕ್ಕೆ ಜುಗುಪ್ಸೆ ಪಡುತ್ತಾನೆ. निन्दनात् जुगुप्सते। अधर्म प्रदर्शनात् जुगुप्सते। अहङ्कारात् जुगुप्सते। अधर्मात् विरमति – ಅಧರ್ಮವನ್ನು ನಿಲ್ಲಿಸುತ್ತಾನೆ. भाषणात् विरमति। अहं भाषणात् विरमामि – ನಾನು ಭಾಷಣವನ್ನು ನಿಲ್ಲಿಸುತ್ತೇನೆ. धर्मात् प्रमाद्यति – ಧರ್ಮದಿಂದ ತಪ್ಪುತ್ತಾನೆ. धर्मात् मा प्रमदः – ಧರ್ಮದಿಂದ ತಪ್ಪಬೇಡ. स्वाध्याय प्रवचनाभ्यां मा प्रमदः – ಸ್ವ ಅಧ್ಯಯನ ಮತ್ತು ಪ್ರವಚನಗಳಿಂದ ತಪ್ಪಬೇಡ.

2) ''ಹೆದರು'' ಮತ್ತು ''ರಕ್ಷಿಸು'' ಈ ಅರ್ಥಗಳುಳ್ಳ ಶಬ್ದಗಳನ್ನು ಬಳಸಿದಾಗ ಹೆದರಿಕೆಗೆ ಕಾರಣ ಮತ್ತು ಯಾರಿಂದ ರಕ್ಷಿಸಬೇಕೋ ಅವನು – ಇವುಗಳನ್ನು ಹೇಳುವ ಪದಕ್ಕೆ ಪಂಚಮೀ ವಿಭಕ್ತಿ ಬರುತ್ತದೆ. ಉದಾ –

चोरात् भयम् अस्ति – ಕಳ್ಳನಿಂದ ಭಯವಿದೆ. चोरात् बिभेति – ಕಳ್ಳನಿಂದ ಹೆದರುತ್ತಾನೆ. चोरेभ्यः जनाः बिभ्यति – ಕಳ್ಳರಿಂದ (ಕಳ್ಳರಿಗೆ) ಜನರು ಹೆದರುತ್ತಾರೆ. धेनवः व्याघ्रात् बिभ्यति – ದನಗಳು ಹುಲಿಯಿಂದ ಹೆದರುತ್ತವೆ. रोगात् भीतिः मास्तु – ರೋಗದಿಂದ ಭಯವು ಬೇಡ. हनुमतः सर्वे राक्षसाः भीताः – ಹನುಮಂತನಿಂದ ಎಲ್ಲಾ ರಾಕ್ಷಸರು ಹೆದರಿದರು. देवः अस्मान् कष्टात् त्रायते (रक्षति) – ದೇವರು ನಮ್ಮನ್ನು ಕಷ್ಟದಿಂದ ರಕ್ಷಿಸುತ್ತಾನೆ. श्रीरामः रावणात् सीतां त्रायते – ಶ್ರೀ ರಾಮನು ರಾವಣನಿಂದ ಸೀತೆಯನ್ನು ರಕ್ಷಿಸುತ್ತಾನೆ. देवः पापात् त्रायते/रक्षति – ದೇವರು ಪಾಪದಿಂದ ರಕ್ಷಿಸುತ್ತಾರೆ. धर्मः नरकात् त्रायते/रक्षति – ಧರ್ಮವು ನರಕದಿಂದ ರಕ್ಷಿಸುತ್ತದೆ. कृपया पापात् त्राहि त्राहि माम् – ದಯವಿಟ್ಟು ಪಾಪದಿಂದ ನನ್ನನ್ನು ರಕ್ಷಿಸು, ರಕ್ಷಿಸು.

3) ನಿವಾರಿಸು ಎಂಬ ಅರ್ಥದ ಶಬ್ದಗಳನ್ನು ಬಳಸಿದಾಗ ಯಾವುದದರಿಂದ ನಿವಾರಿಸುತ್ತಾನೋ ಅದನ್ನು ಹೇಳುವ ಪದಕ್ಕೆ ಪಂಚಮೀ ವಿಭಕ್ತಿ ಬರುತ್ತದೆ. ಉದಾ –

अन्यायात् निवारयति – ಅನ್ಯಾಯದಿಂದ ತಡೆಯುತ್ತಾನೆ. पिता पुत्रान् अन्यायात् निवारयति – ತಂದೆಯು ಮಕ್ಕಳನ್ನು ಅನ್ಯಾಯದಿಂದ ತಡೆಯುತ್ತಾನೆ. वैद्याः रोगिणः मरणभयात् निवारयन्ति – ವೈದ್ಯರು ರೋಗಿಗಳನ್ನು ಮರಣ ಭಯದಿಂದ ತಡೆಯುತ್ತಾರೆ.

Sri Vidyabharathi Book Centre, Sringeri

CC-0. In Public Domain. Digitized by eGangotri

4) जन् ಧಾತುವಿನ ಕ್ರಿಯಾಪದವನ್ನು ಬಳಸಿದಾಗ ಜನ್ಮದ ಕಾರಣವನ್ನು ಹೇಳುವ ಪದಕ್ಕೆ ಮತ್ತು प्रभवति – ಹುಟ್ಟುತ್ತದೆ ಎಂಬ ಕ್ರಿಯಾಪದ ಬಂದಾಗ ಎಲ್ಲಿಂದ ಹುಟ್ಟುತ್ತದೋ ಆ ಸ್ಥಳವಾಚಕ ಶಬ್ದಗಳನ್ನು पञ्चमी ವಿಭಕ್ತಿಯಲ್ಲಿ ತಿಳಿಸಬೇಕು. ಉದಾ –

गोमयात् वृश्चिकाः जायन्ते – ಸೆಗಣಿಯಿಂದ ಚೇಳುಗಳು ಹುಟ್ಟುತ್ತವೆ. कश्मलात् मशकाः जायन्ते – ಕಲ್ಮಶದಿಂದ ಸೊಳ್ಳೆಗಳು ಹುಟ್ಟುತ್ತವೆ. हिमालयात् गङ्गा प्रभवति – ಹಿಮಾಲಯದಿಂದ ಗಂಗೆಯು ಹುಟ್ಟುತ್ತದೆ. कवेः काव्यं प्रभवति – ಕವಿಯಿಂದ ಕಾವ್ಯವು ಹುಟ್ಟುತ್ತದೆ.

5) अन्य, इतर, आरात् – ದೂರ ಸಮೀಪದಲ್ಲಿ ऋते – ಹೊರತು – ಇವುಗಳಿಗೆ ಸಂಬಂಧಿಸಿದ ಪದಗಳಿಗೆ पञ्चमी ವಿಭಕ್ತಿಯು ಬರುತ್ತದೆ. ಉದಾ

मित्रात् अन्यः कः उपकरोति? ಮಿತ್ರನಲ್ಲದೆ ಬೇರೆ ಯಾರು ಉಪಕರಿಸುತ್ತಾನೆ? देवात् अन्यः कः रक्षति/हनुमतः अन्यः कः समुद्रम् उल्लङ्घति? कृष्णात् अन्यः/इतरः महिमान् अन्यत्र नास्ति – ಕೃಷ್ಣನಿಗಿಂತ ಬೇರೆ ಮಹಾಪುರುಷನು ಬೇರೆ ಕಡೆ ಇಲ್ಲ. रामात् अन्यः/इतरः रक्षकः नास्ति – ರಾಮನಿಗಿಂತ ಬೇರೆ ರಕ್ಷಕನು ಇಲ್ಲ. ग्रामात् आरात् वनं दृश्यते – ಹಳ್ಳಿಗೆ ಸಮೀಪದಲ್ಲಿ/ದೂರದಲ್ಲಿ ಕಾಡು ಕಾಣುತ್ತಿದೆ. गृहात् आरात् देवालयः अस्ति। ಮನೆಯ ಸಮೀಪದಲ್ಲಿ ದೇವಾಲಯವು ಇದೆ. रामात् ऋते (विना) लक्ष्मणः न तिष्ठति – ರಾಮನಿಲ್ಲದಿದ್ದರೆ ಲಕ್ಷ್ಮಣನು ಇರುವುದಿಲ್ಲ. श्रमात् ऋते (विना) कार्यं न सिध्यति – ಶ್ರಮವಿಲ್ಲದೆ ಕಾರ್ಯವು ಸಿದ್ಧಿಸುವುದಿಲ್ಲ.

6) ದಿಕ್ಕುಗಳನ್ನು ಸೂಚಿಸುವ पूर्व, उत्तर, दक्षिण ಮುಂತಾದವುಗಳಿಗೆ, ಕಾಲವನ್ನು ಸೂಚಿಸುವ पूर्व, प्राक् ಮುಂತಾದವುಗಳಿಗೆ ಸಂಬಂಧಿಸಿದ ಪದಗಳಿಗೆ ಪಂಚಮೀ ವಿಭಕ್ತಿ ಬರುತ್ತದೆ. ಉದಾ –

नगरात् पूर्वः ग्रामः मम जन्म ग्रामः – ನಗರಕ್ಕಿಂತ ಪೂರ್ವದಲ್ಲಿರುವ ಗ್ರಾಮವು ನನ್ನ ಹುಟ್ಟು ಊರಾಗಿದೆ. भारतात् उत्तर दिशि हिमालयः अस्ति – ಭಾರತದ ಉತ್ತರ ದಿಕ್ಕಿನಲ್ಲಿ ಹಿಮಾಲಯವು ಇದೆ. भारतात् दक्षिणतः समुद्रः शोभते – ಭಾರತದ ದಕ್ಷಿಣಕ್ಕೆ ಸಮುದ್ರವು ಶೋಭಿಸುತ್ತಿದೆ.

चैत्रात् पूर्वः फल्गुनः – ಚೈತ್ರ ಮಾಸಕ್ಕಿಂತ ಫಾಲ್ಗುನವು ಮೊದಲು. दन्तवर्धनात् प्राक् शिशवःकेवलं पिबन्ति – ಹಲ್ಲುಗಳು ಬೆಳೆಯುವುದಕ್ಕಿಂತ ಮೊದಲು ಮಕ್ಕಳು ಕೇವಲ ಕುಡಿಯುತ್ತವೆ. मारीचः मरणात् प्राक् हा राम इति उच्चैः अवदत् – ಮಾರೀಚನು ಸಾಯುವುದಕ್ಕಿಂತ ಮೊದಲು ಹಾ ರಾಮ ಎಂದು ಗಟ್ಟಿಯಾಗಿ ಹೇಳಿದನು.

7) प्रभृति – ಮೊದಲ್ಗೊಂಡು, आरभ्य, वहिः (ಹೊರಗೆ) ऊर्ध्वम् – ಮೇಲೆ परम्, अनन्तरम् आ – ಇವುಗಳಿಗೆ ಸಂಬಂಧಿಸಿದ ಪದಗಳಿಗೆ ಪಂಚಮೀ ವಿಭಕ್ತಿ ಬರುತ್ತದೆ.

ಉದಾ – वाल्यात्, प्रभृति सः मां जानाति – ಬಾಲ್ಯದಿಂದಲೂ ಅವನು ನನ್ನನ್ನು ತಿಳಿದಿದ್ದಾನೆ. शैशवात् प्रभृति बाल्यात् प्रभृति/बाल्यात् आरभ्य सः परोपकारी – ಬಾಲ್ಯದಿಂದ ಆರಂಭಿಸಿ ಅವನು ಪರೋಪಕಾರಿಯು. वनवासात् आरभ्य श्रीरामः चीरकृष्णाजिनाम्बरधारी अभवत् – ವನವಾಸ ಪ್ರಾರಂಭವಾದಂದಿನಿಂದ ಶ್ರೀ ರಾಮನು ನಾರು ಬಟ್ಟೆ ಮತ್ತು ಕೃಷ್ಣ ಮೃಗದ ಚರ್ಮದ ಬಟ್ಟೆಯನ್ನು ಧರಿಸಿದವನಾದ. अद्य आरभ्य सः सत्यमेव वदति। – ಇಂದಿನಿಂದ ಅವನು ಸತ್ಯವನ್ನೇ ಹೇಳುತ್ತಾನೆ. ग्रामात् बहिः नदी प्रवहति – ಗ್ರಾಮದ ಹೊರಗೆ ನದಿಯು ಹರಿಯುತ್ತದೆ. गृहात् बहिः उपवनम् अस्ति – ಮನೆಯ ಹೊರಗೆ ಹೂದೋಟವಿದೆ. शालायाः बहिः विशालं क्रिडाङ्गणम् अस्ति। सप्ताहात् प्रभृति सः अस्वस्थः – ವಾರದಿಂದ ಅವನು ಅಸ್ವಸ್ಥನು.

मरणात् परं/ऊर्ध्वम्/अनन्तरं आत्मा कुत्र गच्छति? – ಮರಣಕ್ಕಿಂತ ಅನಂತರ, ಆತ್ಮವು ಎಲ್ಲಿಗೆ ಹೋಗುತ್ತದೆ? रामात् परं दैवतं नास्ति – ರಾಮನಿಗಿಂತ ಬೇರೆ ಶ್ರೇಷ್ಠವಾದ ದೇವತೆ ಇಲ್ಲ.

8) प्रति ಎಂಬ ಅವ್ಯಯವನ್ನು ಬದಲಾಗಿ ಎಂಬರ್ಥದಲ್ಲಿ ಬಳಸಿದಾಗ ಯಾವುದರ ಬದಲಾಗಿ ಎಂದು ಹೇಳಿದೆಯೋ ಅದನ್ನು ಹೇಳುವ ಪದಕ್ಕೆ ಪಂಚಮೀ ವಿಭಕ್ತಿ ಬರುತ್ತದೆ. ಉದಾ –

तिलेभ्यः प्रति माषान् प्रयच्छति – ಎಳ್ಳಿಗೆ ಬದಲಾಗಿ ಉದ್ದನ್ನು ಕೊಡುತ್ತಾನೆ. धनात् प्रति वस्त्रं ददाति – ಬಟ್ಟೆಯ ಬದಲಿಗೆ ವಸ್ತ್ರವನ್ನು ಕೊಡುತ್ತಾನೆ. विद्यादानात् प्रति द्रव्यदानं करोति – ವಿದ್ಯಾದಾನದ ಬದಲಿಗೆ ಹಣದ ದಾನವನ್ನು ಮಾಡುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

9) विना (ಹೊರತು) पृथक् (ಪ್ರತ್ಯೇಕವಾಗಿ) ऋत ಹೊರತು ಈ ಅವ್ಯಯ ಬಂದಾಗ ಸಂಬಂಧಿಸಿದ ಪದಗಳಿಗೆ पञ्चमी ವಿಭಕ್ತಿಯೂ ಬರಬಹುದು. ಉದಾ –

व्ययामात् विना न उत्साहः – ವ್ಯಾಯಾಮವಿಲ್ಲದೆ ಉತ್ಸಾಹವಿಲ್ಲ. आलस्यात् विना सम्यक् पठ - ಸೋಮಾರಿತನವಿಲ್ಲದೆ ಚೆನ್ನಾಗಿ ಓದು. शिशुः मातुः जनकात् च पृथक् न गच्छति। – ಮಗುವು ತಾಯಿಗಿಂತ ಮತ್ತು ತಂದೆಗಿಂತ ಬೇರೆಯಾಗಿ ಹೋಗುವುದಿಲ್ಲ. देवात् ऋते अन्या गतिः नास्ति।

10) दूरं, अन्तिक – ಸಮೀಪ – ಈ ಅವ್ಯಯಗಳಿಗೆ ಸಂಬಂಧಿಸಿದ ಪದಕ್ಕೆ पञ्चमी ವಿಭಕ್ತಿಯೂ ಬರಬಹುದು. (ಷಷ್ಠಿಯೂ ಬರಬಹುದು) ಉದಾ –

ग्रामात् दूरं मम गृहम् अस्ति – ಗ್ರಾಮದಿಂದ ದೂರಕ್ಕೆ ನನ್ನ ಮನೆ ಇದೆ. अस्मात् सरोवरात् अनति दूरे अगस्त्य - आश्रमः अस्तिः – ಈ ಸರೋವರದಿಂದ ಸ್ವಲ್ಪ ದೂರಕ್ಕೆ ಅಗಸ್ತ್ಯಾಶ್ರಮವು ಇದೆ. नगरात् (नगरस्य) अन्तिकं मम ग्रामः भवति – ನಗರಕ್ಕೆ ಸಮೀಪದಲ್ಲೇ ನನ್ನ ಊರಿದೆ.

11) ಅದಕ್ಕಿಂತ ಇದು ಉತ್ತಮ, ಮೊದಲು, ಬೇರೆ, ಕ್ಕಿಂತ, ಗಿಂತ ಇತ್ಯಾದಿ ಅರ್ಥದಲ್ಲಿ ಸಂಬಂಧಿಸಿದ ಶಬ್ದಕ್ಕೆ पञ्चमी ವಿಭಕ್ತಿ ಬರುತ್ತದೆ. ಉದಾ –

आम्रफलात् कदलीफलं मधुरम् – ಮಾವಿನ ಹಣ್ಣಿಗಿಂತ ಬಾಳೆಹಣ್ಣು ಮಧುರವಾಗಿದೆ. रमेशात् सुरेशः चतुरः। कृष्णात् रामः प्राचीनः – ಕೃಷ್ಣನಿಗಿಂತ ರಾಮನು ಮೊದಲಿನವನು. रामेशात् सुरेशः उन्नतः। विवाहात् तृतीये दिने सा मृता - ಮದುವೆಯಾಗಿ ಮೂರನೇ ದಿನದಲ್ಲಿ ಅವಳು ಸತ್ತಳು. भार्गवरामात् श्रीरामः भिन्नः – ಪರಶುರಾಮನಿಗಿಂತ ಶ್ರೀರಾಮನು ಬೇರೆ. श्रीरामात् बलरामः भिन्नः। पुत्रात् पृथक् पितरौ न जीवतः – ಮಗನಿಗಿಂತ ಬೇರೆಯಾಗಿ ತಾಯಿ ತಂದೆಯರು ಜೀವಿಸುವುದಿಲ್ಲ.

12) ಒಂದನ್ನು ನಿರ್ಣಯಿಸಲು ಹೇಳುವ ಕಾರಣವನ್ನು ಹೇತುವನ್ನು ಹೇಳುವ ಪದಕ್ಕೆ ಪಂಚಮೀ ವಿಭಕ್ತಿ ಬರುತ್ತದೆ. ಉದಾ - पर्वतो वाह्निमान् धूमात् – ಪರ್ವತವು ಬೆಂಕಿ ಉಳ್ಳದ್ದು ಪರ್ವತದಲ್ಲಿ ಬೆಂಕಿ ಇದೆ. ಹೊಗೆ ಇರುವುದರಿಂದ महानसे अग्निः अस्ति धूमात् – ಹೊಗೆ ಇರುವುದರಿಂದ ಅಡಿಗೆ ಮನೆಯಲ್ಲಿ ಬೆಂಕಿ ಇದೆ.

13) ವಿದ್ಯಾಭ್ಯಾಸವನ್ನು ಬೋಧಿಸುವಾಗ ಗುರುವಾಚಕದ ಮೇಲೆ ಪಂಚಮೀ. ಉದಾ – उपाध्यायात् अधीते - ಉಪಾಧ್ಯಾಯನಿಂದ ಅಧ್ಯಯನ ಮಾಡುತ್ತಾನೆ. गुरुभ्यः श्रुतम् – ಗುರುಗಳಿಂದ ಕೇಳಲ್ಪಟ್ಟಿತು.

षष्ठी विभक्तिः

1) ಎರಡು ವಸ್ತುಗಳ ಅಥವಾ ಎರಡು ನಾಮಪದಗಳ ಸಂಬಂಧವನ್ನು ತಿಳಿಸುವ ವಿಭಕ್ತಿಯೇ षष्ठी ವಿಭಕ್ತಿ, ಕನ್ನಡದಲ್ಲಿ "ಅ" ಎಂಬ ಪ್ರತ್ಯಯ ಸೇರಿಸಿ ಅರ್ಥ ಹೇಳುತ್ತಾರೆ. ಉದಾ –

द्रोणस्य शिष्यः अर्जुनः – ದ್ರೋಣನ ಶಿಷ್ಯನು ಅರ್ಜುನನು. रामस्य मन्त्री सुमन्तः। राज्ञः पुत्रः अपि गुरुकुले वसति। दशरथः रामस्य पिता। अभिमन्योः शौर्यम् असदृशम्। पितुः धनं भूमिं च पुत्राः इच्छन्ति। राममन्दिरे हनुमतः मूर्तिः अपि अस्ति। ರಾಮಮಂದಿರದಲ್ಲಿ ಹನುಮಂತನ ಮೂರ್ತಿಯೂ ಕೂಡ ಇದೆ.

2) कृते (ಸಲುವಾಗಿ) ಮತ್ತು समक्षम् ಎಂಬ ಅವ್ಯಯಗಳು ಬಂದಾಗ ಸಂಬಂಧಿಸಿದ ಶಬ್ದಕ್ಕೆ षष्ठी ವಿಭಕ್ತಿ, ಉದಾ–

रामस्य कृते हनुमान् लङ्कां गतः – ರಾಮನ ಸಲುವಾಗಿ ಹನುಮಂತನು ಲಂಕೆಗೆ ಹೋದನು. रुक्मिण्याः कृते श्रीकृष्णः तस्याः अपहरणमपि कृतवान् – ರುಕ್ಮಿಣಿಯ ಸಲುವಾಗಿ ಕೃಷ್ಣನು ಅವಳ ಅಪಹರಣವನ್ನೂ ಮಾಡಿದನು. मम कृते – ನನ್ನ ಸಲುವಾಗಿ, तव कृते – ನಿನ್ನ ಸಲುವಾಗಿ, देशस्य कृते सैनिकाः युध्यन्ते – ದೇಶದ ಸಲುವಾಗಿ ಸೈನಿಕರು ಯುದ್ಧ ಮಾಡುತ್ತಾರೆ. राज्यस्य कृते दुर्योधनः पाण्डवान् अवञ्चयत् – ರಾಜ್ಯದ ಸಲುವಾಗಿ ದುರ್ಯೋಧನನು ಪಾಂಡವರನ್ನು ವಂಚಿಸಿದನು.

अग्नेः समक्षं विवाहविधिः प्रचलति – ಅಗ್ನಿಯ ಸಮಕ್ಷಮದಲ್ಲಿ ವಿವಾಹವಿಧಿಯು ನಡೆಯುತ್ತದೆ. पितामहस्य समक्षं पौत्रस्य विवाहः अभवत् – ಅಜ್ಜನ ಸಮಕ್ಷಮದಲ್ಲಿ ಮೊಮ್ಮಗನ ಮದುವೆಯು ನಡೆಯಿತು. भीष्मस्य समक्षं द्रौपद्याः मानभङ्गः अभवत्।

Sri Vidyabharathi Book Centre, Sringeri

CC-O. In Public Domain. Digitized by eGangotri

3) विशेष, अन्तरं भेद ಇವುಗಳಿಗೆ ಸಂಬಂಧಿಸಿದ ಪದಕ್ಕೆ षष्ठी ವಿಭಕ್ತಿ ಬರುತ್ತದೆ.

पिक काकयोः को भेदः? ಕೋಗಿಲೆ ಮತ್ತು ಕಾಗೆಗಳಿಗೆ ಏನು ವ್ಯತ್ಯಾಸ? पिककाकयोः किम् अन्तरम्? ಕೋಗಿಲೆ ಕಾಗೆಗಳ ಮಧ್ಯೆ ಏನು ವ್ಯತ್ಯಾಸ? राम रावणयोः अन्तरं समुद्र - पल्वलयोरिव - ರಾಮ ರಾವಣರ ವ್ಯತ್ಯಾಸವು ಸಮುದ್ರ ಮತ್ತು ಸಣ್ಣ ಕೊಳಗಳಿಗಿರುವ ವ್ಯತ್ಯಾಸದಂತೆ.

4) दूर, अन्तिक - ಸಮೀಪ ಈ ಅವ್ಯಯಗಳಿಗೆ ಸಂಬಂಧಿಸಿದ ಪದಗಳಿಗೆ षष्ठी ವಿಭಕ್ತಿಯೂ ಬರಬಹುದು. ಉದಾ - शालायाः अनतिदूरे मम गृहम् अस्ति - ಶಾಲೆಯ ಸ್ವಲ್ಪ ದೂರದಲ್ಲಿ ನನ್ನ ಮನೆ ಇದೆ. वाहननिस्थानस्य अन्तिकं मम बाटिकागृहम् आस्ति - ಬಸ್ ನಿಲ್ದಾಣದ ಸಮೀಪದಲ್ಲಿ ನನ್ನ ಬಾಡಿಗೆ ಮನೆ ಇದೆ.

5) आयुष्य, भद्र (ಶುಭ) कुशल, सुख, अर्थ, हित ಈ ಶಬ್ದಗಳನ್ನು ಪ್ರಯೋಗಿಸುವಾಗ ಸಂಬಂಧಿಸಿದ ಶಬ್ದಕ್ಕೆ षष्ठी ವಿಭಕ್ತಿ ಅಥವಾ ಚತುರ್ಥೀ ವಿಭಕ್ತಿ ಬರುವುದು. ಉದಾ -

तव (तुभ्यं) आयुष्यं वर्धताम् - ನಿನ್ನ ಆಯುಷ್ಯವು ಹೆಚ್ಚಲಿ. जनानां (जनेभ्यः) भद्रं भवतु - ಜನರಿಗೆ ಶುಭವಾಗಲಿ. अपि कुशलं रामचन्द्रस्य? ರಾಮಚಂದ್ರನು ಕುಶಲವೆ? अपि कुशलं देवकीपुत्रस्य? ಕೃಷ್ಣನು ಕ್ಷೇಮವೇ?

6) ಅನಾದರಾರ್ಥದಲ್ಲಿ षष्ठी ವಿಭಕ್ತಿ ಬರುವುದು ಉದಾ - मम पश्यतः सः गतवान् - ನಾನು ನೋಡುತ್ತಿದ್ದಂತೆಯೇ ಅವನು ಹೋದನು. स मम आह्वयति - ಅವನು ನನ್ನ ಕರೆಯುತ್ತಾನೆ (ತಿರಸ್ಕಾರದಲ್ಲಿ ಷಷ್ಠೀ)

7) ತುಲಾರ್ಥದ ಶಬ್ದವಿದ್ದಾಗ ಉಪಮಾನವಾಚಕದ ಮೇಲೆ षष्ठी ಅಥವಾ तृतीया ಬರುವುದು. ಉದಾ -

चन्द्रेण तुल्यम्, चन्द्रस्य सदृशः - ಚಂದ್ರನಿಗೆ ಸಮಾನನು, लतायाः समं - ಬಳ್ಳಿಗೆ ಸಮಾನವಾದ

8) ಕ್ರಿಯಾಪದಗಳನ್ನು ಬಿಡಿಸಿ ಹೇಳುವಾಗ षष्ठी ವಿಭಕ್ತಿ ಉದಾ - पुस्तकस्य अध्ययनं करोति। वेदानाम् अध्ययनं करोति। देवस्य दर्शनं करोति।

सप्तमी

1) ಸ್ನೇಹ, ಭಕ್ತಿ - ಮೊದಲಾದ ಅರ್ಥವನ್ನು ಕೊಡುವ ಶಬ್ದಗಳನ್ನು ಪ್ರಯೋಗಿಸಿದಾಗ ಯಾರಲ್ಲಿ ಸ್ನೇಹ ಅಥವಾ ಭಕ್ತಿ ಇರುವುದೋ ಅದನ್ನು ಸೂಚಿಸುವ ಪದವು ಸಪ್ತಮೀ ವಿಭಕ್ತಿಯಲ್ಲಿರುತ್ತದೆ. ಉದಾ -

पिता पुत्रे स्निह्यति - ತಂದೆಯು ಮಗನಲ್ಲಿ ಸ್ನೇಹವಿಡುತ್ತಾನೆ. मोहनस्य शम्भौ अतीव भक्तिः - ಮೋಹನನಿಗೆ ಶಿವನಲ್ಲಿ ತುಂಬಾ ಭಕ್ತಿ ಇದೆ. सपत्नीजने प्रियसखीवृत्तिं कुरु - ಸಪತ್ನಿಯರಲ್ಲಿ ಪ್ರಿಯ ಸ್ನೇಹಿತರಂತೆ ನಡೆದುಕೋ. मम मनः अस्याम् अनुरक्तम् - ನನ್ನ ಮನಸ್ಸು ಇವಳಲ್ಲಿ ಅನುರಕ್ತವಾಗಿದೆ. कृष्णे गोपिकाः अनुरक्ताः - ಕೃಷ್ಣನಲ್ಲಿ ಗೋಪಿಕೆಯರು ಅನುರಕ್ತರಾಗಿದ್ದಾರೆ. पिता मयि स्निह्यति - ತಂದೆಯು ನನ್ನಲ್ಲಿ ಸ್ನೇಹವಿಡುತ್ತಾನೆ. पितरि मातरि च भक्तिं वर्धस्व - ತಂದೆಯಲ್ಲಿ ಮತ್ತು ತಾಯಿಯಲ್ಲಿ ಭಕ್ತಿಯನ್ನು ಹೆಚ್ಚಿಸು त्वं मयि विश्वासपात्रम् - ನೀನು ನನಗೆ ವಿಶ್ವಾಸ ಪಾತ್ರನು.

2) ಆದಾಗ, ಆಗಲು, ಆಗುತ್ತಿರಲು ಈ ಅರ್ಥದಲ್ಲಿ ಸಂಬಂಧಿಸಿದ ಶಬ್ದಗಳನ್ನು ಸಪ್ತಮೀ ವಿಭಕ್ತಿಯಲ್ಲಿ ಹೇಳಬೇಕು. ಉದಾ - सूर्ये अस्तंगते, सर्वे गृहं गच्छन्ति - ಸೂರ್ಯನು ಅಸ್ತಂಗತನಾಗಲು, ಎಲ್ಲರೂ ಮನೆಗೆ ಹೋಗುತ್ತಾರೆ. रामे वनं गते, लक्ष्मणः अपि प्रस्थितः - ರಾಮನು ಕಾಡಿಗೆ ಹೋಗಲು, ಲಕ್ಷ್ಮಣನು ಕೂಡ ಹೊರಟನು. जनेषु जागरितेषु दुष्टमन्त्रिणः तूर्ष्णीं तिष्टन्ति - ಜನರು ಎಚ್ಚರಗೊಳ್ಳಲು, ದುಷ್ಟಮಂತ್ರಿಗಳು ಸುಮ್ಮನೆ ಇರುತ್ತಾರೆ. गृहे प्रदीप्ते, कूपखननं न युक्तम् - ಮನೆಯು ಸುಡಲು, ಬಾವಿ ತೋಡುವುದು ಸರಿಯಲ್ಲ, तस्मिन् गतवति, एषः आगतवान् - ಅವನು ಹೋಗಲು, ಇವನು ಬಂದನು. मयि आगते, ते सर्वे निर्गताः - ನಾನು ಬರಲು ಅವರೆಲ್ಲಾ ಹೊರಟು ಹೋದರು. जनेषु सन्तुष्टेषु, राजापि सन्तुष्यति - ಜನರು ಸಂತೋಷಗೊಳ್ಳಲು, ರಾಜನೂ ಕೂಡ ಸಂತೋಷಗೊಳ್ಳುವನು. दिनेषु गच्छत्सु रामः प्रौढः अभवत् - ದಿನಗಳು ಕಳೆಯಲು, ರಾಮನು ಪ್ರೌಢನಾದನು. रामे राज्यं प्रशासति, जनाः परस्परं नाभ्यहिंसन् - ರಾಮನು ರಾಜ್ಯವಾಳುತ್ತಿರಲು, ಜನರು ಪರಸ್ಪರ ಹಿಂಸಿಸುತ್ತಿರಲಿಲ್ಲ

3) स्वामिन्, ईश्वर, आधिपति ಎಂಬ ಶಬ್ದಗಳಿದ್ದಾಗ ಸಂಬಂಧ ವಾಚಕದ ಮೇಲೆ ಸಪ್ತಮೀ ಅಥವಾ षष्ठी ಬರುವುದು. ಉದಾ - गोषु स्वामी/गवां स्वामी - ದನಗಳ (ದನಗಳ ಒಡೆಯ) ಯಜಮಾನನು, अयोध्यायां/अयोध्यायाः अधिपतिः।

Sri Vidya Bharathi Book Centre, Sringeri

CC-O. In Public Domain. Digitized by eGangotri

प्रयोगप्रकरणम्

प्रयोगाः त्रिविधाः – ಪ್ರಯೋಗಗಳು ಮೂರು ವಿಧ 1) कर्तरि 2) कर्मणि 3) भावे। ಸಕರ್ಮಕ ಧಾತುಗಳಿಗೆ कर्तरि ಮತ್ತು कर्मणि ಪ್ರಯೋಗಗಳಿವೆ. ಅಕರ್ಮಕ ಧಾತುಗಳಿಗೆ कर्तरि ಮತ್ತು भावे ಪ್ರಯೋಗಗಳಿವೆ.

सकर्मक धातुः – ಕ್ರಿಯೆಯು ಅರ್ಥವಾದೊಡನೆ ಏನನ್ನು? ಯಾರನ್ನು? ಇತ್ಯಾದಿ ಆಕಾಂಕ್ಷೆ ಇದ್ದರೆ ಅದಕ್ಕೆ ಉತ್ತರ ರೂಪದ ಶಬ್ದವನ್ನು ದ್ವಿತೀಯಾ ವಿಭಕ್ತಿಯಲ್ಲಿ ಹೇಳಬೇಕು. ಈ ದ್ವಿತೀಯಾ ವಿಭಕ್ತಿಯ ಶಬ್ದವನ್ನೂ ಕರ್ಮಪದ ಎನ್ನುತ್ತಾರೆ. ಆದುದರಿಂದ ಕರ್ಮದ ಅಪೇಕ್ಷೆಯುಳ್ಳ ಧಾತುಗಳನ್ನು सकर्मक ಧಾತುಗಳೆನ್ನುತ್ತಾರೆ. ಉದಾ वालकः पाठं पठति – ಇಲ್ಲಿ पठति ಕ್ರಿಯಾಪದದ ಅರ್ಥ ಓದುತ್ತಾನೆ ಎಂದು. ಆಗ ಏನನ್ನು ಎಂಬ ಪ್ರಶ್ನೆ ಹುಟ್ಟುವುದು. ಆಗ पाठं (ಪಾಠವನ್ನು) ಎಂಬ ದ್ವಿತೀಯ ವಿಭಕ್ತಿಯ ಶಬ್ದವನ್ನು ಉತ್ತರ ರೂಪದಲ್ಲಿ ಹೇಳುತ್ತೇವೆ. ಇದು ಕರ್ಮಪದ. ಆದುದರಿಂದ ಕರ್ಮದ ಆಕಾಂಕ್ಷೆ ಇರುವ ಧಾತುವನ್ನು ಸಕರ್ಮಕ ಧಾತುವೆಂದೂ, ಆ ಕ್ರಿಯಾಪದವನ್ನು ಸಕರ್ಮಕ ಕ್ರಿಯಾಪದವೆಂದೂ ಹೇಳುತ್ತಾರೆ. ಹಾಗೆಯೇ पठति ಓದುತ್ತಾನೆ, लिखति ಬರೆಯುತ್ತಾನೆ, पश्यति, ನೋಡುತ್ತಾನೆ करोति ಮಾಡುತ್ತಾನೆ ಇವೆಲ್ಲಾ ಸಕರ್ಮಕ ಕ್ರಿಯಾಪದಗಳು.

अकर्मक धातुः – ಕೆಲವು ಧಾತುಗಳಿಗೆ (ಕ್ರಿಯಾಪದಗಳಿಗೆ) ಏನನ್ನು ಯಾರನ್ನು ಇತ್ಯಾದಿ ಆಕಾಂಕ್ಷೆ ಬರುವುದಿಲ್ಲವಾದುದರಿಂದ ಕರ್ಮಪದದ ಅಪೇಕ್ಷೆ ಇರುವುದಿಲ್ಲ ಅಂತಹ ಧಾತುವಿಗೆ ಅಕರ್ಮಕ ಧಾತುವೆಂದೂ, ಕ್ರಿಯಾಪದಗಳನ್ನು ಅಕರ್ಮಕ ಕ್ರಿಯಾಪದಗಳೆಂದೂ ಹೇಳುತ್ತಾರೆ. ಉದಾ वालः तिष्ठति ಇಲ್ಲಿ ನಿಲ್ಲುತ್ತಾನೆ ಎಂದು ಕ್ರಿಯಾಪದದ ಅರ್ಥವಾದಾಗ ಏನನ್ನು ಎಂಬ ಪ್ರಶ್ನೆ ಬರುವುದಿಲ್ಲ

कर्तरिप्रयोगः

ಕರ್ತರಿ ಪ್ರಯೋಗದಲ್ಲಿ ಕರ್ತೃಪದಕ್ಕೆ ಪ್ರಾಧಾನ್ಯತೆ. ಕರ್ತೃವಾಚಕ ಪದಕ್ಕೆ ಪ್ರಥಮಾ ವಿಭಕ್ತಿಯೂ, ಕರ್ಮವಾಚಕ ಪದಕ್ಕೆ ದ್ವಿತೀಯಾ ವಿಭಕ್ತಿಯೂ ಬರುತ್ತದೆ. ಕ್ರಿಯಾಪದವು ಕರ್ತೃಪದದ ಪುರುಷ ವಚನವನ್ನು ಅನುಸರಿಸುತ್ತದೆ. ಉದಾ – छात्रः पाठं पठति। वालकः क्रीडति। सीता हसति। रामः फलं न लिखति। ಇತ್ಯಾದಿ.

कर्मणि प्रयोगः

ಕರ್ತರಿ ಪ್ರಯೋಗದಲ್ಲಿ ಸಕರ್ಮಕ ಕ್ರಿಯಾಪದವಿದ್ದರೆ ಕರ್ಮಪದವಿಲ್ಲದಿದ್ದರೆ ಅದನ್ನು ಬದಲಾಯಿಸುವ ವಾಕ್ಯಕ್ಕೆ कर्मणि ಪ್ರಯೋಗ ಎನ್ನುತ್ತಾರೆ.

ಕರ್ಮಣಿ ಪ್ರಯೋಗದಲ್ಲಿ ಕರ್ಮಪದಕ್ಕೆ ಪ್ರಾಧಾನ್ಯತೆ. ಕರ್ತೃಪದಕ್ಕೆ तृतीया ವಿಭಕ್ತಿಯೂ, ಕರ್ಮಪದಕ್ಕೆ प्रथमा ವಿಭಕ್ತಿಯೂ ಬರುವುದು. ಕ್ರಿಯಾ ಪದಕ್ಕೆ ಕರ್ಮಪದದ ಪುರುಷ ಮತ್ತು ವಚನವು ಬರುತ್ತದೆ. ಕ್ರಿಯಾಪದವು ಆತ್ಮನೇಪದಿಯಲ್ಲಿರುವುದು. ಧಾತುವಿಗೆ ಯ ಎಂಬ ಪ್ರತ್ಯಯ ಸೇರಿ ಆತ್ಮನೇಪದ ಆಖ್ಯಾತ ಪ್ರತ್ಯಯಗಳನ್ನು ಸೇರಿಸಿದರೆ ಕರ್ಮಣಿ ಕ್ರಿಯಾಪದವಾಗುವುದು. ಉದಾ

छात्रेण पाठः पठ्यते। – ವಿದ್ಯಾರ್ಥಿಯಿಂದ ಪಾಠವು ಓದಲ್ಪಡುತ್ತದೆ. रामेण फलं खाद्यते। ರಾಮನಿಂದ ಹಣ್ಣು ತಿನ್ನಲ್ಪಡುತ್ತದೆ. (अहं त्वां नमामि – ಕರ್ತರಿ) – मया त्वं नम्यसे । (त्वं मां निन्दसि) त्वया अहं निन्द्ये। ನಿನ್ನಿಂದ ನಾನು ನಿಂದಿಸಲ್ಪಡುತ್ತೇನೆ.

भावे प्रयोगः

ಕರ್ತರಿ ಪ್ರಯೋಗದಲ್ಲಿ ಅಕರ್ಮಕ ಕ್ರಿಯಾಪದವಿದ್ದರೆ (ಕರ್ಮಪದವಿಲ್ಲದಿದ್ದರೆ) ಅದನ್ನು ಬದಲಾಯಿಸುವ ವಾಕ್ಯಕ್ಕೆ भावे ಪ್ರಯೋಗ ಎನ್ನುತ್ತಾರೆ. ಇದರಲ್ಲಿ ಕರ್ತೃಪದಕ್ಕೆ ತೃತೀಯಾವಿಭಕ್ತಿ ಬರುತ್ತದೆ. ಕರ್ಮಪದವಿಲ್ಲ ಕ್ರಿಯಾಪದವು ಆತ್ಮನೇಪದಿ, ಪ್ರಥಮ ಪುರುಷದಲ್ಲೇ ಇರುತ್ತದೆ. ಧಾತುವಿಗೆ ''ಯ'' ಎಂಬ ಪ್ರತ್ಯಯ ಸೇರಿಸಿ ಆತ್ಮನೇ ಪದಿ ಪ್ರತ್ಯಯ ಸೇರಿಸಿದರೆ ಭಾವೇ ಪ್ರಯೋಗದ ಕ್ರಿಯಾಪದವಾಗುತ್ತದೆ. ಉದಾ – वालकेन धाव्यते ಬಾಲಕನಿಂದ ಓಡಲ್ಪಡುತ್ತದೆ.

सीतया हस्यते – ಸೀತೆಯಿಂದ ನಗಾಡಲ್ಪಡುತ್ತದೆ. (त्वं क्रीडसि) – त्वया क्रीड्यते। (अहं क्रीडामि) – मया क्रीड्यते। (सूर्यः प्रकाशते) – सूर्येण प्रकाश्यते।

Sri Vidyabharathi Book Centre, Sringeri

CC-O. In Public Domain. Digitized by eGangotri

'ಯ' ಪ್ರತ್ಯಯವು ಸೇರುವಾಗ ಧಾತುಗಳಲ್ಲಾಗುವ ಬದಲಾವಣೆಗಳು

1) आ ಕಾರಾಂತ ಧಾತುವಾಗಿದ್ದರೆ आ ಕಾರಕ್ಕೆ ई ಕಾರ ಬರುತ್ತದೆ. ಉದಾ –

दा – ददाति – ಕೊಡುತ್ತಾನೆ – दीयते – ಕೊಡಲ್ಪಡುತ್ತದೆ. – मा – माति – ಅಳೆಯುತ್ತಾನೆ – मीयते – ಅಳೆಯಲ್ಪಡುತ್ತದೆ. हा – जहाति ಬಿಡುತ್ತಾನೆ – हीयते ಬಿಡಲ್ಪಡುತ್ತದೆ. पा – पिबति – ಕುಡಿಯುತ್ತಾನೆ – पीयते ಕುಡಿಯಲ್ಪಡುತ್ತದೆ. स्था – तिष्ठति – स्थीयते – ನಿಲ್ಲಲ್ಪಡುತ್ತದೆ. धा – दधाति – ಧರಿಸುತ್ತಾನೆ – धीयते ಧರಿಸಲ್ಪಡುತ್ತದೆ.

2) ಧಾತುಗಳ ಕೊನೆಯ ಹ್ರಸ್ವವಾದ इ ಅಥವಾ उ ಗೆ ದೀರ್ಘ ಬರುತ್ತದೆ. ಉದಾ –

जि – जयति – जीयते ಗೆಲ್ಲಲ್ಪಡುತ್ತದೆ. स्तु – स्तौति – ಹೊಗಳುತ್ತಾನೆ. – स्तूयते – ಹೊಗಳಲ್ಪಡುತ್ತದೆ. अधि इ अधीयते – ಅಧ್ಯಯನ ಮಾಡಲ್ಪಡುತ್ತದೆ. श्रु – श्रृणोति ಕೇಳುತ್ತಾನೆ. श्रूयते – ಕೇಳಲ್ಪಡುತ್ತದೆ. क्षि – क्षयति – क्षीयते – ಕ್ಷೀಣಿಸಲ್ಪಡುತ್ತದೆ. द्रु – द्रवति – द्रूयते ಕರಗಲ್ಪಡುತ್ತದೆ.

3) ಧಾತುಗಳ ಕೊನೆಯ ऋ ಕಾರಕ್ಕೆ – रि, ॠ ಕಾರಕ್ಕೆ ईर् ಆದೇಶಗಳಾಗುತ್ತವೆ. ಉದಾ – कृ – करोति ಮಾಡುತ್ತಾನೆ. क्रियते – ಮಾಡಲ್ಪಡುತ್ತದೆ, हृ – हरति – ಕೊಂಡೊಯ್ಯುತ್ತಾನೆ – ह्रियते – ಕೊಂಡೊಯ್ಯಲ್ಪಡುತ್ತದೆ. धृ – धरति ಧರಿಸುತ್ತಾನೆ.– ध्रियते – ಧರಿಸಲ್ಪಡುತ್ತದೆ.

भृ – भरति – ಪೋಷಿಸುತ್ತಾನೆ भ्रियते – ಪೋಷಿಸಲ್ಪಡುತ್ತದೆ. सृ – सरति ಸರಸರನೆ ಹೋಗುತ್ತಾನೆ – स्रियते । तृ – तरति – ದಾಟುತ್ತಾನೆ – तीर्यते – ದಾಟಲ್ಪಡುತ್ತದೆ. मृ – म्रियते ಸಾಯುತ್ತಾನೆ – म्रियते ಸಾಯಲ್ಪಡುತ್ತದೆ.

4) ಆದರೆ ಸಂಯುಕಾಕ್ಷರದ ಕೊನೆಯಲ್ಲಿರವ ॠ ಕಾರಕ್ಕೆ अर् ಆದೇಶ ಬರುತ್ತದೆ. ಉದಾ स्मृ – स्मरति – ಸ್ಮರಿಸುತ್ತಾನೆ स्मर्यते – ಸ್ಮರಿಸಲ್ಪಡುತ್ತದೆ.

5) ಕೊನೆಯ ऋ ಕಾರದ ಹಿಂದೆ व् ಮತ್ತು पवर्ग ದ (प् फ् ब् भ् म्) ವ್ಯಂಜನಗಳಿದ್ದರೆ ऋ ಕಾರಕ್ಕೆ उर् ಆದೇಶ ಬರುತ್ತದೆ. ಉದಾ – पृ – पूरयति ತುಂಬಿಸುತ್ತಾನೆ, ಪೂರ್ಣಗೊಳಿಸುತ್ತಾನೆ – पूर्यते – ಪೂರ್ಣಗೊಳಿಸಲ್ಪಡುತ್ತದೆ.

6) ಹತ್ತನೆಯ ಗಣದ ಧಾತುಗಳ ಮೊದಲ इ, उ, ऋ ಗಳಿಗೆ ಗುಣಬರುತ್ತದೆ. ಉದಾ –

चुर् – चोरयति ಕದಿಯುತ್ತಾನೆ – चोर्यते ಕದಿಯಲ್ಪಡುತ್ತದೆ. – घुष् – घोषयति – ಘೋಷಿಸುತ್ತಾನೆ – घोष्यते – ಘೋಷಿಸಲ್ಪಡುತ್ತದೆ.

7) यज्, प्रच्छ, वच् वद्, स्वप् ಮುಂತಾದ ಧಾತುಗಳ य् ಕಾರಕ್ಕೆ इ ಯೂ, र् ಕಾರಕ್ಕೆ ऋ ಮತ್ತು व् ಕಾರಕ್ಕೆ उ ಅಕ್ಷರಗಳು ಆದೇಶವಾಗುತ್ತವೆ. ಇದಕ್ಕೆ ಸಂಪ್ರಸಾರಣವೆನ್ನುತ್ತಾರೆ. ಉದಾ –

यज् – यजते ಯಜ್ಞಮಾಡುತ್ತಾನೆ – इज्यते – ಯಜ್ಞಮಾಡಲ್ಪಡುತ್ತದೆ. प्रच्छ् – पृच्छति – ಪ್ರಶ್ನಿಸುತ್ತಾನೆ – पृच्छ्यते – ಪ್ರಶ್ನಿಸಲ್ಪಡುತ್ತಾನೆ. वच् – वक्ति – ಮಾತಾಡುತ್ತಾನೆ – उच्यते – ಮಾತಾಡುಲ್ಪಡುತ್ತದೆ. वद् – वदति ಹೇಳುತ್ತಾನೆ उद्यते – ಹೇಳಲ್ಪಡುತ್ತದೆ.

स्वप् – स्वपिति – ಮಲಗುತ್ತಾನೆ. सुप्यते – ಮಲಗಲ್ಪಡುತ್ತದೆ. वह् – वहति – ಹೊರುತ್ತಾನೆ – उह्यते ಹೊರಲ್ಪಡುತ್ತದೆ.

8) ಧಾತುವಿನ ಕೊನೆಯ न ಕಾರಕ್ಕೆ आ ಆದೇಶವು ವಿಕಲ್ಪವಾಗಿ ಬರುವುದು. ಉದಾ – खन् – खनति – ಅಗೆಯುತ್ತಾನೆ खायते/खन्यते। जन् – जायते – ಹುಟ್ಟುತ್ತದೆ जायते/जन्यते ಉಂಟಾಗಲ್ಪಡುತ್ತದೆ.

9) ಕೆಲವು ಕೊನೆಯ ವರ್ಣದ ಹಿಂದಿನ (ಉಪಾಂತ್ಯ) ಅನುನಾಸಿಕವು ಲೋಪಹೊಂದುತ್ತದೆ. ಉದಾ – ध्वंस् – ध्वंसते – ನಾಶ/ಹಾಳು ಮಾಡುತ್ತಾನೆ – ध्वस्यते – ನಾಶ/ಹಾಳು ಮಾಡಲ್ಪಡುತ್ತದ रञ्ज् – रञ्जति – ರಂಜಿಸುತ್ತದೆ – रज्यते ರಂಜಿಸಲ್ಪಡುತ್ತದೆ. बन्ध् – बध्नाति – ಬಂಧಿಸುತ್ತಾನೆ. बध्यते – ಕಟ್ಟಲ್ಪಡುತ್ತದೆ.

Sri Vidyabharathi Book Centre, Sringeri

10) अस् ಮತ್ತು ब्रू ಧಾತುಗಳಿಗೆ ಕರ್ಮಣಿರೂಪವಿಲ್ಲದ ಕಾರಣ ಅವುಗಳ ಬದಲು भू ಮತ್ತು वच् ಧಾತುವಿನ ರೂಪಗಳನ್ನು ಹೇಳಬೇಕು. ಉದಾ

CC-O. In Public Domain. Digitized by eGangotri

अस् – अस्ति ಇದೆ – भूयते ಇರಲ್ಪಡುತ್ತದೆ. ब्रू – ब्रवीति – ಹೇಳುತ್ತಾನೆ. – उच्यते – ಹೇಳಲ್ಪಡುತ್ತದೆ.

11) म्लै, ग्लै, शी ಮುಂತಾದ ಧಾತುಗಳ ಕೊನೆಯ ಸ್ವರಕ್ಕೆ आ ಸೇರುತ್ತದೆ – उदा – म्लै – म्लायति ಬಾಡುತ್ತದೆ - म्लायते ಬಾಡಲ್ಪಡುತ್ತದೆ. ग्लै – ग्लायति – ಬಾಡುತ್ತದೆ ग्लायते ಬಾಡಲ್ಪಡುತ್ತದೆ. शी – शेते ಮಲಗುತ್ತಾನೆ. शायते ಮಲಗಲ್ಪಡುತ್ತದೆ.

12) गै ಧಾತುವಿನ ಕೊನೆಯ ಸ್ವರ ई ಆಗುತ್ತದೆ ಉದಾ – गै – गायति ಹಾಡುತ್ತಾಳೆ. – गीयते ಹಾಡಲ್ಪಡುತ್ತದೆ.

ಕೆಲವು ಅನಿಯಮಿತ ರೂಪಗಳು

क्षल् – क्षालयति ತೊಳೆಯುತ್ತಾನೆ – क्षाल्यते – ತೊಳೆಯಲ್ಪಡುತ್ತದೆ दृश् – पश्यति – ನೋಡುತ್ತಾನೆ – दृश्यते - ನೋಡಲ್ಪಡುತ್ತದೆ. धृ – धरति ಧರಿಸುತ್ತಾನೆ – धार्यते – ಧರಿಸಲ್ಪಡುತ್ತದೆ. जागृ – जगर्ति ಎಚ್ಚರಗೊಳ್ಳುತ್ತಾನೆ – जागर्यते - ಎಚ್ಚರಿಸ್ಪಡುತ್ತಾನೆ शास् – शास्ति ಆಳುತ್ತಾನೆ – शिष्यते – ಆಳಲ್ಪಡುತ್ತದೆ. आ शास् – आशास्ते – ಬಯಸುತ್ತಾನೆ – इष्यते – ಇಚ್ಛಿಸಲ್ಪಡುತ್ತದೆ. ಇತ್ಯಾದಿ

उदाहरण वाक्यानि

कर्तरि	कर्मणि
अहं देवं नमामि ನಾನು ದೇವರನ್ನು ನಮಿಸುತ್ತೇನೆ.	मया देवः नम्यते ನನ್ನಿಂದ ದೇವರು ನಮಸ್ಕರಿಸಲ್ಪಡುತ್ತಾರೆ.
अहं त्वां नामामि ನಾನು ನಿನ್ನನ್ನು ನಮಿಸುತ್ತೇನೆ.	मया त्वं नम्यसे । ನನ್ನಿಂದ ನೀನು ನಮಿಸಲ್ಪಡುವೆ.
त्वं मां नमसि ನೀನು ನನ್ನನ್ನು ನಮಿಸುವಿ.	त्वया अहं नम्ये । ನಿನ್ನಿಂದ ನಾನು ನಮಿಸಲ್ಪಡುತ್ತೇನೆ.
वालाः पाठं पठन्ति ಮಕ್ಕಳು ಪಾಠವನ್ನು ಓದುತ್ತಾರೆ.	बालैः पाठः पठ्यते । ಮಕ್ಕಳಿಂದ ಪಾಠವು ಓದಲ್ಪಡುತ್ತದೆ.
सीता पाठौ पठति ಸೀತೆಯು ಎರಡು ಪಾಠಗಳನ್ನು ಓದುತ್ತಾಳೆ.	सीतया पाठौ पठ्येते (द्वि.व.) ಸೀತೆಯಿಂದ ಎರಡು ಪಾಠಗಳು ಓದಲ್ಪಡುತ್ತವೆ.
पण्डितः पुस्तकं लिखितवान्	पण्डितेन पुस्तकं लिखितम् ।
भक्तः भगवन्तं स्तौति ।	भक्तेन भगवान् स्तूयते ।
रामः सीतां वने त्यजति । ರಾಮನು ಸೀತೆಯನ್ನು ಕಾಡಿನಲ್ಲಿ ಬಿಡುತ್ತಾನೆ.	रामेण सीता वने त्यज्यते । ರಾಮನಿಂದ ಸೀತೆಯು ಕಾಡಿನಲ್ಲಿ ಬಿಡಲ್ಪಡುತ್ತಾನೆ.
बालकः पुस्तकं पठति । ಬಾಲಕನು ಪುಸ್ತಕವನ್ನು ಓದುತ್ತಾನೆ.	वालकेन पुस्तकं (न. लि.) पठ्यते । ಬಾಲಕನಿಂದ ಪುಸ್ತಕವು ಓದಲ್ಪಡುತ್ತದೆ.
सैनिकाः देशं रक्षन्ति । ಸೈನಿಕರು ದೇಶವನ್ನು ರಕ್ಷಿಸುತ್ತಾರೆ.	सैनिकैः देशः रक्ष्यते । ಸೈನಿಕರಿಂದ ದೇಶವು ರಕ್ಷಿಸಲ್ಪಡುತ್ತದೆ.
नृपः जनान् रक्षति । ರಾಜನು ಜನರನ್ನು ರಕ್ಷಿಸುತ್ತಾನೆ.	नृपेण जनाः रक्ष्यन्ते । ರಾಜನಿಂದ ಜನರು ರಕ್ಷಿಸಲ್ಪಡುತ್ತಾರೆ.
त्वं गीतां पठसि । ನೀನು ಗೀತೆಯನ್ನು ಓದುವಿ	त्वया गीता पठ्यते । ನಿನ್ನಿಂದ ಗೀತೆಯು ಓದಲ್ಪಡುತ್ತದೆ.
अहं रामायणं गायामि । ನಾನು ರಾಮಯಣವನ್ನು ಹಾಡುವೆನು	माया रामायणं गीयते । ನನ್ನಿಂದ ರಾಮಾಯಣವು ಹಾಡಲ್ಪಡುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

पिता बालं नयति ।

ತಂದೆಯು ಬಾಲಕನನ್ನು ಕಂಡೊಯ್ಯುತ್ತಾನೆ

गजः कासारं तरति ।

ಆನೆಯು ಕೆರೆಯನ್ನು ದಾಟುತ್ತದೆ.

राजा शत्रुं हन्ति ।

ರಾಜನು ಶತ್ರುವನ್ನು ಕೊಲ್ಲುತ್ತಾನೆ.

अग्निः गृहं दहति ।

ಅಗ್ನಿಯು ಮನೆಯನ್ನು ಸುಡುತ್ತದೆ.

अहं गृहं पश्यामि ।

ನಾನು ಮನೆಯನ್ನು ನೋಡುತ್ತೇನೆ.

भटः देशं त्यजति ।

ಭಟನು ದೇಶವನ್ನು ಬಿಡುತ್ತಾನೆ.

भृत्यः भारं वहति ।

ಸೇವಕನು ಭಾರವನ್ನು ಹೊರುತ್ತಾನೆ

कविः काव्यं करोति ।

ಕವಿಯು ಕಾವ್ಯವನ್ನು ಮಾಡುತ್ತಾನೆ.

बालः क्षीरं पिबति ।

ಬಾಲಕನು ಹಾಲನ್ನು ಕುಡಿಯುತ್ತಾನೆ.

शान्तला पद्यं लिखति ।

ಶಾಂತಲೆಯು ಪದ್ಯವನ್ನು ಬರೆಯುತ್ತಾಳೆ.

धाता नरान् सृजति ।

ಬ್ರಹ್ಮನು ಮನುಷ್ಯರನ್ನು ಸೃಷ್ಟಿಸುತ್ತಾನೆ

पार्वती तपः चरति ।

ಪಾರ್ವತಿಯು ತಪಸ್ಸನ್ನು ಆಚರಿಸುತ್ತಾಳೆ

अहम् अन्नम् खादामि ।

ನಾನು ಅನ್ನವನ್ನು ತಿನ್ನುತ್ತೇನೆ.

ते देवं नमन्ति ।

ಅವರು ದೇವರನ್ನು ನಮಿಸುತ್ತಾರೆ.

बालिकाः कथाः लिखन्ति ।

ಹುಡುಗಿಯರು ಕಥೆಗಳನ್ನು ಬರೆಯುತ್ತಾರೆ.

चैत्रः शास्त्रं पठितवान् ।

ಚೈತ್ರನು ಶಾಸ್ತ್ರವನ್ನು ಓದಿದನು.

शिवः तपोवनं गच्छति ।

ಶಿವನು ತಪೋವನಕ್ಕೆ ಹೋಗುತ್ತಾನೆ.

कवयः काव्यानि रचयन्ति ।

ಕವಿಗಳು ಕಾವ್ಯಗಳನ್ನು ರಚಿಸುತ್ತಾರೆ.

कुम्भकारः घटान् करोति ।

ಕುಂಭಾರನು ಮಡಿಕೆಗಳನ್ನು ಮಾಡುತ್ತಾನೆ.

सा जलं पिबति ।

ಅವಳು ನೀರನ್ನು ಕುಡಿಯುತ್ತಾಳೆ.

वयं चित्राणि पश्यामः ।

ನಾವು ಚಿತ್ರಗಳನ್ನು ನೋಡುತ್ತೇವೆ.

पित्रा बालः नीयते ।

ತಂದೆಯಿಂದ ಬಾಲಕನು ಕೊಂಡೊಯ್ಯಲ್ಪಡುತ್ತಾನೆ.

गजेन कासारः तीर्यते

ಆನೆಯಿಂದ ಕೆರೆಯು ದಾಟಲ್ಪಡುತ್ತದೆ.

राज्ञा शत्रुः हन्यते ।

ರಾಜನಿಂದ ಶತ್ರುವು ಕೊಲ್ಲಲ್ಪಡುತ್ತಾನೆ.

अग्निना गृहं दह्यते ।

ಅಗ್ನಿಯಿಂದ ಮನೆಯು ಸುಡಲ್ಪಡುತ್ತದೆ.

मया गृहं दृश्यते ।

ನನ್ನಿಂದ ಮನೆಯು ನೋಡಲ್ಪಡುತ್ತದೆ.

भटेन देशः त्यज्यते ।

ಭಟನಿಂದ ದೇಶವು ತ್ಯಜಿಸಲ್ಪಡುತ್ತದೆ.

भृत्येन भारः उह्यते ।

ಸೇವಕನಿಂದ ಭಾರವು ಹೊರಲ್ಪಡುತ್ತದೆ.

कविना काव्यं क्रियते

ಕವಿಯಿಂದ ಕಾವ್ಯವು ಮಾಡಲ್ಪಡುತ್ತದೆ.

बालेल क्षीरं पीयते ।

ಬಾಲಕನಿಂದ ಹಾಲು ಕುಡಿಯಲ್ಪಡುತ್ತದೆ.

शान्तलया पद्यं लिख्यते ।

ಶಾಂತಲೆಯಿಂದ ಪದ್ಯವು ಬರೆಯಲ್ಪಡುತ್ತದೆ.

धात्रा नराः सृज्यन्ते ।

ಬ್ರಹ್ಮನಿಂದ ಮನುಷ್ಯರು ಸೃಷ್ಟಿಸಲ್ಪಡುತ್ತಾರೆ.

पार्वत्या तपः चर्यते ।

ಪಾರ್ವತಿಯಿಂದ ತಪಸ್ಸು ಆಚರಿಸಲ್ಪಡುತ್ತದೆ.

मया अन्नं खाद्यते ।

ನನ್ನಿಂದ ಅನ್ನವು ತಿನ್ನಲ್ಪಡುತ್ತದೆ.

तैः देवः नम्यते ।

ಅವರಿಂದ ದೇವರು ನಮಿಸಲ್ಪಡುತ್ತಾರೆ.

वालिकाभिः कथाः लिख्यन्ते ।

ಹುಡುಗಿಯರಿಂದ ಕಥೆಗಳು ಬರೆಯಲ್ಪಡುತ್ತವೆ.

चैत्रेण शास्त्रं पठितम् ।

ಚೈತ್ರನಿಂದ ಶಾಸ್ತ್ರವು ಓದಲ್ಪಡುತ್ತದೆ.

शिवेन तपोवनं गम्यते ।

ಶಿವನಿಂದ ತಪೋವನಕ್ಕೆ ಹೋಗಲ್ಪಡುತ್ತದೆ.

कविभिः काव्यानि रच्यन्ते ।

ಕವಿಗಳಿಂದ ಕಾವ್ಯಗಳು ರಚಿಸಲ್ಪಡುತ್ತವೆ.

कुम्भकारेण घटाः क्रियन्ते ।

ಕುಂಭಾರನಿಂದ ಮಡಿಕೆಗಳು ಮಾಡಲ್ಪಡುತ್ತವೆ.

तया जलं पीयते ।

ಅವಳಿಂದ ನೀರು ಕುಡಿಯಲ್ಪಡುತ್ತದೆ.

अस्माभिः चित्राणि दृश्यन्ते ।

ನಮ್ಮಿಂದ ಚಿತ್ರಗಳು ಕಾಣಲ್ಪಡುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

एताः शालां गच्छन्ति ।	एताभिः शाला गम्यते ।
ಇವರು ಹುಡುಗಿಯರು ಶಾಲೆಗೆ ಹೋಗುತ್ತಾರೆ.	ಇವರಿಂದ ಶಾಲೆಯು ಹೊಗಳಲ್ಪಪಡುತ್ತದೆ.
अहं मन्त्रं जपामि ।	मया मन्त्रं जप्यते ।
ನಾನು ಮಂತ್ರವನ್ನು ಜಪಿಸುತ್ತೇನೆ.	ನನ್ನಿಂದ ಮಂತ್ರವು ಜಪಿಸಲ್ಪಡುತ್ತದೆ
तौ पद्यं लिखतः ।	ताभ्यां पद्यं लिख्यते ।
ಅವರಿಬ್ಬರು ಪದ್ಯವನ್ನು ಬರೆಯುತಿದ್ದಾರೆ.	ಅವರಿಬ್ಬರಿಂದ ಪದ್ಯವು ಬರೆಯಲ್ಪಡುತ್ತದೆ.
अहं नीतिं उपदिशामि ।	मया नीतिः उपदिश्यते ।
सीता आनन्दम् अनुभवति ।	सीतया आनन्दः अनुभूयते ।
ಸೀತೆಯು ಆನಂದವನ್ನು ಅನುಭವಿಸುತ್ತಾಳೆ.	ಸೀತೆಯಿಂದ ಆನಂದವು ಅನುಭವಿಲ್ಪಡುತ್ತದೆ.
अहं रसं अनुभवामि ।	मया रसः अनुभूयते ।
ನಾನು ರಸವನ್ನು ಅನುಭವಿಸುತ್ತೇನೆ.	ನನ್ನಿಂದ ರಸವು ಅನುಭವಿಸಲ್ಪಡುತ್ತದೆ.
गोपः वृषभान् गृहं नयति ।	गोपेन वृषभाः गृहं नीयन्ते ।
ಗೊಲ್ಲನು ಎತ್ತುಗಳನ್ನು ಮನೆಗೆ ಒಯ್ಯುತ್ತಾನೆ.	ಗೊಲ್ಲನಿಂದ ಎತ್ತುಗಳು ಮನೆಗೆ ಒಯ್ಯಲ್ಪಡುತ್ತವೆ.
जनाः लोककथाभिः जानन्ति ।	जनैः लोककथाभिः ज्ञायते ।
ಜನರು ಲೋಕದ ಕಥೆಗಳಿಂದ ತಿಳಿಯುತ್ತಾರೆ.	ಜನರಿಂದ ಲೋಕಕಥೆಗಳಿಂದ ತಿಳಿಯಲ್ಪಡುತ್ತವೆ.
गोपः बृषभं नयति ।	गोपेन वृषभः नीयते ।
ಗೋಪನು ಎತ್ತನ್ನು ಕೊಂಡೊಯ್ಯುತ್ತಾನೆ.	ಗೋಪನಿಂದ ಎತ್ತು ಕೊಂಡೊಯ್ಯಲ್ಪಡುತ್ತದೆ.
चैत्रः तण्डुलं पचति ।	चैत्रेण तण्डुलः पच्यते
ಚೈತ್ರನು ಅಕ್ಕಿಯನ್ನು ಬೇಯಿಸುತ್ತಾನೆ.	ಚೈತ್ರನಿಂದ ಅಕ್ಕಿಯು ಬೇಯಿಸಲ್ಪಡುತ್ತದೆ
रामः भरतं कुशलम् अपृच्छत् । (पृष्टवान्)	रामेण भरतः कुशलं अपृच्छ्यत । (पृष्टम्)
ರಾಮನು ಭರತನಲ್ಲಿ ಕುಶಲವನ್ನು ಕೇಳಿದನು.	ರಾಮನಿಂದ ಭರತನು ಕುಶಲವನ್ನು ಕೇಳಲ್ಪಟ್ಟನು.
अहं पत्रम् अलिखम् (लिखितवान्)	मया पत्रम् अलिख्यत (लिखितम्)
ನಾನು ಪತ್ರವನ್ನು ಬರೆದೆನು.	ನನ್ನಿಂದ ಪತ್ರವು ಬರೆಯಲ್ಪಟ್ಟಿತು.
मानवाः विचरिष्यन्ति । (भावेप्रयोग)	मानवैः विचरिष्यते ।
ಮಾನವರು ಸಂಚರಿಸುವರು.	ಮಾನವರಿಂದ ಸಂಚರಿಸಲ್ಪಡುತ್ತದೆ
हनुमान् रामम् अपश्यत् (दृष्टवान्)	हनुमता रामः अदृश्यत (दृष्टः) ।
अयं काव्यं करोतु । (लोट् ಕಾರ)	अनेन काव्यं क्रियताम् ।
ಇವನು ಕಾವ್ಯವನ್ನು ಮಾಡಲಿ (ಆಜ್ಞೆ)	ಇವನಿಂದ ಕಾವ್ಯವು ಮಾಡಲ್ಪಡಲಿ.
मुञ्च एनं बालम्	मुच्यतां एषः बालः
ಈ ಬಾಲಕನನ್ನು ಬಿಡು	ಈ ಬಾಲಕನು ಬಿಡಲ್ಪಡಲಿ
छात्रः पाठं सम्यक् पठतु ।	छात्रेण पाठः सम्यक् पठ्यताम्
ವಿದ್ಯಾರ್ಥಿಯು ಪಾಠವನ್ನು ಚೆನ್ನಾಗಿ ಓದಲಿ	ವಿದ್ಯಾರ್ಥಿಯಿಂದ ಪಾಠವು ಚೆನ್ನಾಗಿ ಓದಲ್ಪಡಲಿ
पिता काशीं गमिष्यति । (भविष्यत्काल)	पित्रा काशी गमिष्यते ।
ತಂದೆಯು ಕಾಶಿಗೆ ಹೋಗುವನು	ತಂದೆಯಿಂದ ಕಾಶಿಯು ಹೋಗಲ್ಪಡುತ್ತದೆ.
भगवान् मां रक्षिष्यति ।	भगवता अहं रक्षिष्ये ।
ಭಗವಂತನು ನನ್ನನ್ನು ರಕ್ಷಿಸುವನು.	ಭಗವಂತನಿಂದ ನಾನು ರಕ್ಷಿಸಲ್ಪಡುವೆನು.
कर्मकरः कार्यं करिष्यति ।	कर्मकरेण कार्यं करिष्यते ।
ಕಾರ್ಮಿಕನು ಕಾರ್ಯವನ್ನು ಮಾಡುವನು.	ಕಾರ್ಮಿಕನಿಂದ ಕಾರ್ಯವು ಮಾಡಲ್ಪಡುತ್ತದೆ.
अहं इतः गच्छामि । ನಾನು ಇಲ್ಲಿಂದ ಹೋಗುತ್ತೇನೆ.	मया इतः गम्यते ।
विद्यार्थी श्वः श्लोकं पठिष्यति ।	विद्यार्थिना श्वः श्लोकः पठिष्यते ।
ವಿದ್ಯಾರ್ಥಿಯು ನಾಳೆ ಶ್ಲೋಕವನ್ನು ಓದುವನು	ವಿದ್ಯಾರ್ಥಿಯಿಂದ ನಾಳೆ ಶ್ಲೋಕವು ಓದಲ್ಪಡುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

सोमिलकः बस्त्राणि उत्पादयति — सोमिलकेन वस्त्राणि उत्पाद्यन्ते ।

ಸೋಮಿಲಕನು ವಸ್ತ್ರಗಳನ್ನು ಉತ್ಪಾದಿಸುತ್ತಾನೆ. — ಸೋಮಿಲಕನಿಂದ ವಸ್ತ್ರಗಳು ಉತ್ಪಾದಿಸಲ್ಪಡುತ್ತವೆ.

कृष्णः शिशुपालं हतवान् । — कृष्णेन शिशुपालः हतः ।

ಕೃಷ್ಣನು ಶಿಶುಪಾಲನನ್ನು ಕೊಂದನು. — ಕೃಷ್ಣನಿಂದ ಶಿಶುಪಾಲನು ಕೊಲ್ಲಲ್ಪಟ್ಟನು.

त्वं सुवर्णशतत्रयं दत्तवान् । — त्वया सुवर्णशतत्रयं दत्तम् ।

ನೀನು ಮುನ್ನೂರು ಸುವರ್ಣವನ್ನು ಕೊಟ್ಟಿದ್ದೆ — ನಿನ್ನಿಂದ ಮುನ್ನೂರು ಸುವರ್ಣವು ಕೊಡಲ್ಪಟ್ಟಿತು.

सुहृत् भगवद्गीतां पठितवान् । — सहृदा भगवद्गीता पठिता ।

ಗೆಳೆಯನು ಭಗವದ್ಗೀತೆಯನ್ನು ಓದಿದನು. — ಗೆಳೆಯನಿಂದ ಭಗವದ್ಗೀತೆಯು ಓದಲ್ಪಟ್ಟಿತು.

भगिनी शीतं जलं पीतवती । — भगिन्या शीतं जलं पीतम् ।

ಸಹೋದರಿಯು ತಂಪು ನೀರನ್ನು ಕುಡಿದಳು. — ಸಹೋದರಿಯಿಂದ ತಂಪು ನೀರು ಕುಡಿಯಲ್ಪಟ್ಟಿತು.

सागरविज्ञानिनः अत्रागच्छन्ति । — सागरज्ञानिभिः अत्र आगम्यते ।

ಸಾಗರ ವಿಜ್ಞಾನಿಗಳು ಇಲ್ಲಿಗೆ ಬರುತ್ತಾರೆ. — ಸಾಗರವಿಜ್ಞಾನಿಗಳಿಂದ ಇಲ್ಲಿಗೆ ಬರಲ್ಪಡುತ್ತದೆ.

छात्रः प्रश्नं पृच्छति । — छात्रेण प्रश्नः पृच्छ्यते ।

ವಿದ್ಯಾರ್ಥಿಯು ಪ್ರಶ್ನೆಯನ್ನು ಕೇಳುತ್ತಾನೆ. — ವಿದ್ಯಾರ್ಥಿಯಿಂದ ಪ್ರಶ್ನೆಯು ಕೇಳಲ್ಪಡುತ್ತದೆ

ವಿ.ಸೂ ಮೇಲಿನ ಉದಾಹರಣೆಗಳಲ್ಲಿ ಲಙ್ ಲ ಕಾರ ಭೂತಕಾಲದ ಕರ್ತರಿ ಕ್ರಿಯಾಪದದ ಬದಲಿಗೆ तवत् ಪ್ರತ್ಯಯಾಂತ ಭೂತ ಕೃದಂತ ರೂಪಗಳನ್ನು ಪ್ರಯೋಗಿಸಲಾಗಿದೆ. ಹಾಗೆಯೇ ಅದನ್ನು ಕರ್ಮಣಿ ಪ್ರಯೋಗಕ್ಕೆ ಬದಲಾಯಿಸುವಾಗ ಲಙ್ ಲಕಾರದ ಭೂತಕಾಲದ ಕರ್ಮಣಿ ಕ್ರಿಯಾಪದದ ರೂಪಗಳ ಬದಲಿಗೆ तान्त ಭೂತಕೃದಂತ ರೂಪಗಳನ್ನು ಪ್ರಯೋಗಿಸಲಾಗಿದೆ. ಇನ್ನೂ ಕೆಲವು ಉದಾಹರಣೆಗಳು

कैकेयी वरौ अयाचत (याचितवती) — कैकेय्या वरौ अयाच्यत (याचितौ)

ಕೈಕೇಯಿಯು ಎರಡುವರಗಳನ್ನು ಬೇಡಿದಳು. — ಕೈಕೇಯಿಯಿಂದ ಎರಡು ವರಗಳು ಬೇಡಲ್ಪಟ್ಟವು.

राजा चोरान् अदण्डयत् (दण्डितवान्) — राज्ञा चोराः अदण्ड्यन्त (दण्डिताः)

ರಾಜನು ಕಳ್ಳರನ್ನು ದಂಡಿಸಿದನು. — ರಾಜನಿಂದ ಕಳ್ಳರು ದಂಡಿಸಲ್ಪಟ್ಟರು.

अहं ग्रन्थौ अयच्छम् (दत्तवान्) — माया ग्रन्थौ अदीयेताम् (दत्तौ)

ನಾನು ಎರಡು ಗ್ರಂಥಗಳನ್ನು ಕೊಟ್ಟೆನು. — ನನ್ನಿಂದ ಗ್ರಂಥಗಳು ಕೊಡಲ್ಪಟ್ಟವು.

बालकाः प्रश्नान् अपृच्छन् — बालकैः प्रशनाः अपृच्छ्यन्त (पृष्टाः)

ಬಾಲಕರು ಪ್ರಶ್ನೆಗಳನ್ನು ಕೇಳಿದರು. — ಬಾಲಕರಿಂದ ಪ್ರಶ್ನೆಗಳು ಕೇಳಲ್ಪಟ್ಟವು.

कपयः तरून् कम्पितवन्तः (अकम्पयन्) — कपिभिः तरवः कम्पिताः । (अकम्प्यन्त)

ಮಂಗಗಳು ಮರಗಳನ್ನು ಅಲ್ಲಾಡಿಸಿದವು. — ಮಂಗಗಳಿಂದ ಮರಗಳು ಅಲ್ಲಾಡಿಸಲ್ಪಟ್ಟವು.

भारतीयः संस्कृतिं रक्षेत् (लिङ्) — भारतीयेन संस्कृतिः रक्ष्येत

ಭಾರತೀಯನು ಸಂಸ್ಕೃತಿಯನ್ನು ರಕ್ಷಿಸಬೇಕು. — ಭಾರತೀಯನಿಂದ ಸಂಸ್ಕೃತಿಯು ರಕ್ಷಿಸಲ್ಪಡಬೇಕು.

दुःखार्तः देवं स्मरेत् — दुःखार्तेन देवः स्मर्येत

ದುಃಖಾರ್ತನು ದೇವರನ್ನು ಸ್ಮರಿಸಬೇಕು. — ದುಃಖಾರ್ತನಿಂದ ದೇವರು ಸ್ಮರಿಸಲ್ಪಡಬೇಕು.

यूयं तस्मै पुस्तकं यच्छेत् (लिङ्) — युष्माभिः तस्मै पुस्तकं दीयेत ।

ನೀವು ಅವನಿಗೆ ಪುಸ್ತಕವನ್ನು ಕೊಡಬೇಕು. — ನಿಮ್ಮಿಂದ ಅವನಿಗೆ ಪುಸ್ತಕವು ಕೊಡಲ್ಪಡಬೇಕು.

पुत्रः पितृवचनं श्रुणुयात् (लिङ्) — पुत्रेण पितृवचनं श्रूयेत ।

ಮಗನು ಪಿತೃವಚನವನ್ನು ಕೇಳಬೇಕು. — ಮಗನಿಂದ ಪಿತೃವಚನವು ಕೇಳಲ್ಪಡಬೇಕು.

शिष्यः गुरुं वन्देत (लिङ्) — शिष्येन गुरुः वन्द्येत ।

ಶಿಷ್ಯನು ಗುರುವನ್ನು ವಂದಿಸಬೇಕು. — ಶಿಷ್ಯನಿಂದ ಗುರುವು ವಂದಿಸಲ್ಪಡಬೇಕು.

देवदत्तेन ग्रन्थं दापयति । — देवदत्तेन ग्रन्थः दाप्यते ।

ದೇವದತ್ತನಿಂದ ಗ್ರಂಥವನ್ನು ಕೊಡಿಸುತ್ತಾನೆ. — ದೇವದತ್ತನಿಂದ ಗ್ರಂಥವು ಕೊಡಿಸಲ್ಪಡುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರೇರಣಾರ್ಥಕ ಕ್ರಿಯಾಪದದ ಕರ್ಮಣಿರೂಪ

गुरुः बालकेन पाठं पाठयति	गुरुणा बालकेन पाठः पाठ्यते
ಗುರುವು ಬಾಲಕನಿಂದ ಪಾಠವನ್ನು ಓದಿಸುತ್ತಾನೆ.	ಗುರುವಿನಿಂದ ಬಾಲಕನಿಂದ ಪಾಠವು ಓದಿಸಲ್ಪಡುವುದು.
राजा मूर्तिं कारयति।	राज्ञा मूर्तिः कार्यते
ರಾಜನು ಮೂರ್ತಿಯನ್ನು ಮಾಡಿಸುತ್ತಾನೆ.	ರಾಜನಿಂದ ಮೂರ್ತಿಯು ಮಾಡಿಸಲ್ಪಡುತ್ತದೆ.
प्रकाशकः पुस्तकं लेखयति	प्रकाशकेन पुस्तकं लेख्यते
ಪ್ರಕಾಶಕನು ಪುಸ್ತಕವನ್ನು ಬರೆಯುತ್ತಾನೆ.	ಪ್ರಕಾಶಕನಿಂದ ಪುಸ್ತಕವು ಬರೆಸಲ್ಪಡುವುದು.

लिट् ಲಕಾರದ ಕರ್ಮಣಿರೂಪ

ಪರಸ್ಮೈಪದಿ लिट् ಲಕಾರಕ್ಕೆ ಆತ್ಮನೇಪದಿ लिट् ಲಕಾರದ ಆಖ್ಯಾತ ಪ್ರತ್ಯಯಗಳನ್ನು ಹಾಕಿ ಹೇಳಿದರೆ लिट् ಲಕಾರದ ಕರ್ಮಣಿರೂಪವಾಗುವುದು. ಉದಾ – लिलेख ಬರೆದನು ಇದು ಕರ್ತರಿ ರೂಪ. ಇದರ ಕರ್ಮಣಿರೂಪ लिलिखे लिलिखाते लिलिखिरे ಎಂದಾಗುವುದು. उवाच – ಹೇಳಿದನು ऊचे ಹೇಳಲ್ಪಟ್ಟಿತು. ररक्ष ರಕ್ಷಿಸಿದನು ररक्षे ರಕ್ಷಿಸಲ್ಪಟ್ಟಿತು. ಕೆಲವು ಉದಾಹರಣೆಗಳು –

नन्दिनीं दिलीपः ररक्ष।	नन्दिनी दिलीपेन ररक्षे
ನಂದಿನಿಯನ್ನು ದಿಲೀಪನು ರಕ್ಷಿಸಿದನು	ನಂದಿನಿಯು ದಿಲೀಪನಿಂದ ರಕ್ಷಿಸಲ್ಪಟ್ಟಿತು.
कृष्णः युद्धं चकार।	कृष्णेन युद्धं चक्रे।
ಕೃಷ್ಣನು ಯುದ್ಧವನ್ನು ಮಾಡಿದನು.	ಕೃಷ್ಣನಿಂದ ಯುದ್ಧವು ಮಾಡಲ್ಪಟ್ಟಿತು.
बुद्धः दुःखस्य कारणं जज्ञौ।	बुद्धेन दुःखस्य कारणं जज्ञे
ಬುದ್ಧನು ದುಃಖದ ಕಾರಣವನ್ನು ತಿಳಿದನು.	ಬುದ್ಧನಿಂದ ದುಃಖದ ಕಾರಣವು ತಿಳಿಯಲ್ಪಟ್ಟಿತು.
इन्द्रः यज्ञाश्वं चोरयाञ्चकार	इन्द्रेण यज्ञाश्वः चोरयाञ्चक्रे
ಇಂದ್ರನು ಯಜ್ಞಾಶ್ವವನ್ನು ಕದ್ದನು.	ಇಂದ್ರನಿಂದ ಯಜ್ಞಾಶ್ವವು ಕದಿಯಲ್ಪಟ್ಟಿತು.
मन्त्री सन्देशं पपाठ।	मान्त्रिणा सन्देशः पेठे।
ಮಂತ್ರಿಯು ಸಂದೇಶವನ್ನು ಓದಿದನು.	ಮಂತ್ರಿಯಿಂದ ಸಂದೇಶವು ಓದಲ್ಪಟ್ಟಿತು.

ವಿ. ಸೂ. ಕರ್ಮಣಿ ಮತ್ತು ಭಾವೇ ಕ್ರಿಯಾಪದಗಳನ್ನು ಆತ್ಮನೇಪದಿ वन्दते (वन्द्) ಕ್ರಿಯಾಪದ ಹತ್ತೂ ಲಕಾರರೂಪಗಳಂತೆ ಊಹಿಸಿಕೊಳ್ಳಬೇಕು. ಉದಾ – लट् – वन्द्यते, लङ् – अवन्द्यत, लृट् – वन्दिष्यते लोट् – वन्द्यताम्, विधिलिङ् – वन्द्येत, लिट् – ववन्दे ಇತ್ಯಾದಿ.

भावे प्रयोगः

कर्तरि	भावे
शारदा नृत्यति – ಶಾರದೆಯು ನರ್ತಿಸುತ್ತಾಳೆ.	शारदया नृत्यते – ಶಾರದೆಯಿಂದ ನರ್ತಿಸಲ್ಪಡುತ್ತದೆ.
बालकः रुदति – ಬಾಲಕನು ಅಳುತ್ತಾನೆ.	बालकेन रुद्यते – ಬಾಲಕನಿಂದ ಅಳಲ್ಪಡುತ್ತದೆ.
देवः अस्ति – ದೇವನು ಇದ್ದಾನೆ.	देवेन भूयते – ದೇವನಿಂದ ಇರಲ್ಪಡುತ್ತದೆ.
रामः फलेभ्यः स्पृहयति	रामेण फलेभ्यः स्पृह्यते।
ರಾಮನು ಹಣ್ಣುಗಳಿಗೆ ಆಸೆಪಡುತ್ತಾನೆ.	ರಾಮನಿಂದ ಹಣ್ಣುಗಳಿಗೆ ಆಸೆಪಡಲ್ಪಡುತ್ತದೆ.
यूयं तिष्ठत – ನೀವು ನಿಲ್ಲಿರಿ (लोट्)	युष्मभिः स्थीयताम्।
वधूः हसति – ಮಧುಮಗಳು ನಗುತ್ತಾಳೆ.	वध्वा हस्यते – ಮಧುಮಗಳಿಂದ ನಗಲ್ಪಡುತ್ತದೆ.
समुद्रः क्षुभ्यति – ಸಮುದ್ರವು ಕ್ಷೋಭೆಗೊಳ್ಳುತ್ತದೆ.	समुद्रेण क्षुभ्यते।

Sri Vidyabharathi Book Centre, Sringeri

CC-O. In Public Domain. Digitized by eGangotri

अहं गृहे उषितवान् – ನಾನು ಮನೆಯಲ್ಲಿ ವಾಸಿಸಿದೆನು.	मया गृहे उषितम्। ನನ್ನಿಂದ ಮನೆಯಲ್ಲಿ ವಾಸಿಸಲ್ಪಟ್ಟಿತು.
सीता अहसत् (हसितवती) – ಸೀತೆಯು ನಗಾಡಿದಳು.	सीतया अहस्यत (हसितम्) ಸೀತೆಯಿಂದ ನಗಾಡಲ್ಪಟ್ಟಿತು.
सीता हसिष्यति (ಭವಿಷ್ಯತ್ ಕಾಲ)	सीतया हसिष्यते – ಸೀತೆಯಿಂದ ನಗಾಡಲ್ಪಡುತ್ತದೆ.
सीता हसतु – ಸೀತೆಯು ನಗಾಡಲಿ.	सीयया हस्यताम् – ಸೀತೆಯಿಂದ ನಗಾಡಲ್ಪಡಲಿ.
अश्वः तिष्ठति – ಕುದುರೆಯು ನಿಂತಿದೆ.	अश्वेन स्थीयते – ಕುದುರೆಯಿಂದ ನಿಲ್ಲಲ್ಪಡುವುದು.
अजगरः शेते – ಹೆಬ್ಬಾವು ಮಲಗಿದೆ.	अजगरेण शय्यते – ಹೆಬ್ಬಾವಿನಿಂದ ಮಲಗಲ್ಪಟ್ಟಿದೆ.
ताः तिष्ठन्ति – ಅವರು ನಿಂತಿದ್ದಾರೆ.	ताभिः स्थीयते – ಅವರಿಂದ ನಿಲ್ಲಲ್ಪಟ್ಟಿದೆ.
अहं तिष्ठामि – ನಾನು ನಿಲ್ಲುತ್ತೇನೆ.	मया स्थीयते – ನನ್ನಿಂದ ನಿಲ್ಲಲ್ಪಡುತ್ತದೆ.
वालाः क्रीडन्ति – ಬಾಲಕರು ಆಡುತ್ತಾರೆ.	बालैः क्रीड्यते।
पुष्पं विकसति – ಹೂ ಅರಳುತ್ತದೆ.	पुष्णेण विकस्यते – ಹೂವಿನಿಂದ ಅರಳಲ್ಪಡುತ್ತದೆ.
त्वं वर्धसे – ನೀನು ಅಭಿವೃದ್ಧಿ ಹೊಂದಿವಿ.	त्वया वृध्यते – ನಿನ್ನಿಂದ ಅಭಿವೃದ್ಧಿ ಹೊಂದಲ್ಪಡುತ್ತದೆ.
अहं भाषे – ನಾನು ಮಾತಾಡುತ್ತೇನೆ.	मया भाष्यते – ನನ್ನಿಂದ ಮಾತಾಡಲ್ಪಡುತ್ತದೆ.
त्वं वर्धसे – ನೀನು ವೃದ್ಧಿ ಹೊಂದುವಿ.	त्वया वृद्ध्यते – ನಿನ್ನಿಂದ ಅಭಿವೃದ್ಧಿ ಹೊಂದಲ್ಪಡುತ್ತದೆ.
रामः भवति – ರಾಮನು ಆಗಿದ್ದಾನೆ.	रामेण भूयते – ರಾಮನಿಂದ ಇರಲ್ಪಡುತ್ತದೆ.
तौ भाषेयाताम् – ಅವರಿಬ್ಬರು ಮಾತಾಡಬಹುದು.	ताभ्यां भाष्येत – ಅವರಿಬ್ಬರಿಂದ ಮಾತಾಡಲ್ಪಡುತ್ತದೆ.
सः उपविशति – ಅವನು ಕುಳಿತುಕೊಳ್ಳುತ್ತಾನೆ.	तेन उपविश्यते – ಅವರಿಬ್ಬರಿಂದ ಕುಳಿತುಕೊಳ್ಳಲ್ಪಡುವುದು.
ते उपविशन्ति – ಅವರು ಕುಳಿತುಕೊಳ್ಳುತ್ತಾರೆ.	तैः उपविश्यते – ಅವರಿಂದ ಕುಳಿತುಕೊಳ್ಳಲ್ಪಡುತ್ತದೆ.
त्वम् अक्रीडः – ನೀನು ಆಡಿದೆ.	त्वया अक्रीड्यत – ನಿನ್ನಿಂದ ಆಡಲ್ಪಟ್ಟಿತು.
अहम् अक्रीडम् – ನಾನು ಆಡಿದೆನು.	मया अक्रीड्यत – ನನ್ನಿಂದ ಆಡಲ್ಪಟ್ಟಿತು.
वयं स्थास्यामः – (ಭವಿಷ್ಯತ್ಕಾಲ) ನಾವು ನಿಲ್ಲುವೆವು.	अस्माभिः स्थास्यते – ನಮ್ಮಿಂದ ನಿಲ್ಲಲ್ಪಡುತ್ತದೆ.
जन्तवः जीवन्ति – ಪ್ರಾಣಿಗಳು ಜೀವಿಸುತ್ತವೆ.	जन्तुभिः जीव्यते – ಪ್ರಾಣಿಗಳಿಂದ ಜೀವಿಸಲ್ಪಡುತ್ತವೆ.

अव्ययानि

ಬದಲಾವಣೆ ಹೊಂದದ ಪದಗಳಿಗೆ ಅವ್ಯಯ ಎಂದು ಹೆಸರು. ಯಾವ ಪದವು ಬದಲಾಗದೆ ಮೂರು ಲಿಂಗಗಳಲ್ಲಿಯೂ, ಎಲ್ಲಾ ವಿಭಕ್ತಿಗಳಲ್ಲಿಯೂ ಮತ್ತು ಎಲ್ಲಾ ವಚನಗಳಲ್ಲೂ ಒಂದೇ ವಿಧವಾಗಿರುತ್ತದೆಯೋ ಅದು अव्यय। ಉದಾ – यथा, तथा, यत्र, तत्र, कुत्र, च अपि, न ಇತ್ಯಾದಿ

सदृशं त्रिषु लिङ्गेषु सर्वासु च विभक्तिषु। वचनेषु च सर्वेषु यन्न व्येति तदव्ययम्।

उदा – यथा, तथा, उच्चैः, च, अपि, न, यत्र, तत्र, कुत्र, अत्र, सर्वत्र ಇತ್ಯಾದಿ

ಅವ್ಯಯಗಳು ಎರಡು ವಿಧ –

1) ಮೂಲದಲ್ಲಿಯ ಅವ್ಯಯಗಳು ಸಿದ್ಧಅವ್ಯಯಗಳು. ಉದಾ – च, तु, हि, वै, अपि, एव ಇತ್ಯಾದಿ 2) ಬೇರೆ ಪದಗಳಿಂದ ನಿರ್ಮಿತವಾದರೆ ಸಾಧಿತ ಅವ್ಯಯಗಳು.

ಸಾಧಿತ ಅವ್ಯಯಗಳು ಐದು ವಿಧ –

1) ತದ್ಧಿತ ಪ್ರತ್ಯಯಗಳು ಸೇರಿ ಉಂಟಾದ ಕ್ರಿಯಾ ವಿಶೇಷಣ ಅವ್ಯಯಗಳು ಉದಾ – सर्वदा ಯಾವಾಗಲೂ, पुत्रवत् – ಮಗನಂತೆ बहुशः ಇತ್ಯಾದಿ

2) कृत् ಪ್ರತ್ಯಯಗಳು ಸೇರಿ ಉಂಟಾದ त्वान्त, ल्यवन्त, तुमनन्त ಕೃದಂತಾವ್ಯಯಗಳು. ಉದಾ – कृत्वा – ಮಾಡಿ, आकर्ण्य ಕೇಳಿ, कर्तुम् – ಮಾಡಲು ಇತ್ಯಾದಿ

Sri Vidyabharathi Book Centre, Sringeri

CC-O. In Public Domain. Digitized by eGangotri

3) ಕೆಲವು ನಾಮ ಮತ್ತು ಸರ್ವನಾಮಗಳು ವಿಭಕ್ತಿರೂಪಗಳು ಬಳಕೆಯಲ್ಲಿ ಅವ್ಯಗಳಾಗಿವೆ. ಉದಾ – तस्मात् – ಆದುದರಿಂದ, चिराय – ಬಹುಕಾಲ, अग्रे – ಮುಂದೆ, दिष्ट्या – ಅದೃಷ್ಟದಿಂದ ಇತ್ಯಾದಿ.

4) ಅವ್ಯಯೀಭಾವ ಸಮಾಸಗಳು ಉದಾ – यथाशक्ति, यथाविधि, प्रत्यक्षम्, उपनगरम् ಇತ್ಯಾದಿ.

5) ಕೆಲವು ನಾಮ ಮತ್ತು ವಿಶೇಷಣಗಳ ದ್ವಿತೀಯ ಏಕವಚನ ರೂಪಗಳನ್ನು ಅವ್ಯಗಳನ್ನಾಗಿ ಬಳಸುತ್ತಾರೆ. ಉದಾ – सुखम् (ಸುಖದಿಂದ) मन्दम् (ಸಾವಕಾಶವಾಗಿ) प्रथमम् (ಮೊದಲನೆಯದಾಗಿ) ಇತ್ಯಾದಿ.

1) क्रियाविशेषणसिद्धाव्ययानि

अकस्मात्
ईषत् – ಸ್ವಲ್ಪ
इत्थं, इति, एवं – ಹೀಗೆ
नो, ना, न, नहि – ಇಲ್ಲ
एव – ಹಾಗೆ (अहम् एव ನಾನೇ)
ओम्, आम् – ಆಗಲಿ
च – ಮತ್ತು
किञ्च – ಮತ್ತೇನೆಂದರೆ
अद्य – ಇಂದು
पूर्वत्र – ಹಿಂದೆ
यदा – ಯಾವಾಗ
तदा – ಆವಾಗ
कदा – ಯಾವಾಗ
एकदा – ಒಮ್ಮೆ
कदाचित् – ಒಮ್ಮೊಮ್ಮೆ
असकृत् – ಅನೇಕ ಬಾರಿ
तथा हि – ಉದಾಹರಣೆಗೆ
अग्रतः, अग्रे – ಮುಂದೆ ಎದುರಿಗೆ
अचिरम्, अचिरात् – ಬೇಗ
अचिराय, अचिरेण
अजस्त्रं – ಸತತವಾಗಿ
सततं – ಯಾವಾಗಲೂ
सर्वदा – ಯಾವಾಗಲೂ
सदा – ಯಾವಾಗಲೂ
अनिशं – ಎಡೆಬಿಡದೆ
अञ्जसा – ಸರಿಯಾಗಿ
अतः,तत् – ಆದುದರಿಂದ
पश्चात् – ಬಳಿಕ
अथ – ಬಳಿಕ
उत्तरं – ಬಳಿಕ
परम् – ಬಳಿಕ

श्वः – ನಾಳೆ
परश्वः – ನಾಳಿದ್ದು
प्र परश्वः – ಅದರ ನಾಳಿದ್ದು
ह्यः – ನಿನ್ನೆ
परह्यः – ಅದಕ್ಕಿಂತ ಮೊದಲದಿನ
परेद्युः – ಮರುದಿನ
उत्तरेद्युः – ಮೂರನೇ ದಿನ
पूर्वेद्युः – ಹಿಂದಿನದಿನ
इतरेद्युः – ಇನ್ನೊಂದು ದಿನ
अधः – ಕೆಳಗೆ
अधस्तात् – ಕೆಳಗೆ
उप – ಮೇಲೆ, ಸಮೀಪ
उपरि – ಮೇಲೆ,
पुरः, पुरतः – ಮುಂದೆ
पुरस्तात् – ಮುಂದೆ
पृष्टतः – ಹಿಂದೆ
पश्चात् – ಹಿಂದೆ
साक्षात् – ಎದುರಿಗೆ, ಸ್ವತಃ
अन्तर् (अन्तः) – ಒಳಗೆ
बहिः – ಹೊರಗೆ
वामतः – ಎಡಕ್ಕೆ
दक्षिणतः – ಬಲಕ್ಕೆ
ऊर्ध्वं – ಮೇಲೆ, ಬಳಿಕ
अन्यथा – ಇಲ್ಲವಾದರ
ಬೇರೆವಿಧದಲ್ಲಿ
अन्तरा – ನಡುವೆ
अन्तरेण – ಹೊರತು
विना – ಹೊರತು
ऋते – ಹೊರತು
अन्यत् – ಮತ್ತೆ
अन्यच्च – ಮತ್ತೆ

अधुना, इदानीं – ಈಗ
सम्प्रति, साम्प्रतम् – ಈಗ
तदानीम् – ಆಗ
उभयद्युः – ಎರಡೂ ದಿನ
चिरं, चिरात् – ಬಹಳಕಾಲ
चिराय, चिरेण – ಬಹಳಕಾಲ
जातु – ಎಂದಿಗೂ
पुरा, पूर्वं – ಹಿಂದಿನಕಾಲದಲ್ಲಿ
पूर्वतः – ಮುಂದೆ, ಪೂರ್ವಕ್ಕೆ
समीपे – ಹತ್ತಿರ
सम्मुखम् – ಮುಂದುಗಡೆ
अतः, तत् – ಆದುದರಿಂದ, ಹಾಗೆ
ईषत् – ಸ್ವಲ್ಪ
मनाक् – ಸ್ವಲ್ಪ
किञ्चन – ಸ್ವಲ್ಪ
किञ्चित् – ಸ್ವಲ್ಪ
किन्तु – ಆದರೆ
परन्तु – ಆದರೆ
तु – ಆದರೆ
भृशं – ಬಹಳ
उच्चैः – ಗಟ್ಟಿಯಾಗಿ
शनैः – ಮೆಲ್ಲಗೆ, ಸಾವಕಾಶವಾಗಿ
ऋतम् – ನಿಜವಾಗಿ
हि, वै, खुल ಅಲ್ಲವೆ?
ननु, किल – ಅಲ್ಲವೆ?
नूनम्, ध्रुवम् ನಿಶ್ಚಯವಾಗಿ, ನಿಜವಾಗಿ
शश्वत् – ಶಾಶ್ವತವಾಗಿ
प्रातः – ಬೆಳಿಗ್ಗೆ
उषा – ನಸುಕಿನಲ್ಲಿ
सायम् – ಸಂಜೆ
दोषः – ರಾತ್ರಿಯಲ್ಲಿ

Sri Vidyadhiraja Book Centre, Sringeri

CC-0. In Public Domain. Digitized by eGangotri

प्राक् – ಮೊದಲು
इह – ಇಲ್ಲಿ
अत्र – ಇಲ್ಲಿ
तत्र – ಅಲ್ಲಿ
अमुत्र – ಅಲ್ಲಿ
अन्यत्र, परत्र – ಬೇರೆ ಕಡೆ
सर्वतः – ಎಲ್ಲಾ ಕಡೆ
सर्वत्र – ಎಲ್ಲಾ ಕಡೆ
कुत्रचित् – ಎಲ್ಲಿಯೋ
इतः – ಇಲ್ಲಿಂದ
ततः – ಅಲ್ಲಿಂತ
इतस्ततः – ಇಲ್ಲಿಂದಲ್ಲಿಗೆ
कुत्र – क्व – ಎಲ್ಲಿ
एकत्र – ಒಂದೆಡೆ
एकत्रः – ಒಂದುಬದಿಗೆ, ಒಂದೊಂದಾಗಿ
एकदा – ಒಮ್ಮೆ
एकपदे – ಒಮ್ಮೆಗೇ
प्रत्यब्दम् – ಪ್ರತಿವರ್ಷ
प्रतिदिशम् – ಪ್ರತಿದಿಕ್ಕಿನಲ್ಲಿ
प्रतिदेशम् – ಪ್ರತಿದೇಶದಲ್ಲಿ
जोषम् – ಮೌನದಿಂದ
तूष्णीम् – ಮೌನದಿಂದ
तूष्णीकम् – ಮೌನವಾಗಿ
झटिति – ಕೂಡಲೇ
द्राक् – ಕೂಡಲೇ
सद्यः – ಕೂಡಲೇ
सपदि – ಒಮ್ಮಿಂದೊಮ್ಮೆ
सहसा – ಒಮ್ಮಿಂದೊಮ್ಮೆ
प्रत्यहम् – ಪ್ರತಿದಿನ
प्रतिक्षणं – ಪ್ರತಿಕ್ಷಣ
कथं – ಹೇಗೆ
कथञ्चन – ಹೇಗೋ
कथञ्चित् – ಹೇಗೋ
किम् – ಏನು?
किमपि – ಅವರ್ಣನೀಯ, ಏನೋ?
किमिति ಏಕೆ, ಏನೆಂದು

पुनः – ಮತ್ತೆ
भूयः, ಪುನಃ – ಮತ್ತೆ
मुहुः – ಮತ್ತೆ
अभितः – ಸುತ್ತಲೂ
परितः – ಸುತ್ತಲೂ
समन्तात् – ಮಗ್ಗಲಿಗೆ
उभयतः – ಎರಡೂಕಡೆಗಳಿಂದ
अर्वाक् – ಮೊದಲು
अलम् – ಸಾಕು, ಸಮರ್ಥ
कृतम् – ಸಾಕು
केवलं – ಮಾತ್ರ
पर्याप्तम् – ಸಾಕಷ್ಟು
आरात् – ಸಮೀಪದಲ್ಲಿ
दूरं – ದೂರ
निकषा – ಹತ್ತಿರ
समया – ಹತ್ತಿರ
समीपम् – ಹತ್ತಿರ
किमु, किमुत ಏನೆಂದು
कुतः – ಎಲ್ಲಿಂದ
यत्, यतः – ಏಕೆಂದರೆ
तस्मात् – ಆದುದರಿಂದ
तिर्यक् – ವಕ್ರವಾಗಿ, ಅಡ್ಡವಾಗಿ
दिष्ट्या – ಸುದೈವದಿಂದ
मुधा – ವ್ಯರ್ಥವಾಗಿ
मृषा – ವ್ಯರ್ಥವಾಗಿ
वृथा – ವ್ಯರ್ಥವಾಗಿ
वरम् – ಮೇಲು, ಶ್ರೇಷ್ಠ
सकृत् – ಒಮ್ಮೆ
समीचीनम् – ಚೆನ್ನಾಗಿದೆ
सम्यक् – ಸರಿಯಾಗಿ, ಚೆನ್ನಾಗಿ
सुष्ठु – ಸರಿಯಾಗಿ, ಚೆನ್ನಾಗಿ
समं – ಸಮಾನವಾಗಿ
नाम – ಹೆಸರಿನಿಂದ, ನಿಜವಾಗಿಯೂ
निकाम – ಬಹಳ
निष्कारणं – ಕಾರಣವಿಲ್ಲದೆ
परोक्षं – ಗೊತ್ತಿಲ್ಲದೆ, ಕಾಣದೆ
प्रतिकूलम् – ವಿರುದ್ಧ

नक्तम् – ರಾತ್ರಿಯಲ್ಲಿ
दिवा – ಹಗಲಿನಲ್ಲಿ
युगपत् – ಒಂದೇ ವೇಳೆಗೆ
अथवा, वा,
उत, किं वा – ಅಥವಾ
यदि वा – ಅಥವಾ
यद्वा – ಅಥವಾ
वत् – ಹಾಗೆ,
इव – ಅಂತೆ
उपांशुः – ರಹಸ್ಯವಾಗಿ
पृथक् – ಪ್ರತ್ಯೇಕವಾಗಿ
प्रत्यक्षरं – ಪ್ರತಿ ಅಕ್ಷರಕ್ಕೂ
प्रत्यग्नि – ಬೆಂಕಿಯಕಡೆಗೆ
प्रत्यवयवम् – ಪ್ರತಿಭಾಗದಲ್ಲಿ
प्रत्यङ्गम् – ಪ್ರತಿಭಾಗದಲ್ಲಿ
प्रत्युत – ತದ್ವಿರುದ್ಧವಾಗಿ
प्रायः – ಸಾಮಾನ್ಯವಾಗಿ
बलेन, बालात् – ಬಲಾತ್ಕಾರದಿಂದ
मिथः – ಪರಸ್ಪರ
मिथ्या – ಸುಳ್ಳು
यथा – ಕ್ರಮದಂತೆ
यथाज्ञानं – ತಿಳಿದಂತೆ
तथानुभूतं – ಅನುಭವಿಸಿದಂತೆ
यथानुरूपं – ಅದರಂತೆ
यथापूर्व – ಹಿಂದಿನಂತೆ
यथायोगं – ತಕ್ಕಂತೆ
यथावस्तु – ಇದ್ದಂತೆ
समम् – ಸಂಗಡ
सह – ಸಂಗಡ
साकं – ಸಂಗಡ
सार्धम् – ಜೊತೆಗೆ
सहितम् – ಜೊತೆಗೆ

ಉದ್ಗಾರವಾಚಕ ಅವ್ಯಯಗಳು अये, अरे, अहह, अहो, आ, आः, ए, किम्, धिक्, बत, हन्त, हंहो, हुम् ಇತ್ಯಾದಿ.

Sri Vidyabharathi Book Centre, Sringeri

CC-O. In Public Domain. Digitized by eGangotri

नित्यसम्बन्धि शब्दाः

यत्तदोर्नित्यसम्बन्धः ಎಂಬಂತೆ ವಾಕ್ಯದ ಪೂರ್ವಾರ್ಧದಲ್ಲಿ यदा, यथा, यत्र, यद्यपि ಮುಂತಾದ ಅವ್ಯಯಗಳಾಗಲಿ, ಪದಗಳಾಗಲಿ ಇದ್ದರೆ ಉತ್ತರಾರ್ಧದಲ್ಲಿ ಕ್ರಮವಾಗಿ तदा, तथा, तत्र, तथापि ಮುಂತಾದ ಶಬ್ದಗಳು ಇರಲೇಬೇಕು.

ಇಂತಹ ಜೋಡಿಪದಗಳನ್ನು ಅನ್ಯೋನ್ಯಸಂಬಂಧ ಸೂಚಕ ಅಥವಾ ನಿತ್ಯಸಂಬಂಧಿ ಶಬ್ದಗಳು ಎನ್ನುತ್ತಾರೆ.

ಕೆಲವು ನಿತ್ಯ ಸಂಬಂಧಿ ಶಬ್ದಗಳು ಅವ್ಯಯಗಳಾಗಿರುತ್ತವೆ. यद्, यादृक्, यावत् ಮುಂತಾದ ಶಬ್ದಗಳು ಸುಬಂತಗಳಾದುದರಿಂದ ಮೂರು ಲಿಂಗಗಳಲ್ಲೂ ಪ್ರಯೋಗಿಸಬಹುದು. ವಾಕ್ಯದಲ್ಲಿ ಈ ಶಬ್ದಗಳು ಒಂದೇ ವಿಭಕ್ತಿಯಲ್ಲೂ ಇರಬಹುದು ಅಥವಾ ಬೇರೆ ಬೇರ ವಿಭಕ್ತಿಗಳಲ್ಲೂ ಇರಬಹುದು. ಉದಾ – यत् – तत् – यो गुणवान्, सः पूज्यः – ಯಾವನು ಗುಣವಂತನೋ, ಅವನು ಪೂಜ್ಯನು. यस्य वित्तम् आस्ति, सः नरः कुलीनः ಯಾರಿಗೆ ಹಣವಿದೆಯೋ ಆ ಮನುಷ್ಯನು ಒಳ್ಳೇ ಕುಲದವನೆಂದು ಪರಿಗಣಿಸಲ್ಪಡುತ್ತಾನೆ. यं यं पश्यसि तस्य तस्य पुरतः मा ब्रूहि दीनं वचः ಯಾರ್ಯಾರನ್ನು ನೋಡುವಿಯೇ ಅವರವರ ಮುಂದೆ ದೀನವಾದ ಮಾತನ್ನು ಹೇಳಬೇಡ. यस्य विद्या अस्ति तस्य बुद्धिः अस्ति इति नास्ति – ಯಾರಿಗೆ ವಿದ್ಯೆ ಇದೆಯೋ ಅವನಿಗೆ ಬುದ್ಧಿಯು ಇದೆ ಎಂದಿಲ್ಲ ब्रह्मणा यत् ललाटे लिखितं तत् मार्जयितुं कः क्षमः? ಬ್ರಹ್ಮನಿಂದ ಯಾವುದು ಹಣೆಯಲ್ಲಿ ಬರೆಯಲ್ಪಟ್ಟಿತೋ ಅದನ್ನು ಉಜ್ಜಲು ಯಾರು ಸಮರ್ಥನು? यो न ददाति, नानुभवति, तस्य नाशः भवति।

ಯಾವನು ಕೊಡುವುದಿಲ್ಲವೋ, ಅನುಭವಿಸುವುದಿಲ್ಲವೋ ಅದಕ್ಕೆ ನಾಶವು ನಿಶ್ಚಯ. या न सूते न दुग्धदा, तया धेन्वा किं प्रयोजनम् ಯಾವುದು ಕರುಹಾಕುವುದಿಲ್ಲವೋ, ಹಾಲು ಕೊಡುವುದಿಲ್ಲವೋ ಆ ದನದಿಂದ ಏನು ಪ್ರಯೋಜನ? या विमुक्तये सा विद्या – ಯಾವುದು ಬಿಡುಗಡೆ (ಮೋಕ್ಷಕ್ಕೆ) ಕಾರಣವಾಗುವುದೋ ಅದು ನಿಜವಾದ ವಿದ್ಯೆ. या पतिम् अनुसरति, सा पतिव्रता – ಯಾವಳು ಪತಿಯನ್ನು ಅನುಸರಿಸುತ್ತಾಳೋ ಅವಳು ಪತಿವ್ರತೆಯು. यस्मिन् वचसि हितम् अस्ति तदेव अमृतम्। – ಯಾವ ಮಾತಿನಲ್ಲಿ ಹಿತವು ಇದೆಯೋ ಅದೇ ಅಮೃತ. यया धेन्वा दिलीपः वरं लेभे सा नन्दिनी। – ಯಾವ ದನದಿಂದ ದಿಲೀಪನು ವರವನ್ನು ಪಡೆದನೋ ಆ ದನವೇ ನಂದಿನೀ.

यथा – तथा – ಹೇಗೋ – ಹಾಗೆ : यथा राजा तथा प्रजाः। ಹೇಗೆ ರಾಜನೋ ಹಾಗೆ ಪ್ರಜೆಗಳು. यथा भाषा तथा संस्कृतिः। यथा भाषा तथा देशः। यथा त्वं वदसि तथैव अहं लिखामि – ಹೇಗೆ ನೀನು ಹೇಳುವಿಯೋ ಹಾಗೆ ನಾನು ಬರೆಯುತ್ತೇನೆ. यथा माता गायति तथा पुत्री अपि गायति। यथा गुरुः पठति तथा शिष्यः अपि पठति।

यत्र तत्र ಎಲ್ಲಿ ಅಲ್ಲಿ : यत्र आकृतिः तत्र गुणः – ಎಲ್ಲಿ ಆಕಾರವಿರುವುದೋ ಅಲ್ಲಿ ಗುಣಗಳಿರುತ್ತದೆ. यत्र माता गच्छति तत्र शिशुम् अपि नयति – ಎಲ್ಲಿಗೆ ತಾಯಿ ಹೋಗುತ್ತಾಳೋ ಅಲ್ಲಿಗೆ ಮಗುವನ್ನೂ ಕೊಂಡೊಯ್ಯುವಳು. यत्रधूमः तत्र वह्निः – ಎಲ್ಲಿ ಹೊಗೆ ಇದೆಯೇ ಅಲ್ಲಿ ಬೆಂಕಿ ಇದೆ.

यदा तदा – ಯಾವಾಗ ಆವಾಗ : यदा वर्षकालः तदा भेकाः रटन्ति – ಯಾವಾಗ ಮಳೆಗಾಲವೋ ಆವಾಗ ಕಪ್ಪೆಗಳು ಕೂಗುತ್ತವೆ. यदा सज्जनसकाशात् किञ्चित् ज्ञातं, तदा मे मदः व्यपगतः – ಯಾವಾಗ ಸಜ್ಜನರ ಬಳಿಯಿಂದ ಸ್ವಲ್ಪ ತಿಳಿಯಲ್ಪಟ್ಟಿತೋ, ಆಗ ನನ್ನ ಅಹಂಕಾರ ಮದವು ಹೋಯಿತು. यदा गुरुः आगच्छति तदा सर्वे छात्राः उत्तिष्ठन्ति – ಯಾವಾಗ ಗುರು ಬರುತ್ತಾನೋ ಆಗ ಎಲ್ಲಾ ವಿದ್ಯಾರ್ಥಿಗಳು ಎದ್ದು ನಿಲ್ಲುತ್ತಾರೆ. यदा कष्टम् अनुभवति तदा देवं स्मरति।

यदि तर्हि – ಒಂದು ವೇಳೆ, ರ : यदि सः पठति तर्हि अत्तीर्णः भवति – ಒಂದು ವೇಳೆ ಓದಿದರೆ ಉತ್ತೀರ್ಣನಾಗುವನು. यदि मम पिता मह्यं धनं यच्छति तर्हि अहं पुस्तकानि क्रीणामि – ಒಂದು ವೇಳೆ ನನ್ನ ತಂದೆಯು ನನಗೆ ಹಣವನ್ನು ಕೊಟ್ಟರೆ, ನಾನು ಪುಸ್ತಕಗಳನ್ನು ಕೊಂಡುಕೊಳ್ಳುವೆನು. यदि माता गायति, तर्हि पुत्री अपि गायति।

CC-O. In Public Domain. Digitized by eGangotri

यादृक् – तादृक् – ಎಂತಹ ಅಂತಹ : यादृक् कर्म कुरुते नरः तादृक् फल लभते – ಎಂತಹ ಕರ್ಮವನ್ನು ಮನುಷ್ಯನು ಮಾಡುತ್ತಾನೋ, ಅಂತಹ ಫಲವನ್ನು ಪಡೆಯುತ್ತಾನೆ. नारी यादृशं पतिं प्राप्नोति तादृशं आनन्दं जीवने, अनुभवति। यादृशी भावना यत्र सिद्धिः भवति तादृशी। ಎಲ್ಲಿ ಎಂತಹ ಭಾವನೆ ಇರುತ್ತದೋ ಅಂತಹ ಸಿದ್ಧಿಯು ಉಂಟಾಗುತ್ತದೆ.

यावत् तावत् – ಎಷ್ಟರಲ್ಲಿ – ಅಷ್ಟರಲ್ಲಿ : विरूपः नरः यावत् आत्मनः मुखं आदर्शे न पश्यति, तावत् आत्मानं सुन्दरं मन्यते ವಿರೂಪನಾದ ಮನುಷ್ಯನು ಎಲ್ಲಿಯವರೆಗೆ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡುವುದಿಲ್ಲವೋ ಅಲ್ಲಿಯವರೆಗೆ ತನ್ನನ್ನು ಸುಂದರ ಎಂಬುದನ್ನಾಗಿ ತಿಳಿಯುತ್ತಾನೆ. भेकाः (मण्डूकाः) यावत् सर्पं न पश्यति तावत् वटवटायन्ते (रटन्ति) ಕಪ್ಪೆಗಳು ಎಲ್ಲಿಯವರೆಗೆ ಸರ್ಪವನ್ನು ನೋಡುವುದಿಲ್ಲವೋ ಅಲ್ಲಿಯವರೆಗೆ ವಟಗುಟ್ಟುತ್ತವೆ. यावत् उपाध्यायः कक्ष्यां न आगच्छति तावत् सर्वे कोलाहलं कुर्वन्ति। – ಎಲ್ಲಿಯವರೆಗೆ ಉಪಾಧ್ಯಾಯನು ತರಗತಿಗೆ ಬರುವುದಿಲ್ಲವೋ, ಅಲ್ಲಿಯ ವರೆಗೆ ಎಲ್ಲರೂ ಗಲಾಟೆ ಮಾಡುತ್ತಾರೆ. यावत् गुरुः कक्ष्यां प्रविशति तावत् सर्वे अत्तिष्ठन्ति। ಯಾವಾಗ ಗುರುವು ತರಗತಿಯನ್ನು ಪ್ರವೇಶಿಸುತ್ತಾನೋ ಅಷ್ಟರಲ್ಲಿ ಎಲ್ಲರೂ ಎದ್ದು ನಿಲ್ಲುವರು.

यतः ततः यतः धर्मः ततः जयः – ಹೇಗೆ ಧರ್ಮವೋ ಹಾಗೆ ಜಯ.

यद्यपि – तथापि – यद्यपि इदानीं वर्षकालः, तथापि वृष्टिः नास्ति ಯದ್ಯಪಿ ಈಗ ಮಳೆಗಾಲ, ಆದರೂ ಕೂಡ ಮಳೆಯು ಇಲ್ಲ; यद्यपि सः सम्यक् पठितवान्, तथापि अनुत्तीर्णः। ನಿಜವಾಗಿ ಅವನು ಚೆನ್ನಾಗಿ ಓದಿದ್ದಾನೆ, ಆದರೂ ಕೂಡ ಅನುತ್ತೀರ್ಣನಾದನು. यद्यपि सः न पठति तथापि उत्तीर्णः – ನಿಜವಾಗಿ ಅವನು ಓದುವುದಿಲ್ಲ, ಆದರೂ ಕೂಡ ಉತ್ತೀರ್ಣನಾಗಿದ್ದಾನೆ.

न केवलं – किन्तु – विवेकानन्दः न केवलं भारते प्रसिद्धः विदेशेषु अपि प्रसिद्धः – ವಿವೇಕಾನಂದನು ಭಾರತದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಪ್ರಸಿದ್ಧನು. हर्षवर्धनः न केवलं राजा, प्रत्युत कविश्च आसीत् – ಹರ್ಷವರ್ಧನನು ರಾಜನು ಮಾತ್ರವಲ್ಲ ಮತ್ತೆ ಕವಿಯೂ ಆಗಿದ್ದ, पुरन्दर दासः न केवलं गायति स्म, प्रत्युत/किन्तु नृत्यति च स्म। ಪುರಂದರ ದಾಸರು ಕೇವಲ ಹಾಡುತ್ತಿದ್ದದು ಮಾತ್ರವಲ್ಲ ಮತ್ತೆ ಕುಣಿಯುತ್ತಿದ್ದರು.

उपसर्गाः

प्र, परा, अप, सम्, अनु, अव, निस्, निर्, दुस्, दुर्, वि, आङ्, नि, अधि, अपि, अति, सु, उत्, अभि, प्रति, परि, उप – ಇವು ಇಪ್ಪತ್ತೆರಡು ಉಪಸರ್ಗಗಳು.

''उपसर्गाः क्रियायोगे'' ಎಂಬ ಸೂತ್ರದಂತೆ प्र, परा ಮೊದಲಾದವುಗಳು ಕ್ರಿಯಾಪದದೊಡನೆ ಸೇರಿಕೊಂಡಾಗ उपसर्ग ಎನಿಸಿಕೊಳ್ಳುತ್ತವೆ. ಉಪಸರ್ಗಗಳು ಇಪ್ಪತ್ತೆರಡು (ಮೇಲೆ ತಿಳಿಸಿದಂತೆ) ಉಪಸರ್ಗವು ಸ್ವತಂತ್ರವಾದ ಅರ್ಥವನ್ನು ಕೊಡುವುದಿಲ್ಲ. ಕ್ರಿಯಾಪದದ ಹಿಂದೆ ಬಂದಾಗ ಕ್ರಿಯಾಪದಗಳ ಅರ್ಥವು ಪೂರ್ತಿ ಬದಲಾಗುತ್ತದೆ ಅಥವಾ ವಿಶೇಷ ಬದಲಾವಣೆ ಇಲ್ಲದೆ ಅರ್ಥವು ಬಲಪಡುತ್ತದೆ, ಅಥವಾ ಅಲ್ಪ ಬದಲಾಗುತ್ತದೆ.

धात्वर्थं बाधते कश्चित् तमनुवर्तते।
विशिनष्टि तमेवार्थम् उपसर्गगतिस्त्रिधा।।

उपसर्गेण धात्वर्थो बलादन्यत्र नीयते।
प्रहाराहारसंहारविहारपरिहारवत्।।

ಉದಾ – स्मृ ಧಾತು – स्मरति – ಸ್ಮರಿಸುತ್ತಾನೆ, विस्मरति ಮರೆಯುತ್ತಾನೆ. हृ ಧಾತು – हरति – ಒಯ್ಯುತ್ತಾನೆ, प्रहरति – ಹೊಡೆಯುತ್ತಾನೆ, आहरति – ತಿನ್ನುತ್ತಾನೆ, ತರುತ್ತಾನೆ, संहरति – ಕೊಲ್ಲುತ್ತಾನೆ, विहरति – ವಿಹರಿಸುತ್ತಾನೆ. परिहरति – ಪರಿಹರಿಸುತ್ತಾನೆ. स्था ಧಾತು तिष्ठति – ನಿಲ್ಲುತ್ತಾನೆ. उत्तिष्ठति ಎದ್ದು ನಿಲ್ಲುತ್ತಾನೆ, गच्छति – ಹೋಗುತ್ತಾನೆ, आगच्छति – ಬರುತ್ತಾನೆ, संगच्छति ಒಟ್ಟು ಸೇರುತ್ತದೆ अवगच्छति – ತಿಳಿಯುತ್ತಾನೆ क्रमति – ನಡೆಯುತ್ತಾನೆ अतिक्रमति – ಮೀರಿನಡೆಯುತ್ತಾನೆ. ಒಮ್ಮೊಮ್ಮೆ ಉಪಸರ್ಗ ಸೇರಿದಾಗ ಧಾತುವಿನ ಅರ್ಥದಲ್ಲಿ ಏನೂ ಬದಲಾವಣೆಯಾಗುವುದಿಲ್ಲ. ಉದಾ – विशति – प्रविशति ಪ್ರವೇಶಿಸುತ್ತಾನೆ. जायते – सञ्जायते – ಹುಟ್ಟುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಸರ್ಗಗಳ ಅರ್ಥ ಮತ್ತು ಅರ್ಥ ವ್ಯತ್ಯಾಸ

1) प्र – ಉತ್ಕರ್ಷ प्रभवति ಸಮರ್ಥನಾಗುತ್ತಾನೆ. ಹುಟ್ಟುತ್ತದೆ. प्रभवः, प्रभावः प्रसरति, प्रविशति – प्रवेशः, प्रकृतिः

2) परा – ಅನಾದರ, ವಿರುದ್ಧ पराभवति ಸೋಲುತ್ತಾನೆ, पराजयति – ಸೋಲುತ್ತಾನೆ पराभवः पराजयः

3) अप – ದೂರ, ಕೆಟ್ಟ, ಹೀನತೆ – अपसरति – ದೂರ ಸರಿಯುತ್ತಾನೆ, अपकरोति, अपशब्दः, अपमार्गः – ಕೆಟ್ಟದಾರಿ

4) सम् – ಸಂಪೂರ್ಣತೆ, ಒಂದಾಗಿ, ಒಳ್ಳೆಯ – संगमः – ಒಂದಾಗುವುದು, ಕೊಡುವುದು, संस्कृति – ಒಳ್ಳೆಯ ಕೃತಿ संयोग – ಸೇರುವಿಕೆ.

5) अनु – ಹಿಂದೆ, ಬಳಿಕ, ಸದೃಶ – अनुगच्छति – ಹಿಂಬಾಲಿಸಿ ಹೋಗುತ್ತಾನೆ. अनुचरः अनुकरोति, पराकरोति, संस्कुरुते । अनुयाति ।

6) अव – ತಿರಸ್ಕಾರ, ಕೆಳಗೆ – अवजानाति – ತಿರಸ್ಕರಿಸುತ್ತಾನೆ, अवमानं, अवज्ञा – ತಿರಸ್ಕಾರ, अवतरति

7) निस् – ರಹಿತ, ಹೊರಗೆ, ದೂರ – निर्माति – ನಿರ್ಮಿಸುತ್ತಾನೆ निराकरोति ।

8) निर् – ಇಲ್ಲದಿರುವಿಕೆ – निर्लज्जते – ನಾಚಿಕೆ ಇಲ್ಲದವನಾಗುತ್ತಾನೆ. निर्गच्छति – ಹೊರಗೆ ಹೋಗುತ್ತಾನೆ, निर्मम – ಮಮತೆ ಇಲ್ಲದಿರುವಿಕೆ. निस्सरति – ಹೊರಗೆ ಹರಿಯುತ್ತದೆ.

9) दुस् – ದುಷ್ಟತೆ – दुष्कुरुते ಕೆಟ್ಟದ್ದನ್ನು ಮಾಡುತ್ತಾನೆ. दुर्जयः, दुस्स्वभावः ।

10) दुर् – ಹೀನತೆ, ಕೆಟ್ಟ, ಕಠಿಣಸಾಧ್ಯ – दुराचरति ಕೆಟ್ಟದನ್ನಾಚರಿಸುತ್ತಾನೆ. दुराचारः, दुर्गः – ಹೋಗಲು ಕಠಿಣ

11) वि – ಭಿನ್ನತೆ, ಬೇರೆಯಾಗಿ – विभजते – ಬೇರ್ಪಡಿಸುತ್ತಾನೆ, विदेशः

12) आ ಕಡೆಗೆ, ವರೆಗೆ, ಪರ್ಯಂತ, ಮೊದಲ – आगच्छति, आरोहति – ಏರುತ್ತಾನೆ. आकर्णम् – ಕಿವಿಯವರೆಗೆ, आजीवितम् – ಜೀವನ ಪರ್ಯಂತ. आनयति – ತರುತ್ತಾನೆ. आयाति – ಬರುತ್ತಾನೆ.

13) नि – ತಡೆ, ಕೆಳಗೆ, निषीदति ಕೆಳಗೆಕೂಡುತ್ತಾನೆ, निरुणद्धि – ತಡೆಯುತ್ತಾನೆ, निरोधः – ತಡೆ.

14) अधि – ಪ್ರಾಧಾನ್ಯ अधिकरोति ಪ್ರಧಾನನಾಗುತ್ತಾನೆ. अधिगच्छति – ಹೊಂದುತ್ತಾನೆ. ತಿಳಿಯುತ್ತಾನೆ अध्यक्षः ।

15) अपि – ಮುಚ್ಚು – अपिधत्ते – ಮುಚ್ಚುತ್ತಾನೆ अपिधानम् – ಮುಚ್ಚುವಿಕೆ.

16) अति – ಆಧಿಕ್ಯ, ಆಚೆ, ದಾಟ – अतिक्रमति – ಆಚೆಹೋಗುತ್ತಾನೆ. ದಾಟುತ್ತಾನೆ, अतिवदति – ಅತಿಮಾತಾಡುತ್ತಾನೆ. – अत्युक्तिः ಅತಿಯಾಗಿ ಹೇಳುವುದು. अतिक्रमणम्, अत्याचारः

17) सु – ಸುಂದರ, ಒಳ್ಳೆಯ – सुकृतिः – ಒಳ್ಳೆಯ ಕೃತಿ स्वागतम्, सुभाषितम् – ಒಳ್ಳೆಯ ಮಾತು सुकरोति

18) उत् – ಮೇಲೆ – उद्गच्छति – ಮೇಲಕ್ಕೇಳುತ್ತಾನೆ उत्तिष्ठति, उद्गमः ಮೇಲೇಳುವಿಕೆ, उन्नयते

19) अभि – ಇಚ್ಛೆ, ಕಡೆಗೆ, – अभिगच्छति – ಆ ಕಡೆಗೆ ಹೋಗುತ್ತಾನೆ. अभिप्रैति – ಇಚ್ಛಿಸುತ್ತಾನೆ. अभिप्रायः ಇಚ್ಛೆ

20) प्रति – ವಿರೋಧ, ಕಡೆಗೆ, ತಿರುಗಿ, प्रतिगच्छति – ಆ ಕಡೆಗೆ ಹೋಗುತ್ತಾನೆ. प्रतिभाषते – ತಿರುಗಿ ಮಾತನಾಡುತ್ತಾನೆ. प्रतिकारः, प्रत्युत्तरम्

21) परि – ಎಲ್ಲಡೆ, ಸುತ್ತಲೂ – परिपृच्छति – ಸುತ್ತಲೂ ಎಲ್ಲಾ ವಿಷಯದಲ್ಲಿ ಕೇಳುತ್ತಾನೆ. परिचरति – ಸೇವೆ ಮಾಡುತ್ತಾನೆ.

22) उप – ಸಹಾಯಕ, ಸಮೀಪ – उपगच्छति – ಸಮೀಪ ಹೋಗುತ್ತಾನೆ. उपकरोति, उपदेव, उप + आ + विशति = उपविशति – ಸಮೀಪ ಕೂಡುತ್ತಾನೆ. उपविशति – ಕುಳಿತುಕೊಳ್ಳುತ್ತಾನೆ.

ಅನೇಕ ಉಪಸರ್ಗಗಳು ಸೇರಬಹುದು. ಉದಾ – समभिव्याहरति – सम् + अभि + वि + आ + हरति – ಮಾತಾಡುತ್ತಾನೆ. समागच्छति, प्रत्यागच्छति

Sri Vidyabharathi Book Centre, Sringeri

CC-O. In Public Domain. Digitized by eGangotri
ಉಪಸರ್ಗ ಸೇರಿದಾಗ ಅಕರ್ಮಕ ಧಾತುಗಳು ಸಕರ್ಮಕ ವಾಗಬಹುದು. ಉದಾ – भवति – ಆಗುತ್ತದೆ. (ಅಕರ್ಮಕ) सुखम् अनुभवति – ಇಲ್ಲಿ अनुभवति ಸಕರ್ಮಕವಾಯಿತು. वर्तते – ಇದೆ, ಅಕರ್ಮಕ पितरम् अनुवर्तते – ಇಲ್ಲಿ अनुवर्तते ಸಕರ್ಮಕವಾಯಿತು.

ಉಪಸರ್ಗ ಸೇರಿದಾಗ ಪರಸ್ಮೈಪದಿ ಧಾತುಗಳು ಆತ್ಮನೇಪದಿ ಮತ್ತು ಆತ್ಮನೇಪದಿ ಧಾತುಗಳು ಪರಸ್ಮೈಪದಿ ರೂಪಗಳನ್ನು ಪಡೆಯುತ್ತವೆ. ಉದಾ –

गम् – गच्छति – संगच्छते, जयति – पराजयते, स्था – तिष्ठति – अवतिष्ठते, प्रतिष्ठते (ಹೊರಡುತ್ತಾನೆ) शास् – शास्ति ಶಾಸನಮಾಡುತ್ತಾನೆ, ಆಳುತ್ತಾನೆ – आशास्ते, प्रशास्ते। रम् – रमते – आरमति, परिरमति, विरमति

तद्धितान्त प्रकरणम्

ಸುಬಂತ ಪದಗಳ ಮೂಲರೂಪವಾದ ಪ್ರಾತಿಪದಿಕಕ್ಕೆ ಏಳು ವಿಭಕ್ತಿಗಳ ಸುಪ್ ಪ್ರತ್ಯಯಗಳಲ್ಲದೆ, ವಿಶೇಷಾರ್ಥಗಳಲ್ಲಿ ಬೇರೆ ಪ್ರತ್ಯಯಗಳೂ ಬರುತ್ತವೆ. ಈ ಪ್ರತ್ಯಯಗಳಿಗೆ तद्धित ಪ್ರತ್ಯಯಗಳು ಎಂದು ಹೆಸರು. ತದ್ಧಿತ ಪ್ರತ್ಯಯಗಳು ಅಂತ್ಯದಲ್ಲಿರುವ ಶಬ್ದಗಳನ್ನು तद्धितान्त ಶಬ್ದಗಳೆಂದು ಕರೆಯುತ್ತಾರೆ. ತದ್ಧಿತ ಪ್ರತ್ಯಯಗಳು ಸೇರಿದಾಗ ನಾಮಪದಗಳ ವಿಶೇಷಣಗಳು ಅಥವಾ ಅವ್ಯಯಗಳು ಉಂಟಾಗುತ್ತವೆ.

ಸಂಗ್ರಹವಾಗಿ ಹೇಳುವುದಿದ್ದರೆ ಸುಬಂತಗಳ ಮೇಲೆ,ನಾಮಪದಗಳ ಮೇಲೆ ವಿಶೇಷಾರ್ಥಗಳಲ್ಲಿ ಬರುವ ಪ್ರತ್ಯಯಗಳು ಸೇರಿ ಆಗುವ ರೂಪಗಳನ್ನು ತದ್ಧಿತಾಂತ ಶಬ್ದಗಳೆನ್ನುತ್ತಾರೆ. ಕೆಲವು ಉಪಯುಕ್ತವಾದ ತದ್ಧಿತಾಂತ ರೂಪಗಳನ್ನು ಇಲ್ಲಿ ನಿರೂಪಿಸಲಾಗಿದೆ. ಸಾಮಾನ್ಯವಾಗಿ ತದ್ಧಿತ ಪ್ರತ್ಯಯಗಳು ಸೇರುವಾಗ ಶಬ್ದದ ಆದಿ ಸ್ವರಕ್ಕೆ ವೃದ್ಧಿ ಬರುತ್ತದೆ.

1) अपत्यार्थक तद्धितप्रत्ययाः

ಅಪತ್ಯವಾಚಕ ಮಗು ಎಂಬರ್ಥದ ತದ್ಧಿತ ಪ್ರತ್ಯಯಗಳು ಸೇರಿದಾಗ ತದ್ಧಿತಾಂತ ನಾಮಪದಗಳು ಮಕ್ಕಳು,ವಂಶಜರು,ಗೋತ್ರದಲ್ಲಿ ಹುಟ್ಟಿದವರು ಎಂಬ ಅರ್ಥವನ್ನು ತಿಳಿಸುತ್ತವೆ. ಇವುಗಳಲ್ಲಿ अ, इ, ईय, एय, आयन, य ईन ಮುಂತಾದವುಗಳು ಪ್ರಮುಖವಾದ ಪ್ರತ್ಯಯಗಳು.

1) अ प्रत्यय – वासुदेवः – वसुदेवस्य अपत्यं पुमान् – ವಸುದೇವನ ಗಂಡುಮಗು – भारतः – भरतस्य अपत्यं पुमान्। भारद्वाजः – भरद्वाजस्य अपत्यं पुमान्। भार्गवः भृगोः अपत्यं पुमान्। पार्थः पृथायाः अपत्यं पुमान्। धार्तराष्ट्रः – धृतराष्ट्रस्य अपत्यं पुमान्। सौभद्रः – सुभद्रायाः अपत्यं पुमान् – ಅಭಿಮನ್ಯು.

ಆ ಕುಲದ ಅಥವಾ ಗೋತ್ರದ ಸಂತತಿ,ಅಪತ್ಯ ಎಂಬರ್ಥದಲ್ಲೂ ಈ ಪ್ರತ್ಯಯ ಬರುತ್ತದೆ. ಉದಾ –

राघवः – रघोः गोत्रापत्यं पुमान् – ಶ್ರೀರಾಮ. काकुत्स्थः – ककुत्स्थस्य गोत्रापत्यं पुमान् – ಶ್ರೀರಾಮ. द्वैमातुरः – द्वयोः मात्रोः अपत्यं पुमान् – ಗಣಪತಿ षाण्मातुरः – षण्णां मातृणां अपत्यं पुमान् – ಸುಬ್ರಹ್ಮಣ್ಯ

2) इ ಪ್ರತ್ಯಯ – दाशरथिः – दशरथस्य अपत्यं पुमान् – रामः। सौमित्रिः – सुमित्रायाः अपत्यं पुमान् – लक्ष्मणः। दौणिः – द्रोणस्य अपत्यं पुमान् – ಅಶ್ವತ್ಥಾಮ शौरी – शूरस्य गेत्रापत्यं पुमान् – कृष्णः

3) एय प्रत्यय – कार्तिकेयः – कृत्तिकायाः अपत्यं पुमान् – षण्मुखः। वैनतेयः – विनतायाः अपत्यं पुमान् – गरुडः। कौन्तेयः – कुन्त्याः अपत्यं पुमान् – अर्जुनः/राधेयः – राधायाः अपत्यं पुमान् – ಕರ್ಣ गाङ्गेयः – गङ्गायाः अपत्यं पुमान् – भीष्मः।

आत्रेयः – अत्रायाः अपत्यं पुमान्। आग्नेयः – अग्नेः अपत्यं पुमान्। आञ्जनेयः – अञ्जनायाः अपत्यं पुमान्।

Sri Vidyabharathi Book Centre, Sringeri

4) ईय प्रत्ययः – भ्रात्रीयः – भ्रातुः अपत्यं पुमान् (ಸಹೋದರನ ಮಗ) । स्वस्रीयः – स्वसुः अपत्यं पुमान् ಸಹೋದರಿಯ ಮಗ

CC-0. In Public Domain. Digitized by eGangotri

5) आयन प्रत्ययः – ಸಾಮಾನ್ಯವಾಗಿ ತದ್ಧಿತಾಂತ ಶಬ್ದದ ಮೇಲೆ ಈ ಪ್ರತ್ಯಯ ಬರುತ್ತವೆ. ಉದಾ –

गार्ग्यायणः – गार्ग्यस्य अपत्यं पुमान्। दाक्षायणः – दाक्षेः अपत्यं पुमान्। यौगन्धरायणः, आश्वलायनः, बादरायणः

6) यञ् (य) प्रत्ययः – दैत्यः – दितेः अपत्यं पुमान् (ರಾಕ್ಷಸ) । आदित्यः – अदितेः अपत्यं पुमान् - (ಸೂರ್ಯ) । प्राजापत्यः – प्रजापतेः अपत्यं पुमान्। राजन्यः – राज्ञः अपत्यं पुमान्। पाराशर्यः – पराशरस्य अपत्यं पुमान् (व्यासः) ।

7) ईन प्रत्ययः – ग्रामीणः – ग्रामे जातः । कुलीनः – कुलेजातः ।

ಸ್ತ್ರೀಲಿಂಗದಲ್ಲಿ ई ಪ್ರತ್ಯಯ ಸ್ತ್ರೀಲಿಂಗದಲ್ಲಿ ಅಪತ್ಯಾರ್ಥಗಳಿಗೆ ई ಪ್ರತ್ಯಯವು ಅಂತ್ಯದಲ್ಲಿ ಸೇರುವುದು. ಉದಾ – जानकी - जनकस्य अपत्यं स्त्री (सीता) पार्वती – पर्वतस्य अपत्यं स्त्री। द्रौपदी – द्रुपदस्य अपत्यं स्त्री। जाह्नवी – जह्नोः अपत्यं स्त्री (गङ्गा) ।

2) भावार्थक तद्धिताः

ಭಾವಾರ್ಥದಲ್ಲಿ ಪ್ರಾತಿಪದಿಕಗಳ ಮೇಲೆ त्व, तल् (ता), अण् (अ), ष्यञ् (य) ಪ್ರತ್ಯಯಗಳು ಬರುತ್ತವೆ.

1) त्व प्रत्ययः । ಈ ಪ್ರತ್ಯಯಾಂತ ಶಬ್ದಗಳು ಯಾವಾಗಲೂ ನಪುಂಸಕಲಿಂಗದಲ್ಲಿ ಇರುತ್ತವೆ. उदा –

मनुष्यत्वम् – मनुष्यस्य भावः । पुरुषत्वम् – पुरुषस्य भावः । प्रभुत्वम् – प्रभोः भावः । व्यक्तित्वम् – व्यक्तेः भावः – चञ्चलस्य भावः – चञ्चलत्वम्। अमृतस्य भावः – अमृतत्वम्। कर्तुः भावः – कर्तुत्वम्। गुरोः भावः – गुरुत्वम् (ಹಿರಿದು) । विद्वत्वम् – विदुषः भावः (ಪಾಂಡಿತ್ಯ) । स्वामित्वम् – स्वामिनः भावः । मृदोः भावः – मृदुत्वम्। सत्वम् - सतः भावः (ಒಳ್ಳೆಯತನ) । गोत्वम् – गोः भावः ।

2) तल् (ता) प्रत्ययः – ಈ ಪ್ರತ್ಯಯಾಂತ ಶಬ್ದ ಯಾವಾಗಲೂ ಸ್ತ್ರೀಲಿಂಗದಲ್ಲಿರುವುದು. ಉದಾ – समता – समस्य भावः । एकता – एकस्य भावः, पूर्णता – पूर्णस्य भावः, मृदुता – मृदोः भावः । निपुणता – निपुणस्य भावः । मधुरता – मधुरस्य भावः । शूरता – शूरस्य भावः । योग्यता – योग्यस्य भावः । अर्हता – अर्हस्य भावः । प्रभुता – प्रभोः भावः । लघुता – लघोः भावः । भीरुता – भीरोः भावः (ಅಂಜು ಬುರುಕುತನ) जागरुकता । तल् (ता) ಪ್ರತ್ಯಯವು ग्राम, जन बन्धु ಶಬ್ದಗಳ ಮೇಲೆ ಬಂದಾಗ ಸಮೂಹಾರ್ಥವನ್ನು ಕೊಡುತ್ತದೆ. ಉದಾ – ग्रामता – ग्रामाणां समूहः । बन्धुता - बन्धूनां समूहः । जनता – जनानां समूहः ।

3) अण् (अ) प्रत्ययः – ಈ ಪ್ರತ್ಯಯ ಬರುವಾಗ ಪ್ರಾತಿಪದಿಕದ ಸ್ವರಕ್ಕೆ ವೃದ್ಧಿಯು ಬರುತ್ತದೆ. (ಆದಿ ವೃದ್ಧಿ). ಇದು ಯಾವಾಗಲೂ ನಪುಂಸಕಲಿಂಗದಲ್ಲಿರುತ್ತದೆ. ಉದಾ – कौशल – कुशलस्य भावः । यौवनम् – यूनः भावः । कौमारम् - कुमारस्य भावः । शैशवम् – शिशोः भावः । मार्दवम् – मृदोः भावः । पौरुषम् – पुरुषस्य भावः । गौरवम् – गुरोः भावः ।

4) ष्यञ् प्रत्ययः – ಈ ಪ್ರತ್ಯಯಾಂತ ಶಬ್ದವು ನಪುಂಸಕಲಿಂಗದಲ್ಲಿರುವುದು ಆದಿವೃದ್ಧಿ ಬರುವುದು. ಉದಾ – सौन्दर्यम् - सुन्दरस्य भावः । सामर्थ्यम् – समर्थस्य भावः । चातुर्यम् – चतुरस्य भावः । धैर्यम् – धीरस्य भावः । प्रावीण्यम् - प्रवीणस्य भावः । नैपुण्यम् – निपुणस्य भावः । माधुर्यम् – मधुरस्य भावः । जाड्यम् – जडस्य भावः । ब्राह्मण्यम् -

Sri Vidyabharathi Book Centre, Sringeri

CC-O. In Public Domain. Digitized by eGangotri

ब्राह्मणस्य भावः। चौर्यम् – चोरस्य भावः। तारुण्यम् – तरुणस्य भावः। सख्यम् – सख्युः भावः। मौढ्यम् – मूढस्य भावः। दौर्बल्यम् – दुर्बलस्य भावः। गाम्भीर्यस्, बाल्यम्, दारिद्र्यम्, पाण्डित्यम्, शौर्यम्, चौर्यम्, दौर्बल्यम्, औन्नत्यम्, मालिन्यम्, कौटिल्यम्, दैन्यं।

5) इमन् प्रत्ययः – नीलिमन् – नीलस्य भावः (नीलिमा नीलिमानौ नीलिमानः ಹೀಗೆ ಏಳೂ ವಿಭಕ್ತಿಗಳಲ್ಲಿ ಊಹಿಸಿಕೊಳ್ಳಬೇಕು) महिमन् – महतः भाव। (महिमा महिमानौ महिमानः)। गरिमन् – गुरोः भावः। लघिमन् – लघोः भावः।

3) सम्बन्धार्थक तद्धिताः

अ (अण्) ईय ಇತ್ಯಾದಿ ಪ್ರತ್ಯಯಗಳು ಸಂಬಂಧಾರ್ಥಗಳಲ್ಲಿ ಪ್ರಾತಿಪದಿಕಗಳ ಮೇಲೆ ಬರುತ್ತವೆ. ಆಗ ಆದಿಸ್ವರಕ್ಕೆ ವೃದ್ಧಿಯಾಗುತ್ತದೆ.

1) अण् (अ) प्रत्ययः – शैवः – शिवस्य अयम्, शिवः देवः अस्य, शिवस्य पूजकःवा। वैष्णवः – विष्णोः अयम्, विष्णुः देवः यस्य, विष्णोः पूजकःवा। इन्द्रम् – इन्द्रस्य इदम्। ज्यौतिषम् – ज्योतिषः इदम्। भौमम् – भूमेः ईदम्। पाशुपतम् – पशुपतेः इदम्। माहेन्द्रम् – महेन्द्रस्य इदम्। सौम्यः – सोमस्य अयम्। शाकुन्तलम् – शकुन्तलाम् अधिकृत्य कृतं नाटकम्।

2) ईय प्रत्ययः – तदीयम् – तस्य इदम् – ಅವನದ್ದು। भारतीयम् – भारतस्य इदम्। मदीयम् – मम इदम् – ನನ್ನದ್ದು. त्वदीयः – तव अयम् – ನಿನ್ನದ್ದು. मानवीयम् – मानवस्य इदम् – ಮನುಷ್ಯನಿಗೆ ಸಂಬಂಧಿಸಿದ್ದು. पाणिनीयम् – पाणिनेः इदम्। भवदीयम् – भवतः इदम् – ತಮ್ಮದ್ದು. यदीयम् – यस्य इदम् – ಯಾವನದ್ದು? । युष्मदीयम् – तव इदम् – ನಿನ್ನದ್ದು अस्मदीयम् – मम इदम् – ನನ್ನದ್ದು. ಹೀಗೆಯೇ देशीयम्, मतीयम्, स्वर्गीयम्। आत्मीयः – आत्मनः अयम्। यज्ञीयम्। पाणिनीयम् – पाणिनिना प्रोक्तम् – ಪಾಣಿನಿಯಿಂದ ಹೇಳಿದ್ದು.

परकीयम् – परस्य इदम्। स्वकीयम्। मासिकम् – मासे भवम् – ತಿಂಗಳಲ್ಲಿ ಆಗುವಂತದ್ದು. सांवत्सरिकम् – संवत्सरे भवम् – ವರ್ಷದಲ್ಲಿ ಆಗುವಂತದ್ದು.

3) एय प्रत्ययः – ग्रैवेयम् – ग्रीवायाः इदम् – ಕುತ್ತಿಗೆಗೆ ಸಂಬಂಧಿಸಿದ್ದು ಕಂಠಹಾರ पौरुषेयः – पुरुषस्य अयम्। अपौरुषेयः। भारतेयः – भारतस्य अयम्। पाथेयम् – पथः इदम् – ದಾರಿಗೆ ಸಂಬಂಧಿಸಿದ್ದು (ಬುತ್ತಿ).

4) य प्रत्ययः – ग्राम्यम् – ग्रामस्य इदम्। दण्ड्यम् – दण्डस्य इदम्। धर्म्यम् – धर्मस्य इदम्। न्याय्यम् – न्यायस्य इदम्।

5) इक प्रत्ययः – सामाजिकम् – समाजस्य इदम्। वार्षिकः – वर्षस्य अयम्। व्यावहरिकः, नागरिकः, कार्मिकः, मानसिकः, लावणिकः, – ಉಪ್ಪಿಗೆ ಸಂಬಂಧಿಸಿದ್ದು नैयायिकः

6) ईन प्रत्ययः – प्राचीनम् – प्राचः इदम्। अर्वाचीनम् – अर्वाचः इदम् – (ಇತ್ತೀಚಿನದ್ದು) सर्वाङ्गीणम् – सर्वाङ्गस्य इदम्। कुलीनम् – कुलस्य इदम्। नवीनम्, समीचीनम्।

Sri Vidyabharathi Book Centre, Sringeri

CC-O. In Public Domain. Digitized by eGangotri

7) त्य (त्यक्) प्रत्ययः – दाक्षिणात्यम् – दक्षिणे भवः ಹೀಗೆ पाश्चात्य – ಪಶ್ಚಿಮದ್ದು, पौरास्त्य – ಪೂರ್ವಕ್ಕೆ ಸಂಬಂಧಿಸಿದ್ದು. अत्रत्य – ಇಲ್ಲಿದ್ದು, तत्रत्य ಅಲ್ಲಿದ್ದು, इहत्य ಇಲ್ಲಿದ್ದು

8) तन प्रत्ययः – ಕಾಲವಾಚಕದ ಮೇಲೆ ಈ ಪ್ರತ್ಯಯ. अद्यतन – अद्यभवः – ಇಂದಿನ प्राक्तन – ಹಿಂದಿನ, चिरन्तन – ಬಹುಕಾಲಕ್ಕೆ ಸಂಬಂಧಿಸಿದ್ದು ह्यस्तन – ನಿನ್ನೆಯ, श्वस्तन – ನಾಳೆಯ सायन्तन – ಸಾಯಂಕಾಲದ್ದು, इदानीन्तन – ಈಗಿನದ್ದು.

4) आधिक्यबोधक–अतिशयार्थक–तर–तम–वाचक–प्रत्ययः

ಗುಣಮೂಲಕವಾದ ಅತಿಶಯವನ್ನು ಸೂಚಿಸುವಾಗ ಗುಣವಾಚಕಗಳ ಮೇಲೆ तरप् ಮತ್ತು तमप् ಪ್ರತ್ಯಯಗಳು ಬರುತ್ತವೆ.

ಅತಿಶಯಾರ್ಥವನ್ನು ಸೂಚಿಸುವಾಗ ಇಬ್ಬರು ಅಥವಾ ಎರಡು ಪದಾರ್ಥಗಳಿದ್ದರೆ तरप् ಪ್ರತ್ಯಯವೂ, ಇಬ್ಬರಿಗಿಂತ ಅಥವಾ ಎರಡಕ್ಕಿಂತ ಹೆಚ್ಚು ಪದಾರ್ಥಗಳಿದ್ದರೆ तमप् ಪ್ರತ್ಯಯವೂ ಬರುತ್ತದೆ. ಉದಾ –

स्थूलः – स्थूलतरः – स्थूलतमः। गजः स्थूलः। अजगजयोः – गजः स्थूलतरः – ಆಡು ಮತ್ತು ಆನೆಗಳಲ್ಲಿ ಆನೆಯು ಹೆಚ್ಚು ಸ್ಥೂಲವಾಗಿದೆ. अजगजवृषभेषु गजः स्थूलतमः – ಆನೆ ಆಡು ಮತ್ತು ಎತ್ತುಗಳಲ್ಲಿ ಆನೆಯು ಹೆಚ್ಚು ದೊಡ್ಡದಾಗಿದೆ. सुन्दरः सुन्दरतरः – सुन्दरतमः। कृष्णः सुन्दरः। कृष्णबलरामयोः कृष्णः सुन्दरतरः। कृष्णबलरामार्जुनेषु कृष्णः सुन्दरतमः। स्त्रीषु शकुन्तला सुन्दरतमा। पाण्डवेषु भीमः बलवत्तमः (बलवत् + तम)। तेनालीरामकृष्णबीरबलयोः कः चतुरतरः? प्राणिषु श्रृगालः चतुरतमः – ಪ್ರಾಣಿಗಳಲ್ಲಿ ನರಿಯು ಹೆಚ್ಚು ಚತುರ. नदीषु गङ्गा पवित्रतमा। आम्रनारङ्गयोः आम्रं अधुरम् – ಮಾವು ಮತ್ತು ಕಿತ್ತಳೆಗಳಲ್ಲಿ ಮಾವು ಹೆಚ್ಚು ಸಿಹಿಯಾಗಿದೆ. धनिन् (धनी ಶ್ರೀಮಂತ) – धनी – धनितरः धानितमः। विद्वस् – ವಿದ್ವಾಂಸ – विद्वान् विद्वत्तरः विद्वत्तमः। उच्चैः ಗಟ್ಟಿಯಾಗಿ उच्चैः – उच्चैस्तरः उच्चैस्तमः (पर्वतः)। गुरुः गुरुतरः गुरुतमः। लघुः – लघुतरः – लघुतमः। उन्नतः उन्नततरः – उन्नततमः। ಸ್ತ್ರೀಲಿಂಗದಲ್ಲಿ – उन्नता – उन्नततरा – उन्नततमा। पचति – पचतितराम् – पचतितमाम्

ईयसुन् ಮತ್ತು **इष्ट प्रत्ययः** – ಇವೂ ತಾರತಮ್ಯವನ್ನು ತಿಳಿಸುತ್ತವೆ. ಉದಾ – अल्प – अल्पीयस् – अल्पिष्ठ। लधु – लघीयस् – लघिष्ठ। महत् – महीयस् – महिष्ठ। धनिन् – धनी – धनीयस् – धनिष्ठ। यशस्विन् – यशस्वी – यशस्वीयस् – यशस्विष्ठ।

ವಿ. ಸೂ. – ईयस् ಪ್ರತ್ಯಯಾಂತ अल्पीयस् ಮೊದಲಾದ ಶಬ್ದಗಳು ಪ್ರಥಮಾ ವಿಭಕ್ತಿ ಪುಲ್ಲಿಂಗದಲ್ಲಿ – अल्पीयान् अल्पीयांसौ अल्पीयांसः – ಹೀಗೆ ಏಳು ವಿಭಕ್ತಿಗಳಲ್ಲಿ ಊಹಿಸಿಕೊಳ್ಳಬೇಕು.

गुणवत् – गुणवान् – गुणीयस् – गुणिष्ठ। पापा – पापीयस् (पापीयान्) – पापिष्ठ। बहु भूयस् (भूयान्) भूयिष्ठ। लघु – लघीयान् – लघिष्ठ । स्थूल – स्थवीयस् (स्थवीयान्) – स्थविष्ठ। प्रियः प्रेयस् (प्रेयान्) – प्रेष्ठ। वृद्ध – ज्यायस् (ज्यायान्) – ज्येष्ठ। उरु – वरीयस् (वरीयान्) – वरिष्ठ। गुरु – गरीयस् (गरीयान्) गरिष्ठ।

गरीयस् ಶಬ್ದ – प्र वि – गरीयान् गारीयांसौ गरीयांसः। द्वि वि – गरीयसम् गरीयांसौ गरीयसः तृ वि – गरीयसा गरीयोभ्यां गरीयोभिः ಉಳಿದ ರೂಪಗಳು वेधस् ಶಬ್ದದಂತೆ, ಸ್ತ್ರೀಲಿಂಗ – गरीयसी। ಇದು जननी ಶಬ್ದದಂತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

5) मतुप् प्रत्ययः

ಉಳ್ಳವ ಎಂಬ ಅರ್ಥದಲ್ಲಿ ಮತುಪ್ ಪ್ರತ್ಯಯವು ಬರುವುದು. अ ಕಾರಾಂತ ಶಬ್ದಗಳಿಗೆ म ಕಾರದ ಸ್ಥಾನದಲ್ಲಿ व ಕಾರವು ಬರುವುದು.

1) ಕನ್ನಡದಲ್ಲಿ ಮಂತ ಎಂದು ಕೊನೆಯಲ್ಲಿರುವ ಶಬ್ದ ಸಂಸ್ಕೃತದಲ್ಲಿ मत् ಅಂತ ಶಬ್ದವಾಗಿರುವುದು. ಉದಾ – श्रीमत् (श्रीमान्)। श्रीः अस्य अस्ति इति – ಲಕ್ಷ್ಮೀ ಸಂಪತ್ತು ಇವನಿಗೆ ಇದೆ ಅಥವಾ ಶ್ರೀ ಉಳ್ಳವ ಎಂಬರ್ಥದಲ್ಲಿ श्रीमत् ಶಬ್ದ ಹುಟ್ಟಿದೆ. श्रीमत् ಶಬ್ದದ ಪುಲ್ಲಿಂಗರೂಪ – श्रीमान्। ಸ್ತ್ರೀಲಿಂಗ, श्रीमती। ನಪುಂಸಕಲಿಂಗ – श्रीमत् ಶ್ರೀಮಂತ। धीमत् – धीः अस्य अस्ति इति (धीमान् – ಬುದ್ಧಿಮಂತ) गोमत् – गौः, अस्य अस्ति इति (गोमान् ದನವುಳ್ಳವ) ಆಯುಷ್ಮಂತ – आयुष्मत् – आयुः अस्य अस्तिइति (आयुष्मान्)। ಹನುಮಂತ हनुमत् – ಹನುವುಳ್ಳವ (ಒಂದುರೀತಿಯ ದವಡೆ) (हनुमान्)। धुनुष्मत् – धनुः अस्य अस्ति इति – (धनुष्मान् – ಬಿಲ್ಲುಗಾರ)। वपुष्मत् – ಸುಂದರ ದೇಹವುಳ್ಳ (वपुष्मान्)

ಕನ್ನಡದಲ್ಲಿ ವಂತ ಎಂದು ಅಂತ್ಯದಲ್ಲಿರುವ ಶಬ್ದವು ಸಂಸ್ಕೃತದಲ್ಲಿ वत् ಪ್ರತ್ಯಯಾಂತ ಶಬ್ದವಾಗುವುದು. ಉದಾ – ವಿದ್ಯಾವಂತ – विद्यावान् = विद्याव त् ಶಬ್ದ – विद्या अस्य अस्ति इति। विद्यावती – ಸ್ತ್ರೀಲಿಂಗ। ರೂಪವಂತ – रूपवान् (रूपवत् ಶಬ್ದ) रूपवती (ಸ್ತ್ರೀಲಿಂಗ)। ಧನವಂತ – धनवत् ಶಬ್ದ – धनवती ಸ್ತ್ರೀ. ಲಿಂ.। ಗುಣಮತ – गुणवान् – गुणवती। ದಯಾವಂತ – दयावान्। ಜ್ಞಾನವಂತ – ज्ञानवान् – ज्ञानवती। ಭಗವಂತ – भगवान् – भगवती (ಸಂಪತ್ತುಳ್ಳವ)। ದಯಾವಂತ – दयावान् – दयावती। भास्वान् – ಪ್ರಕಾಶವುಳ್ಳವ – ಸೂರ್ಯ। पयोवान् – ನೀರುವುಳ್ಳವ – ಮೋಡ। ಪುಲ್ಲಿಂಗರೂಪವನ್ನು भगवत् ಶಬ್ದದಂತೆಯೂ, ಸ್ತ್ರೀಲಿಂಗ ಶಬ್ದವನ್ನು जननी ಶಬ್ದದಂತೆಯೂ, ನಪುಂಸಕಲಿಂಗ ಶಬ್ದವನ್ನು (रूपवत्) जगत् ಶಬ್ದದಂತೆಯೂ ಏಳೂ ವಿಭಕ್ತಿಗಳಲ್ಲಿ ಊಹಿಸಿಕೊಳ್ಳಬೇಕು.

2) इन् प्रत्यय – ಉಳ್ಳವ ಎಂಬರ್ಥದಲ್ಲಿ ಈ ಪ್ರತ್ಯಯ ಬರುವುದು. ಕನ್ನಡದಲ್ಲಿ ಗುಣವುಳ್ಳವ ಗುಣಿ, ರೂಪವುಳ್ಳವ ರೂಪಿ, ಯೋಗವುಳ್ಳವ ಯೋಗಿ, ಭೋಗಿ, ಸನ್ಯಾಸಿ, ನ್ಯಾಯ ಹೇಳುವವ ನ್ಯಾಯವಾದಿ, ಸತ್ಯವಾದಿ ಇಂತಹ ಶಬ್ದಗಳು ಸಂಸ್ಕೃತದಲ್ಲಿ इन् ಪ್ರತ್ಯಯಾಂತ गुणिन्, रूपिन्, योगिन्, भोगिन्, सन्यासिन् ಮುಂತಾದ ಶಬ್ದಗಳಾಗಿರುತ್ತವೆ. ಇಂತಹ ಶಬ್ದದ ಪ್ರಥಮ ವಿಭಕ್ತಿ ಏಕವಚನ ರೂಪ – गुणी, रूपी, योगी, भोगी, सन्यासी, न्यायवदी ಎಂದಾಗುವುದು. ಹೀಗೆಯೆ तपस्विन् – तपः अस्य अस्ति इति। (तपस्वी)। दण्डिन् (दण्डी) – दण्डः अस्य अस्ति इति – ಸನ್ಯಾಸಿ ಎಂದರ್ಥ। दुःखिन् (दुःखी) – दुःखं अस्य अस्ति इति। सुखिन् – (सुखी)। कामिन् (कामी)। मायिन् (मायी), न्यायवादी – न्यायवादिन् ಶಬ್ದ न्यांय वदति इति – ನ್ಯಾಯಹೇಳುವವ। विद्यार्थिन् (विद्यार्थी) – विद्यां अर्थयते इति। ವಿದ್ಯೆಯನ್ನು ಬೇಡುವವ। सत्यवादिन् (सत्यवादी) – सत्यं वदति इति – ಸತ್ಯ ಹೇಳುವವ. कारिन् (कारी) – करोति इति – ಮಾಡುವವ (अधिकारी)। ಹೀಗೆಯೇ ज्ञानी, जीवी, प्राणी, पापी, देही, दीर्घकेशी। ಪುಲ್ಲಿಂಗ गुणिन् ಶಬ್ದದಂತೆ ಏಳೂ ವಿಭಕ್ತಿಯಲ್ಲಿ ರೂಪಗಳನ್ನು ಊಹಿಸಿಕೊಳ್ಳಬೇಕು.

ಸ್ತ್ರೀಲಿಂಗ – गुणिनी, रूपिणी, योगिनी, न्यायवादिनी, सत्यवादिनी, विद्यार्थिनी ಎಂದಾಗುವುದು. ಇದನ್ನು जननी ಶಬ್ದದಂತೆ ಊಹಿಸಿಕೊಳ್ಳಬೇಕು.

ನಪುಂಸಕಲಿಂಗ – गुणि गुणिनी गुणीनि ಹೀಗೆ वारि ಶಬ್ದದಂತೆ ರೂಪಗಳನ್ನು ಹೊಂದುವುವು.

3) इक प्रत्यय (ठन्) – ಇದು ಕೂಡ ಉಳ್ಳವ ಎಂಬರ್ಥದಲ್ಲಿ ಬರುವುದು. ಉದಾ धनिकः – धनम् अस्य अस्ति इति। नाविकः – नौः अस्य अस्ति इति। श्रमिकः। कार्मिकः – (कर्मशीलः इत्यर्थः)। आस्तिकः = अस्ति परलोकः इत्येवं मतिः अस्य ಪರಲೋಕವಿದೆ ಎಂಬ ಬುದ್ಧಿಯುಳ್ಳವ. ಹೀಗೆಯೇ नास्तिकः। ಇಲ್ಲಿ ठक् ಪ್ರತ್ಯಯ – मति ಎಂಬ ಅರ್ಥದಲ್ಲಿ शाब्दिकः – शब्दं करोति इति – (ವ್ಯಾಕರಣ ತಜ್ಞ)। धार्मिकः – धर्मं चरति इति। सामूहिकः – समूहं रक्षति इति।

Sri Vidyabharathi Book Centre, Sringeri

CC-O. In Public Domain. Digitized by eGangotri

4) विन्प्रत्ययः – ಈ ಪ್ರತ್ಯಯವೂ ಕೂಡ ಉಳ್ಳವ ಎಂಬ ಅರ್ಥದಲ್ಲಿ ಬರುವುದು. ಇದೂ गुणिन् ಶಬ್ದದಂತೆಯೇ ಉದಾ – मायाविन् (मायावी) – माया अस्य अस्ति इति। तेजस्विन् (तेजस्वी) – तेजः अस्य अस्ति इति। यशस्विन् (यशस्वी), पयस्विन् (पु – पयस्वी, स्त्री – पयस्विनी – ಹಾಲುವುಳ್ಳದ್ದು/ನೀರುಳ್ಳದ್ದು– ದನ/ಮೋಡ मनस्विन् – मनस्वी – ಒಳ್ಳೇಮನಸುಳ್ಳವ। तपस्वी। मेधाविन् (मेधावी ಬುದ್ಧಿವಂತ)। स्त्रीलिङ्ग – मायाविनी, तेजस्विनी ಇತ್ಯಾದಿ.

5) अ प्रत्ययः – ಈ ಪ್ರತ್ಯಯವೂ ಉಳ್ಳವ ಎಂಬರ್ಥದಲ್ಲಿ ಬರುವುದು. ಉದಾ – तापसः – तपः अस्य अस्ति इति। ಸ್ತ್ರೀಲಿಂಗ – तापासी। सैकत – सिकत ವುಳ್ಳದ್ದು (ಮಳಲು ಉಳ್ಳದ್ದು – ಗಾಳಿ)। पापः – पापम् अस्य अस्ति इति – (ಪಾಪವುಳ್ಳವ). प्राज्ञः – प्रज्ञा अस्य अस्तीति (ಬುದ್ಧಿವಂತ) प्राज्ञी (ಸ್ತ್ರೀ.)

6) आलु प्रत्ययः – ಇದೂ ಉಳ್ಳದ್ದು ಎಂಬರ್ಥದಲ್ಲಿ ಬರುವುದು. ಇದು ಉ ಕಾರಾಂತ ಶಬ್ದವಾಗುವುದರಿಂದ भानु ಶಬ್ದದಂತ ಏಳು ವಿಭಕ್ತಿಗಳಲ್ಲಿ ಊಹಿಸಿಕೊಳ್ಳಬೇಕು. ಉದಾ – कृपालुः – कृपा अस्य अस्तीति। ಹೀಗೆಯೇ – दयालुः, करुणालुः, हृदयालुः, शीतालुः, उष्णालुः, त्रपालुः (ನಾಚಿಕೆ ಉಳ್ಳವ – त्रपा अस्य अस्ति इति) क्रियालुः ಇತ್ಯಾದಿ.

7) ल प्रत्ययः – ಇದೂ ಮೇಲಿನ ಅರ್ಥದಲ್ಲಿ ಬರುವುದು. ಉದಾ मांसलः, पांसुलः (ಧೂಳು ವುಳ್ಳದ್ದು), वत्सलः (ಮಗುವುಳ್ಳದ್ದು) ಇತ್ಯಾದಿ.

8) वल प्रत्ययः – रजस् – रजस्वला, कृषीवलः – ಕೃಷಿವುಳ್ಳವ.

9) इत प्रत्ययः – पण्डितः – पण्डअस्य आस्ति इति – ವಿದ್ಯೆ ಬುದ್ಧಿವುಳ್ಳವ, फलितः (ಹಣ್ಣುವುಳ್ಳದ್ದು ಮರ) दुःखितः (ದುಃಖವುಳ್ಳವ), पुष्पितः (ಪುಷ್ಪವುಳ್ಳದ್ದು– ಮರ) कुसुमित – (ಹೂಬಿಟ್ಟದ್ದು) पुलकित – (ಪುಳಕಗೊಂಡ) तारकित (ನಕ್ಷತ್ರವುಳ್ಳದ್ದು) अन्धकारित (ಕತ್ತಲು ಉಳ್ಳದ್ದು) व्याधित – (ವ್ಯಾಧಿ ಉಳ್ಳ) कलङ्कित

10) इनी प्रत्ययः – पुष्करिणी, कुमुदिनी, सरोजिनी, पद्मिनी – ಪದ್ಮವುಳ್ಳದ್ದು, ಸರೋವರ (ಸ್ತ್ರೀಲಿಂ.)

11) र प्रत्ययः – पाण्डुरः (ಬಿಳಿಬಣ್ಣವುಳ್ಳದ್ದು मधुर – ಮಧುವುಳ್ಳದ್ದು ಸಿಹಿ) पांसुर ಧೂಳುವುಳ್ಳದ್ದು

12) मयट् प्रत्यय – ಈ ಪ್ರತ್ಯಯವು ಯಾವುದರಿಂದ ಮಾಡಲ್ಪಟ್ಟಿದೆ ಅಥವಾ ತುಂಬಿದೆ ಎಂಬ ಅರ್ಥದಲ್ಲಿ ಬರುತ್ತದೆ. ಅಂದರೆ ವಿಕಾರ, ವ್ಯಾಪ್ತ, ನಿರ್ಮಿತ ಎಂಬ ಅರ್ಥದಲ್ಲಿ ಬರುತ್ತದೆ. स्वर्णमय (ಚಿನ್ನದ ವಿಕಾರ, ಚಿನ್ನದಿಂದ ಮಾಡಿದ್ದು)। धूममय – (ಹೊಗೆಯಿಂದ ತುಂಬಿದ)। दारुमय – (ಕಟ್ಟಿಗೆಯಿಂದ ಮಾಡಿದ), अज्ञानमय, ज्ञानमय, अन्धमय – ಕತ್ತಲಿಂದ ಕೂಡಿದ, गोमय – गोः पुरीषम् (ಸಗಣಿ), मृन्मय – मृदः विकारः (ಮಣ್ಣಿನಿಂದ ಮಾಡಿದ್ದು), काष्ठमयः ಕಟ್ಟಿಗೆಯಿಂದ ಮಾಡಿದ್ದು, वाङ्मय (ಮಾತಿನಿಂದ ಕೂಡಿದ್ದು), जलमय। ಸ್ತ್ರೀಲಿಂಗ – मृण्मयी, ज्ञानमयी ಇತ್ಯಾದಿ.

13) इक प्रत्ययः – व्यावहारिकः – व्यवहारेण जीवति इति। वैणिकः – वीणया जीवति इति (ವೀಣೆಯಿಂದ ಜೀವಿಸುವವ), वैतानिक – (ವೇತನದಿಂದ ಜೀವಿಸುವವ), शाकटिक – (ಗಾಡಿಯಿಂದ ಜೀವಿಸುವವ).

6) ಅರ್ಥವ್ಯತ್ಯಾಸವಿಲ್ಲದೆ ಸ್ವಾರ್ಥದಲ್ಲಿ ಬರುವ ಪ್ರತ್ಯಯಗಳು

1) अ प्रत्ययः – प्रज्ञः एव प्राज्ञः। वन्धुः एव – वान्धवः। औषाधिः एव – औषधम्। चोरः एव चौरः – सेना एव – सैन्यम्। चत्वारः वर्णाः – चातुर्वर्ण्यम्। षाड्गुण्यम्। भेषजम् एव – भैषज्यम् – इतिह एव – एतिह्यम्। सुखम् एव – सौख्यम्

Sri Vidyabharathi Book Centre, Sringeri

CC-O. In Public Domain. Digitized by eGangotri

2) क प्रत्ययः – बालःएव – बालकः । युवा एव – युवकः ।

3) वत् प्रत्ययः – ಈ ಪ್ರತ್ಯಯವನ್ನು ನಾಮಪದಗಳಿಗೆ ಹಚ್ಚಿದರೆ ''ಸಮಾನವಾದ'', ''ಅಂತೆ'' ಎಂಬ ಅರ್ಥದಲ್ಲಿ ಅವ್ಯಯಗಳಾಗುತ್ತವೆ. ಉದಾ नरवत् – ಮನುಷ್ಯನಂತೆ, कविवत्, गुरुवत्, गृहवत्, तद्वत् (ಅದರಂತೆ), मद्वत् (ನನ್ನಂತೆ), त्वद्वत् (ನಿನ್ನಂತೆ) ಇತ್ಯಾದಿ.

क्रियाविशेषणार्थक तद्धितान्ताव्ययानि
(ಕ್ರಿಯಾ ವಿಶೇಷಣಾತ್ಮಕ ತದ್ಧಿತಾಂತ ಅವ್ಯಯಗಳು)

1) था (ಪ್ರಕಾರಾರ್ಥಕ) ಈ ಪ್ರತ್ಯಯವು यद्, तद् ಮತ್ತು सर्व ಶಬ್ದದ ಮೇಲೆ ಬರುತ್ತದೆ. ಉದಾ यद् + था = यथा (ಹೇಗೋ) । तद् + था = तथा (ಹಾಗೆ) ।

यथा देशः तथा भाषा । सर्वथा सत्यमेव वक्तव्यम् ।

2) त्र प्रत्ययः – ಸಪ್ತಮ್ಯರ್ಥದಲ್ಲಿ किम्, यद् ಮುಂತಾದ ಸರ್ವನಾಮಗಳ ಮೇಲೆ त्र ಪ್ರತ್ಯಯವು ಬರುತ್ತದೆ. ಉದಾ – यत्रधूमः तत्र अग्निः । देवः सर्वत्र अस्ति । कोहिनूर वज्रः परत्र अस्ति । त्वं कुत्र गच्छसि? अहम् अत्र पठामि, त्वम् अन्यत्र गछ ।

3) दा प्रत्ययः – ಕಾಲಾರ್ಥದಲ್ಲಿ किम्, सर्व, एक, अन्य, यद्, तद् ಶಬ್ದಗಳ ಮೇಲೆ दा ಪ್ರತ್ಯಯ ಬರುತ್ತದೆ. ಉದಾ – किम् + दा = कदा ಯಾವಾಗ? सर्वदा – ಯಾವಾಗಲೂ, एकदा – ಒಮ್ಮೆ अन्यदा – ಬೇರೆಕಾಲದಲ್ಲಿ, यत् + दा = यदा ಯಾವಾಗ? तद् + दा = तदा ಆವಾಗ, ಉದಾ –

भारतस्य स्वातन्त्र्यं कदा प्राप्तम्? देवः अस्मान् सर्वदा रक्षति । एकदा अहम् असत्यम् अवदम् । यदा यदा धर्मग्लानिः भवति तदा तदा देवः भूमिम् अवतरति । यदा कदा वा, यत्र कुत्र वा त्वं पृच्छसि चेत् कथम् अहम् वदामि (ಯಾವಾಗಲಾದರೂ, ಎಲ್ಲೆಲ್ಲಿಯೋ ನೀನು ಕೇಳುವಿಯಾದರೆ ಹೇಗೆ ನಾನು ಹೇಳಲಿ) सर्वदा मां पातु हरिः । यदा त्वम् आज्ञापयसि तदा एव एतत् कर्म करोमि ।

4) दानीम् प्रत्ययः – ಸಪ್ತಮ್ಯರ್ಥದಲ್ಲಿ इदम्, तद् ಶಬ್ದಗಳ ಮೇಲೆ दानीम् ಪ್ರತ್ಯಯವು ಬರುತ್ತದೆ. ಉದಾ – इदम् + दानीम् = इदानीम् (ಈಗ) तद् + दानीम् = तदानीम् (ಆಗ) इदानीम् ग्रीष्मः ऋतुः । तदानीं वसन्तः ऋतुः

5) तस् (तः) प्रत्ययः – ಪಂಚಮೀ ವಿಭಕ್ತಿಯ ಅರ್ಥದಲ್ಲಿ ಪ್ರಾತಿಪದಿಕಗಳ ಮೇಲೆ तस् (तः) ಪ್ರತ್ಯಯವು ಬಂದು ಅವ್ಯಯವಾಗುತ್ತದೆ. ಉದಾ – ग्रामात् – ಈ ಪಂಚಮೀ ವಿಭಕ್ತಿಯ ಬದಲಿಗೆ – ग्राम + तः = ग्रामतः (ಹಳ್ಳಿಯಿಂದ)/तद् + तः = ततः ಅಲ್ಲಿಂದ, मत् + तः = मत्तः ನನ್ನಿಂದ, त्वत्तः – ನಿನ್ನಿಂದ, शालायाः – ಈ ಸ್ತ್ರೀಲಿಂಗ ಪಂಚಮೀ ವಿಭಕ್ತಿಯ ಬದಲಿಗೆ शाला + तः = शालातः ಶಾಲೆಯಿಂದ । सर्वतः ಎಲ್ಲಾ ಕಡೆಯಿಂದ, मध्यतः – ಮಧ್ಯದಿಂದ, आदितः – ಆದಿಯಿಂದ, अन्त्यतः – ಕೊನೆಯಿಂದ, परितः/अभितः – ಸುತ್ತಲೂ ಇತ್ಯಾದಿ. ಉದಾ –

मम पिता ग्रामतः आगमिष्यति – ನನ್ನ ತಂದೆ ಹಳ್ಳಿಯಿಂದ ಬರುವನು. वृक्षतः (वृक्षात्) फलं पतति – ಮರದಿಂದ ಹಣ್ಣು ಬೀಳುತ್ತದೆ. शालातः (शालायाः) बहिः उद्यानम् अस्ति – ಶಾಲೆಯ ಹೊರಗೆ ಉದ್ಯಾನವು ಇದೆ. सः मत्तः पञ्च रुप्यकाणि स्वीकृतवान् – ಅವನು ನನ್ನಿಂದ ಐದು ರೂಪಾಯಿಗಳನ್ನು ಸ್ವೀಕರಿಸಿದನು. काशीतः (काश्याः) आगच्छति । नगरतः गच्छति । आकाशतः जलं पतति । अमेरिकतः/इंग्लाण्ड्तः/जपान्तः आगच्छति ।

6) शस् (सः) प्रत्ययः (ಪ್ರಕಾರ ವಾಚಕ) बहुशः, अल्पशः, एकशः, प्रायशः

7) च्वि प्रत्ययः – ಮೊದಲು ಇಲ್ಲದ ಸ್ಥಿತಿಯನ್ನು ಈ ಪಡೆದುಕೊಂಡರೆ ಈ ಪ್ರತ್ಯಯ ಬರುತ್ತದೆ.

Sri Vidyabharathi Foundation, Sringeri

CC-O. In Public Domain. Digitized by eGangotri

शुक्ली भवति – अशुक्लः, शुक्लः सम्पद्यते (ಮೊದಲು ಬೆಳ್ಳಗಿಲ್ಲದ್ದು ಈಗ ಬೆಳ್ಳಗಾಗಿದೆ)।

शुची भवति – अशुचिः शुचिः भवति।

ब्रह्मी भवति – अब्रह्म ब्रह्म सम्पद्यमानं भवति।

मलिनी भवति – अमलिनः मलिनः भवति।

इतर–तद्धितान्त रूपाणि

कषायेण रक्तम् – काषायम् ಕೇಸರಿ ಬಣ್ಣದ ಬಟ್ಟೆ. नीली – नीलम्। हरिद्रा – हरिद्रम्।

क प्रत्यय – पीत – पीतकम्

ಕಾಲಾರ್ಥ ತದ್ಧಿತರೂಪ

पुष्य – पौष्यम् (पुष्य नक्षत्रयुक्तं – चन्द्रमसा युक्तं दिनम्), श्रवण – श्रावणम्।

ई पुष्य – पौषी (पुष्येणयुक्ता रात्रिः) श्रवण – श्रावणी (रात्रिः)

बसिष्ठेन दृष्टम् – वासिष्ठम् (साम)।

धुरं वहति इति – धुरीणः – ಭಾರವನ್ನು ಹೊರುವವ. रथं वहति इति – रथ्यः।

ತಾಯಿ ತಂದೆಗಳಿಗೆ ಸಂಬಂಧಿಸಿದವರನ್ನು ಹೇಳುವಾಗ ಈ ಕೆಳಗಿನ ಪ್ರತ್ಯಯಗಳನ್ನು ಬಳಸುತ್ತಾರೆ. ಉದಾ – तव्य – पितुः भ्राता – पितृव्यः ಚಿಕ್ಕಪ್ಪ, ದೊಡ್ಡಪ್ಪ, पितृव्या (ಸ್ತ್ರೀಲಿಂಗ), मातुः भ्राता – मातुलः – ಸೋದರಮಾವ। मातुली (ಸ್ತ್ರೀಲಿಂಗ) । आमह प्रत्ययः – पितुः पिता – पितामहः। मातुः पिता – मातामहः (ಅಜ್ಜ) ಸ್ತ್ರೀಲಿಂಗರೂಪ पितामही, मातामही।

वैयाकरणः – व्याकरणम् अधीते वेत्ति वा। ಹೀಗೆಯೇ ऐतिहासिकः। चाक्षुषम् – चक्षुषा गृह्यते (रूपम्)। कृत्रिमम् – कृत्या निवृत्तम्। दिव्यम् – दिवि भवम्। मात्र प्रत्यय – जानुमात्रम् – ಮೊಣಕಾಲವರೆಗೆ ಮುಟ್ಟುವ ऊरुमात्रम् – ತೊಡೆಯ ವರೆಗೆ ಮುಟ್ಟುವ.

स्त्रीलिङ्ग प्रकरणम्

ನಾಮಪದಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಎಂಬ ಮೂರು ಭೇದಗಳುಂಟು, ಅವುಗಳಲ್ಲಿ ಪುಲ್ಲಿಂಗ ಶಬ್ದಗಳು ಸ್ತ್ರೀಲಿಂಗದ ರೂಪವನ್ನು ಪಡೆಯುವಾಗ "आ" (टाप्, डाप्, चाप्) ई (ङीप् ङीष्, ङीन्) ಎಂಬ ಪ್ರತ್ಯಯಗಳು ಬರುತ್ತವೆ.

1) अज ಮೊದಲಾದ ಅಜಾದಿಗಣಗಳಲ್ಲಿ ಶಬ್ದಗಳು ಮತ್ತು अ ಕಾರಂತವಾದ ಶಬ್ದಗಳು ಸ್ತ್ರೀಲಿಂಗದಲ್ಲಿ टाप् (आ) ಪ್ರತ್ಯಯವನ್ನು ಹೊಂದುತ್ತವೆ. ಉದಾ – अज + आ = अजा (ಹೆಣ್ಣು ಆಡು) एडक + आ = एडका (ಕುರಿ) अश्व + आ = अश्वा (ಹೆಣ್ಣು ಕುದುರೆ) चटका (ಹೆಣ್ಣುಗುಬ್ಬಿ) वाला (ಹುಡುಗಿ) वत्सा (ಮಗಳು, ಹೆಣ್ಣುಕರು) ಇತ್ಯಾದಿ.

2) नख ಮತ್ತು मुख ಅಂತ್ಯದಲ್ಲಿರುವ ಶಬ್ದದ ಮುಂದೆ टा ಪ್ರತ್ಯಯ ಬರುತ್ತದೆ. (ಒಬ್ಬಳ ಹೆಸರಾಗಿರಬೇಕು.) शूर्पणखा – (ಗೆರಸೆಯಂತೆ ಉಗುರು ಉಳ್ಳವಳು, ರಾವಣನ ಸೋದರಿ) गौरमुखा (ಗೌರಬಣ್ಣದ ಮುಖವುಳ್ಳವಳು) ಇವು ವಿಶೇಷ್ಯವಾಗುವುದಾದರೆ ङीप् ಬಂದು – शूर्पनखी (णत्व ಇಲ್ಲ) गौरमुखी ಎಂದಾಗುವುದು.

3) ಕೆಲವೊಮ್ಮೆ अ ಕಾರದ ಹಿಂದೆ क ವ್ಯಂಜನವಿದ್ದರೆ क ದ ಹಿಂದಿನ ಸ್ವರವು इ ಆಗುತ್ತದೆ. ಉದಾ – गोपालिका अश्वपालिका, बालक – बालिका, कारक – कारिका, नायक – नायिका, पाचक – पाचिका – पालक – पालिका, वोधक – वोधिका, सेवक – सेविका – साधक – साधिका, मामक (ನನ್ನವ) मामिका।

4) ಶರೀರದ ಅವಯವ ಸೂಚಕ ಪದಗಳು ಕೊನೆಯಲ್ಲಿರುವ ಸಮಾಸಗಳು ಸ್ತ್ರೀಲಿಂಗದಲ್ಲಿ आ ಅಥವಾ ईकारान्त चन्द्रमुखः – चन्द्रमुखा/चन्द्रमुखी। सुमुख – सुमुखा/सुमुखी। अतिकेशा/अतिकेशी, सुकेशा – सुकेशी। सुस्तना – सुस्तनी। सप्तपदा/सप्तपदी। कृशोदरा/कृशोदरी। बिम्बोष्ठा/बिम्बोष्ठी/सुगात्रा/सुगात्री।

Sri Vidyabharathi Book Centre, Sringeri

CC-O. In Public Domain. Digitized by eGangotri

5) क्षत्रियस्य स्त्री – क्षत्रिया। ಪುರುಷವಾಚಕ ಶಬ್ದವನ್ನೇ ಸ್ತ್ರೀಲಿಂಗದಲ್ಲಿ ಹೇಳುವಾಗ ई ಬರುತ್ತದೆ ಉದಾ – गोपः गोपी। गणकः गणकी, गन्धर्वः – गन्धर्वी, किन्नरः – किन्नरी, नर्तक – नर्तकी, खनक, खनकी ಅಗೆಯುವವಳು, सुन्दरी, तरुणी, मातामही, पितामही। ಮುಪ್ಪನ್ನು ಹೇಳುವ ಪದಗಳಿಗೆ ಸ್ತ್ರೀಲಿಂಗದಲ್ಲಿ आ ಪ್ರತ್ಯಯ उदा – वृद्धः – वृद्धा ಮುದುಕಿ – स्थाविरः स्थाविरा, जरठः जरठा। गायक – गायकी।

6) ಪ್ರಾಣಿವಾಚಕ ಮತ್ತು ದೇವತಾ ವಾಚಕ ಪದಗಳ ಕೊನೆಯ ಅ ಕಾರಕ್ಕೆ ಸ್ತ್ರೀಲಿಂಗದಲ್ಲಿ ई ಆದೇಶ ಬರುತ್ತದೆ. ಉದಾ – मानुषः – मानुषी, रासभी (ಹೆಣ್ಣು ಕತ್ತೆ) ईश्वरी, सिंही, गोपी, पुत्री, दासी, देवी, चण्डाली, महिषी, मृगी, बिडाली, शूकरी (ಹೆಣ್ಣು ಹಂದಿ) शृगाली – (ಹೆಣ್ಣು ನರಿ) ब्राह्मणी।

7) ऋ ಕಾರಾಂತ न् ಕಾರಾಂತ ಶಬ್ದಗಳಿಗೆ ಸ್ತ್ರೀಲಿಂಗದಲ್ಲಿ ಡೀಪ್ ಪ್ರತ್ಯಯ उदा – राजन् (राजा) राज्ञी, गुणिन् (गुणी) – गुणिनी, कर्तृ – कर्त्री, हर्तृ – हर्त्री।

8) नृ – नर ಶಬ್ದಗಳಿಗೆ ಸ್ತ್ರೀಲಿಂಗದಲ್ಲಿ ಡೀಪ್ ಪ್ರತ್ಯಯ ಬರುವಾಗ ऋ ಮತ್ತು अ ಕಾರಗಳಿಗೆ ವೃದ್ಧಿ ಬರುವುದು. ಉದಾ – नृ – नारी, नर – नारी

9) युवन् ಶಬ್ದಕ್ಕೆ ಸ್ತ್ರೀಲಿಂಗದಲ್ಲಿ ति ಪ್ರತ್ಯಯ – यवन् – युवा – युवतिः।

10) इन्द्र, वरुण, भव, शर्व, रुद्र, मृदु, आचार्य, हिम, यव, अरण्य, यवन, उपाध्याय, अर्थ, मातुल ಇವುಗಳಿಗೆ ಸ್ತ್ರೀಲಿಂಗದಲ್ಲಿ ಡೀಪ್ ಪ್ರತ್ಯಯ ಸೇರಿಸುವಾಗ आत् ಪ್ರತ್ಯಯ ಸೇರುವುದು. ಉದಾ – इन्द्र – इन्द्राणी, वरुणानी, भवानी, शर्वाणी, रुद्राणी, मृडानी, आचार्यानी, हिमानी, यवानी, यवनानी, उपाध्यायानी, अर्याणी, मातुलानी, (मातुला, मातुली ಎಂದೂ ಆಗುವುದು.) (उपाध्यायी ಶಿಕ್ಷಕಿ, उपाध्यायानी ಶಿಕ್ಷಕನ ಹೆಂಡತಿ, ಆಚಾರ್ಯ ಶಿಕ್ಷಕಿ – आचार्यानी ಶಿಕ್ಷಕನ ಹೆಂಡತಿ)

11) ಶೂದ್ರ ಜಾತಿಯ ಸ್ತ್ರೀ, शूद्री ಎಂದರೆ ಶುದ್ರನ ಹೆಂಡತಿ गोपा ದನಕಾಯುವವಳು, गोपी ಗೋಪನ ಹೆಂಡತಿ, क्षत्रियी ಕ್ಷತ್ರಿಯಪತ್ನಿ क्षत्रिया

उ ಕಾರಾಂತ ಪದಗಳ य ಕಾರವು ಸ್ತ್ರೀಲಿಂಗ ಡೀಪ್ ಪ್ರತ್ಯಯ ಬರಬಹುದು, ಬಾರದೆ ಪುಲ್ಲಿಂಗದಂತೆಯೇ ಇರಬಹುದು. ಉದಾ – मृदु/मृद्वी। पटु/पट्वी। बहु। बह्वी। तनु/तन्वी। गुरु/गुर्वी ಇತ್ಯಾದಿ.

12) य ಕಾರಾಂತ ಪದಗಳ य ಕಾರವು ಸ್ತ್ರೀಲಿಂಗದಲ್ಲಿ ಡೀಪ್ ಪ್ರತ್ಯಯ ಬರುವಾಗ ಲೋಪವಾಗುತ್ತದೆ. गार्ग्य – गार्गी। अगस्त्य – अगस्ती, मत्स्य – मत्सी, सूर्य – सूरी।

13) ಅನಿಯಮಿತ ಸ್ತ್ರೀಲಿಂಗ ರೂಪಗಳು – पिता – माता, पति, पत्नी, राजा – राज्ञी, मनुष्य – मानुषी, श्वशुरः – श्वश्रूः (ಮಾವ – ಅತ್ತೆ) जामाता – स्नुषा (ಅಳಿಯ ಸೊಸೆ) वरः – वधूः (ಮಧುಮಗ ಮಧುಮಗಳು) ना – नारी।

Sri Vidyabharathi Book Centre, Sringeri

CC-O. In Public Domain. Digitized by eGangotri

भाग 2

क्रीयापदानि

धातुरुपसङ्ग्रहः

(ಪರಸ್ಮೈಪದಿ ವಿಭಾಗ ಮತ್ತು ಆತ್ಮನೇಪದಿ ವಿಭಾಗ)

ಒಂದೊಂದು ಗಣಕ್ಕೆ ಬೇರೆ ಬೇರೆ ವಿಕರಣ ಪ್ರತ್ಯಯಗಳಿವೆ. ಇದನ್ನು ಕೆಳಗೆ ಕೊಡಲಾಗಿದೆ.

गणाः दश।

1. भ्वादि – भू + अ + ति = भवति
2. अदादि – अद् + अ + ति = अत्ति (अलोप)
3. जुहोत्यादि – हु + श्लुः + ति = जुहोति (श्लुःलोप)
4. दिवादि – दिव् + श्यन् + ति = दीव्यति
5. स्वादि – सु + श्नुः + ति = सुनोति।
6. तुदादि – तुद् + शः + ति = तुदति
7. रुधादिः – रुध् + श्नम् + ति = रुणद्धि
8. तनादि – तन् + उः + ति = तनोति
9. क्र्यादि – क्री + श्ना + ति = क्रीणाति
10. चुरादि – चुर् + णिच् (अय्) + ति = चोरयति।

(दशलकारेषु उदाहरणानि अग्रे पश्यन्तु)

ಕ್ರಿಯಾಪದದ ಮೂಲರೂಪಕ್ಕೆ ಧಾತು ಎಂದು ಹೆಸರು. ಅದನ್ನೇ ಪ್ರಕೃತಿ ಎನ್ನುತ್ತಾರೆ. ಇದಕ್ಕೆ ವಿಕರಣ ಮತ್ತು ಆಖ್ಯಾತ ಎಂಬ ಎರಡು ಪ್ರತ್ಯಯಗಳು ಸೇರಿದಾಗ ಕ್ರಿಯಾಪದವಾಗುವುದು. ಧಾತುವಿಗೆ ತಿ ಮೊದಲಾದ ಆಖ್ಯಾತ ಪ್ರತ್ಯಯಗಳು ಸೇರುವುದರಿಂದ ಕ್ರಿಯಾಪದಕ್ಕೆ ತಿङन्त ಎಂದು ಹೆಸರು. ಉದಾ = पठ् + अ + ति = पठति।

ಸಂಸ್ಕೃತದಲ್ಲಿ ಸುಮಾರು 2000 ಧಾತುಗಳಿವೆ. ಅವನ್ನು ಭ್ವಾದಿ ಮೊದಲಾದ ಹತ್ತು ಗುಣಗಳಾಗಿ ವಿಂಗಡಿಸಲಾಗಿದೆ.

ಧಾತುಗಳು ಬೇರೆ ಬೇರೆ ಕಾಲ ಭಾವಗಳಲ್ಲಿ ಬೇರೆ ಬೇರೆ ರೂಪಗಳನ್ನು ಹೊಂದುತ್ತವೆ. ಇದಕ್ಕೆ ಲಕಾರಗಳೆಂದು ಹೆಸರು.

ಲಕಾರಗಳು ಒಟ್ಟು ಹತ್ತು – लट्, लिट्, लुट्, लृट्, लेट्, लोट्, लङ्, लिङ्, लुङ्, लृङ्

ಕ್ರಿಯಾಪದಕ್ಕೆ ಮೂರು ಪುರುಷಗಳಿವೆ. **ಪ್ರಥಮ ಪುರುಷ, ಮಧ್ಯಮ ಪುರುಷ, ಉತ್ತಮ ಪುರುಷ.**

ನೀನು ಎಂಬ ಕರ್ತೃಪದವಿದ್ದಾಗ ಕ್ರಿಯಾಪದಗಳನ್ನು **ಮಧ್ಯಮ ಪುರುಷ** ಎಂದು ಕರೆಯಲಾಗುವುದು. ನಾನು ಎಂಬ ಕರ್ತೃವಿದ್ದಾಗ **ಉತ್ತಮ ಪುರುಷ**ವೆಂದೂ ಮತ್ತು ಉಳಿದ ಅವನು, ಅವಳು, ಅದು, ಇವನು, ಇವಳು, ಇದು, ತಾವು भवान् ಕರ್ತೃಪದವಿದ್ದಾಗ **ಪ್ರಥಮ ಪುರುಷ**ವೆಂದೂ ಕರೆಯಲಾಗುವುದು.

ಕ್ರಿಯಾಪದಕ್ಕೆ ಏಕವಚನ, ದ್ವಿವಚನ ಮತ್ತು ಬಹುವಚನಗಳಿವೆ.

ಧಾತುಗಳು ಮೂರು ವಿಧ – परस्मैपदी, आत्मनेपदी, उभयपदी

Sri Vidyabharathi Book Centre, Sringeri

CC-O. In Public Domain. Digitized by eGangotri

ಲಕಾರಗಳು ಮತ್ತು ಅರ್ಥ

1 लट् – ವರ್ತಮಾನಕಾಲದಲ್ಲಿ

2 लुङ् – ಭೂತಕಾಲದಲ್ಲಿ

3 लङ् – ಅನದ್ಯತನ ಭೂತಕಾಲದಲ್ಲಿ

4 लिट् – ಅನದ್ಯತನದ ಪರೋಕ್ಷ ಭೂತಕಾಲದಲ್ಲಿ

5 लृट् – ಭವಿಷ್ಯತ್ ಕಾಲದಲ್ಲಿ

6 लुट् – ಅನದ್ಯತನ/ಇಂದಿನದಲ್ಲದ ಭವಿಷದ್ ಅರ್ಥದಲ್ಲಿ

7 लोट् – ವಿಧಿ, ಆಜ್ಞೆ, ಪ್ರಾರ್ಥನೆ, ಆಶೀರ್ವಾದ ಮುಂತಾದ ಅರ್ಥ

8 विधि लिङ् – ವಿಧಿ, ನಿಯಂತ್ರಣ, ಆಮಂತ್ರಣ, ಪ್ರಾರ್ಥನೆ

9 आशीर्लिङ् – ಆಶೀರ್ವಾದ

10 लृङ् – ಕಾರ್ಯಕಾರಣದಲ್ಲಿ ಭವಿಷ್ಯತ್ ಕಾಲ.

लट् वर्तमाने लेट् वेदे भूते लुङ् लङ् लिटस्तथा। विध्याशिषोश्च लिङ् लोटौ लुट् लृट् लृङ् च भविष्यति।

ವಿ. ಸೂ. ಕಳೆದ ಅರ್ಧರಾತ್ರಿಯಿಂದ, ಬರುವ ಅರ್ಧರಾತ್ರಿಯವರೆಗಿನ 24 ಘಂಟೆ ಕಾಲ ಅದ್ಯತನ. ಅದರ ಹಿಂದಿನ ಅಥವಾ ಮುಂದಿನ ಕಾಲ ಅನದ್ಯತನ. ನಡೆದದ್ದು ನಮಗೆ ತಿಳಿಯದಿದ್ದರೆ ಪರೋಕ್ಷ ಭೂತ.

ಹತ್ತು ಲಕಾರಗಳಲ್ಲಿ लेट् ಲಕಾರವೂ ಒಂದು. ಆದರೆ ಅದು ವೇದದಲ್ಲಿಮಾತ್ರ ಉಪಯೋಗಿಸಲ್ಪಟ್ಟಿದೆ. ಅದರ ಬದಲಿಗೆ ಲಕಾರದಲ್ಲಿ आशीर्लिङ् ಪ್ರತ್ಯೇಕವಾಗಿ ಪರಿಗಣಿಸಲ್ಪಟ್ಟಿದೆ.

परस्मैपदी विभागः

1. पठ् (ಓದು) ಧಾತುವಿನ ಮಾದರಿ ರೂಪ

लट् ಲಕಾರ – ವರ್ತಮಾನ ಕಾಲ – पठति ಓದುತ್ತಾನೆ

ಪುರುಷ – ಪ್ರತ್ಯಯ		ಏಕವಚನ		ದ್ವಿವಚನ		ಬಹುವಚನ	
प्रथम	ति – तः – अन्ति	सः	पठति	तौ	पठतः	ते	पठन्ति
		ಅವನು	ಓದುತ್ತಾನೆ	ಅವರಿಬ್ಬರು	ಓದುತ್ತಾರೆ	ಅವರು	ಓದುತ್ತಾರೆ.
मध्यम	सि – थः – थ	त्वं	पठसि	युवां	पठथः	यूयं	पठथ
		ನೀನು	ಓದುತ್ತೀಯೆ	ನೀವಿಬ್ಬರು	ಓದುತ್ತೀರಿ	ನೀವು	ಓದುತ್ತೀರಿ
उत्तम	मि – वः – मः	अहं	पठामि	आवां	पठावः	वयं	पठामः
		ನಾನು	ಓದುತ್ತೇನೆ	ನಾವಿಬ್ಬರು	ಓದುತ್ತೇವೆ	ನಾವು	ಓದುತ್ತೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

लङ् – ಲಕಾರ – ಭೂತಕಾಲ – अपठत् ಓದಿದನು

प्रथम	त् – ताम् – अन्	सः	अपठत्	तौ	अपठताम्	ते	अपठन्
		ಅವನು	ಓದಿದನು	ಅವರಿಬ್ಬರು	ಓದಿದರು	ಅವರು	ಓದಿದರು
मध्यम	स् (:) – तं – त	त्वं	अपठः	युवां	अपठतम्	यूयं	अपठत
		ನೀನು	ಓದಿದಿ	ನೀವಿಬ್ಬರು	ಓದಿದಿರಿ	ನೀವು	ಓದಿದಿರಿ
उत्तम	अम् – व – म	अहं	अपठम्	आवां	अपठाव	वयं	अपठाम
		ನಾನು	ಓದಿದೆನು	ನಾವಿಬ್ಬರು	ಓದಿದೆವು	ನಾವು	ಓದಿದೆವು

लृट् ಲಕಾರ – ಭವಿಷ್ಯತ್‌ಕಾಲ – पठिष्यति ಓದುವನು

प्रथम	स्यति – स्यतः – स्यन्ति	सः	पठिष्यति	तौ	पठिष्यतः	ते	पठिष्यन्ति
		ಅವನು	ಓದುವನು	ಅವರಿಬ್ಬರು	ಓದುವರು	ಅವರು	ಓದುವರು
मध्यम	स्यसि – स्यथः – स्यथ	त्वं	पठिष्यसि	युवां	पठिष्यथः	यूयं	पठिष्यथ
		ನೀನು	ಓದುವಿ	ನೀವಿಬ್ಬರು	ಓದುವಿರಿ	ನೀವು	ಓದುವಿರಿ
उत्तम	स्यामि – स्यावः – स्यामः	अहं	पठिष्यामि	आवां	पठिष्यावः	वयं	पठिष्यामः
		ನಾನು	ಓದುವೆನು	ನಾವಿಬ್ಬರು	ಓದುವೆವು	ನಾವು	ಓದುವೆವು

लोट् ಲಕಾರ – ವಿಧಿ, ಆಜ್ಞೆ, ಪ್ರಾರ್ಥನೆ – पठतु – ಓದಲಿ

प्रथम	तु, तात् – तां – अन्तु	सः	पठतु, पठतात्	तौ	पठताम्	ते	पठन्तु
		ಅವನು	ಓದಲಿ	ಅವರಿಬ್ಬರು	ಓದಲಿ	ಅವರು	ಓದಲಿ
मध्यम	हि, तात् – तं – त	त्वम्	पठ, पठतात्	युवां	पठतम्	यूयं	पठत
		ನೀನು	ಓದು	ನೀವಿಬ್ಬರು	ಓದಿರಿ	ನೀವು	ಓದಿರಿ
उत्तम	नि – आव – आम	अहं	पठानि	आवां	पठाव	वयं	पठाम
		ನಾನು	ಓದುತ್ತೇನೆ	ನಾವಿಬ್ಬರು	ಓದೋಣ	ನಾವು	ಓದೋಣ

विधि लिङ् – ಲಕಾರ – ವಿಧಿ, ನಿಮಂತ್ರಣ, ಆಮಂತ್ರಣ, ಪ್ರಾರ್ಥನೆ – पठेत् – ಓದಬೇಕು

प्रथम	इत् – इतां – इयुः	सः	पठेत्	तौ	पठेताम्	ते	पठेयुः
		ಅವನು	ಓದಬೇಕು	ಅವರಿಬ್ಬರು	ಓದಬೇಕು	ಅವರು	ಓದಬೇಕು
मध्यम	इः – इतं – इत	त्वं	पठेः	युवां	पठेतम्	यूयं	पठेत
		ನೀನು	ಓದಬೇಕು	ನೀವಿಬ್ಬರು	ಓದಬೇಕು	ನೀವು	ಓದಬೇಕು
उत्तम	इयम् – इव – इम	अहं	पठेयम्	आवां	पठेव	वयं	पठेम
		ನಾನು	ಓದುವೆನು	ನಾವಿಬ್ಬರು	ಓದುವೆವು	ನಾವು	ಓದುವೆವು

ವಿ.ಸೂ. पठेत् ಓದಬಹುದು ಎಂದೂ ಅರ್ಥ ಹೇಳಬಹುದು. ವಿಧಿ ಆದರೆ ನಿಯಮ

Sri Vidyabharathi Book Centre, Shringeri

CC-0. In Public Domain. Digitized by eGangotri

आशीर्लिङ् – पठ्यात् – ಓದಲಿ (ಆಶೀರ್ವಾದ)

प्रथम	यात् – यास्तां – यासुः	सः	पठ्यात्	तौ	पठ्यास्तां	ते	पठ्यासुः
		ಅವನು	ಓದಲಿ	ಅವರಿಬ್ಬರು	ಓದಲಿ	ಅವರು	ಓದಲಿ
मध्यम	याः – यास्तं – यास्त	त्वं	पठ्याः	युवां	पठ्यास्तं	यूयं	पठ्यास्त
		ನೀನು	ಓದು	ನೀವಿಬ್ಬರು	ಓದಿರಿ	ನೀವು	ಓದಿರಿ
उत्तम	यासं – सास्व – यास्म	अहं	पठ्यासं	आवां	पठ्यास्व	वयं	पठ्यास्म

लिट् – ಅನದ್ಯತನ ಪರೋಕ್ಷ ಭೂತಕಾಲ – पपाठ ಓದಿದನು

प्रथम	अ – अतुः – उः	सः	पपाठ	तौ	पेठतुः	ते	पेठुः
		ಅವನು	ಓದಿದನು	ಅವರಿಬ್ಬರು	ಓದಿದರು	ಅವರು	ಓದಿದರು
मध्यम	थ – अथुः – अ	त्वं	पेठिथ	युवां	पेठथुः	यूयं	पेठ
		ನೀನು	ಓದಿದಿ	ನೀವಿಬ್ಬರು	ಓದಿದಿರಿ	ನೀವು	ಓದಿದಿರಿ
उत्तम	अ – व – म	अहं	पपाठ	आवां	पेठिव	वयं	पेठिम
		ನಾನು	ಓದಿದೆ	ನಾವಿಬ್ಬರು	ಓದಿದೆವು	ನಾವು	ಓದಿದೆವು

लुङ् – ಭೂತಕಾಲ – अपाठीत् – ಓದಿದನು

प्रथम	त् – तां – अन्	सः	अपाठीत्	तौ	अपाठिष्टां	ते	अपाठिषुः
		ಅವನು	ಓದಿದನು	ಅವರಿಬ್ಬರು	ಓದಿದರು	ಅವರು	ಓದಿದರು
मध्यम	स् (:) तं – त	त्वं	अपाठीः	युवां	अपाठिष्टं	यूयं	अपाठिष्ट
		ನೀನು	ಓದಿದಿ	ನೀವಿಬ್ಬರು	ಓದಿದಿರಿ	ನೀವು	ಓದಿದಿರಿ
उत्तम	अम् – व – म	अहं	अपाठिषम्	आवां	अपाठिष्व	वयं	अपाठिष्म
		ನಾನು	ಓದಿದೆನು	ನಾವಿಬ್ಬರು	ಓದಿದೆವು	ನಾವು	ಓದಿದೆವು

लुट् – ಅನದ್ಯತನ ಭವಿಷ್ಯತ್ ಕಾಲ – पठिता – ಓದುವವನು

प्रथम	ता – तारौ – तारः	सः	पठिता	तौ	पठितारौ	ते	पठितारः
		ಅವನು	ಓದುವವನು	ಅವರಿಬ್ಬರು	ಓದುವರು	ಅವರು	ಓದುವರು
मध्यम	तासि – तास्थः – तास्थ	त्वं	पठितासि	युवां	पठितास्थः	यूयं	पठितास्थ
		ನೀನು	ಓದುವಿ	ನೀವಿಬ್ಬರು	ಓದುವಿರಿ	ನೀವು	ಓದುವಿರಿ
उत्तम	तास्मि – तास्वः – तास्मः	अहं	पठितास्मि	आवां	पठितास्वः	वयं	पठितास्मः
		ನಾನು	ಓದುವೆನು	ನಾವಿಬ್ಬರು	ಓದುವೆವು	ನಾವು	ಓದುವೆವು

Sri Vidyabharathi Book Centre, Sringeri

CC-O. In Public Domain. Digitized by eGangotri

लृङ् ಲಕಾರ ಕಾರ್ಯಕಾರಣದಲ್ಲಿ ಭವಿಷ್ಯತ್ ಕಾಲ - अपठिष्यत्

ಮಳೆಯಾದರೆ ಸಮೃದ್ಧಿಯಾಗುತ್ತಿತ್ತು, – सुवृष्टिः अभविष्यत् चेत् तदा सुभिक्षम् अभविष्यत् – ಹೀಗೆ ಈ ಅರ್ಥದಲ್ಲಿ ಈ ಲಕಾರವಿದೆ. ಆದುದರಿಂದ ಇದರ ಪ್ರಯೋಗ ಅಷ್ಟಾಗಿಲ್ಲ.

प्र पु	स्यत् – स्यतां – स्यन्	अपठिष्यत्	अपठिष्यताम्	अपठिष्यन्
म पु	स्यः – स्यतं – स्यत	अपठिष्यः	अपठिष्यतम्	अपठिष्यत
उ पु	स्यं – स्याव – स्याम	अपठिष्यम्	अपठिष्याव	अपठिष्याम

11 प्रेरणार्थक – णिजन्तरूपम् – लट्

पाठयति – ಓದಿಸುತ್ತಾನೆ पठति ಯ ರೂಪಗಳಂತೆ ಇದನ್ನು ಹತ್ತು ಲಕಾರಗಳಲ್ಲೂ ಹೀಗೆ ಊಹಿಸಿಕೊಳ್ಳಬೇಕು.

12 कर्मणि/भावे रूप

पठ्यते – ಓದಲ್ಪಡುತ್ತದೆ (कर्मणि) ಮುಂದೆ ತಿಳಿಸುವ ಆತ್ಮನೇಪದಿ वन्दते ಕ್ರಿಯಾಪದದ ರೂಪಗಳಂತೆ.

भू ಧಾತು – ಇರು, ಆಗು

1. लट् ಲಕಾರ ವರ್ತಮಾನಕಾಲ

प्र पु	भवति	भवतः	भवन्ति
म पु	भवसि	भवथः	भवथ
उ पु	भवामि	भवावः	भवामः

2. लङ् ಲಕಾರ ಭೂತಕಾಲ

प्र पु	अभवत्	अभवताम्	अभवन्
म पु	अभवः	अभवतम्	अभवत
उ पु	अभवम्	अभवाव	अभवाम

3. लृट् ಲಕಾರ ಭವಿಷ್ಯತ್ ಕಾಲ

प्र पु	भविष्यति	भविष्यतः	भविष्यन्ति
म पु	भविष्यसि	भविष्यथः	भविष्यथ
उ पु	भविष्यामि	भविष्यावः	भविष्यामः

4. लोट् ಲಕಾರ, ಆಜ್ಞೆ, ಆಮಂತ್ರಣ, ಪ್ರಾರ್ಥನೆ

प्र पु	भवतु, भवतात्	भवताम्	भवन्तु
म पु	भव, भवतात्	भवतम्	भवत
उ पु	भवानि	भवाव	भवाम

5. विधि लिङ् – ವಿಧಿ, ಆಜ್ಞೆ, ಆಮಂತ್ರಣ

प्र पु	भवेत्	भवेताम्	भवेयुः
म पु	भवेः	भवेतम्	भवेत
उ पु	भवेयम्	भवेव	भवेम

6. आशीर्लिङ् – ಆಶೀರ್ವಾದ

प्र पु	भूयात्	भूयास्ताम्	भूयासुः
म पु	भूयाः	भूयास्तम्	भूयास्त
उ पु	भूयासम्	भूयास्व	भूयास्म

Sri Vidyabharaṭhi Book Centre, Sringeri

CC-0. In Public Domain. Digitized by eGangotri

7. लिट् ಲಕಾರ ಪರೋಕ್ಷ ಭೂತಕಾಲ

प्र पु	बभूव	बभूवतुः	बभूवुः
म पु	बभूविथ	बभूवथुः	बभूव
उ पु	बभूव	बभूविव	बभूविम

8. लुङ् ಭೂತಕಾಲ

प्र पु	अभूत्	अभूताम्	अभूवन्
म पु	अभूः	अभूतम्	अभूत
उ पु	अभूवम्	अभूव	अभूम

9. लुट् ಲಕಾರ ಭವಿಷ್ಯತ್ ಕಾಲ

प्र पु	भविता	भवितारौ	भवितारः
म पु	भवितासि	भवितास्थः	भवितास्थ
उ पु	भवितास्मि	भवितास्वः	भवितास्मः

10. लृङ् ಲಕಾರ ಕಾರ್ಯಕಾರಣದಲ್ಲಿ ಭವಿಷ್ಯತ್ ಕಾಲ

प्र पु	अभविष्यत्	अभविष्यताम्	अभविष्यन्
म पु	अभविष्यः	अभविष्यतम्	अभविष्यत
उ पु	अभविष्यम्	अभविष्याव	अभविष्याम

11. प्रेरणार्थक णिजन्त रूपम्
भावयति / भावयते

ಧಾತುವಿನಿಂದ ತಿಳಿಯುವ ಕ್ರಿಯೆಯನ್ನು ಒಬ್ಬನಿಂದ ಇನ್ನೊಬ್ಬನು ಮಾಡಿಸುತ್ತಾನೆಂದು ತಿಳಿಸುವಾಗ ಪ್ರೇರಣಾರ್ಥಕ ಕ್ರಿಯಾಪದಗಳಾಗುತ್ತವೆ. ಉದಾ – रामः पुस्तकं पठति । (ರಾಮನು ಪುಸ್ತಕವನ್ನು ಓದುತ್ತಾನೆ.) गुरुः रामेण पुस्तकं पाठयति – ಗುರುವು ರಾಮನಿಂದ ಪುಸ್ತಕವನ್ನು ಓದಿಸುತ್ತಾನೆ. ಇದನ್ನು ಹತ್ತು ಲಕಾರಗಳಲ್ಲಿ ಮೇಲಿನಂತೆ ಊಹಿಸಬೇಕು.

12. कर्मणि / भावे

भूयते – (ಆಗಲ್ಪಡುತ್ತದೆ. ಇದು ಭಾವೆ ಪ್ರಯೋಗ) ಇದನ್ನು ಮುಂದೆ ತಿಳಿಸುವ ಆತ್ಮನೇಪದಿ ಕ್ರಿಯಾಪದಗಳಂತೆ ಎಲ್ಲಾ ಲಕಾರಗಳಲ್ಲೂ ಊಹಿಸಿಕೊಳ್ಳಬೇಕು.

ಪರಸ್ಮೈಪದಿ ಧಾತು/ಕ್ರಿಯಾ ರೂಪ ಸಂಗ್ರಹ

ಇನ್ನು ಮುಂದೆ ಪರಸ್ಮೈಪದ ಕ್ರಿಯಾ ಪದಗಳ ಎಲ್ಲಾ ಲಕಾರಗಳ ಪ್ರಾರಂಭದ ರೂಪಗಳನ್ನೂ ಮಾತ್ರ ಕೊಡಲಾಗಿದೆ. ಉಳಿದ ಎಲ್ಲಾ ರೂಪಗಳನ್ನು भवति ಅಥವಾ पठति ಕ್ರಿಯಾಪದದ ರೂಪಗಳಂತೆ ಊಹಿಸಿಕೊಳ್ಳಬೇಕು. ಹೆಚ್ಚಿನ ಬದಲಾವಣೆಗಳುಳ್ಳ ರೂಪಗಳು ಮಾತ್ರ ಪ್ರತ್ಯೇಕವಾಗಿವೆ. ಕೆಳಗಿನ ಕ್ರಿಯಾಪದಗಳು ಪ್ರಥಮ ಗಣಕ್ಕೆ ಸೇರಿವೆ. ಸಾಮಾನ್ಯವಾಗಿ ಒಂದೇ ರೀತಿಯ ರೂಪವನ್ನು ಹೊಂದುವ ಒಂದನೇ ಗಣದ, ಆರನೇ ಗಣದ ಮತ್ತು ಹತ್ತನೇ ಗಣದ ಕ್ರಿಯಾಪದಗಳ ರೂಪಗಳನ್ನು ಮೊದಲು ಕೊಡಲಾಗಿದೆ. ಹೆಚ್ಚು ಉಪಯೋಗವಿರುವ **लट्, लङ्, लृट्, लोट्, लिङ्, लिट्** ಮೊದಲಾದ ಲಕಾರಗಳನ್ನು ಕ್ರಮವಾಗಿ ಕೊಡಲಾಗಿದೆ. ಧಾತುಗಳ ಅರ್ಥವನ್ನು ತಿಳಿದು, ಎಲ್ಲಾ ಲಕಾರಗಳ ಅರ್ಥವನ್ನು ಊಹಿಸಿಕೊಂಡು ಅಭ್ಯಾಸ ಮಾಡಬೇಕು. ಕೊನೆಗೆ ಹೆಚ್ಚಿನ ಧಾತುಗಳ ಪ್ರೇರಣಾರ್ಥಕ ರೂಪವನ್ನು, ಕರ್ಮಣಿ ಭಾವೇ ರೂಪಗಳನ್ನು ಕೊಡಲಾಗಿದೆ.

ಈ ಕೆಳಗಿನ ಸಾಂಕೇತಿಕ ಚಿಹ್ನೆಗಳನ್ನು ಗಮನಿಸಿರಿ.

प – ಪರಸ್ಮೈಪದಿ, आ – ಆತ್ಮನೇಪದಿ, उ – ಉಭಯದಿದೀ, 1, 2, 3, 4, ಇತ್ಯಾದಿ ದಶಗಣಗಳನ್ನು ತಿಳಿಸುತ್ತವೆ.

सक – ಸಕರ್ಮಕ, अक – ಅಕರ್ಮಕ, द्विक – ದ್ವಿಕರ್ಮಕ

Sri Vidyabharathi Book Centre, Sringeri

CC-O. In Public Domain. Digitized by eGangotri

परस्मैपदिक्रियारूपसङ्ग्रहः

प्रथमगणः/भ्वादिगणः

	धातु – ಅರ್ಥ	लट् ವರ್ತಮಾನಕಾಲ	लङ् ಭೂತಕಾಲ	लृट् ಭವಿಷ್ಯತ್	लोट् ಆಜ್ಞೆ	विधिलिङ् ವಿಧಿ/ನಿಯಮ
1	अट् ತಿರುಗಾಡು, सक	अटति ತಿರುಗಾಡುತ್ತಾನೆ	आटत् ತಿರುಗಾಡಿದನು	अटिष्यति ತಿರುಗಾಡುವನು	अटतु ತಿರುಗಾಡಲಿ	अटेत् ತಿರುಗಾಡಬೇಕು ತಿರುಗಾಡಿಯಾನು
2	अर्च् ಪೂಜಿಸು, सक	अर्चति	आर्चत्	अर्चिष्यति	अर्चतु	अर्चेत्
3	अर्ज् ಸಂಪಾದಿಸು सक	अर्जति	आर्जत्	अर्जिष्यति	अर्जतु	अर्जेत्
4	अर्ह् ಅರ್ಹನಾಗು अक	अर्हति	आर्हत्	अर्हिष्यति	अर्हतु	अर्हेत्
5	अव् ಕಾಪಾಡು सक	अवति	आवत्	अविष्यति	अवतु	अवेत्
6	ईर्ष्य् ಅಸೂಯೆಪಡು अक	ईर्ष्यति	ऐर्ष्यत्	ईर्ष्यिष्यति	ईर्ष्यतु	ईर्ष्येत्
7	कस् ಅರಳು सक	विकसति	व्यकसत्	विकसिष्यति	विकसतु	विकसेत्
8	काङ्क्ष् ಇಚ್ಛಿಸು सक	आकाङ्क्षति	आकाङ्क्षत्	**काक्ष्यति**	काङ्क्षतु	काङ्क्षेत्
9	कूज् ಕೋಗಿಲೆ/ಹಕ್ಕಿ ಕೂಗು	कूजति	अकूजत्	कूजिष्यति	कूजतु	कूजेत्
10	कृष् ಉಳು, ಸೆಳೆ सक	कर्षति	अकर्षत्	**कर्क्ष्यति**	कर्षतु	कर्षेत्
11	क्रन्द् ಅಳು, ಕೂಗು अक	आक्रन्दति	आक्रन्दत्	क्रन्दिष्यति	क्रन्दतु	क्रन्देत्
12	क्रम् ನಡೆ, ಹೋಗು सक	क्रामति	अक्रामत्	क्रमिष्यति	क्रामतु	क्रामेत्
13	क्रीड् ಆಡು अक	क्रीडति	अक्रीडत्	क्रीडिष्यति	क्रीडतु	क्रीडेत्
14	क्रुश् ಗೋಳಿಡು अक	आक्रोशति	अक्रोशत्	**क्रोक्ष्यति**	क्रोशतु	क्रोशेत्
15	क्लम् ಆಯಾಸಗೊಳ್ಳು, अक	क्लामति	अक्लामत्	क्लामिष्यति	क्लामतु	क्लामेत्
16	क्वथ् ಕುದಿಸು अक	क्वथति	अक्वथत्	क्वथिष्यति	क्वथतु	क्वथेत्
17	क्षर् ಸೊರಗು अक	क्षरति	अक्षरत्	क्षरिष्यति	क्षरतु	क्षरेत्
18	क्षि ಸೊರಗು, ನಾಶಹೊಂದು अक	क्षयति	अक्षयत्	**क्षेष्यति**	क्षयतु	क्षयेत्
19	खन् ಅಗೆ सक	खनति	अखनत्	खनिष्यति	खनतु	खनेत्
20	खाद् ತಿನ್ನು सक	खादति	अखादत्	खादिष्यति	खादतु	खादेत्
21	गद् ಮಾತಾಡು सक	गदति	अगदत्	गदिष्यति	गदतु	गदेत्
22	गम् ಹೋಗು सक	गच्छति	अगच्छत्	गमिष्यति	गच्छतु	गच्छेत्
23	गर्ज् ಗರ್ಜಿಸು अक	गर्जति	अगर्जत्	गर्जिष्यति	गर्जतु	गर्जेत्

Sri Vidyabharathi Book Centre, Sringeri

CC-O. In Public Domain. Digitized by eGangotri

	आशीर्लिङ्	लिट् ಪರೋಕ್ಷಭೂತಕಾಲ	लुङ् ಭೂತಕಾಲ	लुट् ಭವಿಷ್ಯತ್ಕಾಲ	लृङ्	प्रेरणार्थक णिजन्त	कर्मणि/ भावे
1	अट्यात् ತಿರುಗಾಡಲಿ	आट ತಿರುಗಾಡಿದನು	आटीत् ತಿರುಗಾಡಿದನು	अटिता ತಿರುಗಾಡುವನು	आटिष्यत्	आटयति ತಿರುಗಾಡಿಸುವನು	अट्यते ತಿರುಗಾಡಿಸಲ್ಪಡುತ್ತದೆ.
2	अर्च्यात्	आनर्च	आर्चीत्	अर्चिता	आर्चिष्यत्	अर्चयति	अर्च्यते
3	अर्ज्यात्	आनर्ज	आर्जीत्	अर्जिता	आर्जिष्यत्	अर्जयति	अर्ज्यते
4	अर्ह्यात्	आनर्ह	आर्हीत्	अर्हिता	आर्हिष्यत्	अर्हयति	अर्ह्यते
5	अव्यात्	आव	आवीत्	अविता	आविष्यत्	आवयति	अव्यते
6	ईर्ष्यात्	ईर्ष्याञ्चकार	ऐर्ष्यीत्	ईर्ष्यिता	ऐर्ष्यिष्यत्	ईर्षयति	ईर्ष्यते
7	विकस्यात्	चकास	–	–	–	विकासयति	विकस्यते
8	काङ्क्ष्यात्	चकाङ्क्ष	–	काङ्क्षिता	–	काङ्क्षयति	कांक्ष्यते
9	कूज्यात्	चुकूज	अकूजीत्	कूजिता	अकूजिष्यत्	कूजयति	कूज्यते
10	कृष्यात्	चकर्ष	अकार्क्षीत्	कर्ष्टा	अकर्क्ष्यत्	कर्षयति	कर्ष्यते
11	क्रन्द्यात्	चक्रन्द	अक्रन्दीत्	क्रन्दिता	अक्रन्दिष्यत्	क्रन्दयति	क्रन्द्यते
12	क्रम्यात्	चक्राम	अक्रमीत्	क्रमिता	अक्रमिष्यत्	क्रामयति	क्राम्यते
13	क्रीड्यात्	चिक्रीड	अक्रीडीत्	क्रीडिता	अक्रीडिष्यत्	क्रीडयति	क्रीड्यते
14	क्रुश्यात्	चक्रोश	अकुक्षत्	क्रोष्टा	अक्रोक्ष्यत्	आक्रोशयति	क्रोश्यते
15	क्लाम्यात्	चक्लाम	अक्लमत्	क्लमिता	अक्लमिष्यत्	क्लामयति	क्लम्यते
16	क्वथ्यात्	चक्वाथ	अक्वथीत्	क्वथिता	–	क्वथयति	क्वथ्यते
17	क्षार्यात्	चक्षार	–	–	–	क्षारयति	क्षर्यते
18	क्षीयात्	चिक्षाय	अक्षैषीत्	क्षेता	अक्षेष्यत्	क्षाययति	क्षीयते
19	खन्यात्	चखान	अखानीत्	खनिता	अखनिष्यत्	खानयति	खन्यते
20	खाद्यात्	चखाद	अखादीत्	खादिता	अखादिष्यत्	खादयति	खाद्यते
21	गद्यात्	जगाद	अगादीत्	गदिता	अगदिष्यत्	गदयति	गद्यते
22	गम्यात्	जगाम	अगमत्	गन्ता	अगमिष्यत्	गमयति	गम्यते
23	गर्ज्यात्	जगर्ज	अगर्जीत्	गर्जिता	अगर्जिष्यत्	गर्जयति	गर्ज्यते

[1] अकार्क्षीत् अकर्ष्टाम् अकार्क्षुः : ಲುಙಿ [2] जगाम जग्मतुः जग्मुः ।

Sri Vidyabharathi Book Centre, Sringeri

CC-O. In Public Domain. Digitized by eGangotri

	ಧಾತು – ಅರ್ಥ	लट् ವರ್ತಮಾನಕಾಲ	लङ् ಭೂತಕಾಲ	लृट् ಭವಿಷ್ಯತ್	लोट् ಆಜ್ಞೆ	विधिलिङ् ವಿಧಿ/ನಿಯಮ
24	गल् ಉದುರು अक	गलति	अगलत्	गलिष्यति	गलतु	गलेत्
25	गर्व् ದರ್ಪಹೊಂದು अक	गर्वति	अगर्वत्	गर्विष्यति	गर्वतु	गर्वेत्
26	गुह् ಮುಚ್ಚಿಕೊಳ್ಳು सक	गूहति	अगूहत्	गूहिष्यति	गूहतु	गूहेत्
27	गै ಹಾಡು अक	गायति	अगायत्	गास्यति	गायतु	गायेत्
28	ग्लै ಸೊರಗು, ಬಾಡು	ग्लायति	अग्लायत्	ग्लास्यति	ग्लायतु	ग्लायेत्
29	घुष् ಘೋಷಿಸು सक	घोषति	अघोषत्	घोषिष्यति	घोषतु	घोषेत्
30	घृष् ತಿಕ್ಕು सक	घर्षति	अघर्षत्	घर्षिष्यति	घर्षतु	घर्षेत्
31	घ्रा ಮೂಸು सक	जिघ्रति	अजिघ्रत्	घ्रास्यति	जिघ्रतु	जिघ्रेत्
32	चम् ಕುಡಿ, ಚೀಪು	चमति	अचमत्	चमिष्यति	चमतु	चमेत्
33	चर ನಡೆ, ಹುಲ್ಲುಮೇಯು	चरति	अचरत्	चरिष्यति	चरतु	चरेत्
34	चर्व् ಜಗಿ सक	चर्वति	अचर्वत्	चर्विष्यति	चर्वतु	चर्वेत्
35	चल् ನಡೆ, ಚಲಿಸು सक	चलति	अचलत्	चलिष्यति	चलतु	चलेत्
36	चुम्ब् ಚುಂಬಿಸು सक	चुम्बति	अचुम्बत्	चुम्बिष्यति	चुम्बतु	चुम्बेत्
37	चूष् ಹೀರಿ ಕುಡಿ सक	चूषति	अचूषत्	चूषिष्यति	चूषतु	चूषेत्
38	जप् ಜಪಿಸು सक	जपति	अजपत्	जपिष्यति	जपतु	जपेत्
39	जल्प् ಹರಟೆ ಹೊಡಿ सक	जल्पति	अजल्पत्	जल्पिष्यति	जल्पतु	जल्पेत्
40	जि ಗೆಲ್ಲು, ಸೋಲಿಸು अक	जयति	अजयत्	जेष्यति	जयतु	जपेत्
41	जीव् ಜೀವಿಸು अक	जीवति	अजीवत्	जीविष्यति	जीवतु	जीवेत्
42	ज्वल् ಬೆಳಗು, ಉರಿ अक	ज्वलति	अज्वलत्	ज्वल्पिष्यति	ज्वलतु	ज्वलेत्
43	तक्ष् ಕೆತ್ತು सक	तक्षति	अतक्षत्	तक्षिष्यति	तक्षतु	तक्षेत्
44	तप् ತಪಸ್ಸ್ನಾಚರಿಸು, ಸುಡು	तपति	अतपत्	तप्स्यति	तपतु	तपेत्
45	तर्ज् ಗದರಿಸು	तर्जति	अतर्जत्	तर्जिष्यतिं	तर्जतु	तर्जेत्
46	तॄ ದಾಟು, ಈಜು सक	तरति	अतरत्	तरिष्यति	तरतु	तरेत्
47	त्यज् ತ್ಯಜಿಸು सक	त्यजति	अत्यजत्	त्यक्ष्यति	त्यजतु	त्यजेत्
48	दह् ಸುಡು	दहति	अदहत्	दहिष्यति	दहतु	दहेत्

चिक्षाय – चिक्षियतुः चिक्षियुः ।

Sri Vidyabharathi Book Centre, Sringeri

CC-O. In Public Domain. Digitized by eGangotri

	आशीर्लिङ्	लिट् ಪರೋಕ್ಷಭೂತಕಾಲ	लुङ् ಭೂತಕಾಲ	लुट् ಭವಿಷ್ಯತ್ಕಾಲ	लृङ्	प्रेरणार्थक णिजन्त	कर्मणि/ भावे
24	गल्यात्	जगाल	अगालीत्	गलीता	अगलिष्यत्	गलयति	गल्यते
25	गर्व्यात्	जगर्व	अगर्वीत्	गर्विता	अगर्विष्यत्	गर्वयति	गर्व्यते
26	गूह्यात्	जुगूह	अगूहीत्	गूहिता	अगूहिष्यत्	गूहयति	गुह्यते
27	गायात्	जगौ	अगासीत्	गाता	अगास्यत्	गपयति	गीयते
28	ग्लायात्	जग्लौ	अग्लासीत्	अग्लास्यत्	–	–	–
29	घुष्यात्	जुघोष	अघोषीत्	घोषिता	–	घोषयति	घुष्यते
30	–	जघर्ष	अघर्षीत्	घर्षिता	अघर्षिष्यत्	घर्षयति	घृष्यते
31	घ्रायात्	जघ्रौ	–	घ्राता	अघ्रास्यत्	घ्रापयति	घ्रीयते
32	चम्यात्	चचाम	अचमीत्	चमिता	अचमिष्यत्	चामयति	चम्यते
33	चर्यात्	चचार	अचारीत्	चरिता	अचरिष्यत्	चारयति	चर्यते
34	चर्व्यात्	चचर्व	अचर्वीत्	चर्विता	अचर्विष्यत्	चार्वयति	चर्व्यते
35	चल्यात्	चचाल	अचालीत्	चलिता	अचलिष्यत्	चालयति	चल्यते
36	चुम्ब्यात्	चुचुम्ब	अचुम्बीत्	चुम्बिता	अचुम्बिष्यत्	चुम्बयति	चुम्ब्यते
37	चूष्यात्	चुचूष	–	चूषिता	–	चोषयति	चूष्यते
38	जप्यात्	जजाप	अजपीत्	जपिता	अजपिष्यत्	जापयति	जप्यते
39	जल्प्यात्	जजल्प	अजल्पीत्	जल्पिता	अजल्पिष्यत्	जल्पयति	जल्प्यते
40	जीयात्	जिगाय	अजैषीत्	जेता	अजेष्यत्	जाययति	जीयते
41	जीव्यात्	जिजीव	अजीवीत्	जीविता	अजीविष्यत्	जीवयति	जीव्यते
42	ज्वल्यात्	जज्वाल	अज्वालीत्	ज्वलिता	अज्वलिष्यत्	ज्वालयति	ज्वल्यते
43	तक्ष्यात्	ततक्ष	अताक्षीत्	ताक्षिता	अतक्षिष्यत्	तक्षयति	तक्ष्यते
44	तप्यात्	तताप	अताप्सीत्[1]	तप्ता	अतप्स्यत्	तापयति	तप्यते
45	तर्ज्यात्	ततर्ज	अतर्जीत्	तर्जिता	अतर्जिष्यत्	तर्जयति	तर्ज्यते
46	तीर्यात्	ततार[2]	अतारीत्	तरिता	अतरिष्यत्	तारयति	तीर्यते
47	त्यज्यात्	तत्याज	अत्याक्षीत्[3]	त्यक्ता	अत्यक्ष्यत्	त्याजयति	त्यज्यते
48	दह्यात्	ददाह–देहतुः देहुः	अदाक्षीत्	दग्धा	अधक्ष्यत्	दाहयति	दह्यते

1 अताप्सीत् – अताप्ताम् – अताप्सुः । 2 ततार तेरतुः तेरुः । 3 अत्याक्षीत् – अत्याक्ताम् – अत्याक्षुः

Sri Vidyabharathi Book Centre, Sringeri

CC-O. In Public Domain. Digitized by eGangotri

ಧಾತು – ಅರ್ಥ	लट् ವರ್ತಮಾನಕಾಲ	लङ् ಭೂತಕಾಲ	लृट् ಭವಿಷ್ಯತ್	लोट् ಆಜ್ಞೆ	विधिलिङ् ವಿಧಿ/ನಿಯಮ
49 दल् ಹೋಳಾಗು अक	दलति	अदलत्	दलिष्यति	दलतु	दलेत्
50 दा ಕೊಡು सक	यच्छति	अयच्छत्	दास्यति	यच्छतु	यच्छेत्
51 द्रु ದ್ರವಿಸು, ಕರಗು सक	द्रवति	अद्रवत्	द्रोष्यति	द्रवतु	द्रवेत्
52 दृश् ನೋಡು अक	पश्यति	अपश्यत्	द्रक्ष्यति	पश्यतु	पश्येत्
53 धाव् ಓಡು	धावति	अधावत्	धाविष्यति	धावतु	धावेत्
54 धृ ಧರಿಸು सक	धरति	अधरत्	धरिष्यति	धरतु	धरेत्
55 ध्मा ಊದು सक	धमति	अधमत्	ध्मास्यति	ध्मायतु	ध्मायेत्
56 ध्यै ಧ್ಯಾನಿಸು सक	ध्यायति	अध्यायत्	ध्यास्यति	ध्यायतु	ध्यायेत्
57 ध्वन् ಶಬ್ದಮಾಡು सक	ध्वनति	अध्वनत्	ध्वनिष्यति	ध्वनतु	ध्वनेत्
58 नट् ನಟಿಸು सक	नटति	अनटत्	नटिष्यति	नटतु	नटेत्
59 नद् ನಾದ ಮಾಡು, ಶಬ್ದಮಾಡು	नदति	अनदत्	नदिष्यति	नदतु	नदेत्
60 नन्द् ಸಂತೋಷಿಸು अक	नन्दति	अनन्दत्	नन्दिष्यति	नन्दतु	नन्देत्
61 नम् ನಮಿಸು सक	नमति	अनमत्	नम्स्यति	नमतु	नमेत्
62 निन्द् ನಿಂದಿಸು सक	निन्दति	अनिन्दत्	निन्दिष्यति	निन्दतु	निन्देत्
63 नी ಒಯ್ಯು द्वि क	नयति	अनयत्	नेष्यति	नयतु	नयेत्
64 पच् ಅಡಿಗೆ ಮಾಡು, ಬೇಯಿಸು द्विक	पचति	अपचत्	पक्ष्यति	पचतु	पचेत्
65 पठ् ಓದು सक	पठति	अपठत्	पठिष्यति	पठतु	पठेत्
66 पत् ಬೀಳು अक	पतति	अपतत्	पतिष्यति	पततु	पतेत्
67 पा ಕುಡಿ सक	पिबति	अपिबत्	पास्यति	पिबतु	पिबेत्
68 पुष् ಪೋಷಿಸು	पोषति	अपोषत्	पोषिष्यति	पोषतु	पोषेत्
69 फल् ಫಲಿಸು ಹಣ್ಣುಬಿಡು अक	फलति	अफलत्	फलिष्यति	फलतु	फलेत्
70 पुल्ल ಅರಳು	फुल्लति	अपुल्लत्	पुल्लिष्यति	पुल्लतु	पुल्लेत्
71 बुध् ತಿಳಿ, ಎಚ್ಚರಗೊಳ್ಳು सक	बोधति	अबोधत्	बोधिष्यति	बोधतु	बोधेत्
72 भज् ಸೇವಿಸು सक	भजति	अभजत्	भक्ष्यति	भजतु	भजेत्
73 भण् ಮಾತಾಡು सक	भणति	अभणत्	भाणिष्यति	भणतु	भणेत्
74 भषति ಬೊಗಳು	भषति	अभषत्	भषिष्यति	भषतु	भषेत्

निनाय – निन्यतुः – नित्युः । अनैषीत् – अनैष्टाम् – अनैषुः ।

CC-O. In Public Domain. Digitized by eGangotri

	आशीर्लिङ्	लिट् ಪರೋಕ್ಷಭೂತಕಾಲ	लुङ् ಭೂತಕಾಲ	लुट् ಭವಿಷ್ಯತ್ಕಾಲ	लृङ्	प्रेरणार्थक णिजन्त	कर्मणि/ भावे
49	दल्यात्	ददाल	–	–	–	दालयति	दल्यते
50	दद्यात्	ददौ	अदात्	दाता	अदास्यत्	दापयति	दीयते
51	द्रव्यात्	दद्रौ	अदुद्रवत्	द्रोता	–	द्रावयति	द्रव्यते
52	दृश्यात्	ददर्श[2]	अदर्शत् अद्राक्षीत्[3]	द्रष्टा	अद्रक्ष्यत्	दर्शयति	दृश्यते
53	धाव्यात्	दधाव	अधावीत्	धाविता	अधाविष्यत्	धावयति	धाव्यते
54	ध्रियात्	दधार	अधार्षीत्	धर्ता	अधरिष्यत्	धारयति	ध्रियते
55	–	दध्मौ	–	–	–	–	–
56	ध्यायात्	दध्यौ	अध्यासीत्	ध्याता	अध्यास्यत्	ध्याययति	ध्यायते
57	ध्वन्यात्	दध्वान	अध्वानीत्	ध्वनिता	अध्वनिष्यत्	ध्वानयति	ध्वन्यते
58	नट्यात्	ननाट	अनाटीत्	नटिता	अनटिष्यत्	नाटयति	नट्यते
59	नद्यात्	ननाद	अनादीत्	नदिता	अनदिष्यत्	नादयति	नद्यते
60	नन्द्यात्	ननन्द	अनन्दीत्	नन्दिता	अनन्दिष्यत्	नन्दयति	नन्द्यते
61	नम्यात्	ननाम	अनंसीत्[1]	नन्ता	अनंस्यत्	नमयति	नम्यते
62	निन्द्यात्	निनिन्द	अनिन्दीत्	निन्दिता	अनिन्दिष्यत्	निन्दयति	निन्द्यते
63							
64	पच्यात्	पपाच	अपाक्षीत्	पक्ता	अपक्ष्यत्	पाचयति	पच्यते
65	पठ्यात्	पपाठ–पेठतुःपेठुः	अपाठीत्	पठिता	अपठिष्यत्	पाठयति	पठ्यते
66	पत्यात्	पपात पेततुः पेतुः	अपप्तत्	पतिता	अपतिष्यत्	पातयति	पत्यते
67	पेयात्	पपौ	अपात्	पाता	अपास्यत्	पाययति	पीयते
68	पुष्यात्	पुपोष	अपोषीत्	पोषिता	अपोषिष्यत्	पोषयति	पुष्यते
69	फल्यात्	पफाल	अफालीत्	फलिता	अफलिष्यत्	फालयति	फल्यते
70	पुल्यात्	–	अपुल्लीत्	पुल्लिता	–	–	पुल्यते
71	बुध्यात्	बुबोध	अबोधीत्	बोधिता	अबोधिष्यत्	बोधयति	बुध्यते
72	भज्यात्	बभाज–भेजतुः	अभाक्षीत्	भक्ता	अभक्ष्यत्	भाजयति	भज्यते
73	भण्यात्	बभाण	अभाणीत्	भणिता	अभणिष्यत्	भाणयति	भण्यते
74	भष्यात्	बभाष	अभाषीत्	भषिता	अभषिष्यत्	भाषयति	भष्यते

1 अनंसीत् अनंसिष्टां अनंसिषुः। 2 ददर्श ददृशतुः ददृशुः। 3 अद्राक्षीत् – अद्राष्टां अद्राक्षुः। अद्राक्षीः अद्राष्टम् – अद्राष्ट। अद्राक्षम् अद्राक्ष्व – अद्राक्ष्म।

Sri Vidyabharathi Book Centre, Sringeri

CC-O. In Public Domain. Digitized by eGangotri

	ಧಾತು – ಅರ್ಥ	लट् ವರ್ತಮಾನಕಾಲ	लङ् ಭೂತಕಾಲ	लृट् ಭವಿಷ್ಯತ್	लोट् ಆಜ್ಞೆ	विधिलिङ् ವಿಧಿ/ನಿಯಮ
75	भू ಆಗು, ಇರು अक	भवति	अभवत्	भविष्यति	भवतु	भवेत्
76	भूष् ಅಲಂಕರಿಸು सक	भूषति	अभूषत्	भूषिष्यति	भूषतु	भूषेत्
77	भृ ಪೋಷಿಸು, ತುಂಬು सक	भरति	अभरत्	भरिष्यति	भरतु	भरेत्
78	भ्रम् ತಿರುಗಾಡು ಭ್ರಾಂತಿಗೊಳ್ಳು,	भ्रमति	अभ्रमत्	भ्रमिष्यति	भ्रमतु	भ्रमेत्
79	मथ् ಕಡೆಯುವುದು सक	मथति	अमथत्	मथिष्यति	मथतु	मथेत्
80	मण्ड् ಅಲಂಕರಿಸು सक	मण्डति	अमण्डत्	मण्डिष्यति	मण्डतु	मण्डेत्
81	मन्थ् ಕಡೆಯುವುದು सक	मन्थति	अमन्थत्	मन्थिष्यति	मन्थतु	मन्थेत्
82	मार्ग् ಹುಡುಕು सक	मार्गति	अमार्गत्	मार्गिष्यति	मार्गतु	मार्गेत्
83	मील् ಕಣ್ಣುಮುಚ್ಚು अक	मीलति	अमीलत्	मीलिष्यति	मीलतु	मीलेत्
